# ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ

ಶ್ರೀ ಗುರುಭ್ಯೋ ನಮಃ

ಸರ್ವವಿಘ್ನಹರ್ತೃಗಜಾನನಾಂತರ್ಗತ ಶ್ರೀಪಾರ್ವತೀಪತಿರುದ್ರಾಂತರ್ಗತ

ಶ್ರೀ ಮದ್ಧನುಮದ್ಭೀಮ ಮಧ್ವಾಂತರ್ಗತ ರಾಮಕೃಷ್ಣ ವೇದವ್ಯಾಸಾತ್ಮಕ ಶ್ರೀ ಲಕ್ಷ್ಮೀಹಯಗ್ರೀವಾಯನಮಃ

## ॥ ದ್ವಿತೀಯೋಧ್ಯಾಯಃ ॥

**ಜಯತಿ ಹರಿರಚಿಂತ್ಯಃ ಸರ್ವದೇವೈಕ ವಂದ್ಯಃ ಪರಮಗುರುರಭೀಷ್ಟಾವಾಪ್ತಿದಃ ಸಜ್ಜನಾನಾಮ್ ।**
**ನಿಖಿಲ ಗುಣ ಗಣಾರ್ಣೋನಿತ್ಯ ನಿರ್ಮುಕ್ತ ದೋಷಃ ಸರಸಿಜನಯನೋಸೌ ಶ್ರೀಪತಿರ್ಮಾನದೋನಃ ॥ ೧ ॥**

ಆಚಾರ್ಯರು ಅಧ್ಯಾಯಾದಿಯಲ್ಲಿ ಸ್ತುತಿರೂಪ ಮಂಗಲವನ್ನು ಮಾಡುತ್ತಾರೆ.
ಅಚಿಂತ್ಯಃ = ತನ್ನಲ್ಲಿರುವ ಅನಂತಾನಂತ ಮಹಿಮೆಗಳಿಂದ ಧ್ಯಾನಮಾಡಲು ಅಶಕ್ಯನಾದ ಸರ್ವದೇವೈಕವಂದ್ಯಃ = ಎಲ್ಲಾ ಮುಕ್ತಾ ಮುಕ್ತ ದೇವತೆಗಳಿಂದ ಮುಖ್ಯವಾಗಿ ನಮಸ್ಕರಿಸಲು ಯೋಗ್ಯನಾದ ಪರಮಗುರುಃ= ಜೀವೋತ್ತಮನಾದ ಚತುರ್ಮುಖ ಬ್ರಹ್ಮನಿಗೆ ಉಪದೇಶಕನಾದ ಸಜ್ಜನಾನಾಂ = ಮುಕ್ತಿ ಯೋಗ್ಯರಾದ ಭಕ್ತಜನರ, ಅಭೀಷ್ಟಾವಾಪ್ತಿದಃ= ಮನಸ್ಸಿನ ಅಪೇಕ್ಷೆಗಳನ್ನು ಕೊಡತಕ್ಕ ನಿಖಿಲಗುಣಗಣಾರ್ಣಃ = ಪೂರ್ಣಗಳಾದ ಜ್ಞಾನಾನಂದಾದಿಗುಣಗಳಿಂದ ಸಮುದ್ರದಂತಿರುವ, ನಿತ್ಯನಿರ್ಮುಕ್ತ ದೋಷಃ= ಯಾವಾಗಲೂ ದೂರ ಮಾಡಲ್ಪಟ್ಟ ಅಜ್ಞಾನಾದಿ ದೋಷಗಳುಳ್ಳ, ಸರಸಿಜನಯನಃ = ಕಮಲದಂತೆ ಕಣ್ಣುಗಳುಳ್ಳ, ನಃ = ನಮಗೆ ಮಾನದಃ= ಜ್ಞಾನವನ್ನು ಕೊಡತಕ್ಕ ಹರಿಃ = ಸರ್ವ ಪಾಪ ನಾಶಕನಾದ ಅಸೌ ಶ್ರೀಪತಿಃ = ಈ ಲಕ್ಷ್ಮೀಪತಿಯಾದ ನಾರಾಯಣನು ಜಯತಿ = ಸರ್ವೋತ್ಕೃಷ್ಟನಾಗಿದ್ದಾನೆ. ॥ ೧ ॥

ಶ್ರೀ ಮಧ್ವಾಚಾರ್ಯರು ಹಿಂದಿನ ಅಧ್ಯಾಯದಲ್ಲಿ ಹೇಳಿದ ಅರ್ಥವನ್ನು ಅನುವಾದ ಮಾಡಿ ಈ ಅಧ್ಯಾಯದಲ್ಲಿ ಹೇಳುವ ಅರ್ಥವನ್ನು ಶಿಷ್ಯರ ಮನಃ ಸಮಾಧಾನಕ್ಕೋಸ್ಕರ ಸಂಕ್ಷೇಪವಾಗಿ ನಿರೂಪಿಸುತ್ತಾರೆ.

**ಉಕ್ತಃ ಪೂರ್ವಾಧ್ಯಾಯೇ ಶಾಸ್ತ್ರಾಣಾಂ ನಿರ್ಣಯಃ ಪರೋ ದಿವ್ಯಃ**
**ಅಥಖಲು ಭಾರತ ವಾಕ್ಯಾನ್ಯೇತೈರೇವಾಧ್ಯವಸ್ಯಂತೇ ॥ ೨ ॥**

ಪರಃ = ಸರ್ವೋತ್ಕರ್ಷವನ್ನು ಪ್ರತಿಪಾದಿಸುವುದರಿಂದ ಉತ್ತಮವಾದ ದಿವ್ಯಃ = ದೇವಪದ ವಾಚ್ಯನಾದ ನಾರಾಯಣನ ಸಂಬಂಧಿಯಾದ ಶಾಸ್ತ್ರಾಣಾಂ = ವಿಷ್ಣುವಿಗೆ ಸರ್ವೋತ್ತಮತ್ವ ಗುಣ ಪೂರ್ಣತ್ವ ಭೋಧಕ ರೂಪ ಶಾಸ್ತ್ರಗಳ ನಿರ್ಣಯಃ = ನಿಶ್ಚಿತಾರ್ಥವು ಪೂರ್ವಾಧ್ಯಾಯೇ = ಹಿಂದಿನ ಅಧ್ಯಾಯದಲ್ಲಿ ಮಯಾ ಉಕ್ತಃ = ನನ್ನಿಂದ ಹೇಳಲ್ಪಟ್ಟಿದೆ. ಅಥ = ಅನಂತರ ಈ ಅಧ್ಯಾಯದಲ್ಲಿ ಭಾರತವಾಕ್ಯಾನಿ = ಅಲ್ಲಲ್ಲಿರುವ ಕಠಿಣ ಅರ್ಥಗಳುಳ್ಳ ಭಾರತ ವಾಕ್ಯಗಳು ಏತೈರೇವ = ಕೆಲವು ಭಾರತ ವಾಕ್ಯಗಳಿಂದ ಈ ವಾಕ್ಯಗಳಿಗೆ ಉಪಯುಕ್ತಗಳಾದ ಬ್ರಹ್ಮಾಂಡ ಮಾರ್ಕಂಡೇಯಾದಿ ಪ್ರಮಾಣ ವಚನಗಳಿಂದಲೇ (ಏವಕಾರಕ್ಕೆ ಸ್ವಕಪೋಲಕಲ್ಪಿತ ವಚನಗಳಿಂದಲ್ಲವೆಂದರ್ಥ.) ಅಧ್ಯವಸ್ಯಂತೇ = ನಿರ್ಣಯಿಸಲ್ಪಡುತ್ತವೆ. ॥ ೨ ॥

**ಕ್ವಚಿದ್ಗ್ರಂಥಾನ್ ಪ್ರಕ್ಷಿಪಂತಿ ಕ್ವಚಿದಂತರಿತಾನಪಿ ।**
**ಕುರ್ಯುಃ ಕ್ವಚಿಚ್ಚ ವ್ಯತ್ಯಾಸಂ ಪ್ರಮಾದಾತ್ ಕ್ವಚಿದನ್ಯಥಾ ॥ ೩ ॥**

ಎಲ್ಲಾ ಗ್ರಂಥಗಳು ಸರಿಯಾಗಿಯೇ ಇದ್ದರೆ ಅವುಗಳ ಅರ್ಥಗಳನ್ನು ಬುದ್ಧಿವಂತರು ತಾವೇ ನೋಡಿ ತಿಳಿದು ಕೊಳ್ಳುವರು. ನಮ್ಮ ಈ ಹೊಸ ಪ್ರಯತ್ನವೇಕೆಂದರೆ ಕಲಿಯುಗದಲ್ಲಿ ಜನರು ಅಲ್ಪ ಬುದ್ಧಿ ಉಳ್ಳವರು, ಅಲಸರು, ಶತಕೋಟಿ ಸಂಖ್ಯೆ ಉಳ್ಳ ಮೂಲ ರಾಮಾಯಣಾದಿಗಳು ಪ್ರಾಯಶ: ನಷ್ಟಗಳಾಗಿವೆ. ನಾಶವಾಗದ ಭಾರತಾದಿಗಳೂ ಕೂಡ ಅಪಂಡಿತರಾದ ತಾವೇ ವಿದ್ವಾಂಸರೆಂಬ ಅಭಿಮಾನವುಳ್ಳವರಿಂದ ಅಪಪಾಠಾದಿಗಳಿಂದ ನಷ್ಟಪ್ರಾಯಗಳಾಗಿವೆ. ಅದ್ದರಿಂದ ಹರಿಕಿಂಕರರಾದ ನಾವು ಪ್ರಯತ್ನಿಸಬೇಕೆನ್ನುತಾರೆ.—

ಗ್ರಂಥಾನ್ = ತಮ್ಮ ತಮ್ಮ ಮತಗಳಿಗೆ ಅನುಕೂಲವಾದ ಸ್ವಕಪೋಲ ಕಲ್ಪಿತ ಶ್ಲೋಕಗಳನ್ನು ಕ್ವಚಿತ್ = ಮೂಲ ಗ್ರಂಥದ ಭಾಗದಲ್ಲಿ ಪ್ರಕ್ಷಿಪಂತಿ = ಸೇರಿಸುವರು; ಕ್ವಚಿತ್ = ಕೆಲವೆಡೆ ಗ್ರಂಥಾನ್ = ತಮಗೆ ಪ್ರತಿಕೂಲಗಳಾದ ವಿಷ್ಣು ಸರ್ವೋತ್ತಮತ್ವವನ್ನು ಹೇಳತಕ್ಕ ಶ್ಲೋಕಗಳನ್ನು ಅಂತರಿತಾನ್ = ಅಂತರ್ಧಾನ್ ಹೊಂದಿದವುಗಳನ್ನಾಗಿ ಕುರ್ಯುಃ = ಮಾಡುವರು. ಅಂದರೆ

ತಮ್ಮ ಗ್ರಂಥದಲ್ಲಿ ಆ ಶ್ಲೋಕಗಳಿಲ್ಲವೆಂದು ಹೇಳಲು ತೆಗೆದು ಹಾಕುವರು. ಕ್ವಚಿತ್ = ಕೆಲವು ಭಾಗದಲ್ಲಿ ವ್ಯತ್ಯಾಸಂ = ಕುರ್ಯುಃ ಹೇಳಲ್ಪಟ್ಟ ಹರಿಯ ಮಹಿಮೆಗೆ ಸಂಬಂಧಿಸಿದ ಶ್ಲೋಕಗಳನ್ನು ಕಥಾವಿಚ್ಛೇದ ಮಾಡುವುದಕ್ಕೊಸ್ಕರ ಅಲ್ಲಿಂದ ತೆಗೆದು ಬೇರೆ ಕಡೆ ಹಾಕುವರು. ಹರಿಯ ಮಹಿಮೆಗೆ ಅನುಕೂಲವಲ್ಲದ ಶ್ಲೋಕಗಳನ್ನು ಈ ಭಾಗದಲ್ಲಿ ಹಾಕುವರು. ಕ್ವಚಿತ್ = ಕೆಲವು ಕಡೆ ಪ್ರಮಾದಾತ್ = ಸಾಧುಗಳೂ ಕೂಡ ತಮ್ಮ ಅಜ್ಞಾನದಿಂದ ಅನ್ಯಥಾ = ಗ್ರಂಥದ ಅಭಿಪ್ರಾಯಕ್ಕೆ ವಿರುದ್ಧವಾಗಿ ಕುರ್ಯುಃ = ವ್ಯಾಖ್ಯಾನ ಮಾಡುವರು.

**ಅನುತ್ಸನ್ನಾ ಅಪಿ ಗ್ರಂಥಾಃ ವ್ಯಾಕುಲಾ ಇತಿ ಸರ್ವಶಃ ।**
**ಉತ್ಸನ್ನಾಃ ಪ್ರಾಯಶಸ್ಸರ್ವೇ ಕೋಟ್ಯಂಶೋಪಿ ನವರ್ತತೇ ॥ ೪ ॥**

ಅನುತ್ಸನ್ನಾ ಅಪಿ = ನಷ್ಟಗಳಾಗದೇ ಇದ್ದವುಗಳಾದ್ದಾಗ್ಯೂ ಕೂಡ ಗ್ರಂಥಾಃ = ಭಾರತಾದಿ ಗ್ರಂಥಗಳು ಇತಿ = ಈ ಹಿಂದೆ ಹೇಳಿದ ರೀತಿಯಿಂದ ಸರ್ವಶಃ = ಸಂಪೂರ್ಣವಾಗಿ ವ್ಯಾಕುಲಾಃ = ವ್ಯತ್ಯಸ್ತಗಳಾಗಿವೆ. ಸರ್ವೇ = ಮೂಲ ರಾಮಾಯಣಾದಿಗಳಿಲ್ಲವೂ ಪ್ರಾಯಶಃ ಉತ್ಸನ್ನಾಃ = ಹೆಚ್ಚಾಗಿ ಅಪಪಾಠಾದಿಗಳಿಂದ ನಷ್ಟಗಳಾಗಿವೆ. ಅವುಗಳ ಮಧ್ಯದಲ್ಲಿ ಕೋಟ್ಯಂಶೋಪಿ ಕೋಟಿಗಳ ಅಂಶದಲ್ಲಿ ಒಂದು ಅಂಶವೂ. ನವಿದ್ಯತೇ ಇಲ್ಲ ಅಂದರೆ ಸಹಸ್ರ ಗ್ರಂಥಗಳಲ್ಲಿ ಶತಾಂಶವೂ ಲಕ್ಷ ಗ್ರಂಥದಲ್ಲಿ ಸಹಸ್ರಾಂಶವೂ ಕೋಟಿಗ್ರಂಥದಲ್ಲಿ ಲಕ್ಷಾಂಶವೂ ಇಲ್ಲ.

ವಿಶೇಷಾಂಶವು—ಮೂಲರಾಮಾಯಣವು ಶತಕೋಟಿ ವಿಸ್ತಾರವುಳ್ಳದ್ದು. ಪಂಚರಾತ್ರಾಗಮವು 50ಕೋಟಿ ವಿಸ್ತಾರವುಳ್ಳದ್ದು. ಭಾರತವು 60ಲಕ್ಷ ವಿಸ್ತಾರವುಳ್ಳದ್ದು. ಅದರಲ್ಲಿ 30ಲಕ್ಷ ಗ್ರಂಥವು ದೇವಲೋಕದಲ್ಲಿಯೂ 15ಲಕ್ಷ ಪಿತೃಲೋಕದಲ್ಲಿಯೂ 14ಲಕ್ಷ ರಕ್ಷೋ ಲೋಕದಲ್ಲಿಯೂ 1ಲಕ್ಷ ಗ್ರಂಥವು ಮನುಷ್ಯಲೋಕದಲ್ಲಿರುವುದು. 4ಲಕ್ಷ ವಿಸ್ತಾರವುಳ್ಳದ್ದು ಪುರಾಣಾದಿ ಗ್ರಂಥಗಳು.

**ಗ್ರಂಥೋಪ್ಯೇವಂ ವಿಲುಲಿತಃ ಕಿಮ್ವರ್ಥೋ ದೇವದುರ್ಗಮಃ ।**
**ಕಲಾವೇವಂ ವ್ಯಾಕುಲಿತೇ ನಿರ್ಣಯಾಯ ಪ್ರಚೋದಿತಃ ॥ ೫ ॥**

ಏವಂ = ಈ ರೀತಿಯಾಗಿ ಗ್ರಂಥೋಪಿ = ಭಾರತಾದಿ ಗ್ರಂಥವು ಕೂಡ ವಿಲುಲಿತಃ ವ್ಯತ್ಯಸ್ತವಾಗಿದೆ ದೇವದುರ್ಗಮಃ = ದೇವತೆಗಳಿಂದಲೂ ತಿಳಿಯಲು ಅಶಕ್ಯವಾದ ಅರ್ಥಃ ಕಿಮು = ಅರ್ಥವು ವ್ಯತ್ಯಾಸವಾಗಿದೆ ಎಂದು ಏನು ಹೇಳತಕ್ಕದ್ದಿದೆ. ಏವಂ = ಈ ರೀತಿಯಾಗಿ ಕಲೌ = ಕಲಿಕಾಲದಲ್ಲಿ ಗ್ರಂಥೇ ವ್ಯಾಕುಲತೇ ಸತಿ = ಗ್ರಂಥವು ಪ್ರಕ್ಷೇಪಾದಿಗಳಿಂದ ವ್ಯತ್ಯಸ್ತವಾಗಲು ನಿರ್ಣಯಾಯ = ನಿರ್ಣಯ ಮಾಡುವುದಕ್ಕಾಗಿ ಹರಿಣಾ ಪ್ರಚೋದಿತಃ = ಶ್ರೀ ವೇದವ್ಯಾಸ ದೇವರಿಂದ ಪ್ರೇರಿಸಲ್ಪಟ್ಟವನಾಗಿ

**ಹರಿಣಾ ನಿರ್ಣಯಾನ್ವಚ್ಮಿ ವಿಜಾನಂಸ್ತತ್ಪ್ರಸಾದತಃ ।**
**ಶಾಸ್ತ್ರಾಂತರಾಣಿ ಸಂಜಾನನ್ ವೇದಾಂ ಶ್ಚಾಸ್ಯಪ್ರಸಾದತಃ ॥ ೬ ॥**

ತತ್ಪ್ರಸಾದತಃ = ಶ್ರೀ ಹರಿಯ ಅನುಗ್ರಹದಿಂದ ನಿರ್ಣಯಾನ್ = ಸಕಲ ಶಾಸ್ತ್ರಗಳ ತಾತ್ಪರ್ಯಗಳ ನಿರ್ಣಯಗಳನ್ನು ವಿಜಾನನ್ = ತಿಳಿದವನಾಗಿ ವಚ್ಮಿ = ಹೇಳುತ್ತೇನೆ. ತತ್ಪ್ರಸಾದತಃ = ಶ್ರೀ ವೇದ ವ್ಯಾಸರ ಅನುಗ್ರಹದಿಂದ ಶಾಸ್ತ್ರಾಂತರಾಣಿ = ಪಂಚರಾತ್ರ ಬ್ರಹ್ಮಸೂತ್ರ ಮೊದಲಾದ ಶಾಸ್ತ್ರಗಳನ್ನೂ ವೇದಾಂಶ್ಚ = ಋಗಾದಿ ಸರ್ವವೇದಗಳನ್ನೂ ಕೂಡ ಸಂಜಾನನ್ = ಚೆನ್ನಾಗಿ ತಿಳಿದವನಾಗಿ.

**ದೇಶೇ ದೇಶೇತಥಾ ಗ್ರಂಥಾನ್ ದೃಷ್ಟ್ವಾ ಚೈವ ಪೃಥಗ್ವಿಧಾನ್ ।**
**ಯಥಾ ಸಭಗವಾನ್ ವ್ಯಾಸಃ ಸಾಕ್ಷಾನ್ನಾರಾಯಣಃ ಪ್ರಭುಃ ॥ ೭ ॥**
**ಜಗಾದ ಭಾರತಾದ್ಯೇಷು ತಥಾ ವಕ್ಷ್ಯೇ ತದೀಕ್ಷಯಾ ।**
**ಸಂಕ್ಷೇಪಾತ್ ಸರ್ವಶಾಸ್ತ್ರಾರ್ಥಂ ಭಾರತಾರ್ಥಾನುಸಾರತಃ ॥ ೮ ॥**

ತಥಾ = ಹಾಗೆಯೇ ದೇಶೆ ದೇಶೇ = ಬೇರೆ ಬೇರೆ ದೇಶಗಳಲ್ಲಿ ಪೃಥಗ್ವಿಧಾನ್ = ಪ್ರತ್ಯೇಕವಾಗಿ ನಾನಾ ವಿಧಗಳಾದ ಗ್ರಂಥಾನ್ = ಅರ್ಥಗಳನ್ನು ಪ್ರತಿಪಾದಿಸುವ ಗ್ರಂಥಗಳನ್ನು ಕೂಡ ದೃಷ್ಟ್ವೈವ = ವೇದವ್ಯಾಸರ ಅನುಗ್ರಹದಿಂದ ನೋಡಿಯೇ ಸಾಕ್ಷಾನ್ನಾರಾಯಣಃ= ಮುಖ್ಯವಾಗಿ ನಾರಾಯಣಾವತಾರರಾದ ಭಗವಾನ್ = ಷಡ್ಗುಣೈಶ್ವರ್ಯ ಸಂಪನ್ನರಾದ ಪ್ರಭುಃ = ಸಮರ್ಥರಾದ ಸಃವ್ಯಾಸಃ ಆ ವೇದವ್ಯಾಸ ದೇವರು ಭಾರತಾದ್ಯೇಷು = ಭಾರತ ಮೊದಲಾದ ಗ್ರಂಥಗಳಲ್ಲಿ ಯಥಾ = ಹೇಗೆ ಜಗಾದ = ನನಗೆ ಅರ್ಥವನ್ನು ಹೇಳಿರುವರೋ ತಥಾ = ಹಾಗೆಯೇ ತದೀಕ್ಷಯಾ = ವೇದವ್ಯಾಸರು ನನಗೆ ಕೊಟ್ಟಿರುವ ಜ್ಞಾನ ದಿಂದ ಅಥವಾ ಅವರ ಪ್ರೇರಣೆಯಿಂದ ಭಾರತಾರ್ಥಾನುಸಾರತಃ = ಭಾರತಾರ್ಥದ ಅನುಸರಣೆಯಿಂದ (ಅಂದರೆ ಭಾರತಾರ್ಥ ವನ್ನು ಅನುಸರಿಸಿ) ಸರ್ವ ಶಾಸ್ತ್ರಾರ್ಥಂ ಎಲ್ಲಾ ಶಾಸ್ತ್ರಗಳ ಅರ್ಥವನ್ನು ಸಂಕ್ಷೇಪಾತ್ = ಸಂಕ್ಷೇಪದಿಂದ ವಕ್ಷ್ಯೇ = ಹೇಳುವೆನು.

**ನಿರ್ಣಯಃ ಸರ್ವಶಾಸ್ತ್ರಾಣಾಂ ಭಾರತಂ ಪರಿಕೀರ್ತಿತಮ್ ।**
**ಭಾರತಂ ಸರ್ವವೇದಾಶ್ಚ ತುಲಾಮಾರೋಪಿತಾಃ ಪುರಾ ॥ ೯ ॥**
**ದೇವೈರ್ಬ್ರಹ್ಮಾದಿಭಿಃ ಸರ್ವೈರ್ಋಷಿಭಿಶ್ಚ ಸಮನ್ವಿತೈಃ ।**
**ವ್ಯಾಸಸ್ಯೈವಾಜ್ಞಯಾ ತತ್ರ ತ್ವಚ್ಚರಿಚ್ಯತ ಭಾರತಮ್ ॥ ೧೦ ॥**

ಸರ್ವಶಾಸ್ತ್ರಾಣಾಂ = ಎಲ್ಲಾ ಶಾಸ್ತ್ರಗಳಿಗೂ ಭಾರತಂ = ಭಾರತವು ನಿರ್ಣಯಃ = ನಿರ್ಣಾಯಕವೆಂದು ಪರಿಕೀರ್ತಿತಂ = ಪುರಾಣಗಳಲ್ಲಿ ಹೇಳಲ್ಪಟ್ಟಿದೆ. ಭಾರತಕ್ಕೆ ಉತ್ತಮತ್ವವನ್ನು ಹೇಳತಕ್ಕ ಪ್ರಮಾಣವನ್ನು ಹೇಳುತ್ತಾರೆ. ಪುರಾ = ಹಿಂದೆ ಋಷಿಭಿಶ್ಚ = ಋಷಿಗಳಿಂದಲೂ ಸಮನ್ವಿತೈಃ = ಕೂಡಿದ ಸರ್ವೈಃ = ಎಲ್ಲಾ, ಬ್ರಹ್ಮಾದಿಭಿಃ = ಚತುರ್ಮುಖ ಬ್ರಹ್ಮನೇ ಮೊದಲಾಗಿ ಉಳ್ಳ ದೇವೈಃ = ದೇವತೆಗಳಿಂದ ಭಾರತಂ = ಭಾರತವು ಸರ್ವವೇದಾಶ್ಚ = ಋಗ್ವೇದಾದಿ ಸರ್ವ ವೇದಗಳೂ ಎಲ್ಲಾ ಶಾಸ್ತ್ರಗಳೂ ಕೂಡ ವ್ಯಾಸಸ್ಯ = ವೇದವ್ಯಾಸ ದೇವರ ಆಜ್ಞಯೈವ = ಅಪ್ಪಣೆಯಿಂದಲೇ ತುಲಾಂ = ತಕ್ಕಡಿಯನ್ನು ಆರೋಪಿತಾಃ = ಏರಿಸಲ್ಪಟ್ಟವು. ತತ್ರ = ಭಾರತ ಮತ್ತು ಸರ್ವವೇದಾದಿ ಶಾಸ್ತ್ರಗಳ ಮಧ್ಯದಲ್ಲಿ ಭಾರತಂತು ಭಾರತವಾದರೂಅತ್ಯರಿಚ್ಯತ = ಅತಿಶಯವಾಗಿ ಭಾರದಲ್ಲಿ ಅಧಿಕವಾಯಿತು.

**ಮಹತ್ತ್ವಾತ್ ಭಾರವತ್ತ್ವಾಚ್ಚ ಮಹಾ ಭಾರತಮುಚ್ಯತೇ ।**
**ನಿರುಕ್ತಮಸ್ಯ ಯೋ ವೇದ ಸರ್ವಪಾಪೈಃ ಪ್ರಮುಚ್ಯತೇ ॥ ೧೧ ॥**

ಮಹತ್ತ್ವಾತ್ = ಶ್ರೇಷ್ಠವಾದ ಅರ್ಥವನ್ನು ಪ್ರತಿಪಾದಿಸುವುದರಿಂದಲೂ ಭಾರವತ್ತ್ವಾತ್ = ಉತ್ತಮಾರ್ಥವನ್ನು ಪ್ರತಿಪಾದಿಸುವುದರಿಂದ ತಕ್ಕಡಿಯಲ್ಲಿ ಏರಿಸುವಾಗ ಭಾರವುಳ್ಳದ್ದರಿಂದಲೂ ಮಹಾಭಾರತಂ = ಮಹಾಭಾರತವೆಂದು ಉಚ್ಯತೇ = ಹೇಳಿಸಿಕೊಳ್ಳಲ್ಪಡುತ್ತದೆ. ಯಃ = ಯಾವ ಪುರುಷನು ಅಸ್ಯ = ಈ ಭಾರತದ ನಿರುಕ್ತಂ = ನಿರ್ವಚನವನ್ನು (ಹಿಂದೆ ಹೇಳಿದ ಅವಯವಾರ್ಥವನ್ನು) ವೇದ = ತಿಳಿಯುತ್ತಾನೋ ಸಃ = ಅವನು ಸರ್ವಪಾಪೈಃ = ಎಲ್ಲಾ ದುರಿತಗಳಿಂದಲೂ ಪ್ರಮುಚ್ಯತೇ = ಬಿಡಿಸಿಕೊಳ್ಳಲ್ಪಡುತ್ತಾನೆ.

**ವಿಶೇಷಾರ್ಥ:—** ಭಾರತಾದಿ ಶಾಸ್ತ್ರಗಳು ಕ್ರಿಯಾವುಳ್ಳವುಗಳಾಗದಿರುವುದರಿಂದ ತಕ್ಕಡಿಯಲ್ಲಿ ಏರಿಸುವುದು ಹೇಗೆಂದರೆ– ಸಮಾನ ಭಾರವುಳ್ಳ ಎರಡು ಮಣೆಗಳ ಮಧ್ಯದಲ್ಲಿ ಒಂದರಲ್ಲಿ ಭಾರತಾಭಿಮಾನಿ ದೇವತೆಯನ್ನು ಇನ್ನೊಂದರಲ್ಲಿ ಎಲ್ಲಾ ಶಾಸ್ತ್ರಗಳ ಅಭಿಮಾನಿ ದೇವತೆಗಳನ್ನೂ ಆವಾಹಿಸಿ ಎರಡು ತಕ್ಕಡಿಗಳಲ್ಲಿಡುವಾಗ ಭಾರತಾಭಿಮಾನಿ ದೇವತೆಯನ್ನೂ ಆವಾಹಿಸಿದ ಮಣೆಯು ಭಾರದಿಂದ ಕೆಳಗೆ ಹೋಯಿತು.

ಭಾರತವು ಸರ್ವಶಾಸ್ತ್ರಗಳ ನಿರ್ಣಾಯಕವೆಂದು ಹೇಳಲ್ಪಟ್ಟಿದೆ. ಅದರಲ್ಲಿ ನಿರ್ಣಯವು ಹೇಗೆ ಮಾಡಲ್ಪಟ್ಟಿದೆ ಎಂಬುದಕ್ಕೆ ನಿರ್ಣಯದ ಈ ರೀತಿಯನ್ನು ಪ್ರತಿಪಾದಿಸತಕ್ಕ ಬ್ರಹ್ಮಾಂಡ ಪುರಾಣ ವಾಕ್ಯವನ್ನು ಆಚಾರ್ಯರು ಉದಾಹರಿಸುತ್ತಾರೆ. "ನಿರ್ಣಯಸ್ಸರ್ವಶಾಸ್ತ್ರಾಣಾಂ"—ಎಂಬ ೧೨ನೇ ಶ್ಲೋಕವನ್ನು ಆರಂಭಿಸಿ ಅತ್ರೋಕ್ತಂ ಸರ್ವ ಶಾಸ್ತ್ರೇಷು ನಹಿ ಸಮ್ಯಗುದಾಹೃತಂ । ಇತ್ಯಾದಿಕಥಿತಂ ಸರ್ವಂ ಬ್ರಹ್ಮಾಂಡೇಪರಿಣಾ ಸ್ವಯಮ್ ॥ ಎಂಬ 54ನೇ ಶ್ಲೋಕದ ವರೆಗೆ.

**ನಿರ್ಣಯಸ್ಸರ್ವಶಾಸ್ತ್ರಾಣಾಂ ಸದೃಷ್ಟಾಂತೋಹಿ ಭಾರತೇ ।**
**ಕೃತೋ ವಿಷ್ಣುವಶತ್ವಂ ಹಿ ಬ್ರಹ್ಮಾದೀನಾಂ ಪ್ರಕಾಶಿತಮ್ ॥ ೧೨ ॥**

**ಯತಃ ಕೃಷ್ಣವಶೇ ಸರ್ವೇ ಭೀಮಾದ್ಯಾ ಸಮ್ಯಗೀರಿತಾಃ ।**
**ಸರ್ವೇಷಾಂ ಜ್ಞಾನದೋ ವಿಷ್ಣುಃ ಯಶೋದಾತೇ ತಿಚೋದಿತಃ ॥ ೧೩ ॥**

ಸದೃಷ್ಟಾಂತಃ =ದೃಷ್ಟಾಂತಪ್ರದರ್ಶನ ಪೂರ್ವಕವಾಗಿ ಭಾರತೇ= ಬಾರತದಲ್ಲಿ ಸರ್ವಶಾಸ್ತ್ರಾಣಾಂ= ಎಲ್ಲಾ ಶಾಸ್ತ್ರಗಳನಿರ್ಣಯಃ = ನಿರ್ಣಯವು (ವಿಷ್ಣು ಸರ್ವೋತ್ತಮತ್ವಾದಿಗಳು) ಕೃತಃ ಮಾಡಲ್ಪಟ್ಟಿವೆ. ಯತಃ= ಯಾವ ಕಾರಣದಿಂದ ಭೀಮಾದ್ಯಾಃ ಸರ್ವೇ= ಭೀಮನೇ ಮೊದಲಾಗಿ ಉಳ್ಳವರೆಲ್ಲರೂ ಸಮ್ಯಕ್ = ಚೆನ್ನಾಗಿ ಕೃಷ್ಣವಶೇ = ಕೃಷ್ಣನ ಅಧೀನದಲ್ಲಿ ಈರಿತಾಃ = ಹೇಳಲ್ಪಟ್ಟಿ-ರುವರೋ ತತಃ = ಆಕಾರಣದಿಂದ ಬ್ರಹ್ಮಾದೀನಾಂ = ಬ್ರಹ್ಮನೇ ಮೊದಲಾಗಿ ಉಳ್ಳವರಿಗೆ ವಿಷ್ಣುವಶಿತ್ವಂ = ಪರಮಾತ್ಮನ ಅಧೀನತ್ವವು ಹೇಳಲ್ಪಟ್ಟಿದೆ. ಹಿ = ಭೀಮಾದಿಗಳು ಬ್ರಹ್ಮಾದಿಗಳಿನ್ನುವುದು ಸುಪ್ರಸಿದ್ಧವು. ಹಾಗೆಯೇ ಕೃಷ್ಣನು ವಿಷ್ಣುವೆಂಬುದೂ ಭೀಮನು ಬ್ರಹ್ಮ ಪದವಿಯನ್ನು ಹೊಂದುವವನೆಂಬುದೂ ಪ್ರಸಿದ್ಧವು. ಬ್ರಹ್ಮಾದಿಗಳಿಗೆ ವಿಷ್ಣು ವಶತ್ವವು ಇದೆ ಎಂಬ ಪರಮ ಪ್ರಮೇಯದಲ್ಲಿ ಕೃಷ್ಣನ ಅಧೀನದಲ್ಲಿರುವ ಭೀಮಾದಿಗಳು ದೃಷ್ಟಾಂತಭೂತರು ವಿಷ್ಣುಃ = ಪರಮಾತ್ಮನು ಸರ್ವೇಷಾಂ = ಎಲ್ಲಾ ಬ್ರಹ್ಮಾದಿಗಳಿಗೆ ಜ್ಞಾನದಃ = ಜ್ಞಾನವನ್ನು ಕೊಡತಕ್ಕವನು ಯಶೋದಾತೇತಿಚ = ಕೀರ್ತಿಯನ್ನು ಕೊಡತಕ್ಕವನೂ ಎಂದು ಉದಿತಃ = ಭಾರತದಲ್ಲಿ ಹೇಳಲ್ಪಟ್ಟಿರುವನು. ಇವೆರಡು ಭಾರತದಲ್ಲಿರುವ ರಹಸ್ಯ ಪ್ರಮೇಯಗಳು ॥ ೧೪ ॥ ಜ್ಞಾನಕ್ಕಿಂತಲೂ ತನ್ನ ಭಕ್ತರಿಗೆ ಯಶಸ್ಸನ್ನು ಕೊಡುವುದರಲ್ಲಿ ಹರಿಗೆ ಮಹಾತಾತ್ಪರ್ಯವಿದೆ ಎಂಬುದನ್ನು ತಿಳಿಸುವುದಕೋಸ್ಕರ ಯಶೋದಾನ-ರೂಪವಾದ ಎರಡನೇ ಪ್ರಮೇಯಕ್ಕೆ ಮೊದಲು ದೃಷ್ಟಾಂತವನ್ನು ಹೇಳುತ್ತಾರೆ. 'ಯಸ್ಮಾತ್' ಎಂಬ ಶ್ಲೋಕದಿಂದ.

**ಯಸ್ಮಾತ್ ವ್ಯಾಸಾತ್ಮನಾ ತೇಷಾಂ ಭಾರತೇಯಶ ಊಚಿವಾನ್ ।**
**ಜ್ಞಾನದಶ್ಚ ಶುಕಾದೀನಾಂ ಬ್ರಹ್ಮರುದ್ರಾದಿ ರೂಪಿಣಾಮ್ ॥ ೧೪ ॥**

ಯಸ್ಮಾತ್ = ಯಾವ ಕಾರಣದಿಂದ ಭಾರತೇ = ಭಾರತದಲ್ಲಿ ತೇಷಾಂ = ಭೀಮಾರ್ಜುನಾದಿಗಳಿಗೆ ಯಶಃ = ಕೃಷ್ಣ ರೂಪದಿಂದ ಸಾರಥ್ಯಾದಿಗಳನ್ನು ಮಾಡಿ ಕೀರ್ತಿಯನ್ನು ವ್ಯಾಸಾತ್ಮನಾ = ವ್ಯಾಸ ರೂಪದಿಂದ ಊಚಿವಾನ್ = ಹೇಳಿರುವರೋ ಮತ್ತು ಸಾಧಿಸುವರೋ (ಆದ್ದರಿಂದ ಯಶಸ್ಸನ್ನು ಕೊಡತಕ್ಕವರು.) ಜ್ಞಾನವನ್ನು ಕೊಡುವವನು ಎಂಬ ಪ್ರಥಮ ಪ್ರಮೇಯದಲ್ಲಿ ದೃಷ್ಟಾಂತವನ್ನು ಹೇಳುತ್ತಾರೆ. ಬ್ರಹ್ಮರುದ್ರಾದಿರೂಪಿಣಾಮ್ = ಶುಕನು ರುದ್ರನ ಅವತಾರ ಅವನಲ್ಲಿ ವಾಯುದೇವರ ಸನ್ನಿ-ಧಾನವಿದೆ. ವೈಶಂಪಾಯನರೆಂಬ ಶಿಷ್ಯರಲ್ಲಿ ಬ್ರಹ್ಮನ ಸನ್ನಿಧಾನವಿದೆ. ಮಧ್ವರೂಪಿಯೂಆದ ಭಾವಿ ಬ್ರಹ್ಮನಿಗೆ ತನ್ನ ಮುಖದಿಂದಲೇ ಜ್ಞಾನವನ್ನು ಉಪದೇಶಿಸಿರುವುದರಿಂದ ಬ್ರಹ್ಮರುದ್ರಾದಿ ಸ್ವರೂಪ ಸನ್ನಿಧಾನವುಳ್ಳ ಶುಕಾದೀನಾಂ= ಶುಕವೈಶಂಪಾಯನಪೈಲಾದಿ-ಗಳಿಗೆ ಜ್ಞಾನದಃ ಜ್ಞಾನವನ್ನು ಕೊಡತಕ್ಕವನು. (ಯಶಸ್ಸನ್ನು ಕೊಡುವುದಕ್ಕಿಂತಲೂ ಗ್ರಂಥದಲ್ಲಿ ಯಶಸ್ಸನ್ನು ಹೊಗಳುವುದು ಸೂರ್ಯಚಂದ್ರರಿರುವತನಕ ಭೀಮಾದಿಗಳ ಯಶಸ್ಸಿನ ವಿಸ್ತಾರಕ್ಕೆ ಕಾರಣವಾಗಿರುವುದು.)

**ಬ್ರಹ್ಮಾಧಿಕಶ್ಚ ದೇವೇಭ್ಯಃ ಶೇಷಾದ್ರುದ್ರಾದಪೀರಿತಃ ।**
**ಪ್ರಿಯಶ್ಚ ವಿಷ್ಣೋಃ ಸರ್ವೇಭ್ಯ ಇತಿ ಭೀಮನಿದರ್ಶನಾತ್ ॥ ೧೫ ॥**

ಬ್ರಹ್ಮಾ = ಚತುರ್ಮುಖಿ ಬ್ರಹ್ಮನು ದೇವೇಭ್ಯಃ = ಇಂದ್ರಾದಿ ದೇವತೆಗಳಿಂದಲೂ ಶೇಷಾತ್ = ಅನಂತನ ದೆಸೆ-ಯಿಂದಲೂ ರುದ್ರಾದಪಿ = ಶಂಭುವಿನಿಂದಲೂ ಅಧಿಕಃ = ಉತ್ತಮನು. ವಿಷ್ಣೋಃ = ಪರಮಾತ್ಮನಿಗೆ ಸರ್ವೇಭ್ಯಃ = ಎಲ್ಲರಿಂದಲೂ ಪ್ರಿಯಶ್ಚ = ಪ್ರೀತಿ ಪಾತ್ರನೂ ಕೂಡ ಇತಿ = ಎಂಬುದು ಭೀಮ ನಿದರ್ಶನಾತ್ = ಭೀಮನ ದೃಷ್ಟಾಂತದಿಂದ ಈರಿತಃ = ಬಾರತದಲ್ಲಿ ಹೇಳಲ್ಪಟ್ಟಿದೆ.

**ವಿಶೇಷಾರ್ಥವು:—** ಭೀಮನಿದರ್ಶನಾತ್ ಎಂದು ಹೇಳಿದ್ದರಿಂದ ಬ್ರಹ್ಮನು ಎಲ್ಲರಿಂದಲೂ ಅಧಿಕನು ಮತ್ತು ಪ್ರಿಯನು ಎಂಬ ಪ್ರಮೇಯದಲ್ಲಿ ಭೀಮನು ದೃಷ್ಟಾಂತನೆಂದು ಸೂಚಿತವಾಯಿತು. ಅದು ಹೇಗೆಂದರೆ—ಅಶ್ವತ್ಥಾಮನ ಮುಖಭಂಗದಿಂದಲೂ ಶೇಷರೂಪನಾದ ಬಲರಾಮನಿಂದ ಅಸಾಧ್ಯವಾದ ಜರಾಸಂಧನ ನಾಶದಿಂದಲೂ ಭೀಮನ ದೃಷ್ಟಾಂತದಿಂದಲೂ ಬ್ರಹ್ಮನಿಗೆ ಶೇಷ-ರುದ್ರರಿಂದ ಉತ್ತಮತ್ವವು ತೋರಿಸಲ್ಪಟ್ಟಿತು. ಇಂದ್ರ ಸ್ವರೂಪನಾದ ಅರ್ಜುನನ ಅಣ್ಣನಾದ ಪ್ರಯುಕ್ತ ದೇವತೆಗಳದೆಸೆಯಿಂದ ಉತ್ತಮತ್ವವು ತೋರಿಸಲ್ಪಟ್ಟಿತು.

ರಾಮಾವತಾರದಲ್ಲಿ ಹನುಮಂತನಿಗೆ ಸುಗ್ರೀವನು ಪ್ರಿಯನಾಗಿರುವನು. ಆ ಸುಗ್ರೀವನ ಸ್ವರೂಪನಾದ ಕರ್ಣನು

ಕೃಷ್ಣಾವತಾರದಲ್ಲಿ ಹನುಮಂತನ ಸ್ವರೂಪನಾದ ಭೀಮನಿಗೆ ವಿರೋಧಿಯಾದ್ದರಿಂದ ಅವನ ಸಂಹಾರವಾಯಿತು.ಹಾಗೆಯೇ ರಾವಣಾವತಾರದಲ್ಲಿ ಹನುಮಂತನಿಗೆ ವಿರೋಧಿಯಾದನು ವಾಲಿಯು ಅವನ ಸ್ವರೂಪನಾದ ಅರ್ಜುನನನ್ನು ಕೃಷ್ಣಾವತಾರದಲ್ಲಿ ಭೀಮನಿಗೆ ಪ್ರಿಯನಾದವನೆಂದು ರಕ್ಷಿಸಿರುವುದು. ಎಲ್ಲರಿಗಿಂತ ಹೆಚ್ಚು ಪ್ರಿಯತ್ವವು ಭೀಮನಲ್ಲಿ ಶ್ರೀಹರಿಗೆ ಇದೆಯೆಂದು ಸಿದ್ಧವಾಗುವುದು.॥೧೫॥

**ಭೂಭಾರಹಾರಿಣೋ ವಿಷ್ಣೋಃ ಪ್ರಧಾನಾಂಗಂಹಿ ಮಾರುತಿಃ ।**
**ಮಾಗಧಾದಿವಧಾದೇವದುರ್ಯೋಧನ ವಧಾದಪಿ ॥ ೧೬ ॥**

ಮಾರುತಿಃ = ವಾಯ್ವಂಶ ಸಂಭೂತನಾದ ಭೀಮಸೇನನು ಭೂಭಾರಹಾರಿಣಃ = ಭೂಮಿಗೆ ಭಾರ ಭೂತರಾದ ದೈತ್ಯರನ್ನು ನಾಶಮಾಡತಕ್ಕ ವಿಷ್ಣೋಃ ಪರಮಾತ್ಮನಿಗೆ ಪ್ರಧಾನಾಂಗಂ =ಮುಖ್ಯ ಸಾಧನನು. ಹಿ= ಯಾವ ಪುರುಷನು ಯಾರ ಕೆಲಸಕ್ಕೆ ಮುಖ್ಯ ಸಾಧನನೋ ಅವನು ಅವನಿಗೆ ಅತ್ಯಂತ ಪ್ರಿಯನು ಎಂಬುದು ಪ್ರಸಿದ್ಧವು. ಮಾಗಧಾಧಿವಧಾದೇವ = ಮಗಧ ದೇಶದ ಅಧಿಪತಿಯಾದ ಜರಾಸಂಧ, ಕೀಚಕ ಮೊದಲಾದ ಬಲಿಷ್ಠರ ನಾಶದಿಂದಲೂ, ದುರ್ಯೋಧನ ವಧಾದಪಿ = ಬಲಿಷ್ಠನಾದ ಕಲಿ ಸ್ವರೂಪನಾದ ದುರ್ಯೋಧನನ ನಾಶದಿಂದಲೂ ಭೀಮನು ಅಧಿಕ ಬಲವುಳ್ಳವನೆಂದು ಸಿದ್ಧವಾಗುವುದು. ॥ ೧೬ ॥

**ಅವತಾರಿಕೆ:—** ಬ್ರಹ್ಮನು ದೇವತೆಗಳಿಂದ ಅಧಿಕನು ಎಂದು ಹೇಳುವಾಗ ಇತರರಿಂದ ಆಧಿಕ್ಯವು ಕೈಮುತ್ಯ ನ್ಯಾಯದಿಂದ ಸಿದ್ಧವಾಗುವುದು. ಅಂತೂ ಸರ್ವಾಧಿಕ್ಯವು ಹೇಳಲ್ಪಟ್ಟಿತು. ಅದನ್ನು ಸಯುಕ್ತಿಕವಾಗಿ ಸಮರ್ಥನೆ ಮಾಡುತ್ತಾರೆ.

**ಯೋ ಯ ಏವ ಬಲ ಜ್ಯೇಷ್ಠಃ ಕ್ಷತ್ರಿಯೇಷು ಸ ಉತ್ತಮಃ ।**
**ಅಂಗಂಚೇತ್ ವಿಷ್ಣುಕಾರ್ಯೇಷು ತದ್ಭಕ್ತ್ಯೈವ ನ ಚಾನ್ಯಥಾ ॥ ೧೭ ॥**

ಕ್ಷತ್ರಿಯೇಷು = ಕ್ಷತ್ರಿಯರಲ್ಲಿ ಯೋ ಯೋ ಬಲಜ್ಯೇಷ್ಠಃ = ಯಾವನು ಯಾವನು ಬಲಾಧಿಕನೋ ಸಃ = ಅವನು ವಿಷ್ಣುವಿನ ಕೆಲಸಗಳಲ್ಲಿ ತದ್ಭಕ್ತ್ಯೈವ= ವಿಷ್ಣುವಿನಲ್ಲಿ ಭಕ್ತಿಯಿಂದಲೇ ಅಂಗಂಚೇತ್=ಸಹಾಯಭೂತನಾದರೆ ಉತ್ತಮಃ=ಶ್ರೇಷ್ಠನು ಅನ್ಯಥಾ = ವಿಷ್ಣುಭಕ್ತಿ ಇಲ್ಲದಿದ್ದರೆ ನಚ = ದೇವತೆಗಳ ಅಮೃತಮಥನದಲ್ಲಿ ಅಸುರರಂತೆ ತಮ್ಮ ಉದರ ಪೂರ್ತಿಗಾಗಿಯೇ ಅಂಗ ಭೂತನಾದರೆ ಉತ್ತಮನಾಗುವುದಿಲ್ಲ. ಆ ರೀತಿ ಅಂಗಭೂತವಾಗಿ ಫಲವನ್ನೂ ಹೊಂದುವುದಿಲ್ಲ. ॥ ೧೭ ॥

**ಅವತಾರಿಕೆ:—** ಯಾವನು ಬಲಜ್ಯೇಷ್ಠನೋ ಅವನು ಕ್ಷತ್ರಿಯರಲ್ಲಿ ಉತ್ತಮನೆಂದು ಹೇಳಿದರೆ ಅಶ್ವತ್ಥಾಮನಕ್ಕಿಂತ ಅರ್ಜುನನು ಉತ್ತಮನಾಗಬೇಕಾಗುವುದು ಎಂಬ ಆಕ್ಷೇಪಕ್ಕೆ ವ್ಯಾಪ್ತಿಯಲ್ಲಿ ವಿಶೇಷಣ ಕೊಟ್ಟು ಪರಿಹರಿಸುತ್ತಾರೆ.

**ಬಲಂ ನೈಸರ್ಗಿಕಂ ತಚ್ಚೇದ್ವರಾಸ್ತ್ರಾದೇಸ್ತದನ್ಯಥಾ ।**
**ಅನ್ಯಾವೇಶ ನಿಮಿತ್ತಂ ಚೇದ್ಬಲಮನ್ಯಾತ್ಮಕಂ ಹಿ ತತ್ ॥ ೧೮ ॥**

ತದ್ಬಲಂ- ಆ ಬಲವು ನೈಸರ್ಗಿಕಂಚೇತ್ = ಸ್ವಾಭಾವಿಕವಾಗಿದ್ದರೆ ಉತ್ತಮತ್ವದಲ್ಲಿ ಕಾರಣವಾಗುತ್ತದೆ. ವರಾಸ್ತ್ರಾದೇಃ = ಶಿವಾದಿಗಳಿಂದ ಕೊಡಲ್ಪಟ್ಟ ವರದಿಂದಾಗಲೀ ಶಿವಾದಿಗಳಿಂದ ಕೊಡಲ್ಪಟ್ಟ ಅಸ್ತ್ರದಿಂದಾಗಲೀ ಶಿವಾದಿಗಳಿಂದ ಕೊಡಲ್ಪಟ್ಟ ಪಿಶಾಚಿಗಳ ಸಹಾಯದಿಂದಾಗಲೀ ತದ್ಬಲಂ ಚೇತ್ = ಆ ಬಲವಾದರೆ ಅನ್ಯಥಾ = ಉತ್ತಮತ್ವಕ್ಕೆ ಕಾರಣವಾಗದೆ ನೀಚತ್ವಕ್ಕೆ ಕಾರಣವಾಗುವುದು. ಅನ್ಯಾವೇಶನಿಮಿತ್ತಂಚೇತ್ = ನರಾವೇಶದಿಂದ ಅರ್ಜುನನಿಗೆ ಬಲಬಂದಂತೆ ಇತರರ ಆವೇಶದಿಂದ ಬಂದ ಬಲವು ಉತ್ತಮತ್ವಕ್ಕೆ ಕಾರಣವಾಗುವುದಿಲ್ಲ ಏಕೆಂದರೆ ಆ ತದ್ಬಲಂ ಅನ್ಯಾತ್ಮಕಂ ಹಿ = ಆ ಬಲವು ಇತರರ ಸ್ವಭಾವಭೂತವಾದದ್ದಷ್ಟೆ. ಆದ್ದರಿಂದ ಅರ್ಜುನಾದಿಗಳಿಗೆ ಆವೇಶವರಾದಿಗಳಿಂದ ಕೆಲವು ವೇಳೆ ಬಲಾಧಿಕ್ಯವು ಕಂಡು ಬಂದರೂ ಆ ಬಲಾಧಿಕ್ಯವು ಸ್ವಾಭಾವಿಕವಲ್ಲದ್ದರಿಂದ ಅಶ್ವತ್ಥಾಮನ ದೆಸೆಯಿಂದ ಉತ್ತಮತ್ವಕ್ಕೆ ಕಾರಣವಾಗುವುದಿಲ್ಲ. ॥ ೧೮ ॥

**ದೇವೇಷು ಬಲಿನಾಮೇವ ಭಕ್ತಿಜ್ಞಾನೇ ನಚಾನ್ಯಥಾ ।**
**ಸ ಏವ ಚ ಪ್ರಿಯೋ ವಿಷ್ಣೋರ್ನಾನ್ಯಥಾತು ಕಥಂಚನ ॥ ೧೯ ॥**

ದೇವೇಷು = ದೇವತೆಗಳಲ್ಲಿ ಬಲಿನಾಮೇವ = ಬಲವುಳ್ಳವರಿಗೇನೇ ಭಕ್ತಿಜ್ಞಾನೇ = ಭಕ್ತಿಜ್ಞಾನಗಳು, ಅನ್ಯಥಾನಬ ಬಲವಿಲ್ಲದಿದ್ದರೆ ಭಕ್ತಿಜ್ಞಾನಗಳಿರುವುದಿಲ್ಲ. ಸ ಏವಚ = ಭಕ್ತಿ ಜ್ಞಾನಗಳುಳ್ಳವನೇ ವಿಷ್ಣೋಃ = ಪರಮಾತ್ಮನಿಗೆ ಪ್ರಿ

ಪ್ರೀತಿಪಾತ್ರನು. ಅನ್ಯಥಾ = ಭಕ್ತಿ ಜ್ಞಾನಗಳಿಲ್ಲದಿದ್ದರೆ ಕಥಂಚನ = ಯಾವ ರೀತಿಯಿಂದಲೂ ನಪ್ರಿಯಃ = ವಿಷ್ಣುವಿಗೆ ಪ್ರೀತಿ ಪಾತ್ರನಾಗಲಾರನು.

**ತಸ್ಮಾದ್ಯೋ ಯೋ ಬಲಜ್ಯೇಷ್ಠಃ ಸಗುಣಜ್ಯೇಷ್ಠ ಏವಚ ।**
**ಬಲಂ ಹಿ ಕ್ಷತ್ರಿಯೇ ವ್ಯಕ್ತಂ ಜ್ಞಾಯತೇಸ್ಥೂಲದೃಷ್ಟಿಭಿಃ ॥ ೨೦ ॥**

ತಸ್ಮಾತ್ = ಆದ್ದರಿಂದ ಯೋ ಯಃ = ಯಾವನು ಯಾವನು ಬಲಜ್ಯೇಷ್ಠಃ = ಬಲದಿಂದ ಶ್ರೇಷ್ಠನಾಗಿರುವನೋ ಸಃ = ಅವನು ಗುಣಜ್ಯೇಷ್ಠ ಏವಚ = ಜ್ಞಾನ ಭಕ್ತ್ಯಾದಿಗಳಿಂದ ಶ್ರೇಷ್ಠನೇ ಆಗಿರುವನು. ಸ್ಥೂಲ ದೃಷ್ಟಿಭಿಃ = ಸ್ಥೂಲದರ್ಶಿಗಳಾದ ಜನರಿಂದ ಕ್ಷತ್ರಿಯೇ = ಕ್ಷತ್ರಿಯನಲ್ಲಿ ಬಲಂ = ಸಾಮರ್ಥ್ಯವು ವ್ಯಕ್ತಂ = ಸ್ಪಷ್ಟವಾಗಿ ಜ್ಞಾಯತೇ = ತಿಳಿಯಲ್ಪಡುತ್ತದೆ. ಹಿ = ಪ್ರಸಿದ್ಧವು. ॥ ೨೦ ॥

**ಜ್ಞಾನಾದಯೋ ಗುಣಾ ಯಸ್ಮಾತ್ ಜ್ಞಾಯಂತೇ ಸೂಕ್ಷ್ಮ ದೃಷ್ಟಿಭಿಃ ।**
**ತಸ್ಮಾದ್ಯತ್ರ ಬಲಂ ತತ್ರ ವಿಜ್ಞಾತವ್ಯಾ ಗುಣಾಃ ಪರೇ ॥ ೨೧ ॥**

ಯಸ್ಮಾತ್ = ಯಾವ ಕಾರಣದಿಂದ ಜ್ಞಾನಾದಯೋ ಗುಣಾಃ = ಜ್ಞಾನವೇ ಮೊದಲಾದ ಗುಣಗಳು ಸೂಕ್ಷ್ಮದರ್ಶಿಭಿಃ = ಸೂಕ್ಷ್ಮ ಜ್ಞಾನಿಗಳಿಂದಲೇ ಜ್ಞಾಯಂತೇ = ತಿಳಿಯಲ್ಪಡುತ್ತವೋ (ಇನ್ನೊಬ್ಬರ ಮನಸ್ಸಿನಲ್ಲಿರುವ ಜ್ಞಾನಾದಿಗಳನ್ನು ಅನುಮಾನದಿಂದಲೇ ತಿಳಿಯಬೇಕಾದ್ದರಿಂದ ಸ್ಥೂಲದರ್ಶಿಗಳಿಗೆ ತಿಳಿಯಲಶಕ್ಯವೆಂದರ್ಥ.) ತಸ್ಮಾತ್ = ಆ ಕಾರಣದಿಂದ ಯತ್ರ ಬಲಂ = ಯಾರಲ್ಲಿ ಎಲ್ಲಿ ಬಲವಿದೆಯೋ ತತ್ರ = ಅವರಲ್ಲಿ ಪರೇಗುಣಾಃ = ಇತರ ಜ್ಞಾನಾದಿ ಗುಣಗಳೂ ವಿಜ್ಞಾತವ್ಯಾಃ = ತಿಳಿಯಲು ಯೋಗ್ಯಗಳು.

**ದೇವೇಷ್ವೇವ ನಚಾನ್ಯೇಷು ವಾಸುದೇವಪ್ರತೀಪತಃ ।**
**ಕ್ಷತ್ರಾದನ್ಯೇಷ್ವಪಿ ಬಲಂ ಪ್ರಮಾಣಂ ಯತ್ರ ಕೇಶವಃ ॥ ೨೨ ॥**

**ಪ್ರವೃತ್ತೋದುಷ್ಟನಿಧನೇ ಜ್ಞಾನಕಾರ್ಯೇತಥೈವ ಚ ॥ ೨೩ ॥**

ಬಲ ಎಲ್ಲಿ ಹೆಚ್ಚು ಇದೆಯೋ ಅಲ್ಲಿ ಜ್ಞಾನಾದಿಗಳು ಅಧಿಕವಾಗಿವೆ ಎಂಬ ವ್ಯಾಪ್ತಿಯು ದೇವೇಷ್ವೇವ = ದೇವತೆಗಳಲ್ಲಿಯೇ. ಕ್ಷತ್ರಿಯನಾದ ಭೀಮನಲ್ಲಿಯೂ ರಾಮಾವತಾರದಲ್ಲಿ ಹನುಮಂತನಲ್ಲಿಯೂ ಹಿಂದೆ ಹೇಳಿದ ವ್ಯಾಪ್ತಿಯು ಕಂಡದ್ದರಿಂದ ದೇವೇಷು ಎಂಬ ಪದಕ್ಕೆ ದೇವಾವತಾರರಾದ ಕ್ಷತ್ರಿಯಾದಿಗಳಲ್ಲಿ ಎಂದೂ ಅರ್ಥ ಮಾಡಬೇಕು. ಅನ್ಯೇಷು = ದಾನವರಲ್ಲಿ ದುರ್ಯೋಧನ ಜರಾಸಂಧಾದಿಗಳಲ್ಲಿ ವಾಸುದೇವ ಪ್ರತೀಪತಃ = ಶ್ರೀಕೃಷ್ಣನ ವಿರೋಧವಿದ್ದದ್ದರಿಂದ ನಚ = ಹಿಂದೆ ಹೇಳಿದ ವ್ಯಾಪ್ತಿಯು ಇರುವುದಿಲ್ಲ. ಜರಾಸಂಧಾದಿಗಳಲ್ಲಿ ಬಲವಿರುವುದರಿಂದ ಜ್ಞಾನವಿದೆಯೆಂದು ಅನುಮೇಯಿಸಿದರೆ ಆ ಅನುಮಾನವು ಬಾಧಿತವು, ಬಾಧವೆಂಬ ದೋಷವುಳ್ಳದ್ದಾಗುತ್ತದೆ. ಪಕ್ಷದಲ್ಲಿ ಸಾಧ್ಯವಿಲ್ಲದಿದ್ದರೆ ಬಾಧವು. ಯತ್ರ = ಯಾವಾಗ ಕೇಶವಃ = ಪರಮಾತ್ಮನು ದುಷ್ಟ ನಿಧನೇ= ಅಯೋಗ್ಯರ ನಾಶದಲ್ಲಿ ಪ್ರವೃತ್ತಃ = ಉದ್ಯುಕ್ತನಾಗಿರುವನೋ ತದೈವ = ಆ ಶತ್ರುಗಳನ್ನು ನಾಶ ಮಾಡುವ ಸಮಯದಲ್ಲಿಯೇ ಜ್ಞಾನಕಾರ್ಯೇಚ = ದುಷ್ಟರ ನಾಶಕ್ಕೆ ಉಪಯುಕ್ತವಾದ ಅಸ್ತ್ರಶಸ್ತ್ರಾದಿ ವಿಷಯಕ ಜ್ಞಾನ ಕಾರ್ಯದಲ್ಲಿಯೂ ಕೂಡ ಪ್ರವತ್ತಃ = ಉದ್ಯುಕ್ತನಾಗುತ್ತಾನೋ ತದಾ = ಆವಾಗ ಕ್ಷತ್ರಾತ್ = ದೇವ ಸ್ವರೂಪರಾದ ಕ್ಷತ್ರಿಯರದೆಸೆಯಿಂದ ಅನ್ಯೇಷ್ವಪಿ = ದೇವಸ್ವರೂಪರಾದ ದ್ರೋಣಾದಿ ಬ್ರಾಹ್ಮಣರಲ್ಲಿಯೂ ಕೂಡ ಬಲಂ = ಅಧಿಕ ಬಲವು ಪ್ರಮಾಣಂ = ಜ್ಞಾನಾದಿ ಗುಣಾಧಿಕ್ಯದಲ್ಲಿ ಸಾಧಕವಾಗುತ್ತದೆ. (ತಾತ್ಪರ್ಯ = ಯಾವಾಗ ಪರಮಾತ್ಮನು ಭೂಭಾರ ನಾಶದಲ್ಲಿ ಶಕ್ತಿಯು ಅದಕ್ಕೆ ಉಪಯುಕ್ತವಾದ ಜ್ಞಾನದಾನ ಯೋಗ್ಯತೆಯು ಹೀಗೆ ಎರಡು ಕಾರ್ಯಗಳು ಒಬ್ಬನಲ್ಲಿಯೇ ಇರಲಿ ಎಂದು ಮನಸ್ಸು ಮಾಡಿದನೋ ಆಗ ಅರ್ಜುನಾದಿಗಳಲ್ಲಿ ವಿದ್ಯೋಪದೇಶ ರೂಪವಾದ ಜ್ಞಾನ ಕಾರ್ಯಕ್ಕೋಸ್ಕರ ಬೃಹಸ್ಪತಿಯೆಂಬ ದೇವತೆಯನ್ನು ದ್ರೋಣಾಚಾರ್ಯರೆಂಬ ನಾಮದಿಂದ ಬ್ರಾಹ್ಮಣ ಕುಲದಲ್ಲಿ ಹುಟ್ಟಿಸಿ ಭಾರತ ಯುದ್ಧದಲ್ಲಿ ಬಹಳ ಸೈನ್ಯವನ್ನು ನಾಶಮಾಡುವುದಕ್ಕೋಸ್ಕರ ಮೂಲರೂಪದ ಬಲವನ್ನು ಕೂಡ ಅವರಲ್ಲಿ ವ್ಯಕ್ತಮಾಡಿದನು. ॥ ೨೩ ॥

**ಅನ್ಯತ್ರ ಬ್ರಾಹ್ಮಣಾನಾಂತು ಪ್ರಮಾಣಂ ಜ್ಞಾನ ಮೇವಹಿ ।**
**ಕ್ಷತ್ರಿಯಾಣಾಂ ಬಲಂ ಚೈವ ಸರ್ವೇಷಾಂ ನಿಷ್ಣುಕಾರ್ಯತಾ ॥ ೨೪ ॥**

ಅನ್ಯತ್ರ = ಜ್ಞಾನ ಬಲಗಳನ್ನು ಒಂದು ಕಡೆ ಸೇರಿಸುವ ಅವಶ್ಯಕತೆ ಇಲ್ಲದಿರುವಾಗ (ದುಷ್ಪಹನನ ರೂಪ ಕಾರ್ಯಕ್ಕಿಂತ ಬೇರೆ ಸ್ಥಳದಲ್ಲಿ ಬ್ರಾಹ್ಮಣಾನಾಂತು = ಬ್ರಾಹ್ಮಣರಿಗಾದರೂ ಜ್ಞಾನಮೇವ ಪ್ರಮಾಣಂ = ಉತ್ತಮತ್ವಕ್ಕೆ ಸಾಧಕವಾದ ಪ್ರಮಾಣವು ಜ್ಞಾನವೇ (ಬಲವಲ್ಲ) ಕ್ಷತ್ರಿಯಾಣಾಂ = ಕ್ಷತ್ರಿಯರಿಗೆ ಬಲಮೇವ = ಉತ್ತಮತ್ವಕ್ಕೆ ಸಾಧಕ-ಪ್ರಮಾಣವು ಬಲವೇ. ಸರ್ವೇಷಾಂ ವಿಷ್ಣುಕಾರ್ಯತಾ = ಎಲ್ಲಾ ಕ್ಷತ್ರಿಯರಿಗೆ ಬಲವೂ ವಿಷ್ಣುಕಾರ್ಯೋಪಯೋಗಿತ್ವವೂ ಕೂಡ ಜ್ಞಾನಾದಿಗುಣಾದಿಕ್ಯದಲ್ಲಿ ಪ್ರಮಾಣವು ಕ್ಷತ್ರಿಯರಲ್ಲಿ ಬಲವೂ ವಿಷ್ಣುಕಾರ್ಯೋಪಯೋಗಿತ್ವವೂ ಎಷ್ಟೆಷ್ಟು ಹೆಚ್ಚು ಹೆಚ್ಚು ಇದೆಯೋ ಅವರೆಲ್ಲರೂ ಕ್ಷತ್ರಿಯ ಜಾತಿಯಲ್ಲಿ ಹೆಚ್ಚು ಹೆಚ್ಚು ಜ್ಞಾನಾದಿ ಗುಣಗಳುಳ್ಳವರು. ॥ ೨೪ ॥

ಈಗ ಪರಮಾತ್ಮನ ಅವತಾರಗಳಲ್ಲಿಯೂ ಕೂಡ ನಿರವಧಿಕವಾದ ಬಲವೂ ಕೆಲವು ಕಡೆ ನಿರವಧಿಕವಾದ ಜ್ಞಾನವೇ ಪರಮಾತ್ಮನ ಅವತಾರವೆಂಬುದಕ್ಕೆ ಪ್ರಮಾಣವೆಂದು ಹೇಳುತ್ತಾರೆ.

**ಕೃಷ್ಣರಾಮಾದಿ ರೂಪೇಷು ಬಲಕಾರ್ಯೋಜನಾರ್ದನಃ ।**
**ದತ್ತವ್ಯಾಸಾದಿ ರೂಪೇಷು ಜ್ಞಾನಕಾರ್ಯಸ್ತಥಾ ಪ್ರಭುಃ ॥ ೨೫ ॥**

ಜನಾರ್ದನಃ = ಪರಮಾತ್ಮನು ಕೃಷ್ಣರಾಮಾದಿರೂಪೇಷು= ಕೃಷ್ಣರಾಮ ಮೊದಲಾದ ಅವತಾರಗಳಲ್ಲಿ ಬಲಕಾರ್ಯಃ= ಬಲದ್ವೇಕಾರ್ಯರೂಪವಾದ ದೈತ್ಯರ ನಾಶ, ಭೂಭಾರಹರಣವೇ ಮೊದಲಾದ ತನ್ನ ಅವತಾರದ ಪ್ರಯೋಜನವುಳ್ಳವನು ತಥಾ = ಹಾಗೆಯೇ ಪ್ರಭುಃ = ಸರ್ವಸಮರ್ಥನಾದ ಪರಮಾತ್ಮನು ದತ್ತ ವ್ಯಾಸಾದಿ ರೂಪೇಷು = ದತ್ತ ವೇದವ್ಯಾಸಾದಿ, ರೂಪಗಳಲ್ಲಿ ಜ್ಞಾನಕಾರ್ಯಃ = ಜ್ಞಾನದಕಾರ್ಯರೂಪವಾದ ವೇದೋಪದೇಶ, ವೇದವಿಭಾಗ, ಅದಕ್ಕೆ ಉಪಯುಕ್ತವಾದ ಶಾಸ್ತ್ರ ನಿರ್ಮಾಣಾದಿ ತನ್ನ ಅವತಾರದ ಪ್ರಯೋಜನವುಳ್ಳವನು ಎಂದು ಅವತಾರಗಳಲ್ಲಿಯೂ ಬ್ರಹ್ಮಾದಿಗಳಲ್ಲಿ ಅಸಂಭಾವಿತ ಮಹಾಕಾರ್ಯವನ್ನು ಮಾಡಿದ್ದರಿಂದ ಪರಮಾತ್ಮನ ಅವತಾರಗಳೆಂದು ತಿಳಿಯತಕ್ಕದು. ॥ ೨೫ ॥

ಈಗ ಪೃಥು, ನಾರದ,ಬಲರಾಮಾದಿಗಳನ್ನೂ ಕೂಡ ಪುರಾಣಾದಿಗಳಲ್ಲಿ ಪರಮಾತ್ಮನ ಅವತಾರರೆಂದು ಹೇಳಿರುವುದರಿಂದ ಪೃಥ್ವಾದಿಗಳೂ ಕೂಡ ಮತ್ಸ್ಯ, ಕೂರ್ಮಾದಿಗಳಂತೆ ಸ್ವರೂಪಾಂಶರೆಂಬ ಭ್ರಾಂತಿಯನ್ನು ಹೋಗಲಾಡಿಸಲು ಅವತಾರಗಳಲ್ಲಿ ಎರಡು ರೀತಿ ಇದೆಯೆಂದು ಹೇಳುತ್ತಾರೆ.

**ಮತ್ಸ್ಯಕೂರ್ಮವರಾಹಾಶ್ಚ ಸಿಂಹ ವಾಮನ ಭಾರ್ಗವಾಃ ।**
**ರಾಘವಃ ಕೃಷ್ಣಬುದ್ಧೌಚ ಕೃಷ್ಣದ್ವೈಪಾಯನಸ್ತಥಾ ॥ ೨೬ ॥**
**ಕಪಿಲೋದತ್ತ ಋಷಭೌ ಶಿಂಶುಮಾರೋ ರುಚೇಃಸುತಃ ।**
**ನಾರಾಯಣೋ ಹರಿಃ ಕೃಷ್ಣಾಸ್ತಾಪಸೋ ಮನುರೇವಚ ॥ ೨೭ ॥**
**ಮಹಿದಾಸಸ್ತಥಾಹಂಸಃ ಸ್ತ್ರೀರೂಪೋ ಹಯಶೀರ್ಷವಾನ್ ॥**
**ತಥೈವ ವಡವಾವಕ್ತ್ರಃ ಕಲ್ಕೀ ಧನ್ವಂತರಿಃ ಪ್ರಭುಃ ॥ ೨೮ ॥**
**ಇತ್ಯಾದ್ಯಾಕೇವಲೋ ವಿಷ್ಣುರ್ನೈಷಾಂ ಭೇದಃ ಕಥಂಚನ ।**
**ನವಿಶೇಷೋ ಗುಣೈಃ ಸರ್ವೈರ್ಬಲಜ್ಞಾನಾದಿಭಿಃ ಕ್ವಚಿತ್ ॥ ೨೯ ॥**

ಮತ್ಸ್ಯಕೂರ್ಮವರಾಹಾಶ್ಚ = ಮತ್ಸ್ಯಕೂರ್ಮವರಾಹ ರೂಪಗಳು ಸಿಂಹವಾಮನ ಭಾರ್ಗವಾಃ = ನರಸಿಂಹ, ವಾಮನ, ಭೃಗು ಋಷಿಗಳ ಮಗನಾದ ಪರಶುರಾಮ ರೂಪಗಳು ರಾಘವಃ = ರಾಮಚಂದ್ರನು ಕೃಷ್ಣಬುದ್ಧೌಚ = ಕೃಷ್ಣ ಮತ್ತು ಬುದ್ಧನು ತಥಾ = ಹಾಗೆಯೇ ಕೃಷ್ಣದ್ವೈಪಾಯನಃ= ವೇದವ್ಯಾಸ ದೇವರು ಕಪಿಲಃ = ಕಪಿಲನು ದತ್ತಋಷಭೌ = ದತ್ತಾತ್ರೇಯ ಮತ್ತು ಋಷಭರೂಪಿ ಪರಮಾತ್ಮನು ಶಿಂಶುಮಾರಃ= ಶಿಂಶುಮಾರನು ರುಚೇಃ ಸುತ = ರುಚಿಯ ಮಗನಾದ ಯಜ್ಞನು, ನಾರಾಯಣಃ = ನಾರಾಯಣನು ಹರಿಃ ಕೃಷ್ಣಃ = ಯಮನ ಮಕ್ಕಳಾದ ಹರಿಕೃಷ್ಣರು ತಾಪಸೋ ಮನುಃ = ತಾಪಸನೆಂಬ ಮನುವು ತಥಾ = ಹಾಗೆಯೇ ಮಹಿದಾಸಃ = ಮಹಿದಾಸನು ಹಂಸಃ = ಹಂಸರೂಪೀ ಪರಮಾತ್ಮನು ಸ್ತ್ರೀರೂಪಃ = ಸ್ತ್ರೀಯಾದ ನಾರಾಯಣನೇ ರೂಪವು ಹಯಶೀರ್ಷವಾನ್ = ಹಯಗ್ರೀವ ರೂಪಿಯು ತಥೈವ = ಹಾಗೆಯೇ

ವಡವಾ ವಕ್ತ್ರಃ = ಸಮುದ್ರದಲ್ಲಿರುವ ವಡವಾಗ್ನಿಯು ಕಲ್ಕೀ = ಕಲ್ಕಿಯು ಪ್ರಭುಃ = ಸಮರ್ಥನಾದ ಧನ್ವಂತರಿಃ = ಧನ್ವಂತರಿಯು ಇತ್ಯಾದ್ಯಾಃ = ಇವೇ ಮೊದಲಾದ ರೂಪಗಳು ಕೇವಲಃ = ಭೇದವಿಲ್ಲದ ವಿಷ್ಣುಃ = ಪರಮಾತ್ಮನೇ ಮತ್ಸ್ಯಾದಿ ರೂಪಗಳಿಗೂ ನಾರಾಯಣನಿಗೂ ಭೇದವಿಲ್ಲವೆಂದರ್ಥ ಏಷಾಂಃ = ಈ ಮತ್ಸ್ಯಾದಿ ರೂಪಗಳಿಗೆ ಪರಸ್ಪರವಾಗಿ ಭೇದಃ = ಭೇದವು ಕಥಂಚನ ಯಾವ ರೀತಿಯಿಂದಲೂ ನ = ಇಲ್ಲ ಕ್ವಚಿತ್ = ಯಾವ ಅವತಾರದಲ್ಲಿಯೂ ಕೂಡ ಬಲಜ್ಞಾನಾದಿಭಿಃ = ಬಲಜ್ಞಾನವೇ ಮೊದಲಾಗಿವುಳ್ಳ ಸರ್ವೈಃ = ಎಲ್ಲಾ ಗುಣೈಃ = ಗುಣಗಳಿಂದ ವಿಶೇಷಃ = ಭೇದವು (ಇಂದ್ರಾರ್ಜುನ ರಿಗಿರುವಂತೆ ವಿಶೇಷವೂ ಕೂಡ) ಇರುವುದಿಲ್ಲ. ॥ ೨೬–೨೬–೨೮–೨೯ ॥

ಶ್ರೀಬ್ರಹ್ಮರುದ್ರೌ ಶೇಷಶ್ಚ ವೀಂದ್ರೇಂದ್ರೌ ಕಾಮ ಏವಚ ।
ಕಾಮಪುತ್ರೋಽನಿರುದ್ಧಶ್ಚ ಸೂರ್ಯಶ್ಚಂದ್ರೋ ಬೃಹಸ್ಪತಿಃ ॥ ೩೦ ॥
ಧರ್ಮಏಷಾಂ ತಥಾ ಭಾರ್ಯಾ ದಕ್ಷಾದ್ಯಾ ಮನವಸ್ತಥಾ ॥
ಮನು ಪುತ್ರಾಶ್ಚ ಋಷಯೋ ನಾರದಃ ಪರ್ವತಸ್ತಥಾ ॥ ೩೧ ॥
ಕಶ್ಯಪಃ ಸನಕಾದ್ಯಾಶ್ಚ ವಹ್ನ್ಯಾದ್ಯಾಶ್ಚೈವ ದೇವತಾಃ ।
ಭರತಃ ಕಾರ್ತವೀರ್ಯಶ್ಚ ವೈನ್ಯಾದ್ಯಾಶ್ಚಕ್ರವರ್ತಿನಃ ॥ ೩೨ ॥
ಗಯಶ್ಚ ಲಕ್ಷ್ಮಣಾದ್ಯಾಶ್ಚ ತ್ರಯೋ ರೋಹಿಣಿ ನಂದನಃ ।
ಪ್ರದ್ಯುಮ್ನೋ ರೌಕ್ಮಿಣೇಯಶ್ಚ ತತ್ಪುತ್ರಶ್ಚಾನಿರುದ್ಧಕಃ ॥ ೩೩ ॥
ನರಃ ಫಲ್ಗುನ ಇತ್ಯಾದ್ಯಾ ವಿಶೇಷಾ ವೇಶಿನೋ ಹರೇಃ ।
ವಾಲಿಸಾಂಬಾದಯಶ್ಚೈವ ಕಿಂಚಿದಾವೇಶಿನೋ ಹರೇಃ ॥ ೩೪ ॥

ಶ್ರೀಃ = ಲಕ್ಷ್ಮಿಯು ಬ್ರಹ್ಮರುದ್ರೌ = ಬ್ರಹ್ಮರುದ್ರರು = ಶೇಷಶ್ಚ = ಶೇಷನೂ ಕೂಡ ವೀಂದ್ರೇಂದ್ರೌ = ಗರುಡ ದೇವೇಂದ್ರರು ಕಾಮ ಏವಚ = ಕಾಮನೂ ಕೂಡ ಕಾಮ ಪುತ್ರೋಽನಿರುದ್ಧಶ್ಚ = ಮನ್ಮಥನ ಮಗನಾದ ಅನಿರುದ್ಧನು ಸೂರ್ಯಃ = ಸೂರ್ಯನು ಚಂದ್ರಃ = ಚಂದ್ರನು ಬೃಹಸ್ಪತಿಃ = ಬೃಹಸ್ಪತ್ಯಾಚಾರ್ಯರು ಧರ್ಮಃ = ಯಮಧರ್ಮನು ತಥಾ = ಹಾಗೆಯೇ ಏಷಾಂ = ಈ ಬ್ರಹ್ಮಾದಿಗಳ ಭಾರ್ಯಾಃ= ಹೆಂಡಂದಿರಾದ ಸರಸ್ವತ್ಯಾದಿಗಳು ದಕ್ಷಾದ್ಯಾಃ = ದಕ್ಷಪ್ರಜಾಪ್ರತಿಯೇಮೊದಲಾದವರು ಮನವಃ= ಸ್ವಾಯಂಭುವಾದಿ ಮನುಗಳು ತಥಾ= ಹಾಗೆಯೇಮನು ಪುತ್ರಾಶ್ಚ= ಮನುವಿನ ಮಕ್ಕಳಾದ ಪ್ರಿಯವ್ರತಾದಿಗಳು ಋಷಯಃ = ಮರೀಚ್ಯಾದಿ ಋಷಿಗಳು ನಾರದಃ = ನಾರದನು ತಥಾ = ಹಾಗೆಯೇ ಪರ್ವತಃ = ನಾರದನ ಮಿತ್ರನಾದ ಪರ್ವತ ಋಷಿಯು, ಕಶ್ಯಪಃ = ಕಶ್ಯಪನು ಸನಕಾದ್ಯಾಶ್ಚ = ಸನಕ, ಸನಂದನಾದಿ ಬ್ರಹ್ಮಮಾನಸ ಪುತ್ರರು ವಹ್ನ್ಯಾದ್ಯಾಶ್ಚೈವ ದೇವತಾಃ = ವಹ್ನಿಯೇ ಮೊದಲಾಗಿ ಉಳ್ಳ ದೇವತೆಗಳು ಭರತಃ = ದುಷ್ಯಂತ ಪುತ್ರನಾದ ಭರತನು ಕಾರ್ತವೀರ್ಯಶ್ಚ = ಕಾರ್ತವೀರ್ಯಾರ್ಜುನನು ವೈನ್ಯಾದ್ಯಾಶ್ಚಕ್ರವರ್ತಿನಃ = ವೇನರಾಜನ ಮಗನಾದ ಪೃಥುವೇ ಮೊದಲಾದ ರಾಜರುಗಳು ಗಯಶ್ಚ = ಪ್ರಿಯವ್ರತ ವಂಶದಲ್ಲಿ ಹುಟ್ಟಿರುವ ಗಯರಾಜನು ಲಕ್ಷ್ಮಣಾದ್ಯಾಶ್ಚತ್ರಯ ಲಕ್ಷ್ಮಣನೇ ಮೊದಲಾಗಿ ಉಳ್ಳ ಮೂವರು (ಅಂದರೆ ಲಕ್ಷ್ಮಣ ಭರತ ಶತ್ರುಘ್ನರು) ರೋಹಿಣೀನಂದನಃ = ರೋಹಿಣಿಯ ಮಗನಾದ ಬಲರಾಮನು ರೌಕ್ಮಿಣೇಯಶ್ಚ ಪ್ರದ್ಯುಮ್ನಃ = ರುಕ್ಮಿಣಿಯ ಮಗನಾದ ಪ್ರದ್ಯುಮ್ನನು ತತ್ಪುತ್ರಶ್ಚಾನಿರುದ್ಧಕಃ = ಪ್ರದ್ಯುಮ್ನನ ಮಗನಾದ ಅನಿರುದ್ಧನೂ ಕೂಡ ನರಃ = ಯಮನ ಮಗನಾದ ನರ ಋಷಿಯು ಫಲ್ಗುನಃ = ಅರ್ಜುನನು ಇತ್ಯಾದ್ಯಾಃ = ಇವರೇ ಮೊದಲಾಗಿ ಉಳ್ಳವರು ಹರೇಃ = ಪರಮಾತ್ಮನ ವಿಶೇಷಾವೇಶಿನಃ = ವಿಶೇಷವಾದ ಸನ್ನಿಧಾನವುಳ್ಳವರು ವಾಲಿಸಾಂಬಾದಯಶ್ಚೈವ = ವಾಲಿ, ಸಾಂಬ, ಕರ್ಣಾದಿಗಳೂ ಕೂಡ ಹರೇಃ= ಪರಮಾತ್ಮನ ಕಿಂಚಿದಾವೇಶಿನ = ಸ್ವಲ್ಪ ಸನ್ನಿಧಾನವುಳ್ಳವರು ॥ ೩೪ ॥

ತಸ್ಮಾದ್ಬಲ ಪ್ರವೃತ್ತಸ್ಯ ರಾಮಕೃಷ್ಣಾತ್ಮನೋ ಹರೇಃ ।
ಆಂತರಂಗಂ ಹನೂವಾಂಶ್ಚ ಭೀಮಸ್ತತ್ಕಾರ್ಯಸಾಧಕೌ ॥ ೩೫ ॥

ತಸ್ಮಾತ್ = ಆದ್ದರಿಂದ ಬಲಪ್ರವೃತ್ತಸ್ಯ = ಬಲ ಕಾರ್ಯದಲ್ಲಿ ಪ್ರವೃತ್ತನಾದ ರಾಮಕೃಷ್ಣಾತ್ಮನಃ = ರಾಮ

ಕೃಷ್ಣ ಸ್ವರೂಪಿಯಾದ ಹರೇಃ = ಶ್ರೀ ಹರಿಗೆ ಹನುಮಾನ್ = ಹನುಮಂತನು ಭೀಮಶ್ಚ = ಭೀಮನೂ ಕೂಡ ಅಂತರಂಗಂ = ಅಂತರಂಗ ಸಾಧಕರು ಹೇಗೋ ಹಾಗೆ ತತ್ಕಾರ್ಯ ಸಾಧಕೌ = ಹರಿ ಕಾರ್ಯವನ್ನು ಸಾಧಿಸತಕ್ಕವರು.( ಇಲ್ಲಿ ಭೀಮನ ಪ್ರಸ್ತುತನು. ಪ್ರಾಸಂಗಿಕವಾಗಿ ಹನುಮಂತನನ್ನು ಹೇಳಿರುವರು.) ॥ ೩೬ ॥

ಮೊದಲು ಬ್ರಹ್ಮಾಧಿಕಶ್ಚದೇವೇಭ್ಯಃ ಎಂದು ಬ್ರಹ್ಮನನ್ನು ಆರಂಭದಲ್ಲಿ ಹೇಳಿರುವರು. ಈಗ ಉಪಸಂಹಾರದಲ್ಲಿ ಹನುಮದ್ಭೀಮರನ್ನು ಹೇಳುವುದು ಅಸಂಗತವೆಂದು ಶಂಕಿಸಿಕೊಂಡು ಉತ್ತರವನ್ನು ಹೇಳುತ್ತಾರೆ.

**ಬ್ರಹ್ಮಾತ್ಮಕೋ ಯತೋ ವಾಯುಃ ಪದಂ ಬ್ರಾಹ್ಮಮಗಾತ್ ಪುರಾ ।**
**ವಾಯೋರನ್ಯಸ್ಯ ನ ಬ್ರಾಹ್ಮಪದಂ ತಸ್ಮಾತ್ ಸ ಏವ ಸಃ ॥ ೩೭ ॥**

ಯತಃ = ಯಾವ ಕಾರಣದಿಂದ ಪುರಾ = ಹಿಂದಿನ ಕಲ್ಪದಲ್ಲಿ ವಾಯುಃ = ಮುಖ್ಯಪ್ರಾಣನು ಇದಾನೀಂ = ಕಲ್ಪದಲ್ಲಿ ಬ್ರಹ್ಮಾತ್ಮಕಃ = ಬ್ರಹ್ಮ ಸ್ವರೂಪಿಯಾಗಿ ಬ್ರಾಹ್ಮಂ = ಬ್ರಹ್ಮ ಸಂಬಂಧಿಯಾದ ಪದಂ = ಸ್ಥಾನವನ್ನು ಅಗಾತ್ = ಪೊಂದಿರುವನೋ ವಾಯೋಃ = ವಾಯುವಿನದೆಸೆಯಿಂದ ಅನ್ಯಸ್ಯ = ಬೇರೊಬ್ಬನಿಗೆ ಬ್ರಾಹ್ಮಂ = ಬ್ರಹ್ಮ ಸಂಬಂಧಿಯಾದ ಪದಂ = ಸ್ಥಾನವು ನ = ಇಲ್ಲವೋ ತಸ್ಮಾತ್ = ಆದ್ದರಿಂದ ಸ ಏವ = ಆ ವಾಯುವೇ ಸಃ = ಆ ಬ್ರಹ್ಮನು. ಆದ್ದರಿಂದ ವಾಯು ಸ್ವರೂಪರಾದ ಹನುಮದ್ಭೀಮರಿಗೆ ಅಧಿಕ್ಯವನ್ನು ಹೇಳಿ ಉಪ ಸಂಹಾರ ಮಾಡಿದರೆ ಬ್ರಹ್ಮನಿಗೆ ಅಧಿಕ್ಯವನ್ನು ಹೇಳಿ ಉಪ ಸಂಹಾರ ಮಾಡಿದಂತೆಯೇ ಆಗುವುದರಿಂದ ಅಸಂಗತಿ ಇಲ್ಲ. ॥ ೩೭ ॥

ಹಿಂದೆ ಭೀಮನಿಗೆ ಹರಿಯ ಕಾರ್ಯಗಳಲ್ಲಿ ಮುಖ್ಯಾಂಗತ್ವವನ್ನು ಹೇಳಿರುವರು. ಈಗ ಭೀಮನ ಹೆಂಡತಿಯಾದ ದ್ರೌಪದಿಗೂ ಕೂಡ ಭೂಭಾರ ನಾಶದಲ್ಲಿ ಮುಖ್ಯವಾಗಿ ಅಂಗತ್ವವನ್ನು ಹೇಳಲು ನಾರಿಯರಿಂದ ದ್ರೌಪದಿಗೆ ಶ್ರೇಷ್ಠತ್ವ ವಿಷಯದಲ್ಲಿ ಕಾರಣವನ್ನು ಹೇಳುತ್ತಾರೆ.

**ಯತ್ರರೂಪಂ ತತ್ರ ಗುಣಾಃ ಭಕ್ತ್ಯಾದ್ಯಾಃ ಸ್ತ್ರೀಷು ನಿತ್ಯಶಃ ।**
**ರೂಪಂ ಹಿ ಸ್ಥೂಲದೃಷ್ಟೀನಾಂ ದೃಶ್ಯಂ ವ್ಯಕ್ತಂ ತತೋಽಹಿತತ್ ॥ ೩೮ ॥**

ಯತ್ರ ಸ್ತ್ರೀಷು = ಯಾವ ಸ್ತ್ರೀಯರಲ್ಲಿ ರೂಪಂ = ಸೌಂದರ್ಯವಿದೆಯೋ ತತ್ರ = ಆ ಸ್ತ್ರೀಯರಲ್ಲಿ ನಿತ್ಯಶಃ = ಯಾವಾಗಲೂ ಭಕ್ತ್ಯಾದ್ಯಾಃ ಗುಣಾಃ = ಭಕ್ತಿಯೇ ಮೊದಲಾಗಿ ಉಳ್ಳ ಗುಣಗಳು ಇವೆ. ಸ್ಥೂಲ ದೃಷ್ಟೀನಾಂ = ಸ್ಥೂಲದರ್ಶಿಗಳಿಂದ ರೂಪಂ = ಸೌಂದರ್ಯವು ವ್ಯಕ್ತಂ = ಸ್ಪಷ್ಟವಾದದ್ದು ಹೇಗೋ ಹಾಗೆ ದೃಶ್ಯಂ = ತಿಳಿಯಲ್ಪಡುವುದು. ತತಃ = ರೂಪವು ಸ್ಪಷ್ಟವಾಗಿ ತಿಳಿಯುವುದರಿಂದ ತತ್ = ಆ ರೂಪವು ಗುಣಾದಿಗಳಿಗೆ ನಿಮಿತ್ತವಾಗಿ ಹೇಳಲ್ಪಟ್ಟಿತು. ॥ ೩೮ ॥

**ಪ್ರಾಯೋ ವೇತ್ತುಂ ನಶಕ್ಯಂತೇ ಭಕ್ತ್ಯಾದ್ಯಾಃ ಸ್ತ್ರೀಷು ಯೇತ್ನತಃ (ಯತ್ತತಃ)**
**ಯಾಸಾಂ ರೂಪಂ ಗುಣಾಸ್ತಾಸಾಂ ಭಕ್ತ್ಯಾದ್ಯಾ ಇತಿ ನಿಶ್ಚಯಃ ॥ ೩೯ ॥**

ಯತ್ = ಯಾವಕಾರಣದಿಂದ ಸ್ತ್ರೀಷು = ಸ್ತ್ರೀಯರಲ್ಲಿ ಭಕ್ತ್ಯಾದ್ಯಾಃ = ಭಕ್ತಿಯೇ ಮೊದಲಾಗಿ ಉಳ್ಳ ಗುಣಗಳು (ಸ್ತ್ರೀಯರಿಗೆ ವೇದಾಧ್ಯಯನ ಪ್ರವಚನಾದಿಗಳಿಲ್ಲದಿರುವುದರಿಂದ) ಯತ್ನತಃ = ಪ್ರಯತ್ನದಿಂದಲೂ ಕೂಡ ಪ್ರಾಯಶಃ = ಹೆಚ್ಚಾಗಿ ವೇತ್ತುಂ = ತಿಳಿಯಲು ನಶಕ್ಯಂತೇ = ಸಾಧ್ಯಗಳಾಗುವುದಿಲ್ಲವೋ ತತ್ = ಆದ್ದರಿಂದ ಯಾಸಾಂ = ಯಾ ಸ್ತ್ರೀಯರಿಗೆ ರೂಪಂ = ಸೌಂದರ್ಯವಿದೆಯೋ ತಾಸಾಂ = ಆ ಸ್ತ್ರೀಯರಿಗೆ ಭಕ್ತ್ಯಾದ್ಯಾಃ ಗುಣಾಃ = ಭಕ್ತಿಯೇ ಮೊದಲಾಗಿ ಉಳ್ಳ ಗುಣಗಳು ಇವೆ ಇತಿ = ಎಂದು ನಿಶ್ಚಯಃ = ನಿರ್ಣಯವು ॥ ೩೯ ॥

**ತಚ್ಚನೈಸರ್ಗಿಕಂ ರೂಪಂ ದ್ವಾತ್ರಿಂಶಲ್ಲಕ್ಷಣೈರ್ಯುತಂ ।**
**ನಲಕ್ಷಣಂ ವಪುರ್ಮಾತ್ರಂ ಗುಣಹೇತುಃ ಕಥಂಚನ ॥ ೪೦ ॥**

ದ್ವಾತ್ರಿಂಶಲ್ಲಕ್ಷಣೈಃ = ಮೂವತ್ತೆರಡು ಲಕ್ಷಣಗಳಿಂದ ಯುತಂ = ಕೂಡಿದ ನೈಸರ್ಗಿಕಂ = ಸಾಭಾವಿಕವಾದ

ತತ್‌ರೂಪಂಚ = ಆ ರೂಪವೇ ಗುಣಹೇತುಃ ಭಕ್ತ್ಯಾದಿ ಗುಣಗಳಿಗೆ ಕಾರಣವು. ಅಲಕ್ಷಣಂ = ಮೂವತ್ತೆರಡು ಲಕ್ಷಣಗಳಿಲ್ಲದ ವಪುರ್ಮಾತ್ರಂ = ಕೇವಲ ಶರೀರವು ಕಥಂಚನ = ಯಾವ ರೀತಿಯಿಂದಲೂ ಗುಣಹೇತುಃ = ಭಕ್ತ್ಯಾದಿ ಗುಣಗಳಿಗೆ ಸಾಧಕವು ನ ಆಗಲಾರದು ॥ ೪೧ ॥

**ಆಸುರೀಣಾಂ ವರಾದೇಸ್ತು ವಪುರ್ಮಾತ್ರಂ ಭವಿಷ್ಯತಿ ।**
**ನಲಕ್ಷಣಾನ್ಯತಸ್ತಾಸಾಂ ನೈವಭಕ್ತಿಃ ಕಥಂಚನ ॥ ೪೧ ॥**

ಆಸುರೀಣಾಂ = ಆಸುರ ಸ್ತ್ರೀಯರಿಗೆ ವರಾದೇಸ್ತು = ರುದ್ರಾದಿಗಳ ವರದಿಂದಲಾಗಲೀ ಮಾಯೆಯಿಂದಲಾಗಲೀ ವಪುರ್ಮಾತ್ರಂ = ಕೇವಲ ಸುಂದರವಾದ ಶರೀರವು ಭವಿಷ್ಯತಿ = ಆಗುವುದು ಲಕ್ಷಣಾನಿ ನ – ವರಾದಿಗಳಿಂದ ಲಕ್ಷಣಗಳು ಆಗಲಾರವು. ಅತಃ = ಲಕ್ಷಣಗಳಿಲ್ಲದ್ದರಿಂದ ತಾಸಾಂ = ಆಆಸುರ ಸ್ತ್ರೀಯರಿಗೆ ಕಥಂಚನ = ಯಾವ ರೀತಿಯಿಂದಲೂ ಭಕ್ತಿಃ = ಭಕ್ತಿಯು ನೈವ = ಉಂಟಾಗಲಾರದು. ॥ ೪೧ ॥

**ತಸ್ಮಾದ್ರೂಪಗುಣೋದಾರಾ ಜಾನಕೀ ರುಕ್ಮಿಣೀ ತಥಾ ।**
**ಸತ್ಯಭಾವೇತ್ಯಾದಿ ರೂಪಾ ಶ್ರೀಃ ಸರ್ವಪರಮಾಮತಾ ॥ ೪೨ ॥**

ಯಸ್ಮಾತ್ = ಯಾವ ಕಾರಣದಿಂದ ಜಾನಕೀ = ಸೀತೆಯು ರುಕ್ಮಿಣೀ = ರುಕ್ಮಿಣಿಯು ತಥಾ = ಹಾಗೆಯೇ ಸತ್ಯಭಾಮೆಯೇ ಮೊದಲಾದ ಸ್ವರೂಪವುಳ್ಳ ಶ್ರೀಃ = ಲಕ್ಷ್ಮಿದೇವಿಯು ರೂಪಗುಣೋದಾರಾ = ದ್ವಾತ್ರಿಂಶಲ್ಲ ಕ್ಷಣಗಳಿಂದ ಸ್ವಾಭಾವಿಕ ರೂಪದಿಂದ ಉತ್ಕೃಷ್ಟಳೋ ತಸ್ಮಾತ್ = ಆದ್ದರಿಂದ ಸರ್ವಪರಮಾ = ಎಲ್ಲರಿಂದಲೂ ಉತ್ತಮಳು ಎಂದು ಮತಾ = ಸಮ್ಮತಳು ॥ ೪೨ ॥

**ತತಃ ಪಶ್ಚಾತ್ ದ್ರೌಪದೀಚ ಸರ್ವಾಭ್ಯೋರೂಪತೋವರಾ ।**
**ಭೂಭಾರಹರಣೇ ಸಾಕ್ಷಾದಂಗಂ ಭೀಮವದೀಶಿತುಃ ॥ ೪೩ ॥**

ತತಃ ಪಶ್ಚಾತ್ = ಆ ಲಕ್ಷ್ಮೀಯ ಆನಂತರ ದ್ರೌಪದೀಚ = ದ್ರೌಪದಿಯೂ ಕೂಡ ಸರ್ವಾಭ್ಯಃ = ಎಲ್ಲಾ ಸ್ತ್ರೀಯರ ದೆಸೆಯಿಂದಲೂ ರೂಪತಃ = ಒಳ್ಳೆರೂಪವಿರುವುದರಿಂದ ವರಾ = ಉತ್ತಮಳು ಈಶಿತುಃ = ಸರ್ವಸ್ವಾಮಿಯಾದ ಶ್ರೀಹರಿಗೆ ಭೂಭಾರಹರಣೇ = ಭೂಮಿಯ ಭಾರಭೂತರಾದ ದೈತ್ಯರ ಸಂಹಾರ ವಿಷಯದಲ್ಲಿ ಭೀಮವತ್ ಭೀಮಸೇನನಂತೆ ಸಾಕ್ಷಾತ್ = ಮುಖ್ಯವಾಗಿ ಅಂಗಂ = ಸಹಾಯಕಳು ॥ ೪೩ ॥

**ಹಂತಾಚ ವೈರಹೇತುಶ್ಚ ಭೀಮಃ ಪಾಪಜನಸ್ಯತು ।**
**ದ್ರೌಪದೀ ವೈರಹೇತುಃ ಸ್ಯಾತ್ ತಸ್ಮಾದ್ಭೀಮಾದನಂತರಾ ॥ ೪೪ ॥**

ಭೀಮಃ = ಭೀಮಸೇನನು ಪಾಪಜನಸ್ಯತು = ಪಾಪಿಷ್ಠರಾದ ದುರ್ಯೋಧನಾದಿಗಳ ಹಂತಾಚ = ಸಂಹಾರಕನು ವೈರಹೇತುಶ್ಚ = ದ್ವೇಷಕ್ಕೂ ಕಾರಣನಾಗಿರುತ್ತಾನೆ. ದ್ರೌಪದೀ = ದ್ರೌಪದಿಯು ವೈರಹೇತುಃ ಸ್ಯಾತ್ = ದ್ವೇಷಕ್ಕೆ ಮಾತ್ರ ಕಾರಣಳಾಗುವಳು ತಸ್ಮಾತ್ = ಆದ್ದರಿಂದ ತಸ್ಮಾತ್ = ಆ ಭೀಮನದೆಸೆಯಿಂದ ಅನಂತರಾ = ಮುಂದಿನವಳು (ಅಧಮಳು) ॥ ೪೩ ॥

**ಬಲದೇವಸ್ತತಃ ಪಶ್ಚಾತ್ತತಃ ಪಶ್ಚಾಚ್ಚ ಫಲ್ಗುನಃ ।**
**ನರಾವೇಶಾತ್ ಅನ್ಯಥಾತು ದ್ರಾಣಿಃ ಪಶ್ಚಾತ್ತತೋಪರೇ ॥ ೪೫ ॥**
**ರಾಮವಜ್ಜಾಂಬವತ್ಯಾದ್ಯಾಃ ಷಡ್ಯತೋ ರೇವತೀ ತಥಾ ॥ ೪೬ ॥**

ತತಃ = ಆಭೀಮ ದ್ರೌಪದಿಯರ ಪಶ್ಚಾತ್ = ಅನಂತರ ಬಲದೇವಃ = ಬಲರಾಮನು ಹರಿಯ ಕಾರ್ಯಕ್ಕೆ ಅಂಗ-ಭೂತನು. ತತಃ = ಬಲದೇವನ ಅನಂತರ ನರಾವೇಶಾತ್ = ನರಾವೇಶನಿಮಿತ್ತದಿಂದ ಫಲ್ಗುನಃ = ಅರ್ಜುನನು ಹರಿಯ ಕಾರ್ಯಕ್ಕೆ ಸಹಾಯಕನು. ಅನ್ಯಥಾ = ನರಾವೇಶ ನಿಮಿತ್ತವನ್ನು ಅಪೇಕ್ಷಿಸದೆ ಸ್ವರೂಪವನ್ನು ವಿಚಾರ ಮಾಡಿದಾಗ ಪಶ್ಚಾತ್ = ಬಲರಾಮನ ಅನಂತರ ದ್ರೌಣಿಃ = ಅಶ್ವತ್ಥಾಮನು ಹರಿಯ ಕಾರ್ಯಕ್ಕೆ ಅಂಗನು. ತತಃ = ದ್ರೌಣಿಯ ಅನಂತರ ಅಪರೇ = ಫಲ್ಗುನಾದಿಗಳು ಹರಿಯ ಕಾರ್ಯಕೆ ಅಂಗರು ರಾಮವತ್ = ಬಲರಾಮನಂತೆ ಜಾಂಬವತ್ಯಾದ್ಯಾಃ ಷಟ್ = ಜಾಂಬವತೀ ಮೊದಲಾದ ಆರು ಸ್ತ್ರೀಯರು ಅಂಗಭೂತರು ತತಃ = ಆರು ಮಹಿಷಿಗಳ ಅನಂತರ ರೇವತೀ = ಬಲರಾಮನ ಹೆಂಡತಿಯು ಅಂಗಭೂತಳು. (ರಾಮಾಯಣದ ಕಥಾ ತಾತ್ಪರ್ಯ ಶೋಧನೆ ಮಾಡಿದಾಗ ವಾಯು ಶೇಷಾದಿಗಳಿಗೆ ಹರಿಸೇವೆಗೆ ಸಹಾಯ ಮಾಡುವುದರಲ್ಲಿ ತಾರತಮ್ಯವನ್ನು ಹನುಮದಾದಿ ರೂಪಗಳಲ್ಲಿ ತೋರಿಸುತ್ತಾರೆ.)

**ಲಕ್ಷ್ಮಣೋ ಹನುಮತ್ಪಶ್ಚಾತ್ ತತೋಭರತ ವಾಲಿನೌ ।**
**ಶತ್ರುಘ್ನಶ್ಚ ತತಃಪಶ್ಚಾತ್ಸುಗ್ರೀವಾದ್ಯಾಸ್ತತೋಽವರಾಃ ॥ ೪೭ ॥**

ಹನುಮತ್ಪಶ್ಚಾತ್ = ಹನುಮಂತನ ಅನಂತರ ಲಕ್ಷ್ಮಣಃ = ಲಕ್ಷ್ಮಣನು ಅಂಗಭೂತನು ತತಃ = ಲಕ್ಷ್ಮಣನ ಅನಂತರ ಭರತವಾಲಿನೌ = ಭರತ ವಾಲಿಗಳು ಅಂಗಭೂತರು ತತಃ ಪಶ್ಚಾತ್ = ಭರತ ವಾಲಿಗಳ ಮೇಲೆ ಶತ್ರುಘ್ನಶ್ಚ = ಶತ್ರುಘ್ನನು ಅಂಗಭೂತನು ತರಃ = ಆ ಶತ್ರುಘ್ನನಿಂದ ಸುಗ್ರೀವಾದ್ಯಾಃ = ಸುಗ್ರೀವನೇ ಮೊದಲಾಗಿ ಉಳ್ಳವರು ಅವರಾಃ = ಅಧಮರು

**ರಾಮ ಕಾರ್ಯಂತು ಯೈಃಸಮ್ಯಕ್ಸ್ವಯೋಗ್ಯಂ ನಕೃತಂ ಪುರಾ ।**
**ತೈಃಪೂರಿತಂತು ಕೃಷ್ಣಾಯ ಭೀಭತ್ಸ್ವಾದ್ಯೈಃ ಸಮಂತತಃ ॥ ೪೮ ॥**

ವಾಲಿಯು ಬೇಗ ಮರಣವನ್ನು ಹೊಂದಿದ್ದರಿಂದ ಹರಿಸೇವೆಯನ್ನು ಸರಿಯಾಗಿ ಮಾಡಲಿಲ್ಲ. ಭರತನು ಸ್ವರ್ಗಾರೋಹಣದವರೆಗೂ ಸೇವೆಯನ್ನು ಮಾಡಿದ್ದರಿಂದ ಭರತ ವಾಲಿಗಳಿಗೆ ಹರಿಸೇವೆಯಲ್ಲಿ ಸಾಮ್ಯವು ಹೇಗೆಂಬುದನ್ನು ನಿರೂಪಿಸುತ್ತಾರೆ.

ಪುರಾ = ಮೊದಲು ಯೈಃ = ಯಾರಿಂದ ವಾಲಿತಾರಾ ರೂಪದಿಂದ ಸ್ವಯೋಗ್ಯಂ = ತಮಗೆ ಯೋಗ್ಯವಾದ ರಾಮಕಾರ್ಯಂ = ರಾಮನ ಕೆಲಸವು ಸಮ್ಯಕ್ = ಚೆನ್ನಾಗಿ ನಕೃತಂ = ಮಾಡಲ್ಪಡಲಿಲ್ಲವೋ ತೈಃ ಭೀಭತ್ಸ್ವಾದ್ಯೈಃ = ಆ ಅರ್ಜುನನೇ ಮೊದಲಾದ ರೂಪಗಳಿಂದ ಸಮಂತತಃ = ಸರಿಯಾಗಿ ಕೃಷ್ಣಾಯ = ಕೃಷ್ಣನಿಗೋಸ್ಕರ ಪೂರಿತಂ = ಪೂರ್ಣ ಮಾಡಲ್ಪಟ್ಟಿತು. ॥ ೪೮ ॥

**ಅಧಿಕಂ ಯೈಃ ಕೃತಂ ತತ್ರ ತೈರೂನಂ ಕೃತಮುತ್ರತು ।**
**ಕರ್ಣಾದ್ಯೈರಧಿಕಂ ಯೈಸ್ತು ಪ್ರಾದುರ್ಭಾವ ದ್ವಯೇಕೃತಮ್ ॥ ೪೯ ॥**
**ವಿವಿದಾದ್ಯೈರ್ಹಿತೈಃ ಪಶ್ಚಾದ್ವಿಪ್ರತೀಪಂ ಕೃತಂ ಹರೇಃ ।**
**ಪ್ರಾದುರ್ಭಾವದ್ವಯೇ ಹ್ಯಸ್ಮಿನ್ಸರ್ವೇಷಾಂ ನಿರ್ಣಯಃ ಕೃತಃ ॥ ೫೦ ॥**

ಯೈಃ = ಯಾವ ಲಕ್ಷ್ಮಣ ಅಂಗದಾದಿಗಳಿಂದ ತತ್ರ = ಆ ರಾಮಾವತಾರದಲ್ಲಿ ಅಧಿಕಂ = ಹೆಚ್ಚಾದ ಸೇವೆಯು ಕೃತಂ = ಮಾಡಲ್ಪಟ್ಟಿತೋ ತೈಃ = ಆ ಲಕ್ಷ್ಮಣಾದಿಗಳಿಂದ ಅತ್ರತು = ಈ ಕೃಷ್ಣಾವತಾರದಲ್ಲಾದರೂ ಬಲರಾಮಾದಿರೂಪದಿಂದಲೂ ಅಭಿಮಾನ್ಯರೂಪದಿಂದಲೂ ಊನಂ ಕೃತಂ = ಅಲ್ಪ ಸೇವೆಯು ಮಾಡಲ್ಪಟ್ಟಿತು. ಯೈಃ = ಯಾವ = ಕರ್ಣಾದ್ಯೈಸ್ತು = ಕರ್ಣನೇ ಮೊದಲಾದ ನಕುಲ ಸಹದೇವಾಧಿಗಳಿಂದ ಪ್ರಾದುರ್ಭಾವದ್ವಯೇ = ಅವತಾರಗಳಿರಡರಲ್ಲಿಯೂ ಅಧಿಕಂಕೃತಂ = ಪೆಚ್ಚು ಸೇವೆಯು ಮಾಡಲ್ಪಟ್ಟಿತೋ ವಿವಿದಾದ್ಯೈಃ ತೈಃ = ಆವಿವಿದನೇ ಮೊದಲಾದ ಕರ್ಣಾಧಿಗಳಿಂದ ಪಶ್ಚಾತ್= ಆ ಮೇಲೆ ಹರೇಃ = ಶ್ರೀಹರಿಗೆ ವಿಪ್ರತೀಪಂ = ವಿರೋಧವು ಕೃತಂ = ಮಾಡಲ್ಪಟ್ಟಿತು. ಅಸ್ಮಿನ್ = ಈದಾವ ಪ್ರಾದುರ್ಭಾವ ದ್ವಯೇ = ರಾಮಕೃಷ್ಣಾಖ್ಯೆಯರಡು ಅವತಾರಗಳಲ್ಲಿ ಸರ್ವೇಷಾಂ = ಎಲ್ಲಾ ಬ್ರಹ್ಮಾದಿಗಳ ನಿರ್ಣಯಃ = ಉಚ್ಚತ್ವ ನೀಚತ್ವ ನಿರ್ಣಯವು ಕೃತಃ = ಮಾಡಲ್ಪಟ್ಟಿತು.

**ವಿಶೇಷಾಂಶ:—** ಅಶ್ವಿನೀ ದೇವತೆಗಳು ರಾಮಾವತಾರ ಕಾಲದಲ್ಲಿ ಮೈಂದ ವಿವಿಧ ರೂಪದಿಂದಲೂ ಕೃಷ್ಣಾವತಾರ ಕಾಲದಲ್ಲಿ ನಕುಲ ಸಹದೇವ ರೂಪದಿಂದಲೂ ಅಧಿಕವಾದ ಸೇವೆಯನ್ನು ಮಾಡಿರುವರು. ವಿವಿದಾದ್ಯೈಃ ಎಂಬಲ್ಲಿ ಆದ್ಯಪದದಿಂದ ಕರ್ಣಾದಿಗಳನ್ನು ಇಟ್ಟುಕೊಳ್ಳಬೇಕು. ವಿವಿದನು ನರಕಾಸುರನ ಸಹಾಯದಲ್ಲಿದ್ದು ತನ್ನ ಸ್ಥೂಲವಾದ ಅಂಜಲಿಯಿಂದ ಉಪ್ಪು ನೀರನ್ನು ಚಿಲ್ಲಿ ಕೃಷ್ಣನ ಗ್ರಾಮಗಳನ್ನು ನಾಶಮಾಡಿರುವನು. ಕರ್ಣನು ದುರ್ಯೋಧನನ ಪಕ್ಷಪಾತದಿಂದ ಕೃಷ್ಣನ ವಚನೋಲ್ಲಂಘನ, ದ್ರೌಪದಿಯ ತಿರಸ್ಕಾರ, ಪಾಂಡವರ ದ್ವೇಷಾದಿಗಳನ್ನು ಮಾಡಿರುವನು. ಹೀಗೆಯೇ ಅಶ್ವನೀದೇವತೆಗಳು ಮತ್ತು, ಕರ್ಣನು ಅಧಿಕ ಪುಣ್ಯವನ್ನು ನಾಶ ಮಾಡಿಕೊಂಡಿರುವರು. ॥ ೫೦ ॥

ಹೇಗೆ ರಾಮಾವತಾರದಲ್ಲಿ ಯಾರು ಅಧಿಕ ಸೇವೆಯನ್ನು ಮಾಡಿರುವರೋ ಅವರು ಕೃಷ್ಣಾವತಾರದಲ್ಲಿ ಅಲ್ಪ ಸೇವೆಯನ್ನು ಮಾಡಿರುವರೋ ಹಾಗೆಯೇ ವರಾಹಾದ್ಯವತಾರಗಳಲ್ಲಿ ಸೇವಾದಿಗಳಿಂದ ಸ್ವರೂಪ ನಿರ್ಣಯವು ಆಗಬಹುದೋ ಎಂದರೆ ಅದಕ್ಕೆ ಸಮಾಧಾನವನ್ನು ಹೇಳುತ್ತಾರೆ.

**ನೈತಯೋರಕೃತಂ ಕಂಚಿಚ್ಛುಭಂ ವಾಯದಿವಾऽಶುಭಮ್ ।**
**ಅನ್ಯತ್ರ ಪೂರ್ಯತೇ ಕ್ವಾಪಿ ತಸ್ಮಾದತ್ರೈವ ನಿರ್ಣಯಃ ॥ ೫೧ ॥**

ಏತಯೋಃ = ಈ ರಾಮಾವತಾರಗಳಲ್ಲಿ ಅಕೃತಂ = ನಿರ್ಣಯವಾಗದಿರುವ ಕಿಂಚಿತ್ = ಶುಭಂ ಯದಿವಾ = ಯಾವುದಾದರೊಂದು ಶುಭವಾಗಲೀ ಅಶುಭಂವಾ = ಅಶುಭವಾಗಲೀ ಅನ್ಯತ್ರ = ವರಾಹಾದ್ಯವತಾರಗಳಲ್ಲಿ ಕ್ವಾಪಿ = ಎಲ್ಲಿಯೂ ಕೂಡ ನಪೂರ್ಯತೆ = ನಿರ್ಣಯಿಸಲ್ಪಡುವುದಿಲ್ಲ. ತಸ್ಮಾತ್ = ಆದ್ದರಿಂದ ಅತ್ರೈವ = ಈ ಎರಡು ಅವತಾರಗಳಲ್ಲಿಯೇ ನಿರ್ಣಯಃ = ಸರ್ವಶಾಸ್ತ್ರಾರ್ಥಗಳ ನಿರ್ಣಯವಾಗುತ್ತದೆ.

**ಪಶ್ಚಾತ್ತನತ್ವಾತ್ಕೃಷ್ಣಸ್ಯ ವೈಶೇಷ್ಯಾತ್ತತ್ರ ನಿರ್ಣಯಃ ।**
**ಪ್ರಾದುರ್ಭಾವಮಿಮಂ ತಸ್ಮಾತ್ ಗೃಹೀತ್ವಾ ಭಾರತಂ ಕೃತಂ ॥ ೫೨ ॥**

ಕೃಷ್ಣಸ್ಯ = ಕೃಷ್ಣನಿಗೆ ಪಶ್ಚಾತ್ತನತ್ವಾತ್ = ಬೇಗಮುತ್ವವಿದ್ದುದರಿಂದ ರಾಮಕೃಷ್ಣಾವತಾರಗಳಲ್ಲಿ ಕೃಷ್ಣಾವತಾರವು ಕೊನೆದಾದ್ದರಿಂದ ಅತ್ರ = ಈ ಕೃಷ್ಣಾವತಾರದಲ್ಲಿ ವೈಶ್ವೇಷ್ಯಾತ್ = ವಿಶೇಷಾಕಾರವಾಗಿ ನಿರ್ಣಯಃ = ನಿರ್ಣಯವು ಆಗುತ್ತದೆ. ಎರಡು ಅವತಾರಗಳಲ್ಲಿ ಸರ್ವ ನಿರ್ಣಯವಾಗುವುದಾದರೆ ಭಾರತವು ಸರ್ವ ನಿರ್ಣಾಯಕವು ಹೇಗೆಂಬುದನ್ನು ವಿವರಿಸುತ್ತಾರೆ. ತಸ್ಮಾತ್ = ಆದ್ದರಿಂದ ಇಮಂ ಪ್ರಾದುರ್ಭಾವಂ = ಈ ಎರಡು ಅವತಾರಗಳನ್ನು ಗೃಹೀತ್ವಾ = ತನ್ನ ಭಾರತ ಗ್ರಂಥಕ್ಕೆ ವಿಷಯವನ್ನಾಗಿ ಮಾಡಿ ಭಾರತಂ = ಭಾರತವು ಕೃತಂ = ವ್ಯಾಸರೂಪನಾದ ತನ್ನಿಂದ ಮಾಡಲ್ಪಟ್ಟಿತು. ॥ ೫೨ ॥

ರಾಮ ಕಥೆಯು ಇಲ್ಲಿದಿರುವುದರಿಂದ ಭಾರತವು ಸರ್ವಶಾಸ್ತ್ರಾರ್ಥ ನಿರ್ಣಾಯಕವು ಹೇಗೆಂಬುದಕ್ಕೆ ಸಮಾಧಾನವನ್ನು ಹೇಳುತ್ತಾರೆ.

**ಉಕ್ತಾ ರಾಮ ಕಥಾ ಹ್ಯಸ್ಮಿನ್ಮಾರ್ಕಂಡೇಯ ಸಮಾಖ್ಯಯಾ ।**
**ತಸ್ಮಾದ್ಯದ್ಭಾರತೇ ನೋಕ್ತಂ ತದ್ಧಿನೈವಾಸ್ತಿ ಕುತ್ರ ಚಿತ್ ॥ ೫೩ ॥**

ಅಸ್ಮಿನ್ = ಈ ಭಾರತದಲ್ಲಿ ಮಾರ್ಕಾಂಡೇಯ ಸಮಾಖ್ಯಯಾ = ಮಾರ್ಕಾಂಡೇಯ ಋಷಿಗಳ ಸಮಾಖ್ಯೆಯಿಂದ ರಾಮ ಕಥಾ = ರಾಮ ದೇವರ ಕಥೆಯು ಉಕ್ತಾ ಹಿ = ಹೇಳಲ್ಪಟ್ಟಿದೆಯಷ್ಟೆ. = ತಸ್ಮಾತ್ ಆದ್ದರಿಂದ ಯತ್ = ಯಾವುದು ಭಾರತೇ = ಭಾರತದಲ್ಲಿ ನೋಕ್ತಂ = ಹೇಳಲ್ಪಡಲಿಲ್ಲವೋ ತತ್ = ಆ ಪ್ರಮೇಯವು ಕುತ್ರಚಿತ್ = ಯಾವ ಪುರಾಣಾದಿಗಳಲ್ಲಿಯೂ ಕೂಡ ನೈವಾಸ್ತಿ = ಇಲ್ಲವೇ ಇಲ್ಲ. ॥ ೫೩ ॥

**ಆತ್ರೋಕ್ತಂ ಸರ್ವಶಾಸ್ತ್ರೇಷು ನಹಿ ಸಮ್ಯಗುದಾಹೃತಂ ।**
**ಇತ್ಯಾದಿ ಕಥಿತಂ ಸರ್ವಂ ಬ್ರಹ್ಮಾಂಡೇ ಹರಿಣಾ ಸ್ವಯಂ ॥ ೫೪ ॥**

ಅತ್ರ = ಈ ಭಾರತದಲ್ಲಿ ಉಕ್ತಂ = ಹೇಳಲ್ಪಟ್ಟ ಪ್ರಮೇಯವು ಸರ್ವಶಾಸ್ತ್ರೇಷು = ಎಲ್ಲಾ ಶಾಸ್ತ್ರಗಳಲ್ಲಿ ಸಮ್ಯಕ್ =

ಸ್ಪಷ್ಟವಾಗಿಯೂ ನೋದಾಹೃತಂ = ಹೇಳಲ್ಪಡಲಿಲ್ಲ. ಸ್ವಯಂ = ನಾರಾಯಣಾವತಾರರಾದ ಹರಿಣಾ = ವೇದವ್ಯಾಸರಿಂದ ಇತ್ಯಾದಿ ಸರ್ವಂ = ಇವೇ ಮೊದಲಾದ ಭಾರತಾದಿಗಳಿಗೆ ಉತ್ತಮತ್ವವೆಲ್ಲವೂ ಬ್ರಹ್ಮಾಂಡೇ = ಬ್ರಹ್ಮಾಂಡ ಪುರಾಣದಲ್ಲಿ ಕಥಿತಂ = ಹೇಳಲ್ಪಟ್ಟಿದೆ. ॥ ೫೫ ॥ ಆದ್ದರಿಂದ ಭಾರತವು ಸರ್ವ ನಿರ್ಣಾಯಕವಾದ್ದರಿಂದ ಉತ್ತಮವು ॥ ೫೪ ॥

**ಮಾರ್ಕಾಂಡೇಯೇಽಪಿ ಕಥಿತಂ ಭಾರತಸ್ಯ ಪ್ರಶಂಸನಂ ।**
**ದೇವತಾನಾಂ ಯಥಾ ವ್ಯಾಸೋ ದ್ವಿಪದಾಂ ಬ್ರಾಹ್ಮಣೋವರಃ ॥ ೫೫ ॥**
**ಆಯುಧಾನಾಂ ಯಥಾ ವಜ್ರಮೋಷಧೀನಾಂ ಯಥಾ ಯವಾಃ ।**
**ತಥೈವ ಸರ್ವಶಾಸ್ತ್ರಾಣಾಂ ಮಹಾಭಾರತಮುತ್ತಮಮ್ ॥ ೫೬ ॥**

ಮಾರ್ಕಾಂಡೇಯೇಪಿ = ಮಾರ್ಕಾಂಡೇಯ ಪುರಾಣದಲ್ಲಿಯೂ ಕೂಡ ಭಾರತಸ್ಯ = ಭಾರತದ ಪ್ರಶಂಸನಂ = ಹೊಗಳು ವಿಕೆಯು ಕಥಿತಂ = ಹೇಳಲ್ಪಟ್ಟಿದೆ. ಯಥಾ = ಹೇಗೆ ವ್ಯಾಸಃ = ವೇದವ್ಯಾಸರು ದೇವತಾನಾಂ = ದೇವತೆಗಳ ಮಧ್ಯದಲ್ಲಿ ವರಃ = ಶ್ರೇಷ್ಠರೋ ದ್ವಿಪದಾಂ = ಎರಡು ಕಾಲುಗಳುಳ್ಳ ಬ್ರಾಹ್ಮಣ, ಕ್ಷತ್ರಿಯ. ವೈಶ್ಯ, ಶೂದ್ರರ ಮಧ್ಯದಲ್ಲಿ ಬ್ರಾಹ್ಮಣಃ = ಬ್ರಾಹ್ಮಣನು. ವರಃ = ಶ್ರೇಷ್ಠನು. ಯಥಾ = ಹೇಗೆ ಆಯುಧಾನಾಂ = ಆಯುಧಗಳ ಮಧ್ಯದಲ್ಲಿ ವಜ್ರಂ = ವಜ್ರವೆಂಬ ಆಯುಧವು ವರಂ = ಶ್ರೇಷ್ಠವೋ ಯಥಾ = ಹೇಗೆ ಓಷಧೀನಾಂ = ಧಾನ್ಯಗಳ ಮಧ್ಯದಲ್ಲಿ ಯವಾಃ = ಯಾವ ಯವವೆಂಬ ಧಾನ್ಯಗಳು ವರಾಃ = ಶ್ರೇಷ್ಠಗಳೋ ತಥೈವ = ಹಾಗೆಯೇ ಸರ್ವಶಾಸ್ತ್ರಾಣಾಂ = ಎಲ್ಲಾ ಶಾಸ್ತ್ರಗಳ ಮಧ್ಯದಲ್ಲಿ ಮಹಾಭಾರತಂ = ಮಹಾಭಾರತವು ಉತ್ತಮಮ್ = ಶ್ರೇಷ್ಠವಾದದ್ದು. ॥ ೫೬ ॥

ಪುರಾಣಾಂತರದಿಂದಲೂ ಉತ್ತಮತ್ವವನ್ನು ಭಾರತಕ್ಕೆ ಹೇಳುತ್ತಾರೆ.

**ವಾಯುಪ್ರೋಕ್ತೇಪಿ ತತ್ರೋಕ್ತಂ ಭಾರತಸ್ಯ ಪ್ರಶಂಸನಮ್ ।**
**ಕೃಷ್ಣದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂ ಪ್ರಭುಮ್ ॥ ೫೭ ॥**
**ಕೋಽನ್ಯಃ ಪುಂಡರೀಕಾಕ್ಷಾನ್ಮಹಾಭಾರತಕೃದ್ಭವೇತ್ ।**
**ಏವಂಹಿ ಸರ್ವಶಾಸ್ತ್ರೇಷು ಪೃಥಕ್‌ಪೃಥಗುದೀರಿತಮ್ ॥ ೫೮ ॥**

ವಾಯುಪ್ರೋಕ್ತೇಪಿ = ವಾಯುಪ್ರೋಕ್ತವೆಂಬ ಗ್ರಂಥದಲ್ಲಿಯೂ ಕೂಡ ತತ್ = ಆಪ್ರಸಿದ್ಧವಾದ ಭಾರತಸ್ಯ = ಭಾರತದ ಪ್ರಶಂಸನಂ = ಪ್ರಶಂಸೆಯು ಪ್ರೋಕ್ತಂ = ಹೇಳಲ್ಪಟ್ಟಿದೆ. ಕೃಷ್ಣದ್ವೈಪಾಯನಂ ವ್ಯಾಸಂ = ಕೃಷ್ಣದ್ವೈಪಾಯನರೆಂದು ಹೆಸರುಳ್ಳ ವೇದವ್ಯಾಸರನ್ನು ಪ್ರಭುಂ = ಸರ್ವಸಮರ್ಥರಾದ ನಾರಾಯಣಂ = ನಾರಾಯಣನನ್ನಾಗಿ ವಿದ್ಧಿ = ತಿಳಿ. ಏಕೆಂದರೆ ಪುಂಡರೀಕಾಕ್ಷಾತ್ = ಕಮಲದಂತೆ ಕಣ್ಣುಗಳುಳ್ಳ ನಾರಾಯಣನ ದೆಸೆಯಿಂದ ಅನ್ಯಃ = ಬೇರೊಬ್ಬನಾದ ಕಃ = ಯಾವನು ಮಹಾಭಾರತದ ಕೃತ್ = ಮಹಾಭಾರತವನ್ನು ಮಾಡತಕ್ಕವನು ಭವೇತ್ = ಆದಾನು, ಯಾವನೂ ಆಗಲಾರನು.

ಈ ಮೂರು ಪುರಾಣಗಳಲ್ಲಿ ಮಾತ್ರ ಉತ್ತಮತ್ವವು ಹೇಳಲ್ಪಟ್ಟಿದ್ದಲ್ಲ. ಎಲ್ಲಾ ಶಾಸ್ತ್ರಗಳಲ್ಲಿಯೂ ಹೇಳಿದೆ ಎನ್ನುತ್ತಾರೆ. ಏವಂ ಹಿ = ಇದೇ ರೀತಿಯಾಗಿ ಸರ್ವಶಾಸ್ತ್ರೇಷು = ಎಲ್ಲಾ ಶಾಸ್ತ್ರಗಳಲ್ಲಿಯೂ ಕೂಡ ಪೃಥಕ್ ಪೃಥಕ್ = ಪ್ರತ್ಯೇಕ ಪ್ರತ್ಯೇಕವಾಗಿ ಉದೀರಿತಂ = ಭಾರತಕ್ಕೆ ಉತ್ತಮತ್ವವು ಹೇಳಲ್ಪಟ್ಟಿದೆ.

**ವಿಶೇಷಾರ್ಥ:—** ಲಕ್ಷ ಸಂಖ್ಯಾತ ಶ್ಲೋಕಾತ್ಮಕವಾದ ಭಾರತವನ್ನು ಮಾಡೋಣ ಮಾತ್ರದಿಂದ ವೇದವ್ಯಾಸರು ನಾರಾಯಣನೆಂಬುದು ಹೇಗೆಂದು ಶಂಕಿಸಕೂಡದು. ಏಕೆಂದರೆ ಕುರು ಪಾಂಡವರ ವಂಶವು ಹುಟ್ಟುವ ಮೊದಲೇ ಎರಡು ವಂಶಗಳ ಉತ್ಪತ್ತಿಯ ಕ್ರಮವನ್ನೂ, ರಾಜ ಸೂಯ, ಅಶ್ವಮೇಧಾದಿಯಾಗಗಳ ಮಹಿಮೆಯನ್ನೂ, ಯಾಗಕ್ಕೋಸ್ಕರ ಪಾಂಡವರು ಮಾಡಿದ ದಿಗ್ವಿಜಯವನ್ನೂ, ಅರಗಿನ ಮನೆಯಿಂದ ಹೊರಟು ಹೋಗುವ ಕುಶಲತೆಯನ್ನೂ, ಬಕ ಹಿಡಿಂ ಬಾಸುರರ ವಧೆಯನ್ನೂ, ದ್ರೌಪದಿ-ವಿವಾಹ ಪ್ರಕಾರವನ್ನೂ ದುಷ್ಟವಾದ ಪಗಡೆ ಆಟದ ಉದ್ಯೋಗವನ್ನೂ, ವನವಾಸ, ಅಜ್ಞಾತವಾಸ, ಗೋ ಗ್ರಹಣ ಮೊದಲಾದ ಬಹು ಕಥೆಗಳನ್ನೂ 18 ಅಕ್ಷೌಹಿಣೀ ಸೈನ್ಯದಲ್ಲಿ ಅನ್ಯೋನ್ಯವಾಗಿ ಹೇಳಲ್ಪಡತಕ್ಕ ಉಕ್ತಿ ಪ್ರತ್ಯುಕ್ತಿಗಳ ಪ್ರಕಾರವನ್ನೂ, ಶರ ಪ್ರತಿ ಶರಗಳ ಸಂಖ್ಯೆಯನ್ನು ವ್ಯೂಹ ಪ್ರತಿವ್ಯೂಹಗಳ ಮಾಡುವಿಕೆಯನ್ನು ಅಸ್ತ್ರ ಪಶ್ಯಸ್ತ್ರಗಳನ್ನು ಪ್ರಯೋಗಿಸುವ ರೀತಿಯನ್ನೂ

ಭೀಮ, ಅರ್ಜುನ, ದ್ರೋಣ, ಭೀಷ್ಮಾದಿಗಳಿಂದ ಪ್ರತಿದಿನವೂ ಕೊಲ್ಲಲ್ಪಡತಕ್ಕ ಆನೆ, ಕುದುರೆ ಮೊದಲಾದವುಗಳ ಸಂಖ್ಯೆಯನ್ನೂ ಅಂಗೈಯಲ್ಲಿರುವ ಶುದ್ಧವಾದ ನೀರನ್ನು ನೋಡುವಂತೆ ನೋಡಿ ಮಹಾಭಾರತವೆಂಬ ತನ್ನ ಗ್ರಂಥದಲ್ಲಿ ಬರೆದಿರುವ ವ್ಯಾಸರಿಗೆ ನಿರವಧಿಕ ಜಗತ್ತನ್ನು ನಿರ್ಮಿಸುವ ನಾರಾಯಣನಂತೆ ನಿರವಧಿಕ ಸಾರ್ವಜ್ಞ್ಯವು ಸಿದ್ಧಿಸುವುದರಿಂದ ಸಾಕ್ಷಾತ್ ನಾರಾಯಣಾವತಾರ-ರೆಂಬುದನ್ನೂ ಪ್ರೇಕ್ಷಾವಂತರಿಗೆ ತಿಳಕೊಳ್ಳಲು ಶಕ್ತವಾಗುವುದು ಇಲ್ಲವಾದರೆ ಮತ್ಸ್ಯಕೂರ್ಮಾದಿಗಳೂ ನಾರಾಯಣಾವತಾರರೆಂಬುದು ಹೇಗೆ ಸಿದ್ಧಿಸುವುದು. ಆದ್ದರಿಂದ ಕೋಹ್ಯನ್ಯಃ ಪುಂಡರೀಕಾಕ್ಷಾತ್ ಮಹಾಭಾರತಕೃದ್ಭವೇತ್ ಎಂಬುದು ಸರಿಯಾದದ್ದು. ॥ ೫೮ ॥

**ಉಕ್ತೋಽರ್ಥಃ ಸರ್ವ ಏವಾಯಂ ಮಾಹಾತ್ಮ್ಯಕ್ರಮಪೂರ್ವಕಃ ।**
**ಭಾರತೇಪಿಯಥಾ ಪ್ರೋಕ್ತೋ ನಿರ್ಣಯೋಯಂ ಕ್ರಮೇಣತು ।**
**ತಥಾ ಪ್ರದರ್ಶಯಿಷ್ಯಾಮ ಸ್ತದ್ವಾಕ್ಯೈರೇವ ಸರ್ವಶಃ ॥ ೫೯ ॥**

ಮಾಹಾತ್ಮ್ಯಕ್ರಮಪೂರ್ವಕಃ = ಶ್ರೀ ಹರಿಯ ಮಹಿಮೆಯೂ ಭಾರತಮ್ಯ ಕ್ರಮವೂ ಇವುಗಳೇ ಮೊದಲಾಗಿ ಉಳ್ಳ ಸರ್ವ ಏವಾಯಮರ್ಥಃ = ಈ ಎಲ್ಲಾ ಅರ್ಥಗಳೂ ಉಕ್ತಃ = ಎಲ್ಲಾ ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿವೆ. ಎಲ್ಲಾ ಶಾಸ್ತ್ರಗಳಲ್ಲಿ ಮಾತ್ರ ಹೇಳಲ್ಪಟ್ಟದಲ್ಲ. ಭಾರತದಲ್ಲಿಯೂ ಹೇಳಲ್ಪಟ್ಟಿದೆ ಎನ್ನುತ್ತಾರೆ. ಈ ಅರ್ಥವು ಹೇಗೆ ತಿಳಿಯುತ್ತದೆ ಎಂಬ ಶಂಕೆಯನ್ನು ಪರಿಹರಿಸುತ್ತಾ ಸಂದಿಗ್ಧಗಳಾದ ಭಾರತ ವಾಕ್ಯಗಳನ್ನು ಭಾರತ ವ್ಯಾಗಳಿಂದಲೇ ನಿರ್ಣಯಿಸುತ್ತೇವೆಂದು ಹಿಂದೆ ಮಾಡಿದ ಪ್ರತಿಜ್ಞೆಯನ್ನು ಸ್ಮರಣೆಗೆ ತರುತ್ತಾರೆ. ಯೋಯಂ ಮಾಹಾತ್ಮ್ಯಕ್ರಮಪೂರ್ವಕಃ = ಯಾವ ಹರಿಯ ಮಹಿಮೆಯೂ ತಾರತಮ್ಯಕ್ರಮವೂ ಇವೇ ಮೊದಲಾಗಿ ಉಳ್ಳ ಸರ್ವೋ ಅರ್ಥಃ = ಎಲ್ಲಾ ಅರ್ಥಗು ಮಯಾ ಉಕ್ತಃ = ನನ್ನಿಂದ ಹೇಳಲ್ಪಟ್ಟಿವೆಯೋ ಸೋಯಂ ನಿರ್ಣಯಃ = ಆ ಈದಾವ ನಿರ್ಣಯವು ಭಾರತೇಪಿ = ಭಾರತದಲ್ಲಿಯೂ ಕೂಡ ಯಥಾ ಪ್ರೋಕ್ತಃ = ಯಾವ ರೀತಿಯಿಂದ ಹೇಳಲ್ಪಟ್ಟಿರುವದೋ ತಥಾ = ಹಾಗೆಯೇ ಸರ್ವಶಃ = ಆ ಎಲ್ಲಾ ರೀತಿಗಳನ್ನೂ ಕ್ರಮೇಣ = ಕ್ರಮದಿಂದ ತದ್ವಾಕ್ಯೈರೇವ = ಆ ಭಾರತ ವಾಕ್ಯಗಳಿಂದಲೇ ಪ್ರದರ್ಶಯಿಷ್ಯಾಮಃ = ತೋರಿಸುತ್ತೇವೆ. ॥ ೫೯ ॥

~~ಈಗ ಭಾರತದ ಮೊದಲಿನ ಶ್ಲೋಕದಲ್ಲಿಯೇ ಹರಿಸರ್ವೋತ್ತಮತ್ವ ಮೊದಲಾದ ಸಕಲ ಮಹಿಮೆಗಳನ್ನು ನಿರೂಪಿಸರುವುದರಿಂದ~~ ಆರಂಭದಲ್ಲಿ ಹೇಳಿದ್ದನ್ನು ಅನುಸರಿಸಿ ಎಲ್ಲಾ ಗ್ರಂಥವನ್ನು ಕೂಡಿಸಬೇಕಾದ್ದರಿಂದ ಲಕ್ಷ ಸಂಖ್ಯಾತ ಭಾರತ ಶ್ಲೋಕಗಳೂ ಕೂಡ ಹರಿಯ ಮಹಿಮೆಯನ್ನು ಹೇಳತಕ್ಕವುಗಳು. ಎಂಬ ಅಭಿಪ್ರಾಯದಿಂದ ಎಲ್ಲರೂ ಮಂಗಲವನ್ನು ಮಾಡಬೇಕೆಂಬ ಲೋಕ ಶಿಕ್ಷಣೆಗಾಗಿ ಶ್ರೀ ವೇದವ್ಯಾಸ ದೇವರು ಭಾರತದ ಆದಿಯಲ್ಲಿ ಮಾಡಿದ ಮಂಗಲ ಶ್ಲೋಕವನ್ನೇ ಅನುವಾದಿಸುತ್ತಾರೆ.

**ನಾರಾಯಣಂ ಸುರಗುರುಂ ಜಗದೇಕನಾಥಂ ಭಕ್ತಪ್ರಿಯಂ ಸಕಲ ಲೋಕ ನಮಸ್ಕೃತಂ ಚ।**
**ತ್ರೈಗುಣ್ಯವರ್ಜಿತಮಜಂ ವಿಭುಮಾದ್ಯಮೀಶಂ ವಂದೇಭವಘ್ನಮಮರಾಸುರ ಸಿದ್ಧ-**
**ವಂದ್ಯಂ ॥ ೬೦ ॥**

ಸುರಗುರುಂ = ದೇವತೆಗಳಿಗೆ ಜ್ಞಾನೋಪದೇಶಕನಾದ ಜಗದೇಕನಾಥಂ = ಲೋಕಕ್ಕೆ ಮುಖ್ಯ ಸ್ವಾಮಿಯಾದ ಭಕ್ತ ಪ್ರಿಯಂ = ಭಕ್ತರಿಗೆ ಪ್ರಿಯನಾದ ಸಕಲ ಲೋಕನಮಸ್ಕೃತಂಚ = ಎಲ್ಲಾ ಸುಜೀವರಿಂದ ನಮಸ್ಕರಿಸಿಕೊಳ್ಳಲ್ಪಟ್ಟ ತ್ರೈಗುಣ್ಯ ವರ್ಜಿತಂ = ಸತ್ವರಜಸ್ತಮೋಗುಣರಹಿತನಾದ ಅಜಂ = ಉತ್ಪತ್ತಿ ಶೂನ್ಯನಾದ ವಿಭುಂ = ಸರ್ವಸಮರ್ಥನಾದ ಆದ್ಯಂ = ಎಲ್ಲರಿಗೂ ಮೊದಲಿನವನಾದ ಈಶಂ = ಸರ್ವ ಸ್ವಾಮಿಯಾದ ಭವಘ್ನಂ = ಸಂಸಾರವನ್ನು ನಾಶ ಮಾಡತಕ್ಕ ಅಮರಾಸುರ ಸಿದ್ಧವಂದ್ಯಂ = ಮುಕ್ತರಾದ ತತ್ವಾಭಿಮಾನಿ ದೇವತೆಗಳಿಂದ ನಮಸ್ಕರಿಸಲು ಯೋಗ್ಯನಾದ ನಾರಾಯಣಂ = ನಾರಾಯಣನನ್ನು ವಂದೇ = ನಮಸ್ಕರಿಸುತ್ತೇನೆ. ॥ ೬೦ ॥

ಆಚಾರ್ಯರು ಭಾರತದ ಮೊದಲಿನ ಶ್ಲೋಕಕ್ಕೆ ವ್ಯಾಖ್ಯಾನ ಮಾಡುತ್ತಾರೆ.

**ಜ್ಞಾನಪ್ರದಃ ಸ ಭಗವಾನ್ ಕಮಲಾವಿರಿಂಚಿಶರ್ವಾದಿ ಪೂರ್ವಜಗತೋ ನಿಖಿಲಾದ್ವರಿಷ್ಠಃ ॥**
**ಭಕ್ತ್ಯೈವ ತುಷ್ಯತಿ ಹರಿಪ್ರವಣತ್ವಮೇವ ಸರ್ವಸ್ಯ ಧರ್ಮಇತಿ ಪೂರ್ವವಿಭಾಗಸಂಸ್ಥಃ ॥ ೬೧ ॥**

ಸುರಗುರುಂ ಎಂಬ ಪದದ ಅರ್ಥವನ್ನು ಹೇಳುತ್ತಾರೆ. ಕಮಲಾವಿರಿಂಚಿಶರ್ವಾದಿಪೂರ್ವಜಗತಃ = ಲಕ್ಷ್ಮೀದೇವಿಯು, ಬ್ರಹ್ಮನು, ರುದ್ರನು ಇವರೇ ಮೊದಲಾಗಿ ಉಳ್ಳ ಜಗತ್ತಿಗೆ ಜ್ಞಾನಪ್ರದಃ = ಜ್ಞಾನೋಪದೇಶಕನು. ಜಗದೇಕನಾಥಂ ಎಂಬುದರ ಅರ್ಥವು ನಿಖಿಲಾದ್ವರಿಷ್ಟಃ = ಎಲ್ಲಾ ಜಗತ್ತಿನಿಂದಲೂ ಉತ್ತಮನು. ಭಕ್ತಪ್ರಿಯಂ ಎಂಬುದರ ಅರ್ಥವು ಭಕ್ತ್ಯೈವತುಷ್ಯತಿ = ಭಕ್ತಿಯಿಂದಲೇ ಸಂತುಷ್ಟನಾಗುತ್ತಾನೆ. ಸಕಲಲೋಕನಮಸ್ಕೃತಂಚ ಎಂಬುದರ ಅರ್ಥವು = ಹರಿಪ್ರವಣತ್ವಮೇವಸರ್ವಸ್ಯ-ಧರ್ಮಃ = ಎಲ್ಲರಿಗೂ ಶ್ರೀಹರಿಯಲ್ಲಿ ನಮ್ರೀಭೂತರಾಗಿರುವಿಕೆಯೇ ಮುಖ್ಯವಾದ ಧರ್ಮವು. ವೇದದಲ್ಲಿ ಕರ್ತವ್ಯವೆಂದು ವಿಹಿತವಾದ ಕರ್ಮಕ್ಕೆ ಧರ್ಮವೆಂದು ಹೆಸರು. ಇತಿ = ಎಂಬುದು ಪೂರ್ವವಿಭಾಗ ಸಂಸ್ಥಃ = ಮೊದಲಿನ ಶ್ಲೋಕದ ಪೂರ್ವಾರ್ಧದಲ್ಲಿರುವ ಅರ್ಥವು.

**ನಿರ್ದೋಷಕಃ ಸೃತಿವಿಹೀನ ಉದಾರಪೂರ್ಣಸಂವಿದ್ಭುಣಃ ಪ್ರಥಮಕೃತ್ಸಕಲಾತ್ಮಶಕ್ತಿಃ ।**
**ಮೋಕ್ಷೈಕಹೇತುರಸುರೂಪಸುರೈಶ್ಚವಮುಕ್ತೈರ್ವಂದ್ಯಃ ಸವಿಕ ಇತಿಚೋಕ್ತಮುಥೋತ್ತರಾರ್ಧೇ ॥೬೨॥**

ಅಥ = ಅನಂತರ ತ್ರೈಗುಣ್ಯವರ್ಜಿತಂ ಎಂಬುದರ ಅರ್ಥವು ನಿರ್ದೋಷಕಃ = ಅಜ್ಞಾನರಾಗದ್ವೇಷಾದಿದೋಷಗಳು ಸತ್ವರಜಸ್ತಮೋಗುಣಮೂಲಕವಾದ್ದರಿಂದ ಯಾವ ದೋಷಗಳೂ ಇಲ್ಲದವನು. ಅಜಂ ಎಂಬುದರ ಅರ್ಥವು ಸೃತಿವಿಹೀನಃ = ಮತ್ತೂ ಮತ್ತೂ ಹುಟ್ಟುವಿಕೆ ಎಂಬುದೇ ಸಂಸಾರವಾದ್ದರಿಂದ ಆ ಸಂಸಾರವಿಲ್ಲದವನು ವಿಭುಂ ಎಂಬುದರ ಅರ್ಥವು ಉದಾರ ಪೂರ್ಣ ಸಂವಿದ್ಭುಣಃ = ಭೂಪ್ರಾಪ್ತೌ, ಭಾದೀಪ್ತೌ, ಭೂಸತ್ತಾಯಾಂ ಎಂಬುದಾಗಿ ಭೂಧಾತುವಿಗೆ ಜ್ಞಾನ, ಪ್ರಕಾಶ, ಸರ್ವತ್ರ ವ್ಯಾಪ್ತಿ ಮೊದಲಾದ ಗುಣಗಳು ಅರ್ಥವು. ವಿ ಅಂದರೆ ಉತ್ಕೃಷ್ಟಗಳಾದ ಸರ್ವೋತ್ತಮಗಳಾದ ವಿ–ಪೂರ್ಣಗಳಾದ ಭು = ಜ್ಞಾನಾದಿ ಗುಣಗಳು ಯಾರಿಗೆ ಇವೆಯೋ ಅವನು ವಿಭುವು ಅದರ ಅರ್ಥವು ಉತ್ಕೃಷ್ಟಗಳಾದ ಪೂರ್ಣಗಳಾದ ಜ್ಞಾನಾದಿ ಗುಣ-ಗಳುಳ್ಳವನೆಂದೂ. ಆದ್ಯಂ ಎಂಬುದರ ಅರ್ಥವು ಪ್ರಥಮಕೃತ್ ಎಂದು. ಮೊದಲು ತನ್ನ ಹೊಟ್ಟೆಯಿಂದ ಜಗತ್ತನ್ನು ಹೊರ ಪಡಿಸುವವನು ಆದ್ಯನು ಇದೇ ಅರ್ಥವನ್ನು ಪ್ರಥಮಕೃತ್ = ಮೊದಲು ಸೃಷ್ಟಿ ಮಾಡುವವನು ಎಂಬುದು. ಈಶಂ ಎಂಬುದರ ಅರ್ಥವು ಸಕಲಾತ್ಮ ಶಕ್ತಿಃ ಎನ್ನುವುದು, "ಈಶಲೃಶಕ್ತೌ" ಎಂಬ ಧಾತುವಿನಿಂದ ಈಶ ಶಬ್ದವು ಉಂಟಾಗಿದೆ. ಇದೇ ಅರ್ಥವನ್ನು ~~ಎಲ್ಲಾ ಕಾರ್ಯವಿಷಯಕವಾದ ಸ್ವರೂಪಭೂತವಾದ ಶಕ್ತಿ ಉಳ್ಳವನು ಎಂಬುದಾಗಿ, ಸಕಲಾತ್ಮಶಕ್ತಿಃ ಎಂಬ ಪದವು ಹೇಳುತ್ತದೆ.~~ ಭವಘ್ನಂ ಎಂಬ ಪದದ ಅರ್ಥವು ಮೋಕ್ಷೈಕಹೇತುವು ಎನ್ನುವುದು. ಲಿಂಗ ದೇಹ ಭಂಗ, ನಿಜ ಸ್ವರೂಪಾವಿರ್ಭಾವ ರೂಪ ಮೋಕ್ಷಕ್ಕೆ ಮುಖ್ಯ ಕಾರಣನು. ಅಪುರಾಸುರಸಿದ್ಧವಂದ್ಯಂ ಎಂಬುದರ ಅರ್ಥವು ಅಸುರೂಪಸುರೈಶ್ಚ ಮುಕ್ತೈರ್ವಂದ್ಯಃ ಎಂಬುದು. ಅಸೂನ್ರಮಯಂತೀ ಅಸುರಾಃ (ಪ್ರಾಣಗಳನ್ನು) ಇಂದ್ರಿಯಗಳನ್ನು ಸಂತೋಷಪಡಿಸುವುದರಿಂದ ಅಸುರರೆಂದರೆ ತತ್ತ್ವಾಭಿಮಾನಿ ದೇವತೆಗಳು, ಸಿದ್ಧರೆಂದರೆ ಮುಕ್ತರು. ತತ್ತ್ವಾಭಿಮಾನಿಗಳಾದ ಮುಕ್ತರಾದ ದೇವತೆಗಳಿಂದ ನಮಸ್ಕರಿಸಲು ಯೋಗ್ಯನು. ಪೂರ್ವಾರ್ಧದಲ್ಲಿರುವ ಸಕಲಲೋಕ ನಮಸ್ಕೃತಂ ಎಂಬ ಪದದಿಂದ ಸಂಸಾರಿಗಳಾದ ಸರ್ವರಿಂದ ವಂದ್ಯತ್ವವು ಹೇಳಲ್ಪಡುತ್ತದೆ. ಉತ್ತರಾರ್ಧದಲ್ಲಿರುವ ಸಿದ್ಧ ಪದದ ಸಾಮರ್ಥ್ಯದಿಂದ ಮುಕ್ತರು ಹೇಳಲ್ಪಡುತ್ತಾರೆ. ಆದ್ದರಿಂದ ಪೂರ್ವಾರ್ಧದಲ್ಲಿಯೂ ಉತ್ತರಾರ್ಧದಲ್ಲಿಯೂ ವಂದ್ಯತ್ವವು ಹೇಳಲ್ಪಟ್ಟರೂ ಪುನರುಕ್ತಿ ಇಲ್ಲ.

ಸಃ = ಪೂರ್ವೋಕ್ತ ಗುಣವಿಶಿಷ್ಟನಾದ ನಾರಾಯಣನು ಏಕಃ = ಒಬ್ಬನೇ ಇತಿಚ = ಎಂಬುದಾಗಿ ಉತ್ತರಾರ್ಧೇ = ಆದ್ಯ ಪದ್ಯದ ಉತ್ತರಾರ್ಧದಲ್ಲಿ ಉಕ್ತಂ = ಹೇಳಲ್ಪಟ್ಟಿದೆ.

**ವಿಶೇಷಾಂಶಃ—** "ಕಚಿದಂತರಿತಾನಪಿ" ಕೆಲವು ಶ್ಲೋಕಗಳನ್ನು ತೆಗೆದು ಹಾಕುತ್ತಾರೆ ಎಂದು ಆಚಾರ್ಯರು ಹೇಳಿರುವರು. ಮೊದಲಿನ ಪದ್ಯವು ವಿಷ್ಣು ಸರ್ವೋತ್ತಮತ್ವವನ್ನು ಪ್ರತಿಪಾದಿಸುವುದರಿಂದ ಕೆಲವರು ಇದನ್ನು ಸಹಿಸದೆ ಗ್ರಂಥದಲ್ಲಿ ತೆಗೆದು ಹಾಕಿದ್ದಾರೆ. ಕೇರಳ ದೇಶದ ಪುರಾತನ ಪ್ರಸ್ತಕಗಳಲ್ಲಿ ಈಗಲೂ ಇವೆ. ಲೋಕೋಪದೇಶಕರಾದ ವೇದವ್ಯಾಸದೇವರು ಲಕ್ಷ ಪರಿಮಿತವಾದ ಭಾರತ ಗ್ರಂಥವನ್ನು ಮಾಡುವವರಾಗಿ ಲೋಕ ಶಿಕ್ಷೆಗಾದರೂ ಏಕೆ ಅದಿಯಲ್ಲಿ ಮಂಗಲವನ್ನು ಮಾಡಲಾರರು? ಭಾರತಾಪೇಕ್ಷಯಾ ಅಲ್ಪ ಸಂಖ್ಯಾತವಾದ ಭಾಗವತದಲ್ಲಿ "ಸತ್ಯಂ ಪರಂಧೀಮಹಿ" ಎಂದೂ ಹರಿವಂಶದಲ್ಲಿ "ಸೋ೪ನಾದಿರ್ವಾಸುದೇವಃ ಶಮಯತು ದುರಿತಂ ಜನ್ಮ ಜನ್ಮಾರ್ಜಿತಂ ಸಃ" ಎಂದೂ ಮಂಗಲವನ್ನು ಮಾಡಿರುವರು. ಆದ್ದರಿಂದ ಭಾರತದ ಆದಿಯಲ್ಲಿ ಸಕಲ-ಶಿಷ್ಟರಿಗೆ ಗುರುವಾದ ಅವರು ಮಂಗಲವನ್ನು ಮಾಡಿರುವರೆಂದು ತಿಳಿಯತಕ್ಕದ್ದು. ॥ ೬೨ ॥

**ನವ್ಯತ್ವಮುಕ್ತಮುಭಯತ್ರ ಯತಸ್ತತೋಽಸ್ಯಮುಕ್ತೈರಮುಕ್ತಕಗಣೈಶ್ಚ ವಿನಮ್ಯತೋಕ್ತಾ ।**
**ಇತ್ಥಂಹಿ ಸರ್ವಗುಣಪೂರ್ತಿರಮುಷ್ಯ ವಿಷ್ಣೋಃ ಪ್ರಸ್ತಾವಿತಾ ಪ್ರಥಮತಃ ಪ್ರತಿಜಾನತೈವ ॥ ೬೩ ॥**

ಯತಃ = ಯಾವ ಕಾರಣದಿಂದ ಉಭಯತ್ರ = ಪೂರ್ವಾರ್ಧದಲ್ಲಿಯೂ ಉತ್ತರಾರ್ಧದಲ್ಲಿಯೂ ನಮ್ಯತ್ವಂ = ವಂದ್ಯತ್ವವು ಉಕ್ತಂ = ಹೇಳಲ್ಪಟ್ಟದ್ದೋ ತತಃ = (ಆದ್ದರಿಂದ) ಉಭಯತ್ರನಮ್ಯತ್ವವು ಹೇಳಲ್ಪಟ್ಟದ್ದರಿಂದ ಪುನರುಕ್ತಿ ಪರಿಹಾರಕ್ಕಾಗಿ ಅಸ್ಯ = ಈ ಹರಿಗೆ ಮುಕ್ತೈಃ = ಮುಕ್ತರಿಂದ ಅಮುಕ್ತಕಗಣೈಶ್ಚ = ಅಮುಕ್ತರ ಸಮುದಾಯದಿಂದಲೂ ಕೂಡ ವಿನಮ್ಯತಾ = ವಿಶೇಷಾಕಾರವಾಗಿ ವಂದ್ಯತ್ವವು ಉಕ್ತಾ = ಹೇಳಲ್ಪಟ್ಟಿದೆ. ಪ್ರತಿಜಾನತಾ = ಪ್ರತಿಜ್ಞೆಯನ್ನು ಮಾಡತಕ್ಕ ವ್ಯಾಸರಿಂದ ಪ್ರಥಮತಃ ಏವ = ಮೊದಲಿನ ಪದ್ಯದಲ್ಲಿಯೇ ಇತ್ಥಂ = ಈ ಹಿಂದೆ ಹೇಳಿದ ರೀತಿಯಿಂದ ಅಮುಷ್ಯವಿಷ್ಣೋಃ = ಈ ನಾರಾಯಣನಿಗೆ ಸರ್ವಗುಣಪೂರ್ತಿಃ = ಸಕಲ ಗುಣಗಳ ಪೂರ್ಣತೆಯು ಪ್ರಸ್ತಾವಿತಾ = ಪ್ರಸ್ತಾಪಿಸಲ್ಪಟ್ಟಿತು. ॥ ೬೩ ॥

ಮುಕ್ತರಿಂದಲೂ ಅಮುಕ್ತರಿಂದಲೂ ವಂದ್ಯನು ಎಂಬ ವಿಷಯದಲ್ಲಿ ಸ್ಪಷ್ಟವಾದ ಭಾರತ ವಚನವನ್ನು ಹೇಳುತ್ತಾರೆ.

**ಕೃಷ್ಣೋಯಜ್ಞೈರಿಜ್ಯತೇ ಸೋಮಪೂತೈಃ ಕೃಷ್ಣೋಮುಕ್ತೈರಿಜ್ಯತೇ ವಿಕ್ರಮದ್ಭಿಃ ।**
**ಕೃಷ್ಣೋಽಪ್ಯನ್ಯೈರಿಜ್ಯತೇ ಸಂಮೃಶಾನೈಃ ಕೃಷ್ಣೋಮುಕ್ತೈರಿಜ್ಯತೇವೀತಮೋಹೈಃ ॥ ೬೪ ॥**

ಕೃಷ್ಣಃ = ಶ್ರೀಹರಿಯು ಸೋಮಪೂತೈಃ = ಸೋಮಪಾನದಿಂದ ಪವಿತ್ರರಾದ ಯಾಗ ಮಾಡುವವರಿಂದ ಯಜ್ಞೈಃ = ಯಾಗಗಳಿಂದ ಇಜ್ಯತೇ = ಪೂಜಿಸಲ್ಪಡುತ್ತಾನೆ. ಕೃಷ್ಣಃ = ಶ್ರೀಹರಿಯು ವಿಕ್ರಮದ್ಭಿಃ = ಪರಾಕ್ರಮವನ್ನು ತೋರಿಸುವ ವೀರೈಃ = ರಾಜರಿಂದ ಇಜ್ಯತೇ = ಯುದ್ಧರೂಪವಾದ ಸ್ವಧರ್ಮದಿಂದ ಪೂಜಿಸಲ್ಪಡುತ್ತಾನೆ. ಸಂಮೃಶಾನೈಃ = ಚೆನ್ನಾಗಿ ವೇದಾದಿ ಶಾಸ್ತ್ರವಿಚಾರವನ್ನು ಮಾಡತಕ್ಕ ವನ್ಯೈಃ ವನದಲ್ಲಿರುವ ಯತಿಗಳಿಂದಲೂ ಕೃಷ್ಣನು ಇಜ್ಯತೇ = ಜ್ಞಾನಯಜ್ಞದಿಂದ ಪೂಜಿಸಿಕೊಳ್ಳಲ್ಪಡುತ್ತಾನೆ. ಕೃಷ್ಣಃ = ಶ್ರೀಹರಿಯು ವೀತಮೋಹೈಃ = ಹೋಗಲ್ಪಟ್ಟ ಹರಿಯ ಜ್ಞಾನಕ್ಕೆ ಪ್ರತಿಬಂಧಕವಾದ (ಅಜ್ಞಾನವುಳ್ಳ) ಭ್ರಾಂತಿ ಉಳ್ಳ ಮುಕ್ತರಿಂದ ಇಜ್ಯತೇ = "ಋಚಾಂತ್ವಃಪೋಷಮಾಸ್ತೇ" ಋಗ್ವೇದ ಪುಷ್ಟೀಕರಣ ಸಾಮಗಾನಾದಿಗಳಿಂದ ಪೂಜಿಸಲ್ಪಡುತ್ತಾನೆ. ॥ ೬೪ ॥

**ಸೃಷ್ಟಾ ಬ್ರಹ್ಮಾದಯೋ ದೇವಾ ನಿಹತಾಯೇನ ದಾನವಾಃ ।**
**ತಸ್ಮೈ ದೇವಾಧಿದೇವಾಯ ನಮಸ್ತೇ ಶಾರ್ಙ್ಗಧಾರಿಣೇ ॥ ೬೫ ॥**

ಯೇನ = ಯಾವನಿಂದ ಬ್ರಹ್ಮಾದಯಃ = ಬ್ರಹ್ಮನೇ ಮೊದಲಾಗಿ ಉಳ್ಳ ದೇವಾಃ = ದೇವತೆಗಳು ಸೃಷ್ಟಾಃ = ಸೃಷ್ಟಿಮಾಡಲ್ಪಟ್ಟಿರುವರೋ ಯೇನ = ಯಾವನಿಂದ ದಾನವಾಃ = ದೈತ್ಯರುಗಳು ನಿಹತಾಃ = ಕೊಲ್ಲಲ್ಪಟ್ಟಿರುವರೋ ತಸ್ಮೈ = ಅಂತಹ ದೇವಾಧಿದೇವಾಯ = ದೇವತೆಗಳಿಗೂ ಮುಖ್ಯ ದೇವತೆಯಾದ ಶಾರ್ಙ್ಗಧಾರಿಣೇ = ಶಾರ್ಙ್ಗವೆಂಬ ಧನುಸ್ಸನ್ನು ಧರಿಸಿರುವ ತೇ = ನಿನಗೋಸ್ಕರ ನಮಃ = ನಮಸ್ಕಾರವು. ॥ ೬೫ ॥

ಹಿಂದಿನ ಶ್ಲೋಕದಲ್ಲಿರುವ ಸೃಷ್ಟ ನಿಹತ ಶಬ್ದಗಳನ್ನು ಅಪೂರ್ವಾರ್ಥವಾಗಿ ವ್ಯಾಖ್ಯಾನ ಮಾಡುತ್ತಾ ಪ್ರಸಿದ್ಧಾರ್ಥವನ್ನು ಇಟ್ಟುಕೊಂಡರೆ ಬಾಧಕವನ್ನು ಹೇಳುತ್ತಾರೆ.

**ಸ್ರಷ್ಟೃತ್ವಂ ದೇವಾನಾಂ ಮುಕ್ತಿ ಸ್ರಷ್ಟೃತ್ವಮುಚ್ಯತೇನಾನ್ಯತ್ ।**
**ಉತ್ಪತ್ತಿರ್ದೈತ್ಯಾನಾಮಪಿ ಯಸ್ಮಾತ್ಸನ್ಮತಾ ವಿಶೇಷೋಽಯಂ ॥ ೬೬ ॥**

ದೇವಾನಾಂ = ದೇವತೆಗಳಿಗೆ ಸ್ರಷ್ಟೃತ್ವಂ = ಸೃಷ್ಟಿಯೆಂದರೆ ಮುಕ್ತಿಸ್ರಷ್ಟೃತ್ವಂ = ಮೋಕ್ಷ ಪ್ರದತ್ವವು. ಉಚ್ಯತೇ = ಹೇಳಲ್ಪಡುತ್ತದೆ. ಅನ್ಯತ್ = ದೇಹ ಸಂಬಂಧ ರೂಪವಾದ ಉತ್ಪತ್ತಿಯು ದೈತ್ಯಾನಾಮಪಿ = ದೈತ್ಯರಿಗೂ ಕೂಡ ಸನ್ಮತಾ = ಸಮಾನವಾದದ್ದು ತಸ್ಮಾತ್ = ಆದ್ದರಿಂದ ಅಯಂ = ಈ ಹಿಂದೆ ಹೇಳಿದ ವಿಶೇಷಃ = ಮುಕ್ತಿಸ್ರಷ್ಟೃತ್ವರೂಪ ವಿಶೇಷವೇ ಗ್ರಾಹ್ಯಃ = ಸ್ವೀಕರಿಸಲು ಯೋಗ್ಯವು ॥ ೬೬ ॥

ಯಥಾಸ್ಥಿತವಾದ ಅರ್ಥಪನ್ನು ಗ್ರಹಣ ಮಾಡಿದರೆ ಬ್ರಹ್ಮಾದಿಗಳಿಗೆ ವಿಷಮವಾಗಿ ಸೃಷ್ಟಿಯನ್ನು ಹೇಳಿದ್ದು ಸರಿ ಹೋಗುವುದಿಲ್ಲವೆಂಬ ಬಾಧಕವು ಸೂಚಿತವಾಯಿತು.

**ಅಥಚ ದೈತ್ಯಪತಿಸ್ತಮಸಿ ಸ್ಥಿರಾ ನಿಯತ ಸಂಸ್ಥಿತಿರೇವ ನಚಾನ್ಯಥಾ ।**
**ತನುವಿಭಾಗಕೃತಿಃ ಸಕಲೇಷ್ವಿಯಂ ನಹಿ ವಿಶೇಷಕೃತಾ ಸುರದೈತ್ಯಗಾ ॥ ೬೨ ॥**

(ಅಥ = ಅನಂತರ) ಂ = ಯಾವ ಕಾರಣದಿಂದ ಇಯಂ ತನುವಿಭಾಗ ಕೃತಿಃ = ಈದಾಪ ದೇಹ ವಿಯೋಗಕರಣ-ರೂಪವಾದ ಹನನವು ಸಕಲೇಷು = ದೇವಮನುಷ್ಯದೈತ್ಯರಲ್ಲಿ ವರ್ತತೇ = ಇರತಕ್ಕದ್ದೋ ಸುರದೈತ್ಯಗಾ = ದೇವತೆಗಳೆಲ್ಲಯೂ ದೈತ್ಯರಲ್ಲಿಯೂ ಇರತಕ್ಕ ಹನನವು ವಿಶೇಷ ಕೃತಾ = ಪ್ರೀತಿ ದ್ವೇಷರೂಪ ವಿಶೇಷ ಕಾರಣದಿಂದಲ್ಲವೋ ಅಥ = ಆ ಕಾರಣ-ದಿಂದ ದೈತ್ಯಪತಿಃ = ಅಸುರರ ನಾಶವು ತಮಸಿ = ಅಂಧಂತಮಸ್ಸಿನಲ್ಲಿ ಸ್ಥಿರಾ = ನಿತ್ಯವಾದ ನಿಯತಸಂಸ್ಥಿತಿರೇವ = ನಿಯ-ಮನದಿಂದ ಇರುವಿಕೆಯು ಅನ್ಯಥಾನಚ = ದೇಹ ವಿಯೋಗರೂಪವಾದದ್ದು ಹನನವಲ್ಲ. ॥ ೬೭ ॥

ನಮ್ಮ ವ್ಯಾಖ್ಯಾನವು ಯುಕ್ತಿಯಿಂದ ಸಿದ್ಧವಾದದ್ದು ಮಾತ್ರವಲ್ಲ. ನಾರಾಯಣನು ದೇವತೆಗಳಿಗೆ ಇಷ್ಟವನ್ನು ಕೊಡ ತಕ್ಕವನು. ದೈತ್ಯರಿಗೆ ಅನಿಷ್ಟವನ್ನು ಕೊಡತಕ್ಕವನು ಎಂಬುದು ಭಾರತದ ಕಥೆಯನ್ನು ವಿಚಾರ ಮಾಡಿದಾಗ ಸ್ಪಷ್ಟವಾಗಿ ಸಿದ್ಧ-ವಾಗುತ್ತದೆಂದು ಹೇಳುತ್ತಾರೆ.

**ತಮಿಮಮೇವ ಸುರಾಸುರಸಂಚಯೇ ಹರಿಕೃತಂ ಪ್ರವಿಶೇಷಮುದೀಕ್ಷಿತುವ್ ।**
**ಪ್ರತಿವಿಭಜ್ಯ ಚ ಭೀಮಸುಯೋಧನೌ ಸ್ವಪರಪಕ್ಷಭಿದಾ ಕಥಿತಾ ಕಥಾ ॥ ೬೮ ॥**

ಸುರಾಸುರಸಂಚಯೇ = ದೇವ ದೈತ್ಯರ ಸಮುದಾಯದಲ್ಲಿ ಹರಿಕೃತಂ = ಪರಮಾತ್ಮನಿಂದ ಮಾಡಲ್ಪಟ್ಟ ತಮಿಮಂ = ಆ ಈ ಹಿಂದೆ ಹೇಳಲ್ಪಟ್ಟ ಪ್ರವಿಶೇಷಂ = ವಿಶೇಷವನ್ನು ಉದಿಕ್ಷಿತುವೇವ = ತೋರಿಸುವುದಕ್ಕಾಗಿಯೇ ಭೀಮ ಸುಯೋಧನೌ = ಭೀಮ ದುರ್ಯೋಧನರನ್ನು ಪ್ರತಿವಿಭಜ್ಯ ಪ್ರತ್ಯೇಕವಾಗಿ ವಿಭಾಗ ಮಾಡಿ ಸ್ವಪರಪಕ್ಷಭಿದಾ = ತಮ್ಮ ಪಕ್ಷ ಪರಪಕ್ಷಗಳಿಗೆ ಜಯ ಪರಾಜಯ ರೂಪವಾದ ಫಲಭೇದವುಳ್ಳ ಕಥಾ = ಕಥೆಯು ಕಥಿತಾ = ಹೇಳಲ್ಪಟ್ಟಿತು. ॥ ೬೮ ॥

ಈಗ ಗ್ರಂಥದ ಆದಿಯಲ್ಲಿ ಅವಾಂತರ ವಕ್ತೃಗಳಾದ ವೈಶಂಪಾಯನರು ಮಾಡಿದ ನಮಸ್ಕಾರ, ವಸ್ತು ನಿರ್ದೇಶ ರೂಪವಾದ ಮಂಗಲವನ್ನು ಹೇಳತಕ್ಕ "ನಮೋಭಗವತೇತಸ್ಮೈ" ಎಂದು ಆರಂಭಿಸಿ "ಸರ್ವಾರ್ಥಾನ್ ಸಾಧಯಾಮ್ಯಹಂ" ಎಂದು ಕೊನೆಯಲ್ಲಿ ಉಳ್ಳ ವಾಕ್ಯಗಳನ್ನು ಅನುವಾದಿಸುತ್ತಾರೆ.

**ನಮೋ ಭಗವತೇ ತಸ್ಮೈ ವ್ಯಾಸಾಯಾಮಿತತೇಜಸೇ ।**
**ಯಸ್ಯ ಪ್ರಸಾದಾದ್ವಕ್ಷ್ಯಾಮಿ ನಾರಾಯಣಕಥಾಮಿಮಾಮ್ ॥ ೬೯ ॥**

ಯಸ್ಯ = ಯಾವ ನಾರಾಯಣನ ಪ್ರಸಾದಾತ್ ಅನುಗ್ರಹದಿಂದ ಇಮಾಂ = ಈ ನಾರಾಯಣ ಕಥಾಂ = ನಾರಾ-ಯಣನ ಕಥೆಯನ್ನು ವಕ್ಷ್ಯಾಮಿ = ಹೇಳುವೆನೋ ತಸ್ಮೈ = ಅಂತಹ ಭಗವತೇ = ಷಡ್ಗುಣೈಶ್ವರ್ಯ ಸಂಪನ್ನನಾದ ಅಮಿತ ತೇಜಸೇ = ಅಪರಿಮಿತ ಸಾಮರ್ಥ್ಯವುಳ್ಳ ವ್ಯಾಸಾಯ = ವೇದವ್ಯಾಸರಿಗೋಸ್ಕರ ನಮಃ = ನಮಸ್ಕಾರವು. ॥ ೬೯ ॥

ಶ್ರೀವಿಷ್ಣುವಿಗೆ ಸರ್ವಭಾರತ ಪ್ರತಿಪಾದ್ಯತ್ವ ವಿಷಯದಲ್ಲಿ ಭಾಗತವಾಕ್ಯವನ್ನು ಉದಾಹರಿಸುತ್ತಾರೆ.

**ವಾಸುದೇವಸ್ತು ಭಗವಾನ್ ಕೀರ್ತ್ಯತೇಽತ್ರ ಸನಾತನಃ ।**
**ಪ್ರತಿಬಿಂಬಮಿವಾದರ್ಶೇ ಯಂ ಪಶ್ಯಂತ್ಯಾತ್ಮನಿ ಸ್ಥಿತಮ್ ॥ ೭೦ ॥**

(ಋಷಯಃ = ಋಷಿಗಳು) ಆತ್ಮನಿ = ಜೀವನಲ್ಲಿ ಸ್ಥಿತಂ = ಇರತಕ್ಕ ಯಂ = ಯಾವ ಪರಮಾತ್ಮ ಆದರ್ಶೇ = ಕನ್ನಡಿಯಲ್ಲಿ ಪ್ರತಿಬಿಂಬಮಿವ = ಪ್ರತಿಮುಖವನ್ನೆಂಬಂತೆ ಪಶ್ಯಂತಿ = ನೋಡುತ್ತಾರೋ ಸಃ = ಆ ಸನಾತನಃ = ನಿತ್ಯ-ನಾದ ಭಗವಾನ್ = ಷಡ್ಗುಣೈಶ್ವರ್ಯಸಂಪನ್ನನಾದ ವಾಸುದೇವಸ್ತು = ನಾರಾಯಣನೇ ಅತ್ರ = ಈ ಭಾರತದಲ್ಲಿ ಕೀರ್ತ್ಯತೇ = ಪ್ರತಿಪಾದಿಸಲ್ಪಡುತ್ತಾನೆ. ॥ ೭೦ ॥

**नास्तिनारायणसमं न भूतं न भविष्यति।**
**एतेन सत्यवाक्येन सर्वार्थान् साधयाम्यहं ॥ २० ॥**

ಅಹಂ = ವ್ಯಾಸನಾದ ನಾನು ನಾರಾಯಣಸ್ಯ = ನಾರಾಯಣನಿಗೆ ಸಮಂ = ಸದೃಶವಾದ ವಸ್ತು ನಾಸ್ತಿ = ಈಗ ಇಲ್ಲ ಭೂತಂ = ಹಿಂದೆ ಹುಟ್ಟಿದ್ದು ನ = ಇಲ್ಲ ಭವಷ್ಯತಿನ = ಮುಂದೆಯೂ ಇರುವುದಿಲ್ಲ ಏತೇನ = ಈ ಸತ್ಯ-ವಾಕ್ಯೇನ = ಯಥಾವಸ್ಥಿತಾರ್ಥವನ್ನು ಪ್ರತಿಪಾದಿಸತಕ್ಕ ವಾಕ್ಯದಿಂದ ಸರ್ವಾರ್ಥಾನ್ = ವಿಷ್ಣು ಸರ್ವೋತ್ತಮತ್ವಾದಿ ಎಲ್ಲಾ ಅರ್ಥಗಳನ್ನು ಸಾಧಯಾಮಿ = ಸಾಧಿಸುತ್ತೇನೆ. ॥ ೭೦ ॥

**ಅವತಾರಿಕೆ:—** ಈಗ ಗ್ರಂಥದ ಆರಂಭದಲ್ಲಿ ಮಂಗಲ ಪದ್ಯದಿಂದ ಹೇಳಿದ ಪ್ರಮೇಯಕ್ಕೆ ಅನುಕೂಲವಾದ ಪ್ರಮೇಯವನ್ನೇ ಮೇಲಿನ ಗ್ರಂಥದಲ್ಲಿ ವಿಸ್ತಾರವಾಗಿ ಹೇಳಬೇಕು. ಅದಕ್ಕೆ ವಿರುದ್ಧವಾದುದನ್ನು ಹೇಳಬಾರದು. ಆದ್ದರಿಂದ ಲಕ್ಷ ಸಂಖ್ಯಾತ ಭಾರತ ಶ್ಲೋಕಗಳಿಗೂ ಹರಿಸರ್ವೋತ್ತಮತ್ವದಲ್ಲಿ ತಾತ್ಪರ್ಯವು ಎಂದು ಹೇಳುತ್ತಾರೆ.

**आद्यंतयोरित्यवदत्सयस्मात्तकोऽ विष्णुरुदारशक्तिः ।**
**तस्मात्यमुस्ता हरिसद्गुणानां निर्णयतेऽ भारतगाकथैषा ॥ २१ ॥**

ಆದ್ಯಂತಯೋಃ = ಮಂಗ ಪದ್ಯದ ಆದಿಯಲ್ಲಿಯೂ ಅಂತ್ಯದಲ್ಲಿಯೂ ಉದಾರ ಶಕ್ತಿಃ = ಉತ್ಕೃಷ್ಟವಾದ ಸಾಮರ್ಥ್ಯವುಳ್ಳ ಸಃ = ವ್ಯಾಸಾತ್ಮಕಃ = ಆ ವ್ಯಾಸರೂಪಿಯಾದ ವಿಷ್ಣುಃ = ಶ್ರೀ ಹರಿಯು ಯಸ್ಮಾತ್ = ಯಾವ ಕಾರಣದಿಂದ ಇತಿ = ಈ ಹಿಂದೆ ಹೇಳಿದ ಶ್ಲೋಕವನ್ನು ಅವದತ್ = ಹೇಳಿದರೋ ತಸ್ಮಾತ್ = ಆ ಕಾರಣದಿಂದ ಏಷಾ = ಈ ಭಾರತಗಾ = ಭಾರತದಲ್ಲಿರುವ ಸಮಸ್ತಾ = ಎಲ್ಲಾ ಕಥಾ = ಕಥೆಯು ಹರಿಸದ್ಗುಣಾನಾಂ = ಶ್ರೀ ಹರಿಯು ನಿರ್ದುಷ್ಟ ಗುಣಗಳನ್ನೆ ಪ್ರತಿಪಾದಿಸತಕ್ಕದ್ದು ಎಂಬುದಾಗಿ ನಿರ್ಣೀಯತೇ = ವ್ಯಾಸರಿಂದ ನಿರ್ಣಯವು ಮಾಡಲ್ಪಡುತ್ತದೆ. ॥ ೭೧ ॥

ಈಗ ಭಾರತದ ಮಧ್ಯದಲ್ಲಿರುವ ಬಹು ವಾಕ್ಯಗಳಿಂದ ಅವತಾರಾದಿಗಳಲ್ಲಿ ಕೆಲವು ಕೆಲವು ಕಡೆ ತೋರಿಸಿದ ಭೇದ, ವೇಧ, ಮೋಹಾದಿ ದೋಷಗಳು ಅಸುರ ಜನರನ್ನು ಮೋಹಿಸುವುದಕ್ಕಾಗಿ ಎಂದು ಹೇಳತಕ್ಕ ವಾಕ್ಯಗಳಿಂದಲೂ ಕೂಡ ಶ್ರೀ ಹರಿಗೆ ಸರ್ವೋತ್ತಮತ್ವಾದಿ ಮಹಿಮೆಯನ್ನೂ ಜನನ ಮರಣಾದಿ ಸಕಲ ದೋಷಗಳಿಂದ ಅತ್ಯಂತ ದೂರತ್ವವನ್ನೂ ದೃಢೀಕರಿಸುವುದಕ್ಕಾಗಿ ಮುಂದಿನ ಗ್ರಂಥ ಸಂದರ್ಭವು.

**सत्यं सत्यं पुनः सत्य मुद्धृत्य भुजमुच्यते ।**
**वेद शास्त्रात्परं नास्ति न दैवं केशवात्परम् ॥ २२ ॥**

ಭುಜಂ ಉದ್ಧೃತ್ಯ ಭುಜವನ್ನುಎತ್ತಿ,ಸತ್ಯಂ ಸತ್ಯಂ ಪುನಃ ಸತ್ಯಮ್ ಸತ್ಯವು ಸತ್ಯವು ಮತ್ತು ಸತ್ಯವು ಎಂದು ಉಚ್ಯತೇ= ಶಪಥ ಪೂರ್ವಕವಾಗಿ ಹೇಳಲ್ಪಡುತ್ತದೆ. ದೃಢವಾದ ಶಪತವೆಂದು ತಿಳಿಸಲು ಮೂರು ಸಲ ಸತ್ಯವೆಂದೂ ಭುಜವನ್ನು ಎತ್ತಿ ಎಂದೂ ಹೇಳಿದ್ದು. ಯಾವುದನ್ನು ಸತ್ಯವೆಂಬುದನ್ನು ಹೇಳುತ್ತಾರೆ. ವೇದ ಶಾಸ್ತ್ರಾತ್ = ಋಗಾದಿ ವೇದಗಳು ಮೀಮಾಂಸಾ ಶಾಸ್ತ್ರವೂ ಇವುಗಳ ದೆಸೆಯಿಂದ ಪರಂ = ಪ್ರತಿಪಾದಕಗಳಲ್ಲಿ ಉತ್ತಮವಾದದ್ದು. ನಾಸ್ತಿ = ಇಲ್ಲ ಕೇಶವಾತ್ = ಪ್ರತಿಪಾದ್ಯಗಳಲ್ಲಿ ಕೇಶವನ ದೆಸೆಯಿಂದ ಪರಂ = ಉತ್ಕೃಷ್ಟವಾದ ದೈವಂ = ದೇವತೆಯು ನ = ಇರುವುದಿಲ್ಲ. ॥ ೭೨ ॥

**आलोड्य सर्वशास्त्राणि विचार्य च पुनः पुनः ।**
**इदमेकं सुनिष्पन्नं ध्येयो नारायणः सदा ॥ २३ ॥**

ಸರ್ವಶಾಸ್ತ್ರಾಣಿ = ಎಲ್ಲಾ ಶಾಸ್ತ್ರಗಳನ್ನು ಆಲೋಡ್ಯ = ಮಥನೆ ಮಾಡಿ ಪುನಃ ಪುನಃ = ಮತ್ತೂ ಮತ್ತೂ ವಿಚಾರ್ಯಚ = ಉಪಕ್ರಮೋಪ ಸಂಹಾರಾದಿ ಲಿಂಗಗಳಿಂದ ವಿಮರ್ಶೆ ಮಾಡಿಯೇ ಮಯಾ = ನನ್ನಿಂದ ಸದಾ = ಯಾವಾಗಲೂ ನಾರಾಯಣಃ = ನಾರಾಯಣನು ಧ್ಯೇಯಃ = ಧ್ಯಾನ ಮಾಡುಲು ಯೋಗ್ಯನು ಇತಿ = ಎಂಬುದಾಗಿ ಇದಮೇಕಂ = ಇದೊಂದು ಮುಖ್ಯ ಪ್ರಮೇಯವು ಸುನಿಷ್ಪನ್ನಂ = ಚೆನ್ನಾಗಿ ನಿಶ್ಚಿತವಾಗಿದೆ. ॥ ೭೩ ॥

**ಸ್ಮರ್ತವ್ಯಃ ಸತತಂ ವಿಷ್ಣುಃ ವಿಸ್ಮರ್ತವ್ಯೋ ನ ಜಾತುಚಿತ್ ।**
**ಸರ್ವೇವಿಧಿನಿಷೇಧಾಃ ಸ್ಯುರೇತಯೋರೇವ ಕಿಂಕರಾಃ ॥ ೬೫ ॥**

ಸರ್ವೇವಿಧಿನಿಷೇಧಾಃ = "ಜ್ಯೋತಿಷ್ಟೋವೇನಸ್ವರ್ಗಕಾಮೋಯಜೇತ," ಸ್ವರ್ಗಾಪೆಕ್ಷೇಯು ಜ್ಯೋತಿಷ್ಟೋಮಯಾಗವನ್ನು ಮಾಡಬೇಕು. ಅಹರಹಃ ಸಂಧ್ಯಾಮುಪಾಸೀತ ಪ್ರತಿದಿನ ಸಂಧ್ಯಾವಂದನೆಯನ್ನು ಮಾಡಬೇಕು. ಎಂಬ ಎಲ್ಲಾ ವಿಧಿವಾಕ್ಯಗಳೂ" ಬ್ರಾಹ್ಮಣೋನಹಂತವ್ಯ" ಬ್ರಾಹ್ಮಣನು ಕೊಲ್ಲಲು ಯೋಗ್ಯನಲ್ಲ ಎಂಬ ನಿಷೇಧ ವಾಕ್ಯಗಳು ಸತತಂ = ಯಾವಾಗಲೂ ವಿಷ್ಣುಃ = ನಾರಾಯಣನನು ಸ್ಮರ್ತವ್ಯಃ = ಸ್ಮರಣೆ ಮಾಡಲು ಯೋಗ್ಯನು ಜಾತುಚಿತ್ = ಯಾವಾಗಲೂ ಕೂಡ ವಿಸ್ಮರ್ತವ್ಯಃ = ಮರೆತು ಬಿಡಲಿಕ್ಕೆ ಯೋಗ್ಯನು ನ = ಅಲ್ಲ. ಏತಯೋಃ = ಈ ವಿಷ್ಣುವನ್ನು ಸ್ಮರಿಸಬೇಕು ಮರೆಯಬಾರದು ಎಂಬ ವಿಧಿ ನಿಷೇಧಗಳ ಕಿಂಕರಾಃ = ಸೇವಕರು. ॥ ೬೫ ॥

**ವಿಶೇಷಾರ್ಥ:—** ವಿಷ್ಣುವನ್ನು ಸ್ಮರಿಸಬೇಕು, ಮರೆಯಬಾರದು ಎಂಬ ವಿಧಿ ನಿಷೇಧಗಳು ಸಾಕ್ಷಾತ್ ಮುಕ್ತಿಗೆ ಅಂಗಗಳು. ಸಂಧ್ಯಾವಂದನೆ ಮಾಡಬೇಕು ಎಂಬ ವಿಧಿಗಳು "ವಿಷ್ಣುಃ ಸ್ಮರ್ತವ್ಯಃ" ಎಂಬ ವಿಧಿಯಲ್ಲಿ ವಿಹಿತಗಳಾದ ವಿಷ್ಣು ಸ್ಮರಣೆಗಳಿಗೆ ಯೋಗ್ಯವಾದ ಮನಸ್ಸೆಂಬ ಮನೆಯನ್ನು ಶುದ್ಧಿ ಮಾಡುವುದರಿಂದ ಇತರ ವಿಧಿಗಳು ಸೇವಕರು, ಬ್ರಾಹ್ಮಣನನ್ನು ಕೊಲ್ಲಬಾರದು ಎಂಬ ನಿಷೇಧ ವಾಕ್ಯಗಳು ವಿಷ್ಣುವನ್ನು ಮರೆಯಬಾರದು ಎಂಬ ನಿಷೇಧಕ್ಕೆ ಪ್ರತಿಯೋಗಿಯಾದ ವಿಸ್ಮರಣೆಗೆ ಸಹಾಯಕಗಳಾದ ದೋಷಗಳನ್ನು ಹೋಗಲಾಡಿಸುವುದರಿಂದ ಇತರ ನಿಷೇಧಗಳು ಸೇವಕರು. ಇದಕ್ಕೆ ದೃಷ್ಟಾಂತ ಸಾಕ್ಷಾತ್ ರಾಮನಿಗೆ ವಿರೋಧಿಯಾದವನು ರಾವಣನು. ಅವನಿಗೆ ಸಹಾಯ ಮಾಡತಕ್ಕವರು ರಾಕ್ಷಸರು. ಆ ರಾಕ್ಷಸರನ್ನು ಕೊಲ್ಲತಕ್ಕ ಕಪಿಗಳು ಹೇಗೋ ಹಾಗೆ.

ಸಂಪೂರ್ಣವಾಗಿ ಪರಮಾತ್ಮನನ್ನು ಇತರರು ತಿಳಿಯಲಾರರು ಎಂಬ ವಿಷಯದಲ್ಲಿ ಎರಡು ಭಾರತ ವಾಕ್ಯಗಳನ್ನು ಹೇಳುತ್ತಾರೆ.

**ಕೋಹಿ ತಂ ವೇದಿತುಂ ಶಕ್ತೋ ಯೋನಸ್ಯಾತ್ತದ್ವಿಧೋಪರಃ ।**
**ತದ್ವಿಧಶ್ಚಾಪರೋ ನಾಸ್ತಿ ತಸ್ಮಾತ್ತಂ ವೇದ ಸಸ್ವಯಮ್ ॥ ೬೬ ॥**

---

**ಕೋಹಿತಂ ವೇದಿತುಂ ಶಕ್ತೋ ನಾರಾಯಣಮನಾಮಯಮ್ ।**
**ಋತೇ ಸತ್ಯವತೀಸೂನೋಃ ಕೃಷ್ಣಾದ್ವಾ ದೇವಕೀಸುತಾತ್ ॥ ೬೭ ॥**

ಯಃ = ಯಾವ ಅಪರಃ = ಆ ಬ್ರಹ್ಮಾದಿಗಳು ತದ್ವಿಧಃ = ನಾರಾಯಣನಿಗೆ ಸಮಾನರು ನಸ್ಯಾತ್ = ಆಗಲಾರರೋ ಆದ್ದರಿಂದ ಬ್ರಹ್ಮಾದಿಗಳು ತಂ = ಆ ನಾರಾಯಣನನ್ನು ವೇದಿತುಂ = ತಿಳಿಯಲು ಕಃ = ಯಾರುಶಕ್ತಃ = ಸಮರ್ಥರು? ಯಾರೂ ಸಮರ್ಥರಾಗಲಾರರು. ಆ ವಿಷ್ಣುವಿನ ದೆಸೆಯಿಂದ ಅತ್ಯಂತ ನೀಚರಾದ ಪ್ರಯುಕ್ತ ಪರಮಾತ್ಮನನ್ನು ತಿಳಿಯುವ ಸಾಮರ್ಥ್ಯವಿಲ್ಲವೆಂಬ ಅಭಿಪ್ರಾಯ. ಹಾಗಾದರೆ ಬ್ರಹ್ಮಾದಿಗಳಿಂದ ಉತ್ತಮನಾದ ನಾರಾಯಣನಿಗೆ ಸಮಾನನಾದವನು ಇರುವನೋ ಎಂಬುದಕ್ಕೆ ಉತ್ತರವನ್ನು ಹೇಳುತ್ತಾರೆ. ತದ್ವಿಧಃ = ಆ ನಾರಾಯಣನಿಗೆ ಸಮಾನನು ಅಪರಶ್ಚ = ಬ್ರಹ್ಮಾದಿಗಳಿಂದ ಉತ್ತಮನೂ ಕೂಡ ನಾಸ್ತಿ = ಇರುವುದಿಲ್ಲ. ತಸ್ಮಾತ್ = ನಾರಾಯಣನಿಂದ ಬೇರೆ ಯಾರು ತಿಳಿಯುವವರು ಇಲ್ಲದಿರುವುದರಿಂದ ಯಾವ ರೀತಿಯಿಂದಲೂ ತಿಳಿಯಲಿಕ್ಕೆ ಅಯೋಗ್ಯವಾದದ್ದು ವಸ್ತುವೇ ಆಗದಿರುವುದರಿಂದ ತಂ = ಆ ನಾರಾಯಣನನ್ನು ಸಃ = ಆ ನಾರಾಯಣನು ಸ್ವಯಮೇವ = ತಾನೇ ವೇದ = ತಿಳಿಯುತ್ತಾನೆ. ॥ ೬೬ ॥

ಸತ್ಯವತೀಸೂನೋಃ ಸತ್ಯವತಿಯ ಮಗನಾದ ಕೃಷ್ಣಾದ್ವಾ = ವೇದವ್ಯಾಸರಿಂದಾಗಲೀ ದೇವಕೀಸುತಾತ್ = ದೇವಕಿಯ ಮಗನಾದ, ಕೃಷ್ಣಾದ್ವಾ = ಯಾದವ ಕೃಷ್ಣನಿಂದಾಗಲೀ ಋತೇ = ಬಿಟ್ಟು ಅನಾಮಯಂ = ನಿರ್ದೋಷನಾದ ತಂ ನಾರಾಯಣಂ = ಆ ನಾರಾಯಣನನ್ನು ವೇದಿತುಂ = ತಿಳಿಯಲು ಕಃ ಶಕ್ತಃ ಹಿ = ಯಾರು ಸಮರ್ಥರು. ಯಾರೂ ಇಲ್ಲವೆಂದರ್ಥ ॥ ೬೭ ॥

ಸ್ವಾತಂತ್ರ್ಯರೂಪ ಅರ್ಥದಲ್ಲಿ ಭಾರತ ವಾಕ್ಯವನ್ನು ಉದಾಹರಿಸುತ್ತಾರೆ.

**ಅಪ್ರಮೇಯೋಽನಿಯೋಜ್ಯಶ್ಚ ಸ್ವಯಂಕಾಮಗಮೋವಶೀ ।**
**ಮೋದತ್ಯೇಷ ಸದಾಭೂತೈರ್ಬಾಲಃ ಕ್ರೀಡನಕೈರಿವ ॥ ೬೮ ॥**

ಅಪ್ರಮೇಯಃ = ಸಂಪೂರ್ಣವಾಗಿ ತಿಳಿಯಲಶಕ್ಯನು. ಅನಿಯೋಜ್ಯಶ್ಯ = ಇನ್ನೊಬ್ಬರಿಂದ ಪ್ರೇರಿಸಿಕೊಳ್ಳಲ್ಪಡದವನು. ಸ್ವಯಂಕಾಮಗಮಃ = ತಾನೇ ಇಚ್ಛೆಯಿಂದ ಹೋಗುವವನು ಅಂದರೆ ಸ್ವತಂತ್ರನೆಂದರ್ಥ. ವಶೀ = ಇಂದ್ರಿಯನಿಗ್ರಹವುಳ್ಳವನು ಅಥವಾ ಸರ್ವವನ್ನೂ ತನ್ನ ಅಧೀನದಲ್ಲಿ ಇಟ್ಟುಕೊಂಡವನು. ಕ್ರೀಡನಕೈಃ = ಚೆಂಡು ಮೊದಲಾದ ಆಟದ ಸಾಮಾಗ್ರಿಗಳಿಂದ ಬಾಲಃ = ಇವ = ಬಾಲಕನು ಸಂತೋಷಪಡುವಂತೆ ಭೂತೈಃ = ಪ್ರಾಣಿಗಳನ್ನು ಸೃಷ್ಟಿ ಮಾಡುವುದು ರಕ್ಷಿಸುವರು ನಾಶ ಮಾಡುವುದು ಈ ಕಾರಣಗಳಿಂದ ವಿಷಃ ಈ ಹರಿಯು ಸದಾ = ಯಾವಾಗಲೂ ಮೋದತಿ = ಸಂತೋಷಪಡುತ್ತಾನೆ. ॥ ೭೮ ॥

ಪರಮಾತ್ಮನು ಸಂಪೂರ್ಣವಾಗಿ ತಿಳಿಯಲು ಅಶಕ್ಯನು ಸರ್ವೋತ್ತಮನು ಎಂಬ ವಿಷಯದಲ್ಲಿ ಪ್ರಮಾಣವನ್ನು ಹೇಳುತ್ತಾರೆ.

**ನಪ್ರಮಾತುಂ ಮಹಾಬಾಹುಃ ಶಕ್ಯೋಯಂ ಮಧುಸೂದನಃ ।**
**ಪರಮಾತ್ಪರಮೋ ತಸ್ಮಾದ್ವಿಶ್ವರೂಪಾನ್ನ ವಿದ್ಯತೇ ॥ ೭೯ ॥**

ಮಹಾಬಾಹುಃ = ಶ್ರೇಷ್ಠಗಳಾದ ಭುಜಗಳುಳ್ಳ ಅಯಂ = ಈ ಮಧುಸೂಧನಃ = ಮಧುನಾಮಕ ದೈತ್ಯನನ್ನು ಸಂಹರಿಸಿದ ಪರಮಾತ್ಮನು ಪ್ರಮಾತುಂ = ತಿಳಿಯಲು ನಶಕ್ಯಃ = ಸಾಧ್ಯವಲ್ಲ ಏತಸ್ಮಾತ್ = ಈ ಪರಮಾತ್ = ಸರ್ವೋತ್ತಮನಾದ ವಿಶ್ವರೂಪಾತ್ = ವಿಶ್ವರೂಪನಿದ್ದೆಸೆಯಿಂದ ಪರಂ = ಉತ್ತಮವಾದದ್ದು ನವಿದ್ಯತೇ = ಇರುವುದಿಲ್ಲ. ॥ ೭೯ ॥

ಜನಾನಾದಿ ದೋಷಗಳು ಕಂಡದ್ದರಿಂದ ನಿರ್ದೋಷತ್ವವು ಹೇಗೆ ಎಂಬ ಆಕ್ಷೇಪಕ್ಕೆ ಸಮಾಧಾನ ಹೇಳುತ್ತಾರೆ.

**ವಸುದೇವಸುತೋನಾಯಂ ನಾಯಂ ಗರ್ಭೇಽವಸತ್ಪ್ರಭುಃ ।**
**ನಾಯಂ ನದಶರಥಾಜ್ಜಾತೋ ನಜಾಪಿ ಜಮದಗ್ನಿತಃ ॥ ೮೦ ॥**

ಅಯಂ = ಈ ಶ್ರೀಕೃಷ್ಣನು ವಸುದೇವಸುತಃ = ವಸುದೇವನ ಮಗನು ನ = ಅಲ್ಲ. ಅಯಂ = ಈ ಪ್ರಭುಃ = ಸಮರ್ಥವಾದ ಹರಿಯು ಗರ್ಭೇ = ಸ್ತ್ರೀಯರ ಗರ್ಭದಲ್ಲಿ ನಾವಸತ್ = ವಾಸ ಮಾಡಲಿಲ್ಲ. ಅಯಂ = ರಾಮನು ದಶರಥಾತ್ = ದಶರಥನ ದೆಸೆಯಿಂದ ನಜಾತಃ = ಹುಟ್ಟಿದವನಲ್ಲ. ಅಯಂ = ಈ ಪರಶುರಾಮನು ಜಮದಗ್ನಿತಃ = ಜಮದಗ್ನಿ ಋಷಿಗಳ ದೆಸೆಯಿಂದ ನಚ = ಹುಟ್ಟಿದವನಲ್ಲ. ॥ ೮೦ ॥

ಜನನ ಮರಣ ವೇಧಾದಿದೋಷಗಳು ಇಲ್ಲವೆಂಬ ವಿಷಯದಲ್ಲಿ ಪ್ರಮಾಣವನ್ನು ಹೇಳುತ್ತಾರೆ.

**ಜಾಯತೇ ನೈವ ಕುತ್ರಾಪಿ ಮ್ರಿಯತೇ ಕುತಏವತು ।**
**ನವಧ್ಯೋ ಮುಹ್ಯತೇ ನಾಯಂ ಬಧ್ಯತೇ ನೈವ ಕೇನಚಿತ್ ॥ ೮೧ ॥**
**ಕುತೋದುಃಖಂ ಸ್ವತಂತ್ರಸ್ಯ ನಿತ್ಯಾನಂದೈಕರೂಪಿಣಃ ॥ ೮೨ ॥**

ಅಯಂ = ಈ ನಾರಾಯಣನು ಕುತ್ರಾಪಿ = ದೇವಕಿಯೇ ಮೊದಲಾದವರಲ್ಲಿ ನೈವ ಜಾಯತೇ = ಹುಟ್ಟುವುದೇ ಇಲ್ಲ ಆದ್ದರಿಂದ ಕುತಏವ = ಯಾವುದರಿಂದ ಮ್ರಿಯತೇ = ಮರಣವನ್ನು ಹೊಂದುತ್ತಾನೆ? ಬಾಣಾದಿಗಳಿಂದ ಮರಣವನ್ನು ಹೊಂದುವುದಿಲ್ಲವೆಂದರ್ಥ. ವಧ್ಯೋನ = ಬಾಣಾದಿಗಳಿಂದ ಕೊಲ್ಲಲು ಯೋಗ್ಯನೂ ಅಲ್ಲ. ಅಯಂ = ಈ ಹರಿಯು ನಮುಹ್ಯತೇ = ಮೋಹವನ್ನು ಹೊಂದುವುದಿಲ್ಲ. ಕೇನಚಿತ್ = ಯಾವ ಪುರುಷನಿಂದಲೂ ನೈವಬಧ್ಯತೇ = ಬಂಧಿಸಲ್ಪಡುವುದೇ ಇಲ್ಲ. ನಿತ್ಯಾನಂದೈಕರೂಪಿಣಃ = ಯಾವಾಗಲೂ ಸುಖವೇ ಮುಖ್ಯವಾದ ಸ್ವರೂಪವಾಗಿ ಉಳ್ಳ ಸ್ವತಂತ್ರನಾದ ಹರಿಗೆ ದುಃಖಂ = ದುಃಖವು ಕುತಃ = ಹೇಗೆ ಬಂದೀತು. ದುಃಖವು ಹರಿಯ ಅಧೀನದಲ್ಲಿರುವುದರಿಂದ, ದುಃಖವು ತನಗೆ ಬಾರದಂತೆ ಮಾಡಿಕೊಳ್ಳಲು ಸಾಮರ್ಥ್ಯವಿರುವುದರಿಂದ ಹರಿಗೆ ದುಃಖವು ಬರಲಾರದು ಎಂದು ತಾತ್ಪರ್ಯ.

ಪರಮಾತ್ಮನಲ್ಲಿ ಕಾಣಿಸತಕ್ಕ ದೋಷಗಳು ಅಸುರ ಮೋಹಕ್ಕಾಗಿ ಪರಮಾತ್ಮನು ತೋರಿಸುವುದೆಂದು ಹೇಳುತ್ತಾರೆ.

**ಈಶನ್ನಪಿ ಹಿ ದೇವೇಶಃ ಸರ್ವಸ್ಯ ಜಗತೋ ಹರಿಃ ।**
**ಕರ್ಮಾಣಿ ಕುರುತೇ ನಿತ್ಯಂ ಕೇನಾಶ ಇವ ದುರ್ಬಲಃ ॥ ೮೩ ॥**

ದೇವೇಶಃ = ದೇವತೆಗಳಿಗೆ ಸ್ವಾಮಿಯಾದ ಹರಿಃ = ಶ್ರೀಹರಿಯು ಸರ್ವಸ್ಯ = ಎಲ್ಲಾ ಜಗತಃ = ಲೋಕಕ್ಕೆ ಈಶನ್ನಪಿ = ಈಶ್ವರನಾದರೂ ಕೂಡ ದುರ್ಬಲಃ ಕೀನಾಶ ಇವ = ಬಲವಿಲ್ಲದ ಕೃಷೀವಲನಂತೆ ಕ್ಷುದ್ರಪುರುಷನಂತೆ ನಿತ್ಯಂ = ಯಾವಾಗಲೂ ಕರ್ಮಾಣಿ = ಅರ್ಜುನನ ದೂತತನ, ಬಲಿಯನ್ನು ಬೇಡುವುದು, ನಾಗದವಂದನ, ಸಂಧ್ಯಾವಂದನನಾದಿ ಕೆಲಸಗಳನ್ನು ಕುರುತೇ = ಮಾಡುತ್ತಾನೆ. ॥ ೮೩ ॥

ನಾತ್ಮಾನಂವೇದ ಮುಗ್ಧೋಯಂ ದುಃಖೀ ಸೀತಾಂ ಚ ಮಾರ್ಗತೇ ॥
ಬದ್ಧಃ ಶಕ್ರಜಿತೇತ್ಯಾದಿ ಲೀಲೈಷಾಽಸುರ ಮೋಹಿನೀ ॥ ೮೪ ॥

ಅಯಂ = ಈ ರಾಮನು ಮುಗ್ಧಃ = ಮೋಹ ಉಳ್ಳವನು ಆತ್ಮಾನಂ = ತನ್ನನ್ನು ನ ವೇದ = ತಿಳಿಯುವುದಿಲ್ಲ. ಅಯಂ = ಈ ರಾಮನು ದುಃಖೀ ದುಃಖಿವುಳ್ಳವನಾಗಿ ಸೀತಾಂ ಚ = ಸೀತೆಯನ್ನು ಕೂಡ ಮಾರ್ಗತೇ = ಹುಡುಕುತ್ತಾನೆ. ಶಕ್ರಜಿತಾ = ಇಂದ್ರಜಿತುವಿನಿಂದ ಬದ್ಧಃ = ಕಟ್ಟಲ್ಪಟ್ಟನು. ಇತ್ಯಾದಿ = ಇವೇ ಮೊದಲಾಗಿ ಉಳ್ಳ ಏಷಾ = ಈ ಲೀಲಾ = ಕ್ರೀಡೆಯು ಅಸುರ ಮೋಹಿನೀ = ದೈತ್ಯರಿಗೆ ಭ್ರಾಂತಿಯನ್ನು ಮಾಡತಕ್ಕದ್ದು. ॥ ೮೪ ॥

ಮುಹ್ಯತೇ ಶಸ್ತ್ರಪಾತೇನ ಭಿನ್ನತ್ವಗ್ರುಧಿರಸ್ರವಃ ।
ಅಜಾನನ್ ಪೃಚ್ಛತಿ ಸ್ಮಾನ್ಯಾನ್ ತನುಂ ತ್ಯಕ್ತ್ವಾದಿವಂಗತಃ ॥ ೮೫ ॥
ಇತ್ಯಾದ್ಯಸುರಮೋಹಾಯ ದರ್ಶಯಾಮಾಸ ನಾಟ್ಯವತ್ ।
ಅವಿದ್ಯಮಾನಮೇವೇಶಃ ಕುಹಕಂ ತದ್ವಿದುಃ ಸುರಾಃ ॥ ೮೬ ॥

ಶಸ್ತ್ರಪಾತೇನ = ಶಸ್ತ್ರಗಳ ಪ್ರಹಾರದಿಂದ ಭಿನ್ನತ್ವಕ್ = ಗಾಯ ಹೊಂದಿದ ಚರ್ಮವುಳ್ಳವನು. ರುಧಿರಸ್ರವಃ = ರಕ್ತದ ಸುರಿಸುವಿಕೆ ಉಳ್ಳವನು. ಮುಹ್ಯತೇ = ಮೋಹವನ್ನು ಹೊಂದುತ್ತಾನೆ. ಅಜಾನನ್ = ತಾನು ತಿಳಿಯದವನಾಗಿ ಅನ್ಯಾನ್ = ಇತರರನ್ನು ಪೃಚ್ಛತಿಸ್ಮ = ಕೇಳುತ್ತಾನೆ. ತನುಂ = ಶರೀರವನ್ನು ತ್ಯಕ್ತ್ವಾ = ಬಿಟ್ಟು ದಿವಂ = ಸ್ವರ್ಗವನ್ನು ಗತಃ = ಹೋದನು ಈಶಃ = ಸ್ವಾಮಿಯಾದ ಹರಿಯು ಅವಿದ್ಯಮಾನಮೇವ = ತನ್ನಲ್ಲಿ ಇಲ್ಲದೇ ಇರುವ ಇತ್ಯಾದಿ = ಇವೇ ಮೊದಲಾವ ದೋಷಗಳನ್ನು ನಾಟ್ಯವತ್ = ನಟನ ಮಾಡುವ ಪುರುಷನಂತೆ ಅಸುರ ಮೋಹಾಯ = ಅಸುರರಿಗೆ ಮಿಥ್ಯಾಜ್ಞಾನ ಬರುವುದಕೋಸ್ಕರ ದರ್ಶಯಾಮಾಸ = ತೋರಿಸಿದನು ತತ್ = ಅಸುರ ಮೋಹಕ್ಕಾಗಿ ತೋರಿಸಿದ್ದನ್ನು ಸುರಾಃ = ದೇವತೆಗಳು ಕುಹಕಂ = ಕಪಟವೆಂಬುದಾಗಿ ವಿದುಃ = ತಿಳಿಯುತ್ತಾರೆ. ॥ ೮೬ ॥

ಪ್ರಾದುರ್ಭಾವಾ ಹರೇಃಸರ್ವೇ ನೈವಪ್ರಾಕೃತದೇಹಿನಃ ।
ನಿರ್ದೋಷಗುಣಸಂಪೂರ್ಣಾ ದರ್ಶಯೆತ್ಯನ್ಯಥೈವತು ॥ ೮೭ ॥
ದುಷ್ಟಾನಾಂ ಮೋಹನಾರ್ಥಾಯ ಸತಾಮಪಿ ಚ (ತು) ಕುತ್ರಚಿತ್ ।
ಯಥಾಯೋಗ್ಯಫಲಪ್ರಾಪ್ತ್ಯೈ ಲೀಲೈಷಾ ಪರಮಾತ್ಮನಃ ॥ ೮೮ ॥

ಹರೇಃ = ಪರಮಾತ್ಮನ ಸರ್ವೇ = ಎಲ್ಲಾ ಪ್ರಾದುರ್ಭಾವಾಃ = ಅವತಾರಗಳು ಪ್ರಾಕೃತದೇಹಿನಃ = ಪ್ರಕೃತಿ ಕಾರ್ಯವಾವ ಜಡ ಶರೀರವುಳ್ಳವುಗಳು ನೈವ = ಅಲ್ಲವೇ ಅಲ್ಲ ನಿರ್ದೋಷಗುಣ ಸಂಪೂರ್ಣಾಃ ದೋಷರಹಿತಗಳಾದ ಜ್ಞಾನಾನಂದಾದಿ ಗುಣಗಳಿಂದ ಪರಿಪೂರ್ಣಗಳು. ಇಂತಹ ಅವತಾರಗಳನ್ನು ಅನ್ಯಥೈವ = ದೋಷಗಳುಳ್ಳವನಾಗಿ, ಪ್ರಾಕೃತ ದೇಹವುಳ್ಳವುಗಳನ್ನಾಗಿ, ಗುಣವಿಲ್ಲದವುಗಳನ್ನಾಗಿಯೇ ದರ್ಶಯತಿ = ತೋರಿಸುತ್ತಾನೆ. ಈ ರೀತಿ ತೋರಿಸುವುದು ಏಕೆಂದರೆ ದುಷ್ಟಾನಾಂ = ಅಸುರರಿಗೆ ಮೋಹನಾರ್ಥಾಯ = ಭ್ರಾಂತಿ ಉಂಟಾಗುವುದಕೋಸ್ಕರ ಚ = ಮತ್ತು ಕುತ್ರಚಿತ್ = ಕೆಲವು ಕಡೆ ಸತಾಮಪಿ = ಸಜ್ಜನರಿಗೂ ಕೂಡ ಮೋಹವನ್ನುಂಟು ಮಾಡುವುದೇಕೆಂದು ಹೇಳುತ್ತಾರೆ. ಯಥಾ ಯೋಗ್ಯಫಲಪ್ರಾಪ್ತ್ಯೈ = ತಮ್ಮ ಯೋಗ್ಯತೆಯಿಂದ ಹೆಚ್ಚು ಪುಣ್ಯವನ್ನು ಮಾಡಿದ ಸಜ್ಜನರ ಪುಣ್ಯವನ್ನು ನಾಶ ಮಾಡಿ ಅವರ ಯೋಗ್ಯತೆಗೆ ತಕ್ಕ ಫಲವನ್ನುಂಟು ಮಾಡುವುದಕೋಸ್ಕರವೂ ಪರಮಾತ್ಮನಃ = ಶ್ರೀಹರಿಯ ಏಷಾ ಲೀಲಾ = ಈ ಹಿಂದೆ ಹೇಳಿದ ಕ್ರೀಡೆಯು ॥ ೮೮ ॥

ಈಗ ಭಾರತದಲ್ಲಿ ಗೀತೆಯು ಶ್ರೇಷ್ಠವಾದದ್ದರಿಂದ ವಿಷ್ಣು ಸರ್ವೋತ್ತಮತ್ವ ವಿಷಯದಲ್ಲಿ ಗೀತಾ ವಾಕ್ಯಗಳನ್ನು ಉದಾಹರಿಸುತ್ತಾರೆ.

**ಜ್ಞಾನಂತೇಽಹಂ ಸವಿಜ್ಞಾನಮಿದಂ ವಕ್ಷ್ಯಾಮ್ಯಶೇಷತಃ ।**
**ಯಜ್ಜ್ಞಾತ್ವಾ ನೇಹ ಭೂಯೋನ್ಯಜ್ಞಾತವ್ಯಮವಶಿಷ್ಯತೇ ॥ ೪೯ ॥**

ಹೇ ಪಾರ್ಥನಾದ ಅರ್ಜುನನೇ ಸವಿಜ್ಞಾನಂ = ವಿಶೇಷವಾಗಿ ಇದಂ = ನನ್ನ ಸಂಬಂಧಿಯಾದ ತಿಳಿಯಲು ಯೋಗ್ಯವಾದ ತನ್ನ ಮಹಿಮೆಯಿಂದ ಕೂಡಿದ ಜ್ಞಾನಂ = ಸಾಮಾನ್ಯವಾಗಿ ತನ್ನ ಮಹಿಮೆಯನ್ನು ಅಹಂ = ನಾನು ತೇ = ನಿನಗೋಸ್ಕರ ಅಶೇಷತಃ = ಅರ್ಜುನನಿಗೆ ಯೋಗ್ಯವಾದದ್ದೆಲ್ಲವನ್ನು ವಕ್ಷ್ಯಾಮಿ = ಹೇಳುವೆನು. ಯತ್ = ಯಾವ ಮಹಿಮೆಯನ್ನು ಜ್ಞಾತ್ವಾ = ತಿಳಿದು ಇಹ = ನಾನು ಹೇಳಿದ ಅರ್ಥದಲ್ಲಿ ಭೂಯಃ = ಮತ್ತೂ ಅನ್ಯತ್ = ಬೇರೆ ಯಾವುದೂ ಜ್ಞಾತವ್ಯಂ = ತಿಳಿಯಲು ಯೋಗ್ಯವಾದದ್ದು ನಾವಶಿಷ್ಯತೇ = ಅವಶಿಷ್ಟವಾಗುವುದಿಲ್ಲ ॥ ೪೯ ॥

ವಿಜ್ಞಾನವು ಯಾವುದೆಂಬುದನ್ನು ಹೇಳುತ್ತಾರೆ.

**ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ ।**
**ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ ॥ ೫೦ ॥**

ಅಹಂ = ನಾನು ಕೃತ್ಸ್ನಸ್ಯ = ಎಲ್ಲಾ ಜಗತಃ = ಲೋಕಕ್ಕೆ ಪ್ರಭವಃ = ಸೃಷ್ಟಿಕರ್ತನು. ತಥಾ = ಹಾಗೆಯೇ ಪ್ರಲಯಃ = ನಾಶಮಾಡತಕ್ಕವನು. ಹೇಧನಂಜಯ = ಎಲೈ ಅರ್ಜುನನೇ ಮತ್ತಃ = ನನ್ನ ದೆಸೆಯಿಂದ ಪರತರಂ = ಉತ್ತಮವಾದದ್ದು ಅನ್ಯತ್ = ಬೇರೆ ಕಿಂಚಿತ್ = ಯಾವುದೊಂದೂ ನಾಸ್ತಿ = ಇರುವುದಿಲ್ಲ. ನಾನೇ ಉತ್ತಮನು. ಇದು ಸರ್ವೋತ್ತಮತ್ವದಲ್ಲಿ ಪ್ರಮಾಣವು. ॥ ೫೦ ॥

**ಅವತಾರಿಕೆ:—** ಈ ರೀತಿಯಾಗಿ ನೀನು ಜಗತ್ತಿನ ಸೃಷ್ಟ್ಯಾದಿಗಳನ್ನು ಮಾಡತಕ್ಕವನಾದರೆ ಕೆಲವರು ನಿನ್ನನ್ನು ಏಕೆ ತಿರಸ್ಕರಿಸುತ್ತಾರೆ. ಅವರಿಗೆ ಯಾವ ಗತಿಯಾಗುವುದೆಂಬುದನ್ನು ಹೇಳುತ್ತಾರೆ.

**ಅವಜಾನಂತಿ ಮಾಂ ಮೂಢಾಮಾನುಷೀಂ ತನುಮಾಶ್ರಿತಮ್ ।**
**ಪರಂ ಭಾವಮಜಾನಂತೋ ಮಮಭೂತಮಹೇಶ್ವರಂ ॥ ೫೧ ॥**
**ಮೋಘಾಶಾ ಮೋಘ ಕರ್ಮಾಣೋ ಮೋಘಜ್ಞಾನಾ ವಿಚೇತಸಃ ।**
**ರಾಕ್ಷಸೀಮಾಸುರೀಂ ಚೈವ ಪ್ರಕೃತಿಂ ಮೋಹಿನೀಂಶ್ರಿತಾಃ ॥ ೫೨ ॥**

ಮೂಢಾಃ = ತಾಮಸ ಜನರು ಮಾನುಷೀಂ = ಮನುಷ್ಯ ಸಂಬಂಧಿಯಾದ ಅಂದರೆ ಮನುಷ್ಯರ ಶರೀರದಂತೆ ತೋರತಕ್ಕ ತನುಂ = ಶರೀರವನ್ನು ಆಶ್ರಿತಂ = ಆಶ್ರಯಿಸಿಕೊಂಡಿರತಕ್ಕ ಮಾಂ = ನನ್ನನ್ನು ಭೂತಮಹೇಶ್ವರಂ = ಸರ್ವದಾ ಇರತಕ್ಕ ಗುಣಪೂರ್ಣವಾದ ಬ್ರಹ್ಮಾದಿಗಳಿಗೂ ಸ್ವಾಮಿಯಾದ ಮಮ = ನನ್ನ ಪರಂಭಾವಂ = ಉತ್ತಮವಾದ ಸರ್ವದಾ ಇರತಕ್ಕ ಸ್ವರೂಪವನ್ನು ಅಜಾನಂತಃ = ತಿಳಿಯದವರಾಗಿ ಅವಜಾನಂತಿ = ಅಧಮನನ್ನಾಗಿ ತಿಳಿಯುತ್ತಾರೆ.

ಭಗವದ್ದ್ವೇಷಿಗಳಿಗೆ ಐಹಿಕ ಸಂಪತ್ತು ಸಿಕ್ಕಿದರೂ ಆಮುಷ್ಮಿಕ ಫಲವನ್ನು ಅವರು ಅಪೇಕ್ಷಿಸಿದರೂ ಸಿಗದಿರುವುದರಿಂದ ಮೋಘಾಶಾಃ = ವ್ಯರ್ಥವಾದ ಆಶೆವುಳ್ಳವರು. ಮೋಘಕರ್ಮಾಣಃ = ಯುದ್ಧಾದಿ ಕರ್ಮಗಳು ಸಫಲವಾದರು ಅವರು ಮಾಡತಕ್ಕ ಯಜ್ಞಾದಿ ಕರ್ಮಗಳು ವ್ಯರ್ಥವೇ. ಆದ್ದರಿಂದ ವ್ಯರ್ಥವಾದ ಕರ್ಮವುಳ್ಳವರು ಮೋಘಜ್ಞಾನಾಃ = ತತ್ವ ವಿಷಯಕ ಜ್ಞಾನವು ಅವರಿಗೆ ವ್ಯರ್ಥವೇ ಅಂದರೆ ಬ್ರಹ್ಮ ರುದ್ರಾದಿಗಳಲ್ಲಿ ಮಾಡಿದ ಭಕ್ತ್ಯಾದ್ಯುಪಾಯಗಳಿಂದಲೂ ಜ್ಞಾನವು ಹುಟ್ಟುವುದಿಲ್ಲವೆಂದರ್ಥ. ವಿಚೇತಸಃ = ತತ್ವಜ್ಞಾನಕ್ಕೆ ವಿರುದ್ಧವಾದ ಮನಸ್ಸುಳ್ಳವರು (ಮಿಥ್ಯಾಜ್ಞಾನವುಳ್ಳವರು) ಇಂಥವರು ಮೋಹಿನೀಂ ಬುದ್ಧಿಭ್ರಂಶವನ್ನುಂಟು ಮಾಡುವ ಆಸುರೀಂ = ಅಸುರ ಸಂಬಂಧಿಯಾದ ರಾಕ್ಷಸೀಂ = ರಾಕ್ಷಸ ಸಂಬಂಧಿಯಾದ ಪ್ರಕೃತಿಂ = ಸ್ವಭಾವವನ್ನೂ ಆಶ್ರಿತಾಃ ಆಶ್ರಯಿಸಿರುವ ತಪೋಯೋಗ್ಯರು ಮಾಂ ಅವಜಾನಂತಿ ನನ್ನನ್ನು ತಿರಸ್ಕರಿಸುವರು. ॥ ೫೨ ॥

**ಅವತಾರಿಕೆ:—** ಪರಮಾತ್ಮನಲ್ಲಿ ದ್ವೇಷವಿರುವುದರಿಂದಲೇ ನಿಂದಿಸುತ್ತಾರೆಂದು ಏಕೆ ಆಗಬಾರದು ಎಂಬ ಪ್ರಶ್ನೆಗೆ ಉತ್ತರವೇನೆಂದರೆ ಒಳ್ಳೇ ಸ್ವಭಾವದವರೂ ನಿಂದಿಸಬೇಕಾಗಿತ್ತು. ಅವರು ನಿಂದೆಯನ್ನು ಮಾಡುವುದಿಲ್ಲವೆನ್ನುತ್ತಾರೆ.

ಮಹಾತ್ಮಾನಸ್ತು ಮಾಂ ಪಾರ್ಥದೈವೀಂ ಪ್ರಕೃತಿಮಾಶ್ರಿತಾಃ ।
ಭಜಂತ್ಯನನ್ಯ ಮನಸೋ ಜ್ಞಾತ್ವಾಭೂತಾದಿಮವ್ಯಯಮ್ ॥ ೯೩ ॥

ದೈವೀಂ = ಮುಕ್ತಿ ಯೋಗ್ಯ ಉತ್ತಮ ಜೀವ ಸಂಬಂಧಿಯಾದ ಪ್ರಕೃತಿಂ = ಸ್ವಭಾವವನ್ನು ಆಶ್ರಿತಾಃ = ಆಶ್ರಯಿಸಿರುವ ಮಹಾತ್ಮಾ ನಃ = ಶ್ರೇಷ್ಠ ಮನಸುಳ್ಳ ಪುರುಷರು ಭೂತಾದಿಂ = ಭೂತಗಳಿಗೆ ಕಾರಣನಾದ ಅವ್ಯಯಂ = ನಾಲ್ಕು ನಾಶ ರಹಿತನಾದ ಮಾಂ = ನನ್ನನ್ನು ಜ್ಞಾತ್ವಾ = ತಿಳಿದು ಅನನ್ಯಮನಸಃ ಸಂತಃ = ಇತರ ವಿಷಯಗಳಲ್ಲಿ ಮನಸ್ಸಿಲ್ಲದವರಾಗಿ ನನ್ನಲ್ಲಿಯೇ ಮನಸ್ಸುಳ್ಳವರಾಗಿ ಭಜಂತಿ = ಸೇವಿಸುತ್ತಾರೆ. ॥ ೯೩ ॥

ಶ್ರೀ ಹರಿಯ ಸರ್ವೋತ್ತಮತ್ವ ವಿಷಯದಲ್ಲಿ ಪ್ರಮಾಣವನ್ನು ಹೇಳುತ್ತಾರೆ.

ಪಿತಾಸಿ ಲೋಕಸ್ಯ ಚರಾಚರಸ್ಯ ತ್ವಮಸ್ಯ ಪೂಜ್ಯಶ್ಚ ಗುರುರ್ಗರೀಯಾನ್ ।
ನತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯೋ ಲೋಕತ್ರಯೇಽಪ್ಯಪ್ರತಿಮಪ್ರಭಾವ ॥ ೯೪ ॥

ತ್ವಂ = ನೀನು ಚರಾಚರಸ್ಯ = ಸ್ಥಾವರ ಜಂಗಮಾತ್ಮಕವಾದ ಅಸ್ಯ = ಈ ಲೋಕಸ್ಯ = ಜಗತ್ತಿಗೆ ಪಿತಾ = ತಂದೆಯು ಪೂಜ್ಯಶ್ಚ = ಪೂಜಿಸಲು ಯೋಗ್ಯನು ಕೂಡ ಗರೀಯಾನ್ = ಅತ್ಯಂತ ಶ್ರೇಷ್ಠನಾದವನು ಗುರುಃ = ಹಿತವನ್ನು ಉಪದೇಶಿಸುವವನು ಅಸಿ = ಆಗಿದ್ದಿ. ಹೇ ಅಪ್ರತಿಮ ಪ್ರಭಾವ = ಅಸದೃಶವಾದ ಸಾಮರ್ಥ್ಯವುಳ್ಳವನೇ ತ್ವತ್ಸಮಃ = ನಿನಗೆ ಸದೃಶನಾದವನು ಅನ್ಯಃ = ಬೇರೊಬ್ಬನು ಲೋಕತ್ರಯೇಪಿ = ಮೂರು ಲೋಕಗಳಲ್ಲಿಯೂ ಕೂಡ ನಾಸ್ತಿ = ಇರುವುದಿಲ್ಲ. ಅಭ್ಯಧಿಕಃ = ಉತ್ತಮನು ಕುತಃ = ಹೇಗಾದಾನು? ಸದೃಶನು ಇಲ್ಲವೆಂದ ಮೇಲೆ ಉತ್ತಮನು ಇಲ್ಲವೇ ಇಲ್ಲವೆಂದರ್ಥ. ॥ ೯೪ ॥

ಪ್ರಕೃತಿಯಿಂದ ಉತ್ತಮತ್ವದಲ್ಲಿ ಪ್ರಮಾಣವನ್ನು ಹೇಳುತ್ತಾರೆ.

ಪರಂ ಭೂಯಃ ಪ್ರವಕ್ಷ್ಯಾಮಿ ಜ್ಞಾನಾನಾಂ ಜ್ಞಾನ ಮುತ್ತಮ್
ಯಜ್ಜ್ಞಾತ್ವಾ ಮುನಯಃ ಸರ್ವೇ ಪರಾಂಸಿದ್ಧಿಮಿತೋ ಗತಾಃ ॥ ೯೫ ॥

---

ಜ್ಞಾನಾನಾಂ = ಜ್ಞೇಯಗಳ ಮಧ್ಯದಲ್ಲಿ ಪರಂ = ಬೇರೆಯಾದ ಉತ್ತಮಂ = ಶ್ರೇಷ್ಠವಾಡ ಜ್ಞಾನಂ = ಜ್ಞೇಯವನ್ನು ಭೂಯಃ = ಮತ್ತೂ ಪ್ರವಕ್ಷ್ಯಾಮಿ = ಹೇಳುವೆನು. ಸರ್ವೇ = ಎಲ್ಲಾ ಮುನಯಃ = ಮನನಶೀಲರಾದವರು ಯಜ್ಜ್ಞಾತ್ವಾ = ಯಾವಜ್ಞೇಯವನ್ನು ತಿಳಿದು ಇತಃ = ಈ ಸಂಸಾರದ್ದೆಸೆಯಿಂದ ಪರಾಂ = ಉತ್ತಮವಾದ ಸಿದ್ಧಿಂ = ಮೋಕ್ಷವನ್ನು ಗತಾಃ = ಹೊಂದಿರುವರೋ ಅಂತಹಜ್ಞೇಯವನ್ನು ಹೇಳುವೆನು. ॥ ೯೫ ॥

ಜ್ಞೇಯವು ಯಾವುದೆಂಬುದನ್ನು ಹೇಳುತ್ತಾರೆ.

ಮಮ ಯೋನಿರ್ಮಹದ್ಬ್ರಹ್ಮ ತಸ್ಮಿನ್ ಗರ್ಭಂ ದಧಾಮ್ಯಹಂ ।
ಸಂಭವಃ ಸರ್ವಭೂತಾನಾಂ ತತೋ ಭವತಿ ಭಾರತ ॥ ೯೬ ॥

ಹೇ ಭಾರತ = ಭರತಕುಲೋತ್ಪನ್ನದಾದ ಅರ್ಜುನನೇ ಮಹದ್ಬ್ರಹ್ಮ = ಮಹದ್ಬ್ರಹ್ಮ ಪದದಿಂದ ವಾಚ್ಯಳಾದ ಚಿತ್ ಪ್ರಕೃತಿಯಾದ ಮಹಾಲಕ್ಷ್ಮಿಯು ಮಮ = ನನಗೆ ಯೋನಿಃ = ಗರ್ಭಾಧಾನಕ್ಕೆ ಯೋಗ್ಯಳಾದ ಹೆಂಡತಿಯು. ತಸ್ಮಿನ್ = ಆ ಮಹಾಲಕ್ಷ್ಮಿಯಲ್ಲಿ ಗರ್ಭಂ = ತನ್ನ ಉದರದಲ್ಲಿರುವ ಚತುರ್ವಿಂಶತಿತತ್ವಗಳ ಅಂಶೆಗಳಿಂದ ಕೂಡಿದ ಜೀವರನ್ನು ದಧಾಮಿ = ರೇತೋರೂಪದಿಂದ ಹೊರಪಡಿಸಿ ಇಡುತ್ತೇನೆ. ತತಃ = ಚಿತ್ಪ್ರಕೃತಿಯಲ್ಲಿ ಇಡೋಣದರಿಂದ ಭೂತಾನಾಂ = ಪ್ರಾಣಿಗಳಿಗೆ ಸಂಭವಃ = ದೇಹ ಯೋಗರೂಪವಾದ ಜನ್ಮವು ಭವತಿ = ಆಗುತ್ತದೆ. ॥ ೯೬ ॥

ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವಚ ।
ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ ॥ ೯೭ ॥
ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ।
ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ ॥ ೯೮ ॥

ಇಮೌ = ಈ ಪ್ರಮಾಣ ಪ್ರಸಿದ್ಧರಾದ ಪುರುಷೌ = ಚೇತನರು ಲೋಕೇ = ನಿಯಮ್ಯ ವರ್ಗದಲ್ಲಿ ಕ್ಷರಶ್ಚ ಅಕ್ಷರಶ್ಚ = ಕ್ಷರ ಮತ್ತು ಅಕ್ಷರವೆಂಬುದಾಗಿ ದ್ವಾವೇವ = ಇಬ್ಬರೇ ಸರ್ವಾಣಿಭೂತಾನಿ = ಬ್ರಹ್ಮಾದಿ ಎಲ್ಲಾ ಜೀವರೂ ಕ್ಷರಶ್ಚ = ಶರೀರವು ನಾಶವಾಗುವುದರಿಂದ ಕ್ಷರ ಶಬ್ದ ವಾಚ್ಯರು ಕೂಟಸ್ಥಃ = ಆಕಾಶದಂತೆ ನಿರ್ವಿಕಾರಳಾಗಿರುವ ಪುರುಷಃ = ಪುರುಷರಂತೆ ಶಕ್ತಿ ಇರುವುದರಿಂದ ಪುರುಷ ಶಬ್ದದಿಂದ ಹೇಳಲ್ಪಡುವ ಲಕ್ಷ್ಮಿಯು ಅಕ್ಷರಃ = ನಾಶವಿಲ್ಲದ ದೇಹವುಳ್ಳವಳಾದ್ದರಿಂದ ಅಕ್ಷಗಳೆಂದು ಉಚ್ಯತೇ = ಹೇಳಲ್ಪಡುತ್ತಾಳೆ. ॥ ೯೭ ॥

ಯಾವ ಉತ್ತಮ ಪುರುಷನನ್ನು ಹೇಳುವುದಕ್ಕೋಸ್ಕರ ಎರಡು ಪುರುಷರನ್ನು ಹೇಳಿರುವರೋ ಆ ಉತ್ತಮ ಪುರುಷ ಯಾರೆಂದು ಹೇಳುತ್ತಾರೆ.

ಉತ್ತಮಃ ಪುರುಷಸ್ತು = ಉತ್ತತು ಪುರುಷನಾದರೂ ಅನ್ಯಃ = ಕ್ಷರಾಕ್ಷರ ಪುರುಷರಿಂದ ಬೇರೆ ಯಾದವನು. ಕ್ಷರಾಕ್ಷರ ಪುರುಷರ ಮಧ್ಯದಲ್ಲಿ ಒಬ್ಬನಲ್ಲ. ಪರಮಾತ್ಮೇತ್ಯುದಾಹೃತಃ = "ಪರಮಾತ್ಮೇತ್ಯುದಾಹೃತಃ" "ಆತ್ಮಾ ನಾರಾಯಣಃ ಪರಃ" ಇತ್ಯಾದಿ ಶ್ರುತಿಗಳಲ್ಲಿ ಉತ್ತಮ ಪುರುಷನು ಪರಮಚೇತನನೆಂದು ಹೇಳಿಸಿಕೊಳ್ಳಲ್ಪಡುತ್ತಾನೆ.

ಹಿಂದೆ ಹೇಳಿದ ಅರ್ಥದಲ್ಲಿ ಯುಕ್ತಿಯನ್ನು ಹೇಳುತ್ತಾರೆ.

ಯಃ = ಯಾವ ಉತ್ತಮ ಪುರುಷನು ಲೋಕತ್ರಯಂ = ಮೂರು ಲೋಕಗಳನ್ನು ಆವಿಶ್ಯ = ಪ್ರತ್ಯೇಕಿಸಿ ಬಿಭರ್ತಿ = ಧಾರಣ ಪೋಷಣಗಳನ್ನು ಮಾಡುತ್ತಾನೋ ಅವನು ಉತ್ತಮನು. ಯಾವನು ಯಾರ ಧಾರಣಪೋಷಣಗಳನ್ನು ಮಾಡುತ್ತಾನೋ ಅವನು ಅವರಿಂದ ಉತ್ತಮನು ಎಂದು ಪ್ರಸಿದ್ಧವು. ಲೋಕಗಳು ನಾಶವಾಗುವಾಗ ಲೋಕಗಳೊಳಗಿರುವ ಪರವಯತ್ನನಿಗೂ ನಾಶವಿದೆಯೋ ಎಂಬ ಶಂಕೆಗೆ ಉತ್ತರವು. ಅವ್ಯಯಃ = ಲೋಕ ನಾಶವಾದರೂ ಅವನು ನಾಶವಿಲ್ಲದವನು. ಲೋಕ ನಾಶವಾಗುವಾಗ ಅದರೊಳಗಿರುವ ಪರಮಾತ್ಮನಿಗೆ ಏಕೆ ನಾಶವಿಲ್ಲವೆಂಬ ಶಂಕೆಗೆ ಉತ್ತರವು ಈಶ್ವರಃ = ತನಗೆ ನಾಶವಾಗದಂತೆ ಮಾಡಿಕೊಳ್ಳುವ ಐಶ್ವರ್ಯವುಳ್ಳವನು. ॥ ೯೮ ॥

ಆ ಉತ್ತಮ ಪುರುಷನು ನಿನ್ನಿಂದ ಬೇರೆಯಾದವನೋ ಏನು ಎಂಬ ಶಂಕೆಗೆ ನಾನೇ ಎಂದು ಪ್ರಮಾಣಕೊಟ್ಟು ಶ್ರೀಕೃಷ್ಣನು ಹೇಳುತ್ತಾನೆ.

**ಯಸ್ಮಾತ್ ಕ್ಷರಮತೀತೋಽಹಂ ಅಕ್ಷರಾದಪಿ ಚೋತ್ತಮಃ ।**
**ಅತೋಽಸ್ಮಿ ಲೋಕೇ ವೇದೇಚಪ್ರಥಿತಃ ಪುರುಷೋತ್ತಮಃ ॥ ೯೯ ॥**

ಯಸ್ಮಾತ್ = ಯಾವ ಕಾರಣದಿಂದ ಅಹಂ = ನಾನು ಕ್ಷರಂಚೆ = ಕ್ಷರ ಪುರುಷರನ್ನು ಅತೀತಃ = ಅತಿಕ್ರಮಿಸಿರುವೆನೋ ಅಕ್ಷರಾದಪಿ = ಅಕ್ಷರ ಪುರುಷನಿಂದಲೂ ಕೂಡ ಉತ್ತಮಃ = ಶ್ರೇಷ್ಠನಾಗಿರುವೆನೋ ಅತಃ ಆ ಕಾರಣದಿಂದ ಲೋಕೇ = ಪೌರುಷೇಯ ಭಾರತಾದಿ ಗ್ರಂಥದಲ್ಲಿಯೂ ವೇದೇಚ = ಅಪೌರುಷೇಯವಾದ ವೇದದಲ್ಲಿಯೂ ಕೂಡ ಪುರುಷೋತ್ತಮಃ = ಪುರುಷ ಶ್ರೇಷ್ಠನೆಂದು ಪ್ರಥಿತಂ = ಪ್ರಸಿದ್ಧನಾಗಿರುವೆನು. ॥ ೯೯ ॥

ಹಿಂದೆ ಹೇಳಿದ ಅರ್ಥದಲ್ಲಿ ತಾತ್ಪರ್ಯವನ್ನು ತಿಳಿಸುವುದಕ್ಕಾಗಿ ಪುರುಷೋತ್ತಮತ್ವವನ್ನು ತಿಳಿದ ಜ್ಞಾನಿಗೆ ಫಲವನ್ನು ಹೇಳುತ್ತಾರೆ.

**ಯೋಮಾಮೇವಮಸಂಮೂಢೋ ಜಾನಾತಿ ಪುರುಷೋತ್ತಮಮ್ ।**
**ಸಸರ್ವವಿದ್ಭಜತಿಮಾಂ ಸರ್ವಭಾವೇನ ಭಾರತ ॥ ೧೦೦ ॥**

ಯಃ = ಯಾವ ಅಧಿಕಾರಿಯು ಮಾಂ = ನನ್ನನ್ನು ಏವಂ = ಕ್ಷರಾಕ್ಷರ ಪುರುಷರಿಂದ ಉತ್ತಮನಾದ್ದರಿಂದ ವೇದಾದಿಗಳಲ್ಲಿ ಪ್ರಸಿದ್ಧನಾಗಿರುವ ರೀತಿಯಿಂದ ಅಸಂಮೂಢಃ ಸನ್ = ಸುಳ್ಳಾದ ಪುರುಷೋತ್ತಮತ್ವವು ಹೇಳಲ್ಪಡುತ್ತದೆ ಎಂಬ ಭ್ರಾಂತಿರಹಿತನಾಗಿ ಪುರುಷೋತ್ತಮಂ = ಕ್ಷರಾಕ್ಷರಪುರುಷರಿಂದ ಉತ್ತಮನನ್ನಾಗಿ ಜಾನಾತಿ = ತಿಳಿಯುತ್ತಾನೋ ಸಃ ಸರ್ವವಿತ್ = ಇದೇ ಸರ್ವಶಾಸ್ತ್ರಾರ್ಥವಾದ್ದರಿಂದ ಸರ್ವ ಶಾಸ್ತ್ರಾರ್ಥಜ್ಞಾನವುಳ್ಳವನು. ಹೇ ಭಾರತ = ಭರತಕುಲೋತ್ಪನ್ನನಾದ ಅರ್ಜುನನೇ ಸಃ = ಅವನು ಸರ್ವಭಾವೇನ = ಎಲ್ಲಾ ರೀತಿಯಿಂದಲೂ ಮಾಂ = ನನ್ನನ್ನು ಭಜತಿ = ಸೇವಿಸುತ್ತಾನೆ. ॥ ೧೦೦ ॥

ಕೃಷ್ಣನು ಇದನ್ನು ಅಯೋಗ್ಯರಿಗೆ ಹೇಳಬಾರದು ಎನ್ನುತ್ತಾನೆ.

**ಇತಿ ಗುಹ್ಯತಮಂ ಶಾಸ್ತ್ರಮಿದಮುಕ್ತಂ ಮಯಾನಘ ।**
**ಏತದ್ಬುದ್ಧ್ವಾ ಬುದ್ಧಿಮಾನ್ ಸ್ಯಾತ್ ಕೃತಕೃತ್ಯಶ್ಚ ಭಾರತ ॥ ೧೦೧ ॥**

ಹೇ ಅನಘ = ಎಲೋ ಪಾಪರಹಿತನೇ ಇತಿ = ಈ ರೀತಿಯಾಗಿ ಗುಹ್ಯತಮಂ = ಅತ್ಯಂತ ಗೋಪ್ಯವಾದ ಇದಂ-ಶಾಸ್ತ್ರಂ = ಈ ಶಾಸ್ತ್ರವು ಮಯಾ = ನನ್ನಿಂದ ಉಕ್ತಂ = ಹೇಳಲ್ಪಟ್ಟಿತು. ಹೇ ಭಾರತ = ಅರ್ಜುನನೇ ಏತತ್ = ಈ ಹೇಳಿದ್ದನ್ನು ಬುದ್ಧ್ವಾ = ಪರೋಕ್ಷವಾಗಿ ತಿಳಿದುಕೊಂಡು ಬುದ್ಧಿಮಾನ್ = ಅಪರೋಕ್ಷಜ್ಞಾನಿಯು ಸ್ಯಾತ್ = ಆಗುವನು ಕೃತಕೃತ್ಯಶ್ಚ = ಅನಂತರ ಮುಕ್ತನೂ ಕೂಡ ಸ್ಯಾತ್ = ಆಗುವನು.

ಪರಮಾತ್ಮನ ದ್ವೇಷವು ನರಕಕ್ಕೆ ಕಾರಣವು ಎಂಬಲ್ಲಿ ಪ್ರಮಾಣವನ್ನು ಹೇಳುತ್ತಾರೆ.

**ದ್ವೌಭೂತಸರ್ಗೌ ಲೋಕೇಽಸ್ಮಿನ್ ದೈವ ಆಸುರ ಏವಚ ।**
**ದೈವೋ ವಿಸ್ತರಶಃ ಪ್ರೋಕ್ತ ಆಸುರಂ ಪಾರ್ಥಮೇ ಶೃಣು ॥ ೧೦೨ ॥**

ಅಸ್ಮಿನ್ ಲೋಕೆ = ಈ ಲೋಕದಲ್ಲಿ ದೈವಃ = ದೇವತಾ ಸ್ವಭಾವವು ಆಸುರಶ್ಚ = ಆಸುರ ಸ್ವಭಾವವೆಂದು ಭೂತ ಸರ್ಗೌ = ಪ್ರಾಣಿಗಳ ಸ್ವಭಾವಗಳು ದ್ವೌವೇವ = ಎರಡೇ ವಿಧಗಳು. ಹೇ ಪಾರ್ಥ = ಎಲೋ ಅರ್ಜುನನೇ ಮೇ = ನನ್ನ(ದೆಸೆಯಿಂದ) ದೈವಃ = ದೇವತಾ ಸ್ವಭಾವವು ವಿಸ್ತರಶಃ = ವಿಸ್ತಾರವಾಗಿ ಪ್ರೋಕ್ತಃ = ಹೇಳಲ್ಪಟ್ಟಿತು. ಆಸುರಂ = ಆಸುರ ಸ್ವಭಾವವನ್ನು ಮೇ = ನನ್ನ(ದೆಸೆಯಿಂದ) ಶೃಣು = ಕೇಳು. ॥ ೧೦೨ ॥

ಆಸುರ ಮತವನ್ನು ಹೇಳುತ್ತಾರೆ.

**ಅಸತ್ಯಮಪ್ರತಿಷ್ಠಂ ತೇ ಜಗದಾಹುರನೀಶ್ವರಮ್ ।**
**ಅಪರಸ್ಪರಸಂಭೂತಂ ಕಿಮನ್ಯತ್ಕಾಮ ಹೈತುಕಮ್ ॥ ೧೦೩ ॥**

ತೇ = ಆ ಆಸುರರು ಜಗತ್ = ಲೋಕವು ಅಸತ್ಯಂ = ಯಥಾರ್ಥವಲ್ಲ ಸುಳ್ಳು. ಅಪ್ರತಿಷ್ಠಂ = ಪ್ರತಿಷ್ಠೆಯೆಂದರೆ ಬಹುಕಾಲದಲ್ಲಿ ಇರುವಿಕೆ. ಅದಿಲ್ಲದಿರುವುದು. ಅಂದರೆ ಬ್ರಹ್ಮಜ್ಞಾನದಿಂದ ಬಾಧ್ಯವಾದದ್ದು ಬ್ರಹ್ಮಜ್ಞಾನ ಬಂದ ನಂತರ ಕಾಣಿಸದೇ ಇರತಕ್ಕದ್ದು. ಆದ್ದರಿಂದಲೇ ಅನೀಶ್ವರಂ = ಪರಮಾತ್ಮನು ಸ್ವಾಮಿಯಾಗಿ ಉಳ್ಳದ್ದಲ್ಲ. ಅಪರಸ್ಪರಸಂಭೂತಂ = ಮಣ್ಣಿನಿಂದ ಘಟ ಹುಟ್ಟಿದಂತೆ ನೂಲಿನಿಂದ ಪಟ ಹುಟ್ಟಿದಂತೆ ಒಂದರಿಂದ ಒಂದು ಹುಟ್ಟಿದ್ದಲ್ಲ. ಈ ಜಗತ್ತು ಸತ್ಯವಲ್ಲವೆಂದರೆ ಸುಳ್ಳೊ? ಎಂಬ ಪ್ರಶ್ನೆಗೆ ಉತ್ತರ ಅನ್ಯತ್ = ಸತ್ ಅಸತ್ತುಗಳಿಂದ ಬೇರೆಯಾದದ್ದು ಅಂದರೆ ಸದಸದ್ವಿಲಕ್ಷಣವು. ಒಂದರಿಂದ ಒಂದು ಹುಟ್ಟಿದಲ್ಲ-ವೆಂದರೆ ನಿತ್ಯವೋ ತನ್ನಿಂದ ತಾನೇ ಹುಟ್ಟಿದ್ದೋ ಎಂಬ ಪ್ರಶ್ನೆಗೆ ಉತ್ತರ. ಕಾಮ ಹೈತುಕಂ = ಅಜ್ಞಾನ ಕಲ್ಪಿತವಾದದ್ದು.

**ಏತಾಂ ದೃಷ್ಟಿಮವಷ್ಟಭ್ಯ ನಷ್ಟಾತ್ಮಾನೋಽಲ್ಪಬುದ್ಧಯಃ ।**
**ಪ್ರಭವಂತ್ಯುಗ್ರಕರ್ಮಾಣಃ ಕ್ಷಯಾಯ ಜಗತೋಽಹಿತಾಃ ॥ ೧೦೪ ॥**

ಏತಾಂ = ಈ ದೃಷ್ಟಿಂ = ಜ್ಞಾನವನ್ನು ಅವಷ್ಟಭ್ಯ = ಆಶ್ರಯಿಸಿ ನಷ್ಟಾತ್ಮಾನಃ = ದುಷ್ಟವಾದ ಮನಸ್ಸುಳ್ಳವ-ರಾಗಿ ಅಲ್ಪ ಬುದ್ಧಯಃ = ಅಲ್ಪ ವಿಷಯಕ ಬುದ್ಧಿ ಉಳ್ಳವರಾಗಿ ಉಗ್ರಕರ್ಮಾಣಃ = ಕ್ರೂರ ಕೆಲಸದಲ್ಲಿ ಆಸಕ್ತರಾಗಿ ಜಗತಃ = ಲೋಕಕ್ಕೆ ಅಹಿತಾಃ = ಶತ್ರುಗಳು ಕ್ಷಯಾಯ = ಅನಿಷ್ಟ ಪ್ರಾಪ್ತಿಗೋಸ್ಕರ ಪ್ರಭವಂತಿ = ಕಲಿಯುಗದ ಆದಿಯಲ್ಲಿ ಹುಟ್ಟುತ್ತಾರೆ. ॥ ೧೦೪ ॥

**ಈಶ್ವರೋಽಹಮಹಂಭೋಗೀ ಸಿದ್ಧೋಽಹಂ ಬಲವಾನ್ ಸುಖೀ ।**
**ಆಢ್ಯೋಽಭಿಜನವಾನಸ್ಮಿ ಕೋಽನ್ಯೋಽಸ್ತಿ ಸದೃಶೋ ಮಯಾ ॥ ೧೦೫ ॥**

ಅಹಂ = ನಾನು ಈಶ್ವರಃ = ಪರಮೇಶ್ವರನು ಅಹಂ = ನಾನು ಭೋಗೀ = ಐಹಿಕಾಮುಷ್ಮಿಕ ಭೋಗದಿಂದ ಕೂಡಿ-

ದವನು. ಅಹಂ = ನಾನು ಸಿದ್ಧಃ = ಕೃತಕೃತ್ಯನು ಬಲವಾನ್ = ಸಮರ್ಥನು ಸುಖೀ = ಆನಂದವುಳ್ಳವನು. ಆಢ್ಯಃ ಧನಾದಿ= ಸಂಪನ್ನನು. ಅಭಿಜನವಾನ್ = ಒಳ್ಳೇ ಕುಲದಲ್ಲಿ ಹುಟ್ಟಿದವನು ಅಸ್ಮಿ = ಆಗಿದ್ದೇನೆ. ಮಯಾ = ನನ್ನಿಂದ ಸದೃಶಃ = ಸಮಾನನು ಅನ್ಯಃ= ಬೇರೊಬ್ಬನು ಕೋಽಸ್ತಿ = ? ಯಾವನಿದ್ದಾನೆ. ನಕೋಪಿ = ಯಾವನೂ ಇಲ್ಲ. ॥ ೧೦೫ ॥

ಭಗವದ್ದ್ವೇಷಿಗಳಿಗೂ ಮೋಕ್ಷವಾಗುತ್ತದೆಂಬ ಭ್ರಮ ನಿವೃತ್ತಿಗಾಗಿ ದ್ವೇಷಿಗಳ ಸ್ವಭಾವನ್ನೂ ಅವರಿಗಾಗುವ ಫಲವನ್ನೂ ಹೇಳುತ್ತಾರೆ.

**ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್ ॥ ೧೦೬ ॥**
**ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇ ವಯೋನಿಷು ।**
**ಆಸುರೀಂಯೋನಿ ಮಾಪನ್ನಾ ಮೂಢಾ ಜನ್ಮನಿ ಜನ್ಮನಿ ॥**
**ಮಾಮಪ್ರಾಪ್ಯೈವ ಕೌಂತೇಯ ತತೋಯಾಂತ್ಯಧಮಾಂಗತಿಮ್ ॥ ೧೦೭ ॥**

ಆತ್ಮಪರದೇಹೇಷು = ತನ್ನ ಮತ್ತು ಇತರರ ದೇಹದಲ್ಲಿ ನಿಯಾಮಕನಾಗಿರತಕ್ಕ ಮಾಂ = ನನ್ನನ್ನು ಪ್ರದ್ವಿಷಂತಃ = ಈಶ್ವರನು ಮಾಡಿಸುವುದಾದರೆ ಏನನ್ನೂ ಮಾಡಿರತತ್ಕ ನನ್ನಿಂದ ಮಾಡಿಸಲಿ. ಕೆಲಸ ಮಾಡತಕ್ಕ ನನ್ನನ್ನು ಬಿಡಿಸಲಿ ಎಂಬುದಾಗಿ ಭಗವದಪಲಾಪರೂಪ ದ್ವೇಷವನ್ನು ಮಾಡತಕ್ಕ ಅಭ್ಯಸೂಯಕಾಃ = ನಿರ್ದೋಷ ಭಗವಂತನಲ್ಲಿ ದೋಷವನ್ನು ಹೇಳತಕ್ಕ ಗುಣ ಪೂರ್ಣನಲ್ಲಿ ಗುಣವಿಲ್ಲವೆಂದು ಹೇಳತಕ್ಕವರು ಯಾರೋ ಅಂತಹ ದ್ವಿಷತಃ = ದ್ವೇಷಿಸತಕ್ಕ ಕ್ರೂರಾನ್ = ಕ್ರೂರರಾದ ನರಾಧಮಾನ್ = ದುರ್ಜನರಾದ ತಾನ್ = ಆ ಭಗವದ್ದ್ವೇಷಿಗಳನ್ನು ಅಹಂ = ನಾನು ಸಂಸಾರೇಷು = ಸಂಸಾರಗಳಲ್ಲಿ ಕ್ಷಿಪಾಮಿ = ಹಾಕುತ್ತೇನೆ. ತತ್ರಾಪಿ = ಅಲ್ಲಿಯೂ ಆಸುರೀಷ್ವೇವಯೋನಿಷು = ಅಸುರ ಸಂಬಂಧಿ ಯೋನಿಗಳಲ್ಲಿಯೇ ಅಜಸ್ರಂ = ನಿರಂತರದಲ್ಲಿಯೂ (ಪುನಃ ಪುನಃ) ಕ್ಷಿಪಾಮಿ = ಹಾಕುತ್ತೇನೆ. ಹೇ ಕೌಂತೇಯ = ಅರ್ಜುನನೇ ತತಃ = ಅನಂತರ ಮೂಢಾಃ = ತಾಮಸ ಸ್ವಭಾವದವರು ಜನ್ಮನಿ ಜನ್ಮನಿ = ಅನೇಕ ಜನ್ಮಗಳಲ್ಲಿ ಆಸುರೀಂ ಯೋನಿಂ = ಅಸುರರ ಸಂಬಂಧಿಯಾದ ಯೋನಿಯನ್ನು ಆಪನ್ನಾಃ = ಹೊಂದಿದವರಾಗಿ ಮಾಂ = ನನ್ನನ್ನು ಅಪ್ರಪ್ಯೈವ = ಹೊಂದದೇ ಅಧಮಾಂಗತಿಂ = ನಿತ್ಯ ನರಕವನ್ನು ಯಾಂತಿ = ಹೊಂದುತ್ತಾರೆ. ॥

**ವಿಶೇಷಾಂಶ:—** ಆತ್ಮ ದೇಹಗಳಲ್ಲಿ ದ್ವೇಷವೆಂದರೆ ಅಹಂ ಬ್ರಹ್ಮಾಸ್ಮಿ ಎಂಬ ದುರಾಗ್ರಹವು ಪರ ದೇಹಗಳಲ್ಲಿ ದ್ವೇಷವೆಂದರೆ ನೀನು ಬ್ರಹ್ಮನಾಗಿದ್ದೀ ಎಂಬ ಉಪದೇಶವು. ॥ ೧೦೬—೧೦೭ ॥

ಜೀವ ಜಡಗಳಿಗೆ ಪರಸ್ಪರ ಭೇದ ವಿಷಯದಲ್ಲಿಯೂ ಪರಮಾತ್ಮನ ರೂಪಗಳಿಗೆ ಭೇದವಿಲ್ಲವೆಂಬ ವಿಷಯದಲ್ಲಿಯೂ ಪ್ರಮಾಣವನ್ನು ಹೇಳುತ್ತಾರೆ.

**ಸರ್ವಭೂತೇಷು ಯೇನೈಕಂ ಭಾವಮವ್ಯಯಮೀಕ್ಷತೇ ।**
**ಅವಿಭಕ್ತಂ ವಿಭಕ್ತೇಷು ತಜ್ಜ್ಞಾನಂ ವಿದ್ಧಿ ಸಾತ್ವಿಕಮ್ ॥ ೧೦೮ ॥**

ವಿಭಕ್ತೇಷು = ಪರಸ್ಪರ ಭಿನ್ನವಾದ ತಾರತಮ್ಯದಿಂದ ಕೂಡಿರುವ ಸರ್ವಭೂತೇಷು = ಎಲ್ಲಾ ಜೀವ ಜಡಗಳಲ್ಲಿ ಜೀವ ಜಡಗಳಿಗೆ ಆಧಾರನಾಗಿ ಭಿನ್ನನಾಗಿರತಕ್ಕ ಭಾವಂ = ಸದಾ ಇರತಕ್ಕ ಪರಮಾತ್ಮನನ್ನು ಏಕಂ = ಪ್ರಧಾನನನ್ನಾಗಿ ಅಂದರೆ ಸರ್ವೋತ್ತಮನನ್ನಾಗಿ ಅವಿಭಕ್ತಂ = ಎಲ್ಲಾ ಕಡೆ ಇದ್ದರೂ ಕೂಡ ಅಧಿಷ್ಠಾನಗಳಲ್ಲಿ ಭೇದವಿದ್ದರೂ ತನ್ನಿಮಿತ್ತವಾದ ಭೇದವಿಲ್ಲದ ಅವ್ಯಯಂ = ಅಧಿಷ್ಠಾನ ನಾಶವಾದರೂ ನಾಶವಿಲ್ಲದ ಪರಮಾತ್ಮನನ್ನು ಯೇನ = ಯಾವ ಜ್ಞಾನದಿಂದ ಈಕ್ಷತೇ = ವಿಷಯೀಕರಿಸುತ್ತಾನೋ ತಜ್ಜ್ಞಾನಂ = ಆಜ್ಞಾನವನ್ನು ಸಾತ್ವಿಕಂ = ಸಾತ್ವಿಕವನ್ನಾಗಿ ವಿದ್ಧಿ = ತಿಳಿ. ॥ ೧೦೮ ॥

ವಿಷ್ಣುವು ಸರ್ವೋತ್ತಮನಾದ್ದರಿಂದ ಎಲ್ಲಾ ಕರ್ಮಗಳನ್ನೂ ವಿಷ್ಣು ಪ್ರೀತಿಗಾಗಿಯೇ ಮಾಡಬೇಕೆಂಬ ವಿಷಯದಲ್ಲಿ ಗೀತಾ ವಾಕ್ಯವನ್ನು ಹೇಳುತ್ತಾರೆ.

**ಸರ್ವಗುಹ್ಯತಮಂ ಭೂಯಃ ಶೃಣುಮೇಪರಮಂವಚಃ ।**
**ಇಷ್ಟೋಽಸಿ ಮೇ ದೃಢಮಿತಿ ತತೋ ವಕ್ಷ್ಯಾಮಿ ತೇ ಹಿತಮ್ ॥ ೧೦೯ ॥**

ಸರ್ವಗುಹ್ಯತಮಂ = ಎಲ್ಲಾ ಸಾಧನಗಳಲ್ಲಿ ಅತ್ಯಂತ ಗೋಪ್ಯವಾದ = ಮೇಣನ್ನ ಪರಮಂ = ಉತ್ತಮವಾದ ವಚಃ = ಮಾತನ್ನು ಭೂಯಃ = ಮತ್ತೂ ಶೃಣು = ಕೇಳು ದೃಢಂ = ನಿಶ್ಚಯವಾಗಿಯೂ ಮೇ = ನನಗೆ ತ್ವಂ = ನೀನು ಇಷ್ಟಃ = ಪ್ರಿಯನು ಅಸಿ = ಆಗಿದ್ದಿ. ತತಃ = ಆದ್ದರಿಂದ ತೇ = ನಿನಗೆ ಹಿತಂ = ಹಿತವಾದದ್ದನ್ನು ವಕ್ಷ್ಯಾಮಿ = ಹೇಳುವೆನು. ॥ ೧೦೯ ॥

**ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।**
**ಮಾಮೇವೈಷ್ಯಸಿ ಸತ್ಯಂತೇ ಪ್ರತಿಜಾನೇ ಪ್ರಿಯೋಽಸಿ ಮೇ ॥ ೧೧೦ ॥**

ಯತಃ = ಯಾವ ಕಾರಣದಿಂದ ಮೇ = ನನಗೆ ತ್ವಂ = ನೀನು ಪ್ರಿಯಃ = ಇಷ್ಟನು ಅಸಿ = ಆಗಿದ್ದಿಯೋ ಅತಃ = ಆದ್ದರಿಂದ ಮನ್ಮನಾಃ = ನನ್ನಲ್ಲಿಯೇ ಮನಸ್ಸುಳ್ಳವನು ಭವ = ಆಗು ಮದ್ಭಕ್ತೋಭವ = ನನ್ನ ಭಕ್ತನಾಗು ಮದ್ಯಾಜೀಭವ = ನನ್ನನ್ನುದ್ದೇಶಿಸಿ ಯಾಗ ಮಾಡು ಮಾಂ = ನನ್ನನ್ನು ನಮಸ್ಕುರು = ನಮಸ್ಕರಿಸು. ಮಾಮೈವ = ನನ್ನನ್ನೇ ಏಷ್ಯಸಿ = ಹೊಂದುವಿ. ತೇ = ನಿನಗೆ ಸತ್ಯಂ = ಸತ್ಯವನ್ನೇ ಪ್ರತಿಜಾನೇ= ಪ್ರತಿಜ್ಞೆ ಮಾಡುವೆನು. ಅವಶ್ಯವಾಗಿಯೂ ನನ್ನ ಪ್ರಾಪ್ತಿಯಾಗುವುದೆಂದು ಪ್ರತಿಜ್ಞೆ ಮಾಡುವೆನು. ಈ ವಿಷಯದಲ್ಲಿ ಸಂದೇಹ ಮಾಡಬೇಡ. ॥ ೧೧೦ ॥

ಈಗ ವಿಷ್ಣುವಿಗೆ ಉತ್ತಮತ್ವ ವಿಷಯದಲ್ಲಿ ಮೋಕ್ಷ ಧರ್ಮ ವಚನವನ್ನು ಹೇಳುತ್ತಾರೆ.

**ಪಂಚರಾತ್ರಸ್ಯ ಕೃತ್ಸ್ನಸ್ಯ ವಕ್ತಾ ನಾರಾಯಣಃ ಸ್ವಯಮ್ ।**
**ಸರ್ವೇಷ್ವೇತೇಷು ರಾಜೇಂದ್ರ ಜ್ಞಾನೇಷ್ವೇತ ದ್ವಿಶಿಷ್ಯತೇ ॥ ೧೧೧ ॥**

ಜನಮೇಜಯನು ವೈಶಂಪಾಯನರನ್ನು ಕುರಿತು ಪ್ರಶ್ನಿಸುತ್ತಾನೆ. ಸಾಂಖ್ಯ, ಯೋಗ, ಪಾಶುಪತ, ವೇದಾರಣ್ಯಕ ಮೊದಲಾದ ಜ್ಞಾನ ಸಾಧನಗಳಾದ ಶಾಸ್ತ್ರಗಳು ಪರಸ್ಪರ ವಿರುದ್ಧವಾದ ಅರ್ಥಗಳನ್ನು ಪ್ರತಿಪಾದಿಸತಕ್ಕವುಗಳೋ ಅಥವಾ ವಿಷ್ಣು ಸರ್ವೋತ್ತಮತ್ವ ರೂಪವಾದ ಒಂದೇ ವಿಧವಾದ ಅರ್ಥವನ್ನು ಹೇಳತಕ್ಕವುಗಳೋ ಎಂದು ಪ್ರಶ್ನೆ ಮಾಡಿದಾಗ ವೈಶಂಪಾಯನರು ಉತ್ತರವನ್ನು ಹೇಳುತ್ತಾರೆ. ಸಾಂಖ್ಯ, ಯೋಗ, ಪಾಶುಪತ, ವೇದಾರಣ್ಯಕ ಶಾಸ್ತ್ರಗಳು ಪರಸ್ಪರ ವಿರುದ್ಧಾರ್ಥ ಪ್ರತಿಪಾದಕಗಳು ಎಂಬ ವಿಷಯದಲ್ಲಿ ವಿಚಾರ ಮಾಡುವ ಅಂಶವೇ ಇಲ್ಲ. ಅವುಗಳಲ್ಲಿ ವೇದಾರಣ್ಯಕ ಪದದಿಂದ ಪಂಚರಾತ್ರವನ್ನು ಉಪ ಲಕ್ಷಣವಾಗಿ ಇಟ್ಟುಕೊಂಡು ಪಂಚರಾತ್ರಕ್ಕೆ ಉತ್ತಮತ್ವವನ್ನು ಹೇಳುತ್ತಾರೆ. ಹೇ ರಾಜೇಂದ್ರ = ಎಲೋ ಜನಮೇಜಯನೇ ನಾರಾಯಣಃ = ನಾರಾಯಣನು ಸ್ವಯಂ = ತಾನೇ ಕೃತ್ಸ್ನಸ್ಯ = ಎಲ್ಲಾ ಪಂಚರಾತ್ರಸ್ಯ = ಪಂಚರಾತ್ರಾಗಮದ ವಕ್ತಾ = ಕರ್ತೃನು ಏತೇಷು = ಈ ಸರ್ವೇಷು = ಎಲ್ಲಾ ಜ್ಞಾನೇಷು = ಜ್ಞಾನ ಸಾಧನಗಳಾದ್ದರಿಂದ ಜ್ಞಾನ ಪದದಿಂದ ವಾಚ್ಯಗಳಾದ ಸಾಂಖ್ಯ, ಯೋಗ, ಪಾಶುಪತ. ವೇದಾರಣ್ಯಕ, ಪಂಚರಾತ್ರ ಶಾಸ್ತ್ರಗಳಲ್ಲಿ ಏತತ್ = ಈ ಪಂಚರಾತ್ರ ರೂಪವಾದ ಶಾಸ್ತ್ರವು ವಿಶಿಷ್ಯತೇ = ವೇದಾರಣ್ಯಕ ಪಂಚರಾತ್ರಗಳು ಏಕಾರ್ಥ ಪ್ರತಿಪಾದಕಗಳಾದ್ದರಿಂದ ಸಾಂಖ್ಯ, ಯೋಗ, ಪಾಶುಪತಗಳೆಂಬ ಮೂರು ಗ್ರಂಥಗಳ ದೆಸೆಯಿಂದ ಉತ್ತಮವಾದದ್ದು. ॥ ೧೧೧ ॥

ಹಾಗಾದರೆ ಸಂಖ್ಯಾದಿ ಶಾಸ್ತ್ರಗಳು ಸರ್ವಥಾ ಅಪ್ರಮಾಣಗಳೋ ಎಂಬ ಪ್ರಶ್ನೆಗೆ ಉತ್ತರವನ್ನು ಹೇಳುತ್ತಾರೆ.

**ಜ್ಞಾನೇಷ್ವೇತೇಷು ರಾಜೇಂದ್ರ ಸಾಂಖ್ಯ ಪಾಶುಪತಾದಿಷು ।**
**ಯಥಾ ಯೋಗಂ ಯಥಾನ್ಯಾಯಂ ನಿಷ್ಠಾ ನಾರಾಯಣಃ ಪರಃ ॥ ೧೧೨ ॥**

ಹೇ ರಾಜೇಂದ್ರ = ಜನಮೇಜಯನೇ ಸಾಂಖ್ಯ ಪಾಶುಪತಾದಿಷು = ಸಾಂಖ್ಯ, ಪಾಶುಪತ ಮೊದಲಾದ ಏತೇಷು-ಜ್ಞಾನೇಷು = ಈ ಜ್ಞಾನ ಸಾಧನ ಶಾಸ್ತ್ರಗಳಲ್ಲಿ ಯಥಾಯೋಗಂ = ಪಂಚರಾತ್ರದಲ್ಲಿ ಹೇಳಿದ ಉಪಾಯವನ್ನು ಅತಿಕ್ರಮಿಸದೇ ಯಥಾಯೋಗಂ = ಪಂಚರಾತ್ರದಲ್ಲಿ ಹೇಳಿದ ಉಪಾಕ್ರಮಾದಿನ್ಯಾಯಗಳನ್ನು ಅತಿಕ್ರಮಿಸದೇ (ಕ್ವಚಿತ್ = ಕೆಲವು ಕಡೆ) ನಾರಾಯಣಃ = ನಾರಾಯಣನು ಪರಃ = ಸರ್ವೋತ್ತಮನು ಎಂದು ಹೇಳಿರುತ್ತದೆ. ಆ ಅಂಶದಲ್ಲಿ ನಿಷ್ಠಾ = "ನಿಷ್ಠೋತ್ಕರ್ಷೇವ್ಯವಸ್ಥಾಯಾಂ ಎಂಬ ಅನುಶಾಸನದಿಂದ ಉತ್ಕರ್ಷ ರೂಪವಾದ ಪ್ರಾಮಾಣ್ಯವು ಅಸ್ತಿ = ಇದೆ. ಶಾಸ್ತ್ರದಲ್ಲಿ ಹೆಚ್ಚು ಸ್ಥಳಗಳು

ಪ್ರಕೃತಿ ಜ್ಞಾನದಿಂದ ಮೋಕ್ಷವೆಂದೂ ಯೋಗಶಾಸ್ತ್ರದಲ್ಲಿ ಪ್ರಾಣಾಯಾಮಾದಿಗಳಿಂದ ಶ್ವಾಸ ನಿರೋಧ ಮಾಡುವುದರಿಂದ ಮೋಕ್ಷವೆಂದೂ ಪಾಶುಪತ ಶಾಸ್ತ್ರದಲ್ಲಿ ರುದ್ರನ ಜ್ಞಾನದಿಂದ ಮೋಕ್ಷವೆಂದೂ ಹೆಚ್ಚು ಕಡಿಮೆ ಹೇಳಲ್ಪಡುತ್ತದೆ. ಹಿಂದೆ ಹೇಳಿದ ಶಾಸ್ತ್ರಗಳಲ್ಲಿ ಕೆಲವು ಕೆಲವು ಭಾಗದಲ್ಲಿ ಹರಿಭಕ್ತರಿಗೆ ತಮ್ಮ ಗ್ರಂಥದಲ್ಲಿ ಅಭಿರುಚಿ ಹುಟ್ಟುವುದಕ್ಕೋಸ್ಕರ ಭಕ್ತಿಯಿಂದ ಮೋಕ್ಷವೆಂದೂ ಪರಮಾತ್ಮನ ಮಹಿಮೆಗಳು ಹೇಳಲ್ಪಡುತ್ತವೆ. ಆಗ ಪಂಚರಾತ್ರನ್ಯಾಯವನ್ನನುಸರಿಸಿ ಹರಿ ಮಹಿಮೆಯನ್ನು ಹೇಳತಕ್ಕ ಶಾಸ್ತ್ರದ ಭಾಗಕ್ಕೆ ಪ್ರಾಮಾಣ್ಯ ಎಂದು ಅಭಿಪ್ರಾಯವು. ॥ ೧೧೨ ॥

ಪಂಚರಾತ್ರವನ್ನು ತಿಳಿದವರಿಗೆ ಮೋಕ್ಷವನ್ನು ಹೇಳಿದ್ದರಿಂದ ಪಂಚರಾತ್ರಕ್ಕೆ ಉತ್ತಮತ್ವವು ಇದೆ ಎಂದು ಹೇಳುತ್ತಾರೆ.

**ಪಂಚರಾತ್ರವಿದೋ ಮುಖ್ಯಾ ಯಥಾಕ್ರಮಪರಾ ನೃಪ ।**
**ಏಕಾಂತ ಭಾವೋಪಗತಾ ವಾಸುದೇವಂ ವಿಶಂತಿ ತೇ ॥ ೧೧೩ ॥**

ಹೇ ನೃಪ = ಎಲೋ ರಾಜನೇ ಯಥಾಕ್ರಮಪರಾಃ = ದೇವತಾ ತಾರತಮ್ಯದಲ್ಲಿ ಆಸಕ್ತರಾದ ಏಕಾಂತಭಾವೋಪಗತಾಃ = ಒಬ್ಬನೇ ಸರ್ವೋತ್ತಮನು ಎಂಬ ಭಕ್ತಿಯನ್ನು ಹೊಂದಿರುವ ಮುಖ್ಯಾಃ = ಶ್ರೇಷ್ಠರಾದ ಯೇ = ಯಾರು ಪಂಚರಾತ್ರವಿದಃ = ಪಂಚರಾತ್ರಾಗಮವನ್ನು ತಿಳಿದವರೋ ತೇ = ಅವರು ವಾಸುದೇವಂ = ನಾರಾಯಣನನ್ನು ವಿಶಂತಿ = ಪ್ರವೇಶಿಸುತ್ತಾರೆ. ಅಂದರೆ ಮುಕ್ತಿಯನ್ನು ಹೊಂದುತ್ತಾರೆ. ॥ ೧೧೩ ॥

ಭಾರತ ವಾಕ್ಯಗಳನ್ನು ವಿಚಾರ ಮಾಡುವಾಗ ಎಲ್ಲಾ ಭಾರತ ವಾಕ್ಯಗಳಿಗೂ ವಿಷ್ಣು ಸರ್ವೋತ್ತಮತ್ವದಲ್ಲಿ ತಾತ್ಪರ್ಯವಿದೆ ಎಂಬ ಅಭಿಪ್ರಾಯದಿಂದ ವಾಕ್ಯಾಂತರಗಳನ್ನು ಹೇಳುತ್ತಾರೆ.

ಜನಮೇಜಯ ಉವಾಚ.

**ಬಹವಃ ಪುರುಷಾಃ ಬ್ರಹ್ಮನ್ನುತಾಹೋ ಏಕವಿವತು ।**
**ಕೋಹ್ಯತ್ರ ಪುರುಷಶ್ರೇಷ್ಠಸ್ತಂ ಭವಾನ್ವಕ್ತುಮರ್ಹತಿ ॥ ೧೧೪ ॥**

ಹೇ ಬ್ರಹ್ಮನ್ = ಎಲೋ ಬ್ರಹ್ಮ ಜ್ಞಾನಿಗಳಾದ ವೈಶಂಪಾಯನರೇ ಪುರುಷಾಃ = ಜೀವರು ಬಹವಃ = ಬಹು ಮಂದಿಗಳೋ ಉತ = ಅಥವಾ ಏಕವಿವ = ಒಬ್ಬನೇ ಪುರುಷನೋ ಅತ್ರ = ಬಹು ಪುರುಷರು ಎಂಬ ಪಕ್ಷದಲ್ಲಿ ಪುರುಷಶ್ರೇಷ್ಠ ಉತ್ತಮ ಪುರುಷನು ಕಃ = ಯಾವನು? ತಂ = ಆ ಉತ್ತಮ ಪುರುಷನನ್ನು ಭವಾನ್ = ನೀವು ವಕ್ತುಂ = ಹೇಳಲು ಅರ್ಹತಿ = ಯೋಗ್ಯರಾಗಿರುತ್ತೀರಿ. ॥ ೧೧೪ ॥

ಈ ರೀತಿಯಾಗಿ ಜನಮೇಜಯನು ಪ್ರಶ್ನೆ ಮಾಡಿದಾಗ ವೈಶಂಪಾಯನರು ಉತ್ತರವನ್ನು ಹೇಳುತ್ತಾರೆ.

ವೈಶಂಪಾಯನ ಉವಾಚ.

**ನೈತದಿಚ್ಛಂತಿ ಪುರುಷಮೇಕಂ ಕುರುಕುಲೋದ್ವಹ ।**
**ಬಹೂನಾಂ ಪುರುಷಾಣಾಂ ಹಿ ಯಥೈಕಾಯೋನಿರುಚ್ಯತೇ ॥**
**ತಥಾ ತಂ ಪುರುಷಂ ವಿಶ್ವಮಾಖ್ಯಾಸ್ಯಾಮಿ ಗುಣಾಧಿಕಮ್ ॥ ೧೧೫ ॥**

ಹೇ ಕುರುಕುಲೋದ್ವಹ = ಕುರು ಕುಲಕ್ಕೆ ಉದ್ಧಾರಕನಾದ ರಾಜನೇ ಕೆಲವು ಕು ಸಿದ್ಧಾಂತಗಳು ಪುರುಷನು ಒಬ್ಬನೆನ್ನುವರು ಪಂಡಿತಾಸ್ತು = ಪಂಡಿತರಾದರೂ ಏತತ್ = ಈ ಪುರುಷನು ಒಬ್ಬನೆನ್ನುವುದನ್ನು ನೇಚ್ಛಂತಿ = ಮನಸ್ಸಿನಿಂದಲೂ ಮಾತಿನಿಂದಲೂ ಹೇಳುವುದಿಲ್ಲ. ಆದರೆ ಪುರುಷ ಬಹುತ್ವವನ್ನೇ ಇಚ್ಛಿಸುತ್ತಾರೆ. ಹಾಗಾದರೆ ಬಹು ಪುರುಷರಿಗೆ ಸಾಮ್ಯವೋ ಅಥವಾ ಆ ಬಹು ಜನರಲ್ಲಿ ಒಬ್ಬನಿಗೆ ಆಧಿಕ್ಯವಿದೆಯೋ ಎಂಬ ರಾಜನ ಮಾನಸಿಕ ಶಂಕೆಯನ್ನು ವೈಶಂಪಾಯನರು ಪರಿಹರಿಸುತ್ತಾರೆ.

ಯಥಾ = ಹೇಗೆ ಬಹೂನಾಂ ಪುರುಷಾಣಾಂ = ಅನೇಕ ಪುರುಷರಿಗೆ ಏಕಾ = ಒಬ್ಬ ಪುರುಷ ವ್ಯಕ್ತಿಯು ಯೋನಿಃ = ಉತ್ಪತ್ತಿ ಸ್ಥಿತ್ಯಾದಿಗಳಿಗೆ ಕಾರಣನೆಂದು ಉಚ್ಯತೇ = "ಜನ್ಮಾದ್ಯಸ್ಯಯತಃ" ಎಂಬ ಸೂತ್ರದಿಂದಲೂ "ಯತೋವಾ ಇಮಾನಿ ಭೂತಾನಿ ಜಾಯಂತೇ" ಎಂಬ ಶ್ರುತಿಯಿಂದಲೂ ಹೇಳಲ್ಪಡುತ್ತದೋ ತಥಾ = ಹಾಗೆಯೇ ಅಹಮಪಿ = ನಾನೂ ಕೂಡ ವ್ಯಾಸರ

ಶಿಷ್ಯನಾದ್ದರಿಂದ ವಿಶ್ವಂ = "ವಿಶ್‌ಪ್ರವೇಶನೇ" ಎಂಬ ಧಾತುವಿನಿಂದ ಸಕಲ ಜೀವರ ಅಂತಃ ಸಾಕ್ಷಿ ರೂಪನಾಗಿ ಪ್ರವಿಷ್ಟನಾದ ಗುಣಾಧಿಕಂ = ಗುಣಗಳಿಂದ ಶ್ರೇಷ್ಠನಾದ ಉತ್ತಮಂ = ಪುರುಷರಿಂದ ಶ್ರೇಷ್ಠನಾದಪುರುಷಂ = ಪುರುಷ ಶಬ್ದ ವಾಚ್ಯನಾದ ತಂ = ಆ ವಿಷ್ಣುವನ್ನಾಗಿ ಆಖ್ಯಾಸ್ಯಾಮಿ = ಹೇಳುವೆನು. ॥ ೧೧೮ ॥

ಬ್ರಹ್ಮ ರುದ್ರರ ಸಂವಾದದಿಂದಲೂ ಹರಿಗೆ ಉತ್ತಮತ್ವವನ್ನು ಸಾಧಿಸುತ್ತಾರೆ.

**ಅಹ ಬ್ರಹ್ಮೈತಮೇವಾರ್ಥಂ ಮಹಾದೇವಾಯ ಪೃಚ್ಛತೇ ।**
**ತಸ್ಯೈಕಸ್ಯ ಮಮತ್ವಂ ಹಿ ಸಚ್ಚೈಕಃ ಪುರುಷೋ ವಿರಾಟ್ ॥ ೧೧೯ ॥**

ಬ್ರಹ್ಮಾ = ಚತುರ್ಮುಖನು ಪೃಚ್ಛತೇ = ಪ್ರಶ್ನೆ ಮಾಡತಕ್ಕ ಮಹಾದೇವಾಯ = ರುದ್ರನಿಗೋಸ್ಕರ ಏತಮೇವಾರ್ಥಂ = ಇದೇ ಅರ್ಥವನ್ನೇ ಅಹ = ಹೇಳಿರುವನು ತಸ್ಯ ಏಕಸ್ಯ = ಆ ವಿಷ್ಣುವಿಗೊಬ್ಬನಿಗೇ ಮಮತ್ವಂ ಹಿ = ಎಲ್ಲಾ ಜಗತ್ತೂ ನನ್ನ ಅಧೀನದಲ್ಲಿದೆ ಎಂಬುದಾಗಿ ವಶಿತ್ವರೂಪವಾದ ಮಮತೆಯಷ್ಟೆ ಸಚ್ಚೈಕಃ = ಅವನೊಬ್ಬನೇ ಪುರುಷಃ = ಪೂರ್ಣ ಗುಣಗಳುಳ್ಳವನು ವಿರಾಟ್ = ವಿಶೇಷವಾಗಿ ಪ್ರಕಾಶಿಸುವವನು ಅಂದರೆ ಸರ್ವೋತ್ತಮನು. ॥ ೧೧೬ ॥

**ಅಹಂ ಬ್ರಹ್ಮಾ ಚಾದ್ಯ ಈಶಃ ಪ್ರಜಾನಾಂ ತಸ್ಮಾಜ್ಜಾತಸ್ತ್ವಂಚಮತ್ತಃ ಪ್ರಸೂತಃ ।**
**ಮತ್ತೋಜಗತ್‌ಸ್ಥಾವರ ಜಂಗಮಂಚ ಸರ್ವೇ ವೇದಾಃ ಸರಹಸ್ಯಾಶ್ಚ ಪುತ್ರ ॥ ೧೧೭ ॥**

ಪ್ರಜಾನಾಂ = ಪ್ರಜೆಗಳಿಗೆ ಈಶಃ = ಸ್ವಾಮಿಯಾದ ಆದ್ಯಃ = ಎಲ್ಲರಿಗೂ ಮೊದಲನೆಯವನಾದ ಬ್ರಹ್ಮಾ = ಬ್ರಹ್ಮ ಪದವಾಚ್ಯನಾದ ಅಹಂ = ನಾನು ತಸ್ಮಾತ್ = ಆ ಪರಮಾತ್ಮನಿಂದ ಜಾತಃ = ಹುಟ್ಟಿದವನು. ಹೇ ಪುತ್ರ = ಎಲೋ ಮಗನೇ ತ್ವಂ ಚ = ನೀನೂ ಕೂಡ ಮತ್ತಃ = ನನ್ನ ದೆಸೆಯಿಂದ ಸ್ಥಾವರ ಜಂಗಮಂಚ = ವೃಕ್ಷಾದಿಗಳೂ, ಪ್ರಾಣಿಗಳು ಕೂಡ ಹುಟ್ಟಿರುವದು. ಸರಹಸ್ಯಾಃ = ಉಪನಿಷತ್ತುಗಳಿಂದ ಸಹಿತಗಳಾದ ಸರ್ವೇವೇದಾಃ = ಎಲ್ಲಾ ವೇದಗಳೂ ಕೂಡ ವ್ಯಕ್ತವಾಗಿರುತ್ತದೆ. ॥ ೧೧೭ ॥

ಭೀಮನ ವಚನವೂ ವಿಷ್ಣು ಸರ್ವೋತ್ತಮತ್ವದಲ್ಲಿ ಪ್ರಮಾಣವೆನ್ನುತ್ತಾರೆ.

**ತಥೈವ ಭೀಮವಚನಂ ಧರ್ಮಜಂ ಪ್ರತ್ಯುದೀರಿತಮ್ ।**
**ಬ್ರಹ್ಮೇಶಾನಾದಿಭಿರ್ದೇ ವೈಃ ಸಮೇತೈರ್ಯದ್ಗುಣಾಂಶಕಃ ॥ ೧೧೮ ॥**
**ನಾವಸಾಯಯಿತುಂ ಶಕ್ಯೋ ವ್ಯಾಚಕ್ಷಾಣೈಶ್ಚ ಸರ್ವದಾ ॥ ೧೧೯ ॥**

ತಥೈವ = ಹಾಗೆಯೇ ಧರ್ಮಜಂ ಪ್ರತಿ = ಧರ್ಮರಾಯನನ್ನು ಕುರಿತು ಉದೀರಿತಂ = ಹೇಳಲ್ಪಟ್ಟ ಭೀಮವಚನಂ = ಭೀಮನ ಮಾತು ಅಸ್ತಿ = ಇದೆ. ಸರ್ವದಾ = ಯಾವಾಗಲೂ ವ್ಯಾಚಕ್ಷಾಣೈಃ = ವ್ಯಾಖ್ಯಾನವನ್ನು ಮಾಡಿಕೊಂಡಿರುವ ಸಮೇತೈಃ = ಮಿಲಿತರಾದ ಬ್ರಹ್ಮೇಶಾನಾದಿಭಿಃ = ಬ್ರಹ್ಮ ರುದ್ರನು ಇವರೇ ಮೊದಲಾಗಿ ಉಳ್ಳ ದೇವೈಃ = ದೇವತೆಗಳಿಂದ ಯದ್ಗುಣಾಂಶಕಃ = ಯಾವ ಶ್ರೀ ಹರಿಯ ಗುಣಗಳ ಏಕ ದೇಶವೂ ಕೂಡ ಅವಸಾಯಯಿತುಂ = ಇಷ್ಟೇ ಎಂದು ನಿಶ್ಚಯ ಮಾಡಲು ನಶಕ್ಯಃ = ಸಾಧ್ಯವಿಲ್ಲವೋ ಸವಿಷ ಭಗವಾನ್ ಕೃಷ್ಣಃ = ಆ ಈ ಭಗವಂತನು ಕೃಷ್ಣನು ಕೇವಲ ಮಾನುಷ ಶುದ್ಧ ಮನುಷ್ಯ ಸದೃಶನೂ ನೈವ = ಅಲ್ಲವೇ ಅಲ್ಲ. ಮತ್ತೆ ಎಂಥವನು ಎಂದರೆ ಹೇಳುತ್ತಾರೆ. ಯಸ್ಯ = ಯಾವ ಶ್ರೀ ಹರಿಯ ಪ್ರಸಾದಜಃ = ಪ್ರಸನ್ನತೆಯಿಂದ ಹುಟ್ಟಿದವನು ಬ್ರಹ್ಮಾ = ಬ್ರಹ್ಮನೋ ಕ್ರೋಧ ಸಂಭವಃ = ಕೋಪದಿಂದ ಹುಟ್ಟಿದವನು. ರುದ್ರಶ್ಚ = ರುದ್ರನೋ ಅಂತಹನು. ॥ ೧೧೯ ॥

ಬ್ರಹ್ಮ ರುದ್ರಾದಿ ಮುಕ್ತರೆಲ್ಲರಿಗೂ ಹರಿಯು ಆಶ್ರಯನೆನ್ನುವಲ್ಲಿ ಪ್ರಮಾಣವನ್ನು ಹೇಳುತ್ತಾರೆ.

**ವಚನಂ ಚೈವ ಕೃಷ್ಣಸ್ಯ ಜ್ಯೇಷ್ಠಂ ಕುಂತೀಸುತಂಪ್ರತಿ ॥ ೧೨೦ ॥**
**ರುದ್ರಂ ಸಮಾಶ್ರಿತಾ ದೇವಾಃ ರುದ್ರೋ ಬ್ರಹ್ಮಾಣಮಾಶ್ರಿತಃ ।**
**ಬ್ರಹ್ಮಾಮಾಮಾಶ್ರಿತೋ ನಿತ್ಯಂ ನಾಹಂ ಕಂಚಿದುಪಾಶ್ರಿತಃ ॥ ೧೨೧ ॥**

ಜ್ಯೇಷ್ಠಂ = ಜ್ಯೇಷ್ಠನಾದ ಕುಂತೀಸುತಂ ಪ್ರತಿ = ಕುಂತಿಯ ಮಗನಾದ ಧರ್ಮರಾಜನನ್ನು ಕುರಿತು ಕೃಷ್ಣಸ್ಯ = ಶ್ರೀ ಕೃಷ್ಣನ ವಚನಂಚೈವ = ಮಾತು ಕೂಡ ಅಸ್ತಿ = ಇದೆ ದೇವಾಃ = ದೇವತೆಗಳು ರುದ್ರಂ = ರುದ್ರನನ್ನು ಸಮಾಶ್ರಿತಾಃ = ಆಶ್ರಯಿಸಿರುವರು. ರುದ್ರಃ = ರುದ್ರನು ಬ್ರಹ್ಮಾಣಂ = ಚತುರ್ಮುಖನನ್ನು ಆಶ್ರಿತಃ = ಆಶ್ರಯಿಸಿರುವನು. ಬ್ರಹ್ಮಾ = ಬ್ರಹ್ಮನು ನಿತ್ಯಂ = ಯಾವಾಗಲೂ ಮಾಂ = ನನ್ನನ್ನು ಆಶ್ರಿತಃ = ಆಶ್ರಯಿಸಿರುವನು ಅಹಂ = ನಾನು ಕಂಚಿತ್ = ಯಾವ ಪುರುಷನನ್ನೂ ಕೂಡ ನೋಪಾಶ್ರಿತಃ = ಆಶ್ರಯಿಸಿಕೊಂಡಿಲ್ಲ. ॥ ೧೨೧ ॥

ಸಂಸಾರದಲ್ಲಿ ಮಾತ್ರ ಹರಿಯು ಆಶ್ರಯನಲ್ಲ ಮುಕ್ತಿಯಲ್ಲಿಯೂ ಅವನೇ ಆಶ್ರಯನೆನ್ನುತ್ತಾರೆ.

**ಯಥಾಶ್ರಿತಾನಿ ಜ್ಯೋತೀಂಷಿ ಜ್ಯೋತಿಃಶ್ರೇಷ್ಠಂ ದಿವಾಕರಮ್ ।**
**ಏವಂ ಮುಕ್ತಗಣಾಃ ಸರ್ವೇ ವಾಸುದೇವಮುಪಾಶ್ರಿತಾಃ ॥ ೧೨೨ ॥**

ಯಥಾ = ಹೇಗೆ ಜ್ಯೋತೀಂಷಿ = ಪ್ರಕಾಶಕ ವಸ್ತುಗಳು ಜ್ಯೋತಿಃಶ್ರೇಷ್ಠಂ = ಪ್ರಕಾಶಕಗಳಲ್ಲಿ ಶ್ರೇಷ್ಠನಾದ ದಿವಾಕರಂ = ಸೂರ್ಯನನ್ನು ಶ್ರಿತಾನಿ = ಆಶ್ರಯಿಸಿಕೊಂಡಿರುತ್ತವೋ ಏವಂ = ಇದೇ ರೀತಿಯಾಗಿ ಸರ್ವೇ = ಎಲ್ಲಾ ಮುಕ್ತ-ಗಣಾಃ = ಮುಕ್ತರ ಸಮುದಾಯಗಳು ವಾಸುದೇವಂ = ಶ್ರೀಕೃಷ್ಣನನ್ನು ಉಪಾಶ್ರಿತಾಃ = ಆಶ್ರಯಿಸಿಕೊಂಡಿರುವರು. ॥೧೨೨॥

ಭಾರತವು ಸರ್ವ ನಿರ್ಣಾಯಕವು ಎಂಬ ವಿಷಯದಲ್ಲಿ ಭವಿಷ್ಯತ್ ಪರ್ವವಚನವನ್ನೂ ಉದಾಹರಿಸಿದರೂ ಪುನಃ ಆದರಕ್ಕಾಗಿ ಸ್ಥಾನಾಂತರದಲ್ಲಿರುವ ವ್ಯಾಸ ವಾಕ್ಯವನ್ನು ಹೇಳುತ್ತಾರೆ.

**ಭವಿಷ್ಯತ್ ಪರ್ವಗಂಚಾಪಿ ವಚೋವ್ಯಾಸಸ್ಯ ಸಾದರಮ್ ।**
**ವಾಸುದೇವಸ್ಯ ಮಹಿಮಾ ಭಾರತೇ ನಿರ್ಣಯೋದಿತಃ ॥ ೧೨೩ ॥**

ಭವಿಷ್ಯತ್ಪರ್ವಗಂ = ಭವಿಷ್ಯತ್ಪರ್ವದಲ್ಲಿರತಕ್ಕ ವ್ಯಾಸಸ್ಯ = ವ್ಯಾಸರ ವಚೋಪಿ = ಮಾತು ಕೂಡ ಸಾದರಂ = ಪ್ರಾಪ್ತರ್ಯಾದಿಂದ ಕೂಡಿದ್ದು ಹೀಗೋ ಹಾಗೆ ಲಿಪ್ತಿ = ಇದೆ. ಭಾರತೇ = ಭಾರತದಲ್ಲಿ ವಾಸುದೇವಸ್ಯ = ಶ್ರೀಕೃಷ್ಣನ ಮಹಿಮಾ = ಸರ್ವೋತ್ಕೃಷ್ಟತ್ವವು ಮಯಾ = ನನ್ನಿಂದ ನಿರ್ಣಯೋದಿತಃ = ನಿಶ್ಚಯದಿಂದ ಹೇಳಲ್ಪಟ್ಟಿದೆ. ॥ ೧೨೩ ॥

ಭಾರತದಲ್ಲಿ ವಿಷ್ಣುವಿನ ಮಹಿಮೆಯನ್ನೇ ಹೇಳುವುದಾದರೆ ಪಾಂಡವಾದಿಗಳ ಕಥೆಗಳನ್ನು ಹೇಳುವುದೇಕೆ ಎಂಬ ಶಂಕೆ-ಯನ್ನು ಪರಿಹರಿಸುತ್ತಾರೆ.

**ತದರ್ಥಾಸ್ತು ಕಥಾಃ ಸರ್ವಾನಾನ್ಯಾರ್ಥಂ ವೈಷ್ಣವಂ ಯಶಃ ।**
**ತತ್ಪ್ರತೀಪಂ ತು ಯದ್ದೃಶ್ಯೇನ್ನ ತನ್ಮಮ ಮನೀಷಿತಮ್ ॥ ೧೨೪ ॥**

ಸರ್ವಾಃ = ಎಲ್ಲಾ ಕಥಾಃ = ರಾಜಸೂಯ, ವನವಾಸ, ಯುದ್ಧಾದಿಗಳನ್ನು ವರ್ಣಿಸುವ ಕಥೆಗಳು ತದರ್ಥಾಃ = ವಾಸುದೇವನ ಮಹಿಮೆಕ್ಕೋಸ್ಕರ ಕಥಿತಾಃ = ಹೇಳಲ್ಪಟ್ಟಿವೆ. ವಿಷ್ಣುವಿನಲ್ಲಿ ಭಕ್ತಿ ಉಳ್ಳವರಾದ್ದರಿಂದ ಪಾಂಡವರು ರಾಜಸೂಯವನ್ನು ಮಾಡಿದರು. ವನವಾಸದಲ್ಲಿಯೂ ಯುದ್ಧದಲ್ಲಿಯೂ ಕೃಷ್ಣಾನುಗ್ರಹದಿಂದ ಎಲ್ಲಾ ಶತ್ರುಗಳನ್ನು ಗೆದ್ದರು. ಧರ್ಮದಿಂದ ರಾಜ್ಯವನ್ನು ಪರಿಪಾಲಿಸಿದರು ಎಂಬ ಕಥೆಗಳನ್ನು ಹೇಳುವಾಗ ವಿಷ್ಣುವಿನ ಮಹಿಮೆಯು ನಿರ್ಣಯಿಸಲ್ಪಡುವುದು. ವೈಷ್ಣವಂ = ವಿಷ್ಣು ಸಂಬಂಧಿಯಾದ ಯಶಃ = ಕೀರ್ತಿಯು ಅಂದರೆ ವಿಷ್ಣು ಮಹಿಮೆಯನ್ನು ಹೇಳುವುದು. ಅನ್ಯಾರ್ಥಂ ನ = ಇನ್ನೊಬ್ಬರ ಸಲುವಾಗಿ ಉತ್ಕರ್ಷಕ್ಕಾಗಿ ಅಲ್ಲ. ತತ್ಪ್ರತೀಪಂ = ವಿಷ್ಣುವಿನ ಮಹಿಮೆಗೆ ವಿರುದ್ಧವಾದ ಯತ್ = ಯಾವ ವಚನವು ದೃಶ್ಯೇತ್ = ಕೆಲವು ಕಡೆ ಕಾಣುವುದೋ ತತ್ = ಅದು ಮಮ = ನನಗೆ ಮನೀಷಿತಂ = ಸಂಮತವಾದದ್ದು. ನ = ಅಲ್ಲ ನಾನು ಮನಃಪೂರ್ವಕವಾಗಿ ಹೇಳಿದ್ದಲ್ಲ. ಮತ್ತೆ ಹೇಗೆ ಹೇಳಿದ್ದೆಂದರೆ — ಬೇರೆ ಶಾಸ್ತ್ರವನ್ನು ಅವಲಂಬಿಸಿರುವವರು ಹೀಗೆ ಹೇಳುತಾರೆ ಎಂದು ದರ್ಶನ ಭಾಷೆಯಿಂದ ಪರಮತಾನುವಾದವನ್ನು ಮಾಡಿರುತ್ತೇನೆ. ಅದು ನನ್ನ ಮತವಲ್ಲವೆಂದು ವ್ಯಾಸರು ತನ್ನ ಅಭಿಪ್ರಾಯವನ್ನು ತಾವೇ ತೋರಿಸಿರುವರು. ॥ ೧೨೪ ॥

ದರ್ಶನ ಬಾಷೆಯಿಂದ ಹೇಳಿದ್ದು ಎಂಬುದನ್ನು ಭಾಷೆಗಳ ಲಕ್ಷಣಗಳನ್ನು ಹೇಳಿ ವಿವರಿಸುತ್ತಾರೆ.

**ಭಾಷಾಸ್ತು ತ್ರಿವಿಧಾಸ್ತತ್ರ ಮಯಾವೈಸಂಪ್ರದರ್ಶಿತಾಃ ।**
**ಉಕ್ತೋಯೋಮಹಿಮಾ ವಿಷ್ಣೋಃಸತೂಕ್ತೋಹಿಸಮಾಧಿನಾ ॥ ೧೨೫ ॥**

ತತ್ರ = ಆ ಭಾರತದಲ್ಲಿ ಮಯಾ = ನನ್ನಿಂದ ತ್ರಿವಿಧಾಃ = ಸಮಾಧಿ, ಗುಹ್ಯ, ದರ್ಶನ, ವೆಂದು ಮೂರು ವಿಧಗಳಾದ ಭಾಷಾಃ = ಭಾಷೆಗಳು ಸಂಪ್ರದರ್ಶಿತಾಃ = ತೋರಿಸಲ್ಪಟ್ಟಿವೆ. ವೈ = ಪ್ರಸಿದ್ಧವು. ಯಃ = ಯಾವ ವಿಷ್ಣೋಃ = ಪರಮಾತ್ಮನ ಮಹಿಮಾ = ಮಾಹಾತ್ಮ್ಯಯು ಉಕ್ತಃ = ಸ್ಪಷ್ಟವಾಗಿ ಹೇಳಲ್ಪಟ್ಟಿದೆಯೋ ಸತು = ಆ ಮಹಿಮೆಯಾದರೂ ಸಮಾಧಿನಾ = ಸಮಾಹಿತವಾದ ಮನಸ್ಸಿನಿಂದ ಚಿತ್ತಾಗ್ರತೆಯಿಂದ ಸಮಾಧಿ ಭಾಷೆಯಿಂದ ಉಕ್ತಃ = "ನಾಸ್ತಿ ನಾರಾಯಣ ಸಮಂ" "ರುದ್ರಂಸಮಾಶ್ರಿತಾದೇವಾಃ" "ಸತ್ಯಂಸತ್ಯಂಪುನಃಸತ್ಯಂ" ಇತ್ಯಾದಿ ಸ್ಥಳಗಳಲ್ಲಿ ಹೇಳಲ್ಪಟ್ಟಿದೆ. ॥ ೧೨೫ ॥
ವಿಷ್ಣುವಿನ ಮಹಿಮೆಯನ್ನು ಪ್ರತಿಪಾದಿಸತಕ್ಕದ್ದು ಸಮಾಧಿ ಭಾಷೆಯು.

**ಶೈವದರ್ಶನಮಾಲಂಬ್ಯ ಕ್ವಚಿಚ್ಛೈವೀ ಕಥೋದಿತಾ ।**
**ಸಮಾಧಿಭಾಷಯೋಕ್ತಂ ಯತ್ತತ್ಸರ್ವಂ ಗ್ರಾಹ್ಯಮೇವಹಿ ॥ ೧೩೬ ॥**

ದರ್ಶನ ಭಾಷೆಯಿಂದ ಹೇಳಲ್ಪಟ್ಟದ್ದನ್ನು ಹೇಳುತ್ತಾರೆ. ಶೈವದರ್ಶನಂ = ಶಿವನಿಗೆ ಸರ್ವೋತ್ತಮತ್ವವನ್ನು ಪ್ರತಿಪಾದಿಸತಕ್ಕ ಶಾಸ್ತ್ರವನ್ನು ಆಲಂಬ್ಯ = ಆಶ್ರಯಿಸಿ ಕ್ವಚಿತ್ = ಕೆಲವು ಕಡೆ ಶೈವೀ = ಶಿವನಿಗೆ ಉತ್ತಮತ್ವವನ್ನು ಹೇಳತಕ್ಕ ಶಿವ ಸಂಬಂಧಿಯಾದ ಕಥಾ = ಕಥೆಯು ಉದಿತಾ = ದರ್ಶನ ಭಾಷೆಯಿಂದು ಹೇಳಲ್ಪಟ್ಟಿದೆ. ಸಮಾಧಿ ಭಾಷಯಾ = ಸಮಾಧಿ ಭಾಷೆಯಿಂದ ಯದುಕ್ತಂ = ಯಾವುದು ಹೇಳಲ್ಪಟ್ಟಿದೋ ತತ್ಸರ್ವಂ = ಅದೆಲ್ಲವೂ ಗ್ರಾಹ್ಯಮೇವ = ಸ್ವೀಕರಿಸಲು ಯೋಗ್ಯವೇ ಹಿ = ಪ್ರಸಿದ್ಧ. ॥ ೧೩೬ ॥

**ಅವತಾರಿಕೆ:**—ದರ್ಶನ ಭಾಷೆಯಿಂದ ಹೇಳಿದ್ದರಲ್ಲಿ ಕೆಲವು ಗ್ರಾಹ್ಯವಾದದ್ದು ಕೆಲವು ಅಗ್ರಾಹ್ಯವಾದದ್ದು ಇದೆ ಎಂದು ಹೇಳುತ್ತಾರೆ. ಸಮಾಧೇಃ = ಸಮಾಧಿ ಭಾಷೆಯಿಂದ ಹೇಳಿದ ಪ್ರಮೇಯಕ್ಕೆ ಅವಿರುದ್ಧವಾಗಿರುವ ದರ್ಶನೋಕ್ತಂ = ದರ್ಶನ ಭಾಷೆಯಲ್ಲಿ ಹೇಳಿದ ಪ್ರಮೇಯವು ಗೃಹ್ಯತೇ = ಸ್ವೀಕರಿಸಲ್ಪಡುತ್ತದೆ.

---

**ಅವಿರುದ್ಧಂ ಸಮಾಧೇಸ್ತು ದರ್ಶನೋಕ್ತಂ ಚ ಗೃಹ್ಯತೇ ।**
**ಆದ್ಯಂತಯೋರ್ವಿರುದ್ಧಂ ಯದ್ದರ್ಶನಂ ತದುದಾಹೃತಮ್ ॥ ೧೩೭ ॥**
**ದರ್ಶನಾಂತರಸಿದ್ಧಂಚ ಗುಹ್ಯಭಾಷಾನ್ಯಥಾ ಭವೇತ್ ।**
**ತಸ್ಮಾದ್ವಿಷ್ಣೋರ್ಹಿ ಮಹಿಮಾ ಭಾರತೋಕ್ತೋಯಥಾರ್ಥತಃ ॥ ೧೩೮ ॥**

ಆದ್ಯಂತಯೋಃ = ಮೊದಲು ಹೇಳಿದ ಕೃಷ್ಣನ ಮಹಿಮೆಯಾ ಕೊನೆಯಲ್ಲಿ ಹೇಳ ತಕ್ಕ ಕೃಷ್ಣನ ಸರ್ವೋತ್ತಮತ್ವಕ್ಕೂ ವಿರುದ್ಧಂ = ವಿರುದ್ಧವಾದ ದರ್ಶನಾಂತರ ಸಿದ್ಧಂ ಚ = ವೈಷ್ಣವ ದರ್ಶನಕ್ಕೆ ವಿರುದ್ಧವಾದ ಪಾಶುಪತ ಮೊದಲಾದ ದರ್ಶನಾಂತರಗಳಿಂದ ಸಿದ್ಧವಾದ ಯತ್ = ಯಾವ ಕೃಷ್ಣನು ಶಿವಪೂಜೆಯನ್ನು ಮಾಡಿದನು ಎಂಬ ಪ್ರಮೇಯವು ಮಧ್ಯದಲ್ಲಿ ಕೆಲವು ಕಡೆ ಅಜ್ಞಾನರ ಮೋಹಕ್ಕೋಸ್ಕರ ಹೇಳಲ್ಪಡುತ್ತದೋ ತತ್ ದರ್ಶನಂ ಉದಾಹೃತಂ = ಅದು ದರ್ಶನ ಭಾಷೆಯಿಂದ ಹೇಳಲ್ಪಟ್ಟದ್ದು. ಗುಹ್ಯ ಭಾಷೆಯ ಲಕ್ಷಣವನ್ನು ಹೇಳುತ್ತಾರೆ. ಅನ್ಯಥಾ = ದರ್ಶನ ಭಾಷೆಯಲ್ಲಿ ಹೇಳಿದ ರೀತಿಯಿಂದಲೂ ಸ್ಪಷ್ಟಾರ್ಥಕವಾದ ಸಮಾಧಿ ಭಾಷೆಯಲ್ಲಿ ಹೇಳಿದ ರೀತಿಯಿಂದಲೂ ಬೇರೆ ರೀತಿಯಿಂದ ಯತ್ ಭವೇತ್ = ಯಾವುದು ಹೇಳಲ್ಪಡುವುದೋ ಸಾಗುಹ್ಯ ಭಾಷಾ = ಅದು ಗುಹ್ಯ ಭಾಷೆಯು ತಸ್ಮಾತ್ = ಆದ್ದರಿಂದ ವಿಷ್ಣೋಃ = ವಿಷ್ಣುವಿನ ಮಹಿಮಾ = ಗುಣೋತ್ಕರ್ಷವು ಭಾರತೋಕ್ತಃ = ಭಾರತದಲ್ಲಿ ಹೇಳಲ್ಪಡುದ್ದು ಇತಿಯತ್ = ಎಂದು ಯಾವುದೋ ತತ್ = ಅದುಯಥಾರ್ಥತಃ = ಸತ್ಯವೇ ॥ ೧೩೮ ॥

**ಅವತಾರಿಕೆ:**— ವಾಯ್ವಾದಿಗಳು ವಿಷ್ಣುವಿಗೆ ಅಂಗಭೂತರು ಎಂಬ ಭವಿಷ್ಯತ್ಪುರಾಣವಚನವನ್ನು ಹೇಳುತ್ತಾರೆ.

**ತಸ್ಯಾಂಗಂ ಪ್ರಥಮೋವಾಯುಃ ಪ್ರಾದುರ್ಭಾವತ್ರಯೋನ್ವಿತಃ ।**
**ಪ್ರಥಮೋ ಹನುಮನ್ನಾಮ ದ್ವಿತೀಯೋ ಭೀಮ ಏವಚ ॥**

ಪೂರ್ಣಪ್ರಜ್ಞಸ್ತೃತೀಯೆಸ್ತು ಭಗವತ್ಕಾರ್ಯಸಾಧಕಃ ॥ ೧೨೯ ॥
ತ್ರೇತಾದ್ಯೇಷು ಯುಗೇಷ್ವೇವ ಸಂಭೂತಃ ಕೇಶವಾಜ್ಞಯಾ ॥
ಏಕೈಕಶಸ್ತ್ರಿಷು ಪೃಥಕ್ ದ್ವೀತೀಯೆಾಂಗಂ ಸರಸ್ವತೀ ॥ ೧೩೦ ॥

ತಸ್ಯ = ಶ್ರೀ ಹರಿಗೆ ಪ್ರಾದುರ್ಭಾವತ್ರಯಾನ್ವಿತಃ = ಮೂರು ಅವತಾರಗಳಿಂದ ಕೂಡಿತ ವಾಯುಃ = ವಾಯು ದೇವರು ಪ್ರಥಮಃ = ಮೊದಲನೆಯ ಅಂಗಂ = ಸಹಾಯಕರು. ವಾಯು ದೇವರ ಮೂರು ಅವತಾರಗಳನ್ನು ಹೇಳುತ್ತಾರೆ. ಪ್ರಥಮಃ = ಮೊದಲನೆಯ ಅವತಾರವು ಹನುಮನ್ನಾಮ = ಹನುಮಂತನೆಂದು ಪ್ರಸಿದ್ಧವಾದದ್ದು. ದ್ವಿತೀಯಃ = ಎರಡನೆಯ ಅವತಾರವು ಭೀಮಏವಚ = ಭೀಮನೆಂದು ಪ್ರಸಿದ್ಧವಾದದ್ದು ತೃತೀಯಸ್ತು = ಮೂರನೆಯ ಅವತಾರವಾದರೂ ಪೂರ್ಣಪ್ರಜ್ಞಃ = ಪೂರ್ಣಪ್ರಜ್ಞರೆಂದು ಪ್ರಸಿದ್ಧವಾದದ್ದು. ಭಗವತ್ಕಾರ್ಯಸಾಧಕಃ = ಶ್ರೀಹರಿಯ ಕೆಲಸವನ್ನು ಸಾಧಿಸಿಕೊಡತಕ್ಕ ವಾಯುದೇವರು ತ್ರಿಷುರೂಪೇಷು = ಮೂರು ರೂಪಗಳಲ್ಲಿ ಏಕೈಕಶಃ ಒಂದೊಂದು ರೂಪವನ್ನು ಕುರಿತು ಪೃಥಕ್ = ಪ್ರತ್ಯೇಕ ಪ್ರತ್ಯೇಕವಾಗಿ ಕೇಶವಾಜ್ಞಯಾ ಏವ = ಭಗವಂತನ ಅಪ್ಪಣೆಯಿಂದಲೇ ತ್ರೇತಾದ್ಯೇಷುಯುಗೇಷು = ತ್ರೇತ, ದ್ವಾಪರ, ಕಲಿಯುಗಗಳಲ್ಲಿ ಸಂಭೂತಃ = ಅವತರಿಸಿದರು. ಸರಸ್ವತೀ = ಸರಸ್ವತಿಯು (ಭಾರತೀಯು) ದ್ವಿತೀಯಾಂಗಂ = ಎರಡನೆಯ ಅಂಗ ಭೂತಳು.

**ಅವತಾರಿಕೆ:—** ಭಾರತದಲ್ಲಿ ಕೆಲವು ಕಡೆ ದ್ರೌಪದಿಯನ್ನು ಶ್ರೀ ಎಂಬುದಾಗಿ ಹೇಳುತ್ತಾರೆ. ಆದ್ದರಿಂದ ಶ್ರೀ ಶಬ್ದದ ಅರ್ಥವನ್ನು ಹೇಳುತ್ತಾರೆ.

ಶಂರೂಪೇತು ರತೇರ್ವಾಯೌ ಶ್ರೀರಿತ್ಯೇವಚ ಕೀರ್ತ್ಯತೇ ।
ಸೈವಚ ದ್ರೌಪದೀನಾಮ ಕಾಲೀಚಂದ್ರೇತಿಚೋಚ್ಯತೇ ॥ ೧೩೧ ॥

ಶಂರೂಪೇ = ಸುಖಸ್ವರೂಪನಾದ ವಾಯೌ = ಪ್ರಾಣನಲ್ಲಿ ರತೇಃ = ಕ್ರೀಡಿಸಿಕೊಂಡಿರುವುದರಿಂದ ಸೈವ = ಆ ಭಾರತಿಯೇ ಶ್ರೀರಿತ್ಯೇವ = ಶ್ರೀಃ ಎಂದು ಕೀರ್ತ್ಯತೇ = ಹೇಳಿಸಿ ಕೊಳ್ಳಲ್ಪಡುತ್ತಾಳೆ. ಸೈವ = ಆ ಭಾರತಿಯೇ ದ್ರೌಪದೀನಾಮ = ದ್ರೌಪದೀ ಎಂದೂ ಕಾಲೀ = ಕಾಲೀ ಎಂದೂ ಚಂದ್ರೇತಿ = ಚಂದ್ರಾ ಎಂದೂ ಕೀರ್ತ್ಯತೇ = ಹೇಳಿಸಿ ಕೊಳ್ಳಲ್ಪಡುತ್ತಾಳೆ. ॥ ೧೩೧ ॥

ತೃತೀಯೆಾಂಗಂ ಹರೇಃ ಶೇಷಃ ಪ್ರಾದುರ್ಭಾವ ಸಮನ್ವಿತಃ ।
ಪ್ರಾದುರ್ಭಾವಾ ನರಶ್ಚೈವ ಲಕ್ಷ್ಮಣೋ ಬಲವಿವಚ ॥ ೧೩೨ ॥

ರುದ್ರಾತ್ಮಕತ್ವಾಚ್ಛೇಷಸ್ಯ ಶುಕೆೋದ್ರೌಣಿಶ್ಚ ತತ್ತ್ವಮಾ ।
ಇಂದ್ರೇ ನರಾಂಶಸಂಪತ್ಯಾ ಪಾರ್ಥೆೋಪೀಷತ್ತದಾತ್ಮಕಃ ॥ ೧೩೩ ॥

ಪ್ರಾದುರ್ಭಾವ ಸಮನ್ವಿತಃ = ಅವತಾರ ರೂಪಗಳಿಂದ ಕೂಡಿದ ಶೇಷಃ = ಅನಂತನು ಹರೇಃ = ಪರಮಾತ್ಮನಿಗೆ ತೃತೀಯಾಂಗ = ಮೂರನೆಯ ಅಂಗ ಭೂತನು ನರಶ್ಚೈವ = ನರನೂ ಲಕ್ಷ್ಮಣಃ ಲಕ್ಷ್ಮಣನೂ ಬಲವಿವಚ = ಬಲರಾಮನೂ ಕೂಡ ಶೇಷಸ್ಯ = ಶೇಷನ ಪ್ರಾದುರ್ಭಾವಾಃ = ಅವತಾರ ರೂಪಗಳು ಶೇಷಸ್ಯ = ಶೇಷನಿಗೆ ರುದ್ರಾತ್ಮಕತ್ವಾತ್ = ಹಿಂದಿನ ಕಲ್ಪದಲ್ಲಿ ರುದ್ರನ ಸ್ವರೂಪತ್ವವಿದ್ದದರಿಂದ ಶುಕಃ = ಶುಕಾಚಾರ್ಯರು ದ್ರೌಣಿಶ್ಚ = ದ್ರೋಣಾಚಾರ್ಯರ ಮಗನಾದ ಅಶ್ವತ್ಥಾಮನೂ ಕೂಡ ತತ್ತ್ವಮಾ = ಶೇಷನ ಅವತಾರ ಭೂತರು ಇಂದ್ರೇ = ಇಂದ್ರನಲ್ಲಿ ನರಾಂಶಸಂಪತ್ಯಾ = ನರನ ಅಂಶ ವಿರುವಿದರಿಂದ ಪಾರ್ಥೋಪಿ = ಇಂದ್ರಾವತಾರನಾದ ಅರ್ಜುನನೂ ಕೂಡ ಈಷತ್ = ಸ್ವಲ್ಪ ತದಾತ್ಮಕಃ = ಶೇಷನ ಸ್ವರೂಪನು ಆದ್ದರಿಂದ ಮೂರನೇ ಅಂಗಭೂತನು ॥ ೧೩೨ ॥

ಪ್ರದ್ಯುಮ್ನಾದ್ಯಾಸ್ತತೋ ವಿಷ್ಣೋರಂಗಭೂತಾಃ ಕ್ರಮೇಣತು ।
ಚರಿತಂ ವೈಷ್ಣವಾನಾಂತು ವಿಷ್ಣೂದ್ರೇಕಾಯೆ ಕಥ್ಯತೇ ॥ ೧೩೪ ॥

ತತಃ = ಅನಂತರ ಪ್ರದ್ಯುಮ್ನಾದ್ಯಾಃ = ಪ್ರದ್ಯುಮ್ನ, ಅನಿರುದ್ಧ ಮೊದಲಾದವರು ಕ್ರಮೇಣ = ಕ್ರಮದಿಂದ ವಿಷ್ಣೋಃ = ಶ್ರೀಹರಿಗೆ ಅಂಗಭೂತಾಃ = ಸಹಾಯಕರು. ಹಾಗಾದರೆ ಭಾರತದಲ್ಲಿ ಕೃಷ್ಣನ ಕಥೆಯನ್ನೇ ಹೇಳಬೇಕಿತ್ತು. ಪಾಂಡವರ ಕಥೆಯನ್ನು ಹೇಳುವುದೇತಕ್ಕೆಂದರೆ ಹೇಳುತ್ತಾರೆ. ವೈಷ್ಣವಾನಾಂ = ವಿಷ್ಣುಭಕ್ತರ ಚರಿತಂತು = ಚರಿತ್ರೆಯಾದರೂ ವಿಷ್ಣೋರ್ದ್ರೇಕಾಯ = ವಿಷ್ಣುವಿನ ಉತ್ಕರ್ಷಕ್ಕೋಸ್ಕರವೇ ಕಥ್ಯತೇ = ಹೇಳಲ್ಪಡುತ್ತದೆ. ವಿಷ್ಣು ಭಕ್ತರಿಗೆ ಇಷ್ಟು ಮಹಿಮೆ ಇರುವಾಗ ವಿಷ್ಣುವಿನ ಮಹಿಮೆಯು ಅತಿಶಯವಾಗಿದೆಯೆಂದು ಸಿದ್ಧವಾಗುತ್ತದೆ. ॥ ೧೩೩ ॥

ಪರಮಾತ್ಮನಿಗೆ ದುಃಖಾದಿಗಳಿಲ್ಲವೆಂಬುದನ್ನು ಭಾಗವತ ವಾಕ್ಯದಿಂದ ಹೇಳುತ್ತಾರೆ.

**ತಥಾ ಭಾಗವತೇಽಪ್ಯುಕ್ತಂ ಹನೂಮದ್ವಚನಂ ಪರಮ್ ।**
**ಮರ್ತ್ಯಾವತಾರಸ್ತ್ವಿಹಮರ್ತ್ಯಶಿಕ್ಷಣಂ ರಕ್ಷೋವಧಾಯೈವ ನ ಕೇವಲಂ ವಿಭೋಃ ॥**
**ಕುತೋಽಸ್ಯಹಿ ಸ್ಯಾರಮತಃ ಸ್ವಆತ್ಮನ್ ಸೀತಾಕೃತಾನಿ ವ್ಯಸನಾನೀಶ್ವರಸ್ಯ ॥ ೧೩೪ ॥**

ತಥಾ = ಹಾಗೆಯೇ ಭಾಗವತೇ = ಭಾಗವತದಲ್ಲಿಯೂ ಕೂಡ ಉಕ್ತಂ = ಹೇಳಲ್ಪಟ್ಟ ಪರಂ = ಉತ್ತಮವಾದ ಹನೂಮದ್ವಚನಂ = ಹನುಮಂತನ ಮಾತು ಇದೆ, ಕಿಂಪುರುಷಖಂಡದಲ್ಲಿ ಹನುಮಂತನು ಋಷಿಗಳಿಗೆ ಉಪದೇಶ ಮಾಡಿದ ಅದೇ ಮಾತನ್ನು ಹೇಳುತ್ತಾರೆ. ಇಹ = ಈ ಲೋಕವಲ್ಲಿ ವಿಭೋಃ = ಸಮರ್ಥನಾದ ಅಸ್ಯ = ಈ ರಾಮನಿಗೆ ಮರ್ತ್ಯಾವತಾರಃ = ಮನುಷ್ಯರಲ್ಲಿ ಅವತಾರವು ಕೇವಲಂರಕ್ಷೋವಧಾಯೈವ = ರಾಕ್ಷಸರಾದ ರಾವಣಾದಿಗಳ ಸಂಹಾರ ಮಾತ್ರಕ್ಕಾಗಿಯೇ ನ = ಅಲ್ಲ ಕಿಂತು = ಆದರೆ ಮರ್ತ್ಯ ಶಿಕ್ಷಣಂ = ಮನುಷ್ಯರನ್ನು ಶಿಕ್ಷಿಸುವ ಉದ್ದೇಶದಿಂದಲೂ ಕೃತಃ = ಅವತಾರವು ಮಾಡಲ್ಪಟ್ಟಿದೆ. ಸ್ತ್ರೀ ಮೊದಲಾದ ವಿಷಯಗಳಲ್ಲಿ ಆಸಕ್ತನಾದವನಿಗೆ ಆದರವಿಯೋಗದಿಂದ ದುಃಖವು ಉಂಟಾಗುವುದು. ಆದ್ದರಿಂದ ಹೆಂಡತಿ ಮಕ್ಕಳಲ್ಲಿ ಹೆಚ್ಚು ಆಸಕ್ತಿಯನ್ನು ಮಾಡಕೂಡದು ಎಂದು ಶಿಕ್ಷಿಸುವುದಕ್ಕಾಗಿಯೂ ಅವತಾರ ಮಾಡಿದನು. ವಸ್ತುತಃ ಅವನಿಗೆ ದುಃಖವೇ ಇಲ್ಲ ಅಯೋಗ್ಯರನ್ನು ಮೋಹಿಸುವುದಕ್ಕಾಗಿ ದುಃಖವನ್ನು ತೋರಿಸುವನು ಎಂದು ಹೇಳುತ್ತಾರೆ. ಸ್ವೈ = ಸ್ವತಂತ್ರನಾದ ಆತ್ಮನ್= (ಆತ್ಮನಿ)ತನ್ನಲ್ಲಿ ರಮತಃ= ಕ್ರೀಡಿಸಿಕೊಂಡಿರುವ ಅಂದರೆ ಸ್ವರಮಣನಾದ ಈಶ್ವರಸ್ಯ = ಸರ್ವೇಶ್ವರನಾದ ಅಸ್ಯ= ಈ ರಾಮನಿಗೆ ಸೀತಾಕೃತಾನಿ = ಸೀತಾದೇವಿಯು ನಿಮಿತ್ತಗಳಾದ ಅಂದರೆ ಸೀತಾ ದೇವಿಯ ವಿಯೋಗದಿಂದ ಉಂಟಾದ ವ್ಯಸನಾನಿ = ಸಂತಾಪಾದಿಗಳು ಕುತಃ = ಹೇಗೆ ಸ್ಯುಃ = ಆದಾವು? ನಕುತೋಪಿ = ಯಾವ ಕಾರಣದಿಂದಲೂ ಆಗಲಾರವು ಎಂದರ್ಥ. ॥ ೧೩೪ ॥

**ನವೈಸ ಆತ್ಮಾತ್ಮವತಾಮಧೀಶ್ವರೋ ಭುಂಕ್ತೇಹಿದುಃಖಂ ಭಗವಾನ್ನಾಸುದೇವಃ ।**
**ನಸ್ತ್ರೀಕೃತಂ ಕಶ್ಮಲಮಶ್ನುವೀತ ನ ಲಕ್ಷ್ಮಣಂ ಚಾಪಿ ಜಹಾತಿ ಕರ್ಹಿಚಿತ್ ॥ ೧೩೫ ॥**

ಆತ್ಮವತಾಂ = ಮನಸ್ಸನ್ನು ವಶೀಕರಿಸಿಕೊಂಡಿರುವ ಯೋಗೀಶ್ವರರಿಗೆ ಅಧೀಶ್ವರಃ = ನಿಯಾಮಕನಾದ ಭಗವಾನ್ = ಷಡ್ಗುಣೈಶ್ವರ್ಯ ಸಂಪನ್ನನಾದ ವಾಸುದೇವಃ = ಎಲ್ಲಾ ಜಗತ್ತಿನಲ್ಲಿ ವಾಸ ಮಾಡುವವನಾದ್ದರಿಂದಲೂ ಕ್ರೀಡಾದಿ ಗುಣ ವಿಶಿಷ್ಟನಾದ್ದರಿಂದಲೂ ವಾಸುದೇವ ನಾಮಕನಾದ ಆತ್ಮಾ = ಪರಮಾತ್ಮನಾದ ಸಃ = ಆ ರಾಮನು ದುಃಖಂ = ದುಃಖವನ್ನು ನೈವ ಭುಂಕ್ತೇ = ಅನುಭವಿಸುವುದೇ ಇಲ್ಲ. ಹಿ = ನಿರನಿಷ್ಟೋನಿರವದ್ಯಃ ಎಂಬ ಶ್ರುತಿ ಪ್ರಸಿದ್ಧವು. ಸ್ತ್ರೀಕೃತಂ = ಸ್ತ್ರೀ ನಿಮಿತ್ತವುಂಟಾದ ಕಶ್ಮಲವನ್ನು ಸೀತಾಪ್ರತಿಕೃತಿಯ ವಿಯೋಗದಿಂದುಂಟಾದ ದುಃಖವನ್ನಾಗಲೀ ನ ಅಶ್ನುವೀತ = ಹೊಂದುವುದಿಲ್ಲ. ಕರ್ಹಿಚಿತ್ = ಯಾವಾಗಲೂ ಲಕ್ಷ್ಮಣಂಚಾಪಿ= ಲಕ್ಷ್ಮಣನನ್ನು ಕೂಡ ನ ಜಹಾತಿ = ಬಿಡುವುದಿಲ್ಲ. ರುದ್ರನ ಕೂಡೆ ಮಾತನಾಡುತ್ತಿರುವಾಗ ಲಕ್ಷ್ಮಣನು ದೂರ್ವಾಸರನ್ನು ಒಳಗೆ ಬಿಟ್ಟಿದ್ದಕ್ಕಾಗಿ ಕೋಪದಿಂದ ಲಕ್ಷ್ಮಣನನ್ನು ಬಿಟ್ಟನೆಂದು ರಾಮಾಯಣದಲ್ಲಿ ಇದೆ. ಅಲ್ಲಿ ಕೋಪ ಪ್ರದರ್ಶನವೂ ಅಸುರಜನ ಮೋಹಕ್ಕಾಗಿಯೇ ಎಂದು ತಿಳಿಯತಕ್ಕದ್ದು. ಭಗವಾನ್ = ಆನಂದಾದಿ ಗುಣ ಪೂರ್ಣನು ಎಂದು ಹೇಳಿದ್ದರಿಂದ ದುಃಖವಿಲ್ಲವೆಂದೂ ವಾಸುದೇವಃ = ಸರ್ವತ್ರ ವ್ಯಾಪ್ತನಾಗಿರುವುದರಿಂದ ಸೀತಾ ದೇವಿಯ ವಿಯೋಗವಿಲ್ಲವೆಂದೂ ಹೇಳಿದ ಹಾಗಾಯಿತು. ॥ ೧೩೫ ॥

**ಯೆತ್ಪಾದಪಂಕಜಪರಾಗನಿಷೇವಕಾಣಾಂ ದುಃಖಾನಿ ಸರ್ವಾಣಿ ಲಯಂ ಪ್ರಯಾಂತಿ ।**
**ಸಬ್ರಹ್ಮವಂದ್ಯಚರಣೋ ಜನಮೋಹಸಾಯ ಸ್ತ್ರೀಸಂಗಿನಾಮಿತಿರತಿಂಪ್ರಥಯಂಶ್ಚಚಾರ ॥**
**॥ ೧೩೬ ॥**

ಯತ್ಪಾದ ಪಂಕಜ ಪರಾಗ ನಿಷೇವಕಾಣಾಂ = ಯಾವ ಶ್ರೀ ಹರಿಯ ಕಮಲದಂತಿರುವ ಪಾದಗಳ ಧೂಳಿಗಳನ್ನು ಸೇವಿಸುತಕ್ಕವರ ಸರ್ವಾಣಿ = ಎಲ್ಲಾ ದುಃಖಾನಿ = ದುಃಖಿಗಳು ಲಯಂ = ನಾಶವನ್ನು ಪ್ರಯಾಂತಿ = ಹೊಂದುತ್ತವೋ ಅಂತಹ ಶ್ರೀ ರಾಮನಿಗೆ ದುಃಖವಿಲ್ಲವೆಂದು ಏನು ಹೇಳತಕ್ಕದ್ದು. ಹಾಗಾದರೆ ದುಃಖವನ್ನು ಏಕೆ ತೋರಿಸುವನು ಎಂಬುದಕ್ಕೆ ಕಾರಣವನ್ನು ಹೇಳುತ್ತಾರೆ. ಬ್ರಹ್ಮವಂದ್ಯಚರಣಃ = ಬ್ರಹ್ಮ ದೇವರಿಂದ ನಮಸ್ಕರಿಸಲ್ಪಡುವ ಪಾದಗಳುಳ್ಳ ಸಃ = ಆ ರಾಮನು ಜನಮೋಹನಾಯ = ದುಷ್ಟ ಜನರಿಗೆ ಮಿಥ್ಯಾಜ್ಞಾನವನ್ನುಂಟುಮಾಡುವುದಕ್ಕೋಸ್ಕರವೂ ಸ್ತ್ರೀಸಂಗಿನಾಂ = ಸ್ತ್ರೀಯರಲ್ಲಿ ಆಸಕ್ತರಾದವರ ರತಿಂ = ರಮಣವನ್ನು ಇತಿ = ಈ ಹಿಂದೆ ಹೇಳಿದ ರೀತಿಯಿಂದ ಪ್ರಥಯನ್ನಸನ್ = ಪ್ರಸಿದ್ಧಿ ಪಡಿಸುವವನಾಗಿ ಚಚಾರ = ಸಂಚರಿಸಿದನು. ಸ್ತ್ರೀಯರಲ್ಲಿ ಆಸಕ್ತರಾದವರಿಗೆ ರತಿಯು ದುಃಖ ಸಾಧನವಾದದ್ದು ಎಂದು ಪ್ರಸಿದ್ಧಿಪಡಿಸುವುದು ರಾಮನ ಉದ್ದೇಶವು ॥ ೧೩೬ ॥

**ಕ್ವಚಿಚ್ಛಿವಂ ಕ್ವಚಿದೃಷೀನ್ ಕ್ವಚಿದ್ದೇವಾನ್ ಕ್ವಚಿನ್ನರಾನ್ ।**
**ನಮತ್ಯರ್ಚಯತಿ ಸ್ತೌತಿ ವರಾನರ್ಥಯತೇsಪಿಚ ॥**
**ಲಿಂಗಂ ಪ್ರತಿಷ್ಠಾಪಯತಿ ವೃಣೋತ್ಯಸುರತೋವರಾನ್ ॥ ೧೩೭ ॥**

ಶ್ರೀಹರಿಯು ಕ್ವಚಿತ್ = ಕೆಲವು ಕಡೆ ಶಿವಂ = ರುದ್ರನನ್ನು ಕ್ವಚಿತ್ ಋಷೀನ್ = ಕೆಲವು ಕಡೆ ಋಷಿಗಳನ್ನೂ ಕ್ವಚಿದ್ದೇವಾನ್ = ಕೆಲವು ಕಡೆ ದೇವತೆಗಳನ್ನೂ ಕ್ವಚಿನ್ನರಾನ್ = ಕೆಲವು ಕಡೆ ಮನುಷ್ಯರನ್ನೂ ನಮತಿ = ನಮಸ್ಕರಿಸುತ್ತಾನೆ. ಅರ್ಚಯತಿ = ಪೂಜಿಸುತ್ತಾನೆ ಸ್ತೌತಿ = ಸ್ತುತಿಸುತ್ತಾನೆ. ವರಾನ್ = ಶಿವಾದಿಗಳಿಂದ ವರಗಳನ್ನು ಅರ್ಥಯತೇ = ಬೇಡುತ್ತಾನೆ. ಲಿಂಗಂ = ಶಿವಲಿಂಗವನ್ನೂ ಪ್ರತಿಷ್ಠಾಪಯತಿ = ಪ್ರತಿಷ್ಠೆ ಮಾಡುತ್ತಾನೆ. ಆಸುರತಃ = ಮಧುಕೈಟಭರೆಂಬ ಅಸುರರಿಂದ ವರಾನ್ = ವರಗಳನ್ನು ವೃಣೋತಿ = ಸ್ವೀಕರಿಸುತ್ತಾನೆ. ಮದಾಂಧರಾದ ಮಧುಕೈಟಭರು ವಿಷ್ಣುವಿನ ಕರ್ಣಮೂಲದಿಂದ ಹುಟ್ಟಿದವರು ಬ್ರಹ್ಮನನ್ನು ಕೊಲ್ಲಲು ಉದ್ಯುಕ್ತರಾಗಲು ವಿಷ್ಣು ಮಾಯೆಯಿಂದ ಮೋಹಿತರಾಗಿ ನಮ್ಮಿಂದ ವರವನ್ನು ಬೇಡು ಎಂಬುದಾಗಿ ವಿಷ್ಣುವನ್ನು ಕುರಿತು ಹೇಳಲು ನಿಮ್ಮಿಬ್ಬರನ್ನು ಕೊಲ್ಲತಕ್ಕವರನ್ನು ಬೇಡುವೆನು ಎಂದಾಗ ಹಾಗೆಯೇ ಆಗಲಿ ಎಂದು ~~ಹೇಳಿದ ಕಥಾ ಸಂಗ್ರಹಕ್ಕಾಗಿ ಆಸುರರಿಂದ ವರವನ್ನು ಬೇಡುತ್ತಾನೆಂದು ಹೇಳಿರುವರು. ॥ ೧೩೭ ॥~~

**ಅವತಾರಿಕೆ:—** ಆಶಕ್ತಿಯಿಂದ ಶಿವಾದಿಗಳ ನಮಸ್ಕಾರವೆಂಬ ಶಂಕೆಯನ್ನು ಪರಿಹರಿಸುತ್ತಾರೆ.

**ಸರ್ವೇಶ್ವರಃ ಸ್ವತಂತ್ರೋsಪಿ ಸರ್ವಶಕ್ತಿಶ್ಚ ಸರ್ವದಾ ।**
**ಸರ್ವಜ್ಞೋsಪಿ ವಿಮೋಹಾಯ ಜನಾನಾಂ ಪುರುಷೋತ್ತಮಃ ॥ ೧೩೮ ॥**

ಪುರುಷೋತ್ತಮಃ = ಕ್ಷರಾಕ್ಷರ ಪುರುಷರಿಂದ ಉತ್ತಮನಾದ ಸರ್ವೇಶ್ವರಃ = ಸರ್ವ ಸ್ವಾಮಿಯಾದ ಸ್ವತಂತ್ರೋsಪಿ = ಸತ್ಯಾತ್ಸೃವಿಧ್ಯದಲ್ಲಿ ಪರಾನಪೇಕ್ಷನಾದ ಸರ್ವದಾ = ಯಾವಾಗಲೂ ಸರ್ವಶಕ್ತಿಶ್ಚ = ಎಲ್ಲಾ ವಿಷಯದಲ್ಲಿ ಸಾಮರ್ಥ್ಯ ಉಳ್ಳವನಾದರೂ ಸರ್ವಜ್ಞೋsಪಿ = ಎಲ್ಲವನ್ನೂ ತಿಳಿದವನಾದರೂ ಜನಾನಾಂ = ಜನರಿಗೆ ವಿಮೋಹನಾಯ = ಮಿಥ್ಯಾಜ್ಞಾನವನ್ನುಂಟುಮಾಡುವುದಕ್ಕೋಸ್ಕರ ಹಿಂದೆ ಹೇಳಿದ ನಮಸ್ಕಾರಾದಿಗಳನ್ನು ಮಾಡುತ್ತಾನೆ. ॥ ೧೩೮ ॥

**ತಸ್ಮಾದ್ಯೋ ಮಹಿಮಾ ವಿಷ್ಣೋಃ ಸರ್ವಶಾಸ್ತ್ರೋದಿತಃ ಸಹಿ ।**
**ನಾನ್ಯದಿತ್ಯೇಷ ಶಾಸ್ತ್ರಾಣಾಂ ನಿರ್ಣಯಃ ಸಮುದಾಹೃತಃ ॥ ೧೩೯ ॥**

ತಸ್ಮಾತ್ = ಆದ್ದರಿಂದ ಯಃ = ಯಾವುದು ವಿಷ್ಣೋಃ = ವಿಷ್ಣುವಿನ ಮಹಿಮಾ = ಮಹಿಮೆಯೋ ಸಹಿ = ಆ ಮಹಿಮೆಯೇ ಸರ್ವಶಾಸ್ತ್ರೋದಿತಃ = ಎಲ್ಲಾ ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ. ಅನ್ಯತ್ = ಮನುಷ್ಯರ ವಿಡಂಬನೆಗಾಗಿ ಮಾಡಿರುವುದು, ಅಸುರ ಮೋಹಕ್ಕಾಗಿ ಮಾಡಿರುವುದು, ಯಾವ ತನ್ನ ಮಹಿಮೆಗೆ ವಿರೋಧಿಯಾದ ಕೈಲಾಸಯಾತ್ರಾದಿ ಚರಿತ್ರೆಯೋ ಅದು ಕೂಡ ಶಾಸ್ತ್ರ ತಾತ್ಪರ್ಯ ವಿಷಯವಾಗಿ ಹೇಳಲ್ಪಟ್ಟದ್ದು. ನ = ಅಲ್ಲ ಏಷಃ = ಇದೇ ಮಹಿಮೆಯೇ ಶಾಸ್ತ್ರಾಣಾಂ = ಶಾಸ್ತ್ರಗಳ ನಿರ್ಣಯಃ ಇತಿ = ನಿಶ್ಚಯವೆಂದು ಸಮುದಾಹೃತಃ = ಚೆನ್ನಾಗಿ ಹೇಳಲ್ಪಟ್ಟಿದೆ. ॥ ೧೩೯ ॥

**ಭಾರತಾರ್ಥಸ್ತ್ರಿಧಾ ಪ್ರೋಕ್ತಃ ಸ್ವಯಂ ಭಗವತೈವಹಿ ।**
**ಮನ್ವಾದಿಕೇಚಿದ್ಬ್ರುವತೇ: ಹ್ಯಾಸ್ತೀಕಾದಿ ತಥಾ ಪರೇ ॥ ೧೪೦ ॥**
**ತಥೋಪರಿಚರಾದ್ಯನ್ಯೇ ಭಾರತಂ ಪರಿಚಕ್ಷತೇ ॥ ೧೪೧ ॥**

ಸ್ವಯಂ ಭಗವತೈವ = ಸಾಕ್ಷಾತ್ ವೇದವ್ಯಾಸರಿಂದಲೇ ಭಾರತಾರ್ಥಃ = ಭಾರತದ ಅರ್ಥವು ತ್ರಿಧಾ = ಮೂರು ಪ್ರಕಾರವಾಗಿ ಪ್ರೋಕ್ತಃ = ಹೇಳಲ್ಪಟ್ಟಿದೆ. ಹಿ = ಪ್ರಸಿದ್ಧವು. ಕೇಚಿತ್ = ಕೆಲವರು ಮನ್ವಾದಿ = ಮೀಯತೇ ಪ್ರಮಿಯತೇ ಪರಮಾತ್ಮಾ ಏಭಿಃ ಇತಿ = ಭಗವಂತನು ಧರ್ಮಗಳಿಂದ ತಿಳಿಯಲ್ಪಡುತ್ತಾನೆ. ಆದ್ದರಿಂದ ಮನವಃ = 1 ಧರ್ಮಗಳು, 2 ಭಕ್ತಿ ಮೊದಲಾದವುಗಳು ಹತ್ತು. 3. ಶ್ರವಣ ಮನನಾದಿಗಳು. 4. ಶೀಲ ವಿನಯಗಳು. 5. ವೇದಗಳು ಹೀಗೆ ಮನುಪದದಿಂದ ಹೇಳಲ್ಪಡುವ ಐದು ಎಲ್ಲಿ ಎಲ್ಲಿ ಪ್ರಸ್ತುತವಾಗುತ್ತದೋ ಆವಾವ ಅಂಶದಲ್ಲಿ ಧರ್ಮಾಭಿಮಾನಿಯಾದ್ದರಿಂದ ಮನು ಪದವಾಚ್ಯಮು ಧರ್ಮರಾಜನು 1. ಭಕ್ತ್ಯಾದಿ ಹತ್ತು ಗುಣಗಳಿಗೆ ಅಭಿಮಾನಿಯಾದ್ದರಿಂದ ಮನುಪದವಾಚ್ಯನು ಭೀಮಸೇನನು 2. ಶ್ರವಣಾದಿಗಳಿಗೆ ಅಭಿಮಾನಿಯಾದ್ದರಿಂದ ಮನುಪದವಾಚ್ಯನು ಅರ್ಜುನನು 3. ಶೀಲವಿನಯಂಗಳಿಗೆ ಅಭಿಮಾನಿಗಳಾದ್ದರಿಂದ ಮನುಪದವಾಚ್ಯರು ನಕುಲ ಸಹದೇವರು 4. ವೇದಾಭಿಮಾನಿನಿಯಾದ್ದರಿಂದ ಮನುಪದವಾಚ್ಯಳು ದ್ರೌಪದಿಯು 5. ಎಂಬುದಾಗಿ ಈ ಐವರು ಆವಾವ ಅಂಶಗಳಿಂದ ಪ್ರತಿಪಾಡಿಸಿಕೊಳ್ಳಲ್ಪಡುತ್ತಾರೆ. "ಮನವಃ ಆವೀಯಮಾನತ್ವಾತ್ ಆವಯಃ ಪ್ರತಿಪಾದ್ಯಾಃ ಯಸ್ಮತತ್ ಮನ್ವಾದಿ" ಎಂಬ ನಿರ್ವಚನದಿಂದ ಧರ್ಮಾದಿಗಳು ಭಾರತದಲ್ಲಿ ಪ್ರತಿಪಾದ್ಯರಾದರಿಂದ ಭಾರತಂ = ಭಾರತವನ್ನು ಮನ್ವಾದಿಯನ್ನಾಗಿ ಬ್ರುವತೇ = ಹೇಳುತ್ತಾರೆ. ಅಭಿಮಾನಿಗಳಾದ ಪಂಚಪಾಂಡವರ ಮತ್ತು ದ್ರೌಪದಿಯ ಸ್ತೋತ್ರ ಮಾಡುವುದಕ್ಕೋಸ್ಕರ ಪ್ರವೃತ್ತವಾಗಿದೆ ಎಂದು ಹೇಳುತ್ತಾರೆ. ಆಸ್ತಿಕಾಃ = ಪರಲೋಕ ಇದೆ ಪರದೇವತೆ ಇದೆ ಎಂದು ಯಾವಾಗಲೂ ತಿಳಿಯುವವರು ಪಾಂಡವರು ದ್ರೌಪದಿಯು ಕೂಡ ಆಸ್ತಿಕರೆಂದು ಹೇಳಲ್ಪಡುತ್ತಾರೆ. ಆಸ್ತಿಕರಾದ ಮನು. ಋಷ್ಯಾದಿಗಳಿಂದ ಅತಿಶಯವಾಗಿ ಆಸ್ತಿಕರು ಎಂದು ತಿಳಿಸುವುದಕ್ಕಾಗಿ ಆಸ್ತೀಕಾಃ ಎಂದು ದೀರ್ಘವು. ಧರ್ಮಾದಿಗಳನ್ನು ಹೇಳದೆ ಕೇವಲ ಆಸ್ತೀಕರಾದ ಪಾಂಡವರನ್ನೇ ಪುರಸ್ಕರಿಸಿಕೊಂಡು ಪಾಂಡವರ ಉತ್ಪತ್ತಿ. ಅವರ ಚರಿತ್ರೆ, ಪಾಂಡವರು ಮಾಡಿದ ಯುದ್ಧಾದಿಗಳನ್ನು ಯಾವ ಭಾಗದಲ್ಲಿ ಹೆಚ್ಚಾಗಿ ವರ್ಣಿಸುವರೋ ಆ ಭಾಗವು ಆಸ್ತೀಕಾದಿ ಎನ್ನಿಸುತ್ತದೆ. ಆಸ್ತೀಕಾಃ ಆದಯಃ ಯಸ್ಮತತ್ "ಆಸ್ತೀಕಾದಿ" ಧರ್ಮಾದಿಗಳನ್ನು ಪ್ರತಿಪಾದಿಸದೆ ಪರಮಾಸ್ತಿಕ ಶಿರೋಮಣಿಗಳಾದ ಪುಣ್ಯಕೀರ್ತಿಯುಳ್ಳ ಪಾಂಡವರನ್ನು ದ್ರೌಪದಿಯನ್ನೂ ವರ್ಣಿಸಬೇಕೆಂದು ಗ್ರಂಥಕಾರರಿಗೂ ಗ್ರಂಥಕ್ಕೂ ಎಲ್ಲಿ ಅಭಿಪ್ರಾಯವಿದೆಯೋ ಆ ಎಲ್ಲಾ ಪ್ರಕರಣವೂ ಆಸ್ತೀಕಾದಿ ಎನ್ನಿಸಿಕೊಳ್ಳುತ್ತದೆ. ತಥಾ = ಹಾಗೆಯೇ ಅಪರೇ = ಬೇರೆ ಕೆಲವರು ಆಸ್ತಿಕಾದಿ = ಆಸ್ತಿಕರಾದ ಪಾಂಡವರು ಪ್ರತಿಪಾದ್ಯರಾಗಿ ಉಳ್ಳದ್ದನ್ನಾಗಿ ಭಾರತಂ = ಭಾರತವನ್ನು ಉಪರಿಚರಾದಿ = ಸರ್ವೋತ್ತಮನಾದ ಹರಿಯು ಪ್ರತಿಪಾದ್ಯನಾಗಿ ಉಳ್ಳದ್ದನ್ನಾಗಿ ಪರಿಚಕ್ಷತೇ = ಹೇಳುತ್ತಾರೆ. "ಸರ್ವೇಷಾಂ ಚರತೀತಿ ಉಪರಿಚರಃ ಉಪಚರಿಚರಃ ಆದಿಃಯಸ್ಯ ತತ್ ಉಪರಿಚರಾದಿ" ಎಂಬ ವ್ಯುತ್ಪತ್ತಿಯಿಂದ "ಸರ್ವೋತ್ತಮನಾದ್ದರಿಂದ ಉಪರಿಚರನೆಂದು ಹೆಸರುಳ್ಳ ಭಗವಂತನು ಆದಿ, ಮಧ್ಯ, ವಸಾಗಳಲ್ಲಿ ಪರಮ ಮುಖ್ಯ ವೃತ್ತಿಯಿಂದ ಸ್ವರವರ್ಣಪದ ವಾಕ್ಯಾತ್ಮಕ ಸಕಲ ಭಾರತಗಳಲ್ಲಿ ಪ್ರತಿಪಾದ್ಯನಾಗಿರುವನೆಂದು ಅಭಿಪ್ರೇತವಾಗಿದೆ ॥ ೧೪೦ ॥ ೧೪೧ ॥

**ಸಕೃಷ್ಣಾನ್ ಪಾಡವಾನ್ ಗೃಹ್ಯಯೋಯಮರ್ಥಃ ಪ್ರವರ್ತತೇ ।**
**ಪ್ರಾತಿಲೋಮ್ಯಾದಿ ವೈಚಿತ್ರ್ಯಾತ್ತಮಾಸ್ತೀಕಂ ಪ್ರಚಕ್ಷತೇ ॥ ೧೪೨ ॥**

ಮನ್ವಾದಿಗಳನ್ನು ವಿಶದವಾಗಿ ಹೇಳುತ್ತಾರೆ.

ಪ್ರಾತಿಲೋಮ್ಯಾದಿ ವೈಚಿತ್ರ್ಯಾತ್ = ಮುಂದೆ ಹೇಳಲು ಯೋಗ್ಯವಾದ ಪ್ರಮೇಯವನ್ನು ಪ್ರಸಂಗ ಸಂಗತಿಯಿಂದ ಮೊದಲು ಹೇಳುವುದು, ಕೆಲವು ಕಡೆ ಮೊದಲು ಹೇಳಲು ಯೋಗ್ಯವಾದ ಪ್ರಮೇಯವನ್ನು ಮುಂದೆ ಹೇಳುವ ಪ್ರಮೇಯಕ್ಕೆ ಸಂಗತವಾದ್ದರಿಂದ ಮತ್ತೆ ಹೇಳುವುದು ಪ್ರಾತಿಲೋಮ್ಯವು. ಕೆಲವು ಕಡೆ ಅರ್ಜುನನು ಮಾಡಿದ ಚರಿತ್ರೆಯನ್ನು ಭೀಮನಿಗೆ ಪ್ರಾಧಾನ್ಯವಿರುವುದರಿಂದ ಭೀಮನು ಮಾಡಿದನೆಂದು ಹೇಳುವುದು ವ್ಯತ್ಯಾಸವು. ಇದು ಪ್ರಾತಿಲೋಮ್ಯಾದಿ ಎಂಬಲ್ಲಿನ ಆದಿ ಪದದಿಂದ ಗೃಹೀತವಾಗಿದೆ. ಈ ಪ್ರಾತಿಲೋಮ್ಯಾದಿಗಳ ವಿಚಿತ್ರವಾದ ರೀತಿಯಿಂದ ಸಕೃಷ್ಣಾನ್ = ದ್ರೌಪದಿಯಿಂದ ಸಹಿತರಾದ ಪಾಂಡವಾನ್ = ಪಾಂಡವರನ್ನು ಗೃಹ್ಯ ಬೇರೆ ನಿಮಿತ್ತವಿಲ್ಲದೇ ಸಂಗ್ರಹಿಸಿ ಯೋಯಮರ್ಥಃ = ಹಿಂದೆ ಹೇಳುವ ಯಾವ ಅರ್ಥವು ಪ್ರವರ್ತತೇ = ಪ್ರವೃತ್ತವಾಗುತ್ತದೋ ಅದನ್ನು ಆಸ್ತೀಕವನ್ನಾಗಿ ಹೇಳುತ್ತಾರೆ. ॥ ೧೪೨ ॥

**ಧರ್ಮೋ ಭಕ್ತ್ಯಾದಿದಶಕಃ ಶ್ರುತಾದಿಃ ಶೀಲ ವೈನಯೌ ।**
**ಸಬ್ರಹ್ಮಕಾಸ್ತು ತೇ ಯತ್ರ ಮನ್ವಾದಿಂ ತಂ ವಿದುರ್ಬುಧಾಃ ॥ ೧೪೩ ॥**

ಧರ್ಮಃ = ಧರ್ಮಾಭಿಮಾನಿಯಾದ ಯುಧಿಷ್ಠಿರನು ಭಕ್ತ್ಯಾದಿದಶಕಃ = ಭಕ್ತಿ, ಜ್ಞಾನ, ವೈರಾಗ್ಯಾದಿ ಶೋಭನ ಹತ್ತು ಗುಣಗಳಿಗೆ ಅಭಿಮಾನಿಯಾದ ಪರಮ ಭಕ್ತಾಗ್ರೇಸರನಾದ ಭೀಮನು ಶ್ರುತಾದಿಃ = ಶ್ರೀ ಕೃಷ್ಣನ ಮುಖದಿಂದಲೇ ಸಕಲ ಶಾಸ್ತ್ರಾರ್ಥ ನಿರ್ಣಯ ರೂಪವಾದ ಗೀತೆಯ ಶ್ರವಣ, ಮನನಾದಿಗಳಿಗೆ ಅಭಿಮಾನಿಯಾದ ಅರ್ಜುನನು ಶೀಲ ವೈನಯೌ = ಶೀಲ ವಿನಯೋದಿಗಳಿಗೆ ಅಭಿಮಾನಿಗಳಾದ ನಕುಲ ಸಹದೇವರು ಸಬ್ರಹ್ಮಕಾಃ = ವೇದಾಭಿಮಾನಿ ದ್ರೌಪದೀ ಸಹಿತರಾದ ತೇ = ಆ ಪಂಚ ಪಾಂಡವರು ಯತ್ರ = ಭಾರತದ ಯಾವ ಭಾಗದಲ್ಲಿ ಪ್ರತಿಪಾದಿಸಿಕೊಳ್ಳಲ್ಪಡುತ್ತಾರೋ ತಂ = ಆ ಭಾಗವನ್ನು ಮನ್ವಾದ್ವಿಂ = ಮನ್ವಾದಿಯನ್ನಾಗಿ = ಬುಧಾಃ = ಜ್ಞಾನಿಗಳು ವಿದುಃ = ತಿಳಿಯುತ್ತಾರೆ. ॥ ೧೪೩ ॥

**ನಾರಾಯಣಸ್ಯ ನಾಮಾನಿ ಸರ್ವಾಣಿ ವಚನಾನಿತು ।**
**ತತ್ಸಾಮರ್ಥ್ಯಾಭಿಧಾಯೀನಿ ತಮೌಪರಿಚರಂ ವಿದುಃ ॥ ೧೪೪ ॥**

ನಾರಾಯಣಸ್ಯ = ಶ್ರೀ ನಾರಾಯಣನ ಸರ್ವಾಣಿ ನಾಮಾನಿ = ಎಲ್ಲಾ ನಾಮಗಳು ತತ್ಸಾಮರ್ಥ್ಯಾಭಿಧಾಯೀನಿ = ಆ ನಾರಾಯಣನ ಸಾಮರ್ಥ್ಯವನ್ನು ಹೇಳತಕ್ಕ ಸರ್ವಾಣಿವಚನಾನಿ = ಎಲ್ಲಾ ಭಾರತವಚನಗಳು ಯತ್ರ ಯಾವ ಭಾರತದ ಭಾಗಗಳಲ್ಲಿ ಪ್ರತಿಪಾದಿಸಲ್ಪಡುತ್ತದೋ ತಂ = ಆ ಭಾಗವನ್ನು ಔಪರಿಚರಂ = ಔಪರಿಚರವನ್ನಾಗಿ ವಿದುಃ = ತಿಳಿಯುತ್ತಾರೆ. ॥೧೪೪॥

ಭಕ್ತ್ಯಾದಿ ದಶಕವನ್ನು ಹೇಳುತ್ತಾರೆ.

**ಭಕ್ತಿರ್ಜ್ಞಾನಂ ಸವೈರಾಗ್ಯಂ ಪ್ರಜ್ಞಾ ಮೇಧಾ ಧೃತಿಃ ಸ್ಮೃತಿಃ ।**
**ಯೋಗಃ ಪ್ರಾಣೋ ಬಲಂ ಚೈವ ವೃಕೋದರ ಇತಿಸ್ಮೃತಃ ॥ ೧೪೫ ॥**

ಭಕ್ತಿಃ = ಮಾಹಾತ್ಮ್ಯ ಜ್ಞಾನ ಪೂರ್ವಕ ಸುದೃಢ ಸ್ನೇಹವು ಸವೈರಾಗ್ಯಂ = ವೈರಾಗ್ಯದಿಂದ ಕೂಡಿದ ಜ್ಞಾನಂ = ಜ್ಞಾನವು, ಪ್ರಜ್ಞಾ = ಬೇಗನೆ ತಿಳಿಯುವ ಸಾಮರ್ಥ್ಯವು. ಮೇಧಾ = ಕೇಳಿದ್ದನ್ನು ಮನಸ್ಸಿನಲ್ಲಿ ಧಾರಣ ಮಾಡುವುದು. ಧೃತಿಃ = ಧೈರ್ಯವು ಸ್ಮೃತಿಃ = ಸ್ಥಿರತೆಯು ಯೋಗಃ = ಯೋಗವು ಪ್ರಾಣಃ = ಪ್ರಾಣವು ಬಲಂ = ಬಲವು ಇವು ಹತ್ತು ವೃಕೋದರ ಇತಿ = ಭೀಮನೆಂದು ಸ್ಮೃತಃ = ಹೇಳಿಸಿಕೊಳ್ಳಲ್ಪಡುತ್ತದೆ. (ಪ್ರಸಿದ್ಧವಾಗಿದೆ). ॥ ೧೪೫ ॥

ಭಕ್ತ್ಯಾದಿ ಶಬ್ದ ವಾಚ್ಯನು ಭೀಮನು ಹೇಗೆಂಬುದನ್ನು ಹೇಳುತ್ತಾರೆ.

**ಏತದ್ದಶಾತ್ಮಕೋ ವಾಯುಸ್ತಸ್ಮಾದ್ಭೀಮಸ್ತದಾತ್ಮಕಃ ।**
**ಸರ್ವವಿದ್ಯಾ ದ್ರೌಪದೀತು ಯಸ್ಮಾತ್ತಸ್ಮೈವ ಸರಸ್ವತೀ ॥ ೧೪೬ ॥**

ಯಸ್ಮಾತ್ = ಯಾವ ಕಾರಣದ ದೆಸೆಯಿಂದ ವಾಯುಃ = ವಾಯುದೇವರು ಏತದ್ದಶಾತ್ಮಕಃ = ಈ ಭಕ್ತಿ ಮೊದಲಾದ ಹತ್ತು ಧರ್ಮಗಳ ಸ್ವರೂಪವುಳ್ಳವರೋ ತಸ್ಮಾತ್ = ವಾಯುದೇವರು ಭಕ್ತಿ ಮೊದಲಾದ ಗುಣಗಳ ಸ್ವರೂಪರಾದ್ದರಿಂದ ಭೀಮಃ = ಭೀಮನು ತದಾತ್ಮಕಃ = ವಾಯುದೇವರ ಸ್ವರೂಪನಾದ್ದರಿಂದ ಭಕ್ತ್ಯಾದಿ ಸ್ವರೂಪನು, ಪಂಚ ಪಾಂಡವರು ಭಾರತದಲ್ಲಿ ಪ್ರತಿಪಾದ್ಯರೆಂದು ಹೇಳಿ ಈಗ ಹೇಯವಾಗಿರುವುದರಿಂದಲೂ ಕೊಲ್ಲಲಿ ಯೋಗ್ಯರಾಗಿರುವುದರಿಂದಲೂ ದುರ್ಯೋಧನಾದಿಗಳನ್ನು ಅವರ ಸೇನೆಯನ್ನು ಹಾಗೆಯೇ ಉಪಾದೇಯತಯಾ ಉಭಯಸೇನೆಯಲ್ಲಿರುವ ಭೀಷ್ಮ, ದ್ರೋಣ, ಕರ್ಣ, ದ್ರುಪದ, ವಿರಾಟ ಮೊದಲಾದ ಸಜ್ಜನರನ್ನೂ ಅಸಜ್ಜನರನ್ನೂ ದೇಹದ ಉಪಮೆಯಿಂದ ಭಾರತದಲ್ಲಿ ಹೇಳಿದೆ ಎಂಬ ಅಭಿಪ್ರಾಯದಿಂದ ಕಥೆಯ ರೀತಿಯನ್ನೂ ಹೇಳುತ್ತಾರೆ. ಮುಖದಲ್ಲಿರತಕ್ಕ ಯಾವ ವಾಣಿಯೋ ಆ ವಾಣಿಯ ಉಪಮೆಯಿಂದ ದ್ರೌಪದಿಯು ಹೇಳಿಸಿಕೊಳ್ಳಲ್ಪಟ್ಟಿದ್ದಾಳೆ. ಯಸ್ಮಾತ್ = ಯಾವ ಕಾರಣದಿಂದ ದ್ರೌಪದೀತು = ದ್ರೌಪದಿಯಾದರೂ ಸರ್ವವಿದ್ಯಾ = ಎಲ್ಲಾ ವಿದ್ಯೆಗಳಿಗೆ ಅಭಿಮಾನಿನಿಯೋ ತಸ್ಮಾತ್ = ಆದ್ದರಿಂದ ಸೈವಸರಸ್ವತೀ = ಆ ದ್ರೌಪದಿಯೇ ಮುಖದಲ್ಲಿರತಕ್ಕ ವಾಣಿಯು. ॥ ೧೪೬ ॥

**ಅಜ್ಞಾನಾದಿ ಸ್ವರೂಪಸ್ತು ಕಲಿರ್ದುರ್ಯೋಧನಃ ಸ್ಮೃತಃ ।**
**ವಿಪರೀತಂತು ಯಜ್ಞಾನಂ ದುಃಶಾಸನ ಇತೀರಿತಃ ॥ ೧೪೭ ॥**

ಅಜ್ಞಾನಾದಿ ಸ್ವರೂಪಸ್ತು = ಅಜ್ಞಾನಾದಿಗಳೇ ಸ್ವರೂಪವಾಗಿ ಉಳ್ಳ ಅಜ್ಞಾನ, ಭ್ರಮ, ಪ್ರಮಾದಾದಿಗಳಿಗೆ ಅಭಿಮಾನಿಯಾದ ದೇಹದಲ್ಲಿರತಕ್ಕ ಯಃ ಕಲಿಃ = ಯಾವ ಕಲಿಯೋ ಸಃ = ಅವನು ದುರ್ಯೋಧನ ಇತಿ = ದುರ್ಯೋಧನನೆಂದು ಸ್ಮೃತಃ = ಹೇಳಿಸಿಕೊಳ್ಳಲ್ಪಡುತ್ತಾನೆ. ವಿಪರೀತಂತು ಯಜ್ಞಾನಂ = ದೇಹದಲ್ಲಿ ವಿಪರೀತ ಜ್ಞಾನವೇನಿದೆಯೋ ಅದಕ್ಕೆ ಮಾತ್ರ ಅಭಿಮಾನಿಯಾದ ಯಾವದೈತ್ಯನೋಸಃ = ಅವನು ದುಃಶಾಸನನೆಂದು ಈರಿತಃ = ಹೇಳಿಸಿಕೊಳ್ಳಲ್ಪಡುತ್ತಾನೆ. ॥ ೧೪೭ ॥

**ನಾಸ್ತಿಕ್ಯಂ ಶಕುನಿರ್ನಾಮ ಸರ್ವದೋಷಾತ್ಮಕಾಃ ಪರೇ ।**
**ಧಾರ್ತರಾಷ್ಟ್ರಾಸ್ತ್ವಹಂಕಾರೋದ್ರೌಣೇ ರುದ್ರಾತ್ಮಕೋಯತಃ ॥ ೧೪೮ ॥**

ನಾಸ್ತಿಕ್ಯಂ = ಪುರುಷನ ಶರೀರದಲ್ಲಿರುವ ಪರಲೋಕವಿಲ್ಲವೆಂಬ ನಾಸ್ತಿಕ್ಯಕ್ಕೆ ಅಭಿಮಾನಿಯು ಯಃ = ಯಾವನೋ ಸಃ = ಅವನು ಶಕುನಿಃ = ಶಕುನಿಯೆಂದು ಪ್ರಸಿದ್ಧನಾವವನು. ಸರ್ವದೋಷಾತ್ಮಕಾಃ = ಪುರುಷನ ದೇಹದಲ್ಲಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಮೊದಲಾದ ಯಾವ ದೋಷಗಳಿವೆಯೋ ಆ ಎಲ್ಲಾ ದೋಷಗಳಿಗೆ ನಿಯಾಮಕರಾದ ಯಾವ ದೈತ್ಯರೋ ತೇ = ಅವರು ಪರೇ = ದುರ್ಯೋಧನ ದುಃಶಾಸನರಿಂದ ಬೇರೆಯಾದ ಧಾರ್ತರಾಷ್ಟ್ರಃ ಧೃತರಾಷ್ಟ್ರನ ಮಕ್ಕಳು. ಯತಃ = ಯಾವ ಕಾರಣದಿಂದ ದ್ರೌಣಿಃ = ಅಶ್ವತ್ಥಾಮನು ರುದ್ರಾತ್ಮಕಃ = ಅಹಂಕಾರಕ್ಕೆ ಅಭಿಮಾನಿಯಾದ ರುದ್ರ ಸ್ವರೂಪನೋ ತಸ್ಮಾತ್ = ಆದ್ದರಿಂದ ಅಹಂಕಾರಃ = ಪುರುಷನ ದೇಹದಲ್ಲಿರುವ ಅಹಂಕಾರಕ್ಕೆ ಅಭಿಮಾನಿಯು. ॥ ೧೪೮ ॥

**ದ್ರೌಣಾದ್ಯಾ ಇಂದ್ರಿಯಾಣ್ಯೇವ ಪಾಪಾನ್ಯನ್ಯೇತು ಸೈನಿಕಾಃ ।**
**ಪಾಂಡವೇಯಾಶ್ಚ ಪುಣ್ಯಾನಿ ತೇಷಾಂ ವಿಷ್ಣುರ್ನಿಯಾಮಕಃ ॥ ೧೪೯ ॥**

ಇಂದ್ರಿಯಾಣಿ = ದೇಹದಲ್ಲಿ ಯಾವ ಇಂದ್ರಿಯಗಳಾದ ಕಣ್ಣು ಮೊದಲಾದವುಗಳೋ ತೇ = ಅವುಗಳಿಗೆ ಅಭಿಮಾನಿಗಳು ದ್ರೌಣಾದ್ಯಾಃ = ದ್ರೌಣ, ಕರ್ಣ, ಭೀಷ್ಮಾದಿಗಳು ದ್ರೌಣಿರು = ಕಿವಿಗೆ ಅಭಿಮಾನಿಯಾದ ಬೃಹಸ್ಪತ್ಯಾಚಾರ್ಯ ಸ್ವರೂಪರು. ಕರ್ಣನು ಕಣ್ಣಿಗೆ ಅಭಿಮಾನಿಯಾದ ಸೂರ್ಯನ ಸ್ವರೂಪನು, ಭೀಷ್ಮನು ವಾಗಾಭಿಮಾನಿಯಾದ ಅಗ್ನಿ ಸ್ವರೂಪರು, ~~ಅಭಿಮನ್ಯುವು ಮನೋಭಿಮಾನಿ ಚಂದ್ರ ಸ್ವರೂಪನು. ನಕುಲ ಸಹದೇವರು ಘ್ರಾಣಕ್ಕೆ ಅಭಿಮಾನಿಗಳಾದಪ್ರಸ್ವರೂಪದವರು.~~ ಅನ್ಯೇ = ಇವರಿಂದ ಬೇರೆಯಾದ ಸೈನಿಕಾಃ = ದುರ್ಯೋಧನನ ಪಕ್ಷದಲ್ಲಿರುವವರು ಪಾಪಾನಿ = ಪರಹಿಂಸಾ, ಪರದ್ರವ್ಯಾಪಹರಣ, ಪರನಿಂದಾ, ಪರನಾರೀಗಮನಾದಿ ಪಾಪಗಳ ಸ್ವರೂಪವುಳ್ಳವರು; ಅಭಿಮಾನಿಗಳು ಕಾಮಕ್ರೋಧಾದಿಗಳು ಸ್ವಾಭಾವಿಕವಾಗಿ ಪ್ರಬಲ ದೋಷಗಳಾದ್ದರಿಂದ ಅವುಗಳಿಗೆ ದುರ್ಯೋಧನನ ಉಪಮಾನವು. ಪಾಂಡವೇಯಾಶ್ಚ = ಪಾಂಡವರ ಸ್ನೇಹಗಳು ಪುಣ್ಯಾನಿ = ಪುಣ್ಯಾಭಿಮಾನಿ ದೇವತೆಗಳು. ತೇಷಾಂ = ವಾಯ್ವಾದಿಗಳಿಗೂ ದೇಹದ ಒಳಗೆ ಮತ್ತು ಹೊರಗೆ ಇರತಕ್ಕ ಎಲ್ಲರಿಗೂ ನಿಯಾಮಕಃ = ನಿಯಮನ ಮಾಡತಕ್ಕವನು ವಿಷ್ಣುಃ = ನಾರಾಯಣ ಸ್ವರೂಪನಾದ ಶ್ರೀ ಕೃಷ್ಣನು. ॥ ೧೪೯ ॥

ಭಾರತವು ತಿಳಿಯಲಿಕ್ಕೆ ಅಶಕ್ಯವಾದದ್ದು ಎಂಬುದನ್ನು ಉಪ ಸಂಹಾರ ಮಾಡುತ್ತಾರೆ.

**ಏವಮಧ್ಯಾತ್ಮನಿಷ್ಠಂ ಹಿ ಭಾರತಂ ಸರ್ವಮುಚ್ಯತೇ ।**
**ದುರ್ವಿಜ್ಞೇಯಮತಃ ಸರ್ವೈರ್ಭಾರತಂತು ಸುರೈರಪಿ ॥ ೧೫೦ ॥**

ಯತಃ = ಯಾವ ಕಾರಣದಿಂದ ಏವಂ = ಈ ಹಿಂದೆ ಹೇಳಿದ ಪ್ರಕಾರ ಸರ್ವಂಭಾರತಂ = ಎಲ್ಲಾ ಭಾರತವು ಅಧ್ಯಾತ್ಮನಿಷ್ಠಂ = ದೇಹಾದ್ಯಂತರ್ಯಾಮಿಯನ್ನು ಪ್ರತಿಪಾದಿಸತಕ್ಕದ್ದು ಎಂದು ಉಚ್ಯತೇ = ಹೇಳಿಸಿಕೊಳ್ಳಲ್ಪಡುತ್ತದೋ ಅತಃ = ಆ ಕಾರಣದಿಂದ ಭಾರತಂತು = ಭಾರತವಾದರೂ ಸರ್ವೈಃ = ಎಲ್ಲಾ ಮನುಷ್ಯರಿಂದಲೂ ಸುರೈರಪಿ = ದೇವತೆಗಳಿಂದಲೂ ಕೂಡ ದುರ್ವಿಜ್ಞೇಯಂ = ತಿಳಿಯಲಶಕ್ಯವಾದದ್ದು. ॥ ೧೫೦ ॥

ಅದನ್ನೆ ಸ್ಪಷ್ಟಪಡಿಸುತ್ತಾರೆ.

**ಸ್ವಯಂ ವ್ಯಾಸೋಹಿ ತದ್ವೇದ ಬ್ರಹ್ಮಾವಾ ತತ್ಪ್ರಸಾದತಃ ।**
**ತಥಾಪಿ ವಿಷ್ಣುಪರತಾ ಭಾರತೇ ಸಾರಸಂಗ್ರಹಃ ॥ ೧೫೧ ॥**

ತತ್ = ಎಲ್ಲಾ ಅರ್ಥವನ್ನು ವ್ಯಾಸಃ = ಶ್ರೀ ವೇದವ್ಯಾಸದೇವರು ಸ್ವಯಂಹಿ = ತಾನಾಗಿಯೇ ವೇದ = ತಿಳಿಯುತ್ತಾರೆ, ಬ್ರಹ್ಮಾವಾ = ಬ್ರಹ್ಮದೇವರೂ ಕೂಡ ತತ್ಪ್ರಸಾದತಃ = ಆ ವೇದವ್ಯಾಸದೇವರ ಅನುಗ್ರಹದಿಂದ ವೇದ = ತಿಳಿಯುತ್ತಾರೆ. ಮನುಷ್ಯರಿಂದ ಭಾರತವು ತಿಳಿಯಲು ಅಶಕ್ಯವಾದರೆ ಅಧ್ಯಯನ ಮಾಡುವುದು ವ್ಯರ್ಥವೆಂಬ ಶಂಕೆಯನ್ನು ಪರಿಹರಿಸುತ್ತಾರೆ. ಯದ್ಯಪಿ ಭಾರತವು ದುರ್ವಿಜ್ಞೇಯವು ತದಾಪಿ = ಹಾಗಾದರೂ ಭಾರತೇ = ಭಾರತದಲ್ಲಿ ವಿಷ್ಣುಪರತಾ = ವಿಷ್ಣುಪ್ರತಿಪ್ರತಿಪಾದಕತ್ವ ವೇನಿದೆಯೋ ಅದು ಸಾಗಸಂಗ್ರಹಃ = ಶ್ರೇಷ್ಠ ಅರ್ಥಗಳ ವಿಕೀಕರಣವು ॥ ೧೫೧ ॥
ಒಂದೆ ಹೇಳಿದ ವಿಷ್ಣೂತ್ಕರ್ಷವನ್ನು ಉಪಸಂಹಾರ ಮಾಡುತ್ತಾರೆ.

**ಇತ್ಯಾದಿ ವ್ಯಾಸವಾಕ್ಯೈಸ್ತು ವಿಷ್ಣೂತ್ಕರ್ಷೋಽವಗಮ್ಯತೇ ।**
**ವಾಯ್ವಾದೀನಾಂ ಕ್ರಮುಶ್ಚೈವ ತದ್ವಾಕ್ಯೈರೇವ ಚಿಂತ್ಯತೇ ॥ ೧೫೨ ॥**

ಇತ್ಯಾದಿ ವ್ಯಾಸ ವಾಕ್ಯೈಸ್ತು = ಇವೇ ಮೊದಲಾದ ವೇದವ್ಯಾಸರ ವಾಕ್ಯಗಳಿಂದಲಾದರೂ ವಿಷ್ಣುತ್ಕರ್ಷಃ = ವಿಷ್ಣು ಸರ್ವೋತ್ತಮತ್ವವು ಅವಗಮ್ಯತೇ = ತಿಳಿಯಲ್ಪಡುತ್ತದೆ. ವಾಯ್ವಾದೀನಾಂ = ವಾಯುವೇ ಮೊದಲಾದವರ ಕ್ರಮುಶ್ಚೈವ = ತಾರತಮ್ಯ ಕ್ರಮವೂ ಕೂಡ ತದ್ವಾಕ್ಯೈರೇವ = ಆ ವ್ಯಾಸರ ವಾಕ್ಯಗಳಿಂದಲೇ ಚಿಂತ್ಯತೇ = ವಿಚಾರ ಮಾಡಲ್ಪಡುತ್ತದೆ. ॥ ೧೫೨ ॥

**ವಾಯುರ್ಹಿಬ್ರಹ್ಮತಾಮೇತಿ ತಸ್ಮಾದ್ಬ್ರಹ್ಮೈವ ಸಸ್ಮೃತಃ ।**
**ನಬ್ರಹ್ಮಸದೃಶಃ ಕಶ್ಚಿಚ್ಛಿವಾದಿಷು ಕಥಂಚನ ॥ ೧೫೩ ॥**

ವಾಯುಃ = ವಾಯುದೇವರು ಬ್ರಹ್ಮತಾಂ = ಚತುರ್ಮುಖಬ್ರಹ್ಮ ಪದವಿಯನ್ನು ಏತಿ = ಹೊಂದುತ್ತಾರೆ. ತಸ್ಮಾತ್ = ಆದ್ದರಿಂದ ಸ ಏವ = ಆ ವಾಯು ದೇವರೇ ಬ್ರಹ್ಮೇತಿ = ಬ್ರಹ್ಮನೆಂಬುದಾಗಿ ಸ್ಮೃತಃ = ಹೇಳಲ್ಪಡುತ್ತಾರೆ. ಶಿವಾದಿಷು = ರುದ್ರ ಮೊದಲಾದವರಲ್ಲಿ ಕಶ್ಚಿತ್ = ಯಾವೊಬ್ಬನೂ ಕಥಂಚನ = ಜ್ಞಾನ ಭಕ್ತ್ಯಾದಿಗಳಿಂದ ಬ್ರಹ್ಮಸದೃಶಃ = ಬ್ರಹ್ಮನಿಗೆ ಸಮಾನಾದವನು ನ ಏವ = ಇಲ್ಲವೇ ಇಲ್ಲ ॥ ೧೫೩ ॥

---

ಬ್ರಹ್ಮನು ವಾಯು ಸ್ವರೂಪನಾದ್ದರಿಂದಲೂ ವಾಯುವೇ ಹನುಮಂತನಾಗಿರುವುದರಿಂದಲೂ ಹನುಮಂತನಿಗೆ ಉತ್ತಮತ್ವವನ್ನು ಹೇಳಿದರೆ ಬ್ರಹ್ಮನಿಗೆ ಸುತರಾಂ ಉತ್ತಮತ್ವವು ಸಿದ್ಧವಾಗುವುದರಿಂದ ಹನುಮಂತನಿಗೆ ಉತ್ತಮತ್ವ ವಿಷಯದಲ್ಲಿ ಪ್ರಮಾಣವನ್ನು ಹೇಳುತ್ತಾರೆ.

**ಜ್ಞಾನೇ ವಿರಾಗೇ ಹರಿಭಕ್ತಿಭಾವೇ ಧೃತಿಸ್ಥಿತಿ ಪ್ರಾಣಬಲೇಷು ಯೋಗೇ ।**
**ಬುದ್ಧೌಚ ನಾನ್ಯೋ ಹನುಮತ್ಸಮಾನಃ ಪುಮಾನ್ ಕದಾಚಿತ್ಕ್ವಚ ಕಶ್ಚನೈವ ॥ ೧೫೪ ॥**

ಜ್ಞಾನೇ = ಜ್ಞಾನ ವಿಷಯದಲ್ಲಿಯೂ ವಿರಾಗೇ = ವೈರಾಗ್ಯ ವಿಷಯದಲ್ಲಿಯೂ ಹರಿಭಕ್ತಿಭಾವೇ = ಹರಿಯ ಭಕ್ತಿ ವಿಷಯದಲ್ಲಿಯೂ ಧೃತಿ ಸ್ಥಿತಿ ಪ್ರಾಣ ಬಲೇಷು = ಧೈರ್ಯ, ಸ್ಥೈರ್ಯ, ಚೇಷ್ಟಾ, ಸಾಮರ್ಥ್ಯ, ವಿಷಯದಲ್ಲಿಯೂ, ಯೋಗೇ = ಮನೋಯೋಗ ವಿಷಯದಲ್ಲಿಯೂ ಬುದ್ಧೌಚ = ಬುದ್ಧಿಯ ವಿಷಯದಲ್ಲಿಯೂ ಕೂಡ ಅನ್ಯಃ = ವಾಯ್ವವತಾರನಿಂದ ಬೇರೆಯಾವ ಕಶ್ಚನ = ಯಾವ ರುದ್ರನೇ ಮೊದಲಾದವನು ಕದಾಚಿತ್ = ಯಾವ ಕಾಲದಲ್ಲಿಯೂ ಕ್ವಚ = ಯಾವ ದೇಶದಲ್ಲಿಯೂ ನೈವ = ಇಲ್ಲವೇ ಇಲ್ಲ. ॥ ೧೫೪ ॥

ಶ್ರೀಹರಿಯ ಸರ್ವೋತ್ತಮತ್ವ ವಿಷಯದಲ್ಲಿಯೂ ವಾಯುದೇವರು ಪ್ರಧಾನ ಅಂಗಭೂತರು ಎನ್ನುವ ವಿಷಯದಲ್ಲಿಯೂ ಸ್ಮೃತಿಗಳನ್ನು ಹೇಳಿ ಈಗ ಶ್ರುತಿಗಳನ್ನು ಹೇಳುತ್ತಾರೆ.

**ಬಳಿತ್ಥಾ ತದ್ವಪುಷೇ ಧಾಯಿದರ್ಶತಂ ದೇವಸ್ಯ ಭರ್ಗಃ ಸಹಸೋಯತೋಽಜನಿ ।**
**ಯದೀಮುಪಹ್ವರತೇ ಸಾಧತೇ ಮತಿರ್ಯತಸ್ಯ ಧೇನಾ ಅನಯಂತ ಸಸ್ರುತಃ ॥ ೧೫೫ ॥**

**ಯತಃ** = ಯಾವ ನಾರಾಯಣನದೆಸೆಯಿಂದ **ಅಜನಿ** = ನಾರಾಯಣನ ಪ್ರೀತಿಗಾಗಿ ಮತ್ತು ಅವನ ಆಜ್ಞೆಯಿಂದ ತಾನೇ ಹುಟ್ಟಿರುವರು. **ದೇವಸ್ಯ** = ಕ್ರೀಡಾದಿ ಗುಣವಿಶಿಷ್ಟನಾದ **ಸಹಸಃ** = ಬಲರೂಪನಾದ

ಮತ್ತು ಕಲ್ಯಾದ್ಯಸುರರಿಂದ ಪಾಡಲ್ಪಟ್ಟ ಉಪದ್ರವವನ್ನು ಪರಿಹರಿಸುವ ಶೀಲವುಳ್ಳ ಮತ್ತು ಅತಿ ವೇಗವುಳ್ಳ ಮುಖ್ಯ ಪ್ರಾಣದೇವರ **ಬಟ್ = ಬಲಾತ್ಮಕವಾದ ದರ್ಶತಂ** = ಜ್ಞಾನದಿಂದ ವ್ಯಾಪ್ತವಾದ **ಭರ್ಗಃ** = ಶ್ವಾಸರೂಪದಿಂದ ಜಗತ್ತನ್ನು ಧರಿಸುವ, ಪರಬ್ರಹ್ಮನನ್ನು ಮೋಕ್ಷಕಾಲದಲ್ಲಿ ಹೊಂದಿಸಿ ಕೊಡುವ **ತತ್** = ಆ ವಾಯುದೇವರ ಮೂಲರೂಪವು **ಇತ್ಥಾ** = ಈ ರೀತಿಯಾಗಿಯೇ ಅಂದರೆ ಮೂಲ ರೂಪದಲ್ಲಿ ಹೇಗೆ ಬಲಜ್ಞಾನಾದಿಗಳಿವೆಯೋ ಹಾಗೆಯೇ **ವಪುಷೇ** = ಅವತಾರಕ್ಕೋಸ್ಕರ **ಧಾಯಿ** = ಧರಿಸಲ್ಪಟ್ಟಿತು. ಅದರಲ್ಲಿ ಒಂದನೇ ಅವತಾರದ ಹೆಸರನ್ನೂ ವ್ಯಾಪಾರವನ್ನೂ ಹೇಳುತ್ತಾರೆ. **ಯತ್** = ಯಾವುದು ಪ್ರಥಮ ರೂಪವೋ ಅದು **ಮತಿಃ** = ಸರ್ವದ್ಯಾಜ್ಞಾನ ಶೀಲವಾದ್ದರಿಂದ ಮತಿ ಶಬ್ದದಿಂದ ಹೇಳಿಸಿಕೊಳ್ಳಲ್ಪಡುತ್ತದೆ. ಹನುಮನ್ನಾಮಕವು. **ಋತಸ್ಯ** = ಜ್ಞಾನರೂಪನಾದ ಶ್ರೀ ರಾಮನ **ಉಪ** = ಸಮೀಪದಲ್ಲಿ **ಹ್ವರತೇ** = ಕ್ರೀಡಿಸುತ್ತದೆ. ಭಕ್ತಿಭರದಿಂದ ನಮ್ರೀಭೂತವಾಗಿರುತ್ತದೆ. **ಈಂ** = ಇದೇ ರೀತಿಯಿಂದ ರಾಮನ ಸಮೀಪದಲ್ಲಿ ಸೇವೆ ಮಾಡುವಂತೆ **ಸಾಧತೇ** = ದೂರದಲ್ಲಿಯೂ ರಾಮನ ಸೇವೆಯನ್ನು ಸಾಧಿಸುತ್ತದೆ. ಆ ಸೇವೆ ಯಾವುದೆಂಬುದನ್ನು ಹೇಳುತ್ತಾರೆ. **ಸಸ್ರುತಃ** = ಅಮೃತ ಸ್ರವಣದಿಂದ ಕೂಡಿದ **ಋತಸ್ಯ** = ಸತ್ಯವಚನವುಳ್ಳ ರಾಮನ **ಧೇನಾಃ** = ದೇವತೆಗಳ ಕಾರ್ಯಗಳನ್ನು ಪೋಷಿಸುವುದರಿಂದ ಧೇನಾ ಶಬ್ದವಾಚ್ಯಗಳಾದ ಮಾತುಗಳನ್ನು **ಅನಯಂತ** = ಸೀತಾದೇವಿಯ ಸಮೀಪಕ್ಕೆ ತೆಗೆದುಕೊಂಡು ಹೋದರು ಅದು ಪ್ರಥಮ ರೂಪವು. ॥ ॥ ೧೫೫ ॥

ಎರಡನೇ ರೂಪವನ್ನು ಹೇಳುತ್ತಾರೆ.

**ಪೃಕ್ಷೋವಪುಃ ಪಿತುಮಾನ್ನಿತ್ಯ ಆಶಯೇ ದ್ವಿತೀಯಮಾ ಸಪ್ತಶಿವಾಸು ಮಾತೃಷು ।**
**ತೃತೀಯಮಸ್ಯ ವೃಷಭಸ್ಯ ದೋಹಸೇ ದಶಪ್ರಮತಿಂಜನಯಂತ ಯೋಷಣಃ ॥ ೧೫೬ ॥**

**ದ್ವಿತೀಯಂ** = ಎರಡನೆಯ **ವಪುಃ** = ಅವತಾರವು **ಪೃಕ್ಷಃ** = ಕುರು ಸೈನ್ಯವನ್ನು ನಾಶ ಮಾಡುವುದರಿಂದ ಪೃಕ್ಷ ಶಬ್ದ ವಾಚ್ಯವಾದದ್ದು. **ಪಿತುಮಾನ್** = ಬಹು ಅನ್ನವನ್ನು ತಿನ್ನತಕ್ಕದ್ದು. **ನಿತ್ಯಃ** = ತನ್ನ ಇಚ್ಛೆ ಬಂದಾಗ ಮರಣವುಳ್ಳದ್ದರಿಂದ ನಿತ್ಯ ಶಬ್ದ ವಾಚ್ಯವು ಅಂತಹ ಭೀಮನು **ಸಪ್ತಶಿವಾಸು** = ಏಳು ಸಂಖ್ಯಾಕಗಳಾದ ನಿರ್ದುಷ್ಟವಾದ್ದರಿಂದ ಶೋಭನಗಳಾದ ~~**ಮಾತೃಷು** = ಪರಮಾತ್ಮನನ್ನು ತಿಳಿಸಿಕೊಡುವುದರಿಂದ ಮಾತೃ ಶಬ್ದ ವಾಚ್ಯಗಳಾದ ಋಗ್ವೇದ, ಯಜುರ್ವೇದ, ಸಾಮವೇದ,~~ ಅಥರ್ವವೇದ. ಭಾರತ. ಪಂಚರಾತ್ರ, ಮೂಲ ರಾಮಾಯಣಗಳೆಂಬ ವಿದ್ಯೆಗಳಲ್ಲಿ **ಆಶಯೇ** = ಚೆನ್ನಾಗಿ ಮಲಗಿದನು. ಹೇಗೆ ನಿದ್ದೆ ಮಾಡಿದ ಪುರುಷನು ಹೊರಗಿನ ಪದಾರ್ಥಗಳನ್ನು ನೋಡುವುದಿಲ್ಲವೋ ಹಾಗೆಯೇ ಆ ವಿದ್ಯೆಗಳನ್ನೇ ವಿಚಾರ ಮಾಡುತ್ತಿದ್ದರು **ಯೋಷಣಃ** = ಶ್ರೀ ಭೂ ದುರ್ಗಾ ಎಂಬ ವೇದಾಭಿಮಾನಿಗಳಾದ ಸ್ತ್ರೀಯರು **ಮೋಹಸೇ** = ಸರ್ವರಲ್ಲಿ ಜ್ಞಾನವನ್ನು ಪೂರ್ಣ ಮಾಡುವುದಕ್ಕಾಗಿ **ವೃಷಭಸ್ಯ** = ದೇವ ಶ್ರೇಷ್ಠರಾದ **ಅಸ್ಯ** = ಈ ವಾಯುದೇವರ **ತೃತೀಯಂ** = ಮೂರನೆಯ ಅವತಾರ ರೂಪವನ್ನು **ದಶಪ್ರಮತಿಂ** = ಪೂರ್ಣಪ್ರಜ್ಞನಾಮಕನನ್ನಾಗಿ **ಜನಯಂತ** = ಹುಟ್ಟಿಸಿದರು. ॥ ೧೫೬ ॥

**ನಿರ್ಯದೀಂ ಬುಧ್ನಾನ್ಮಹಿಷಸ್ಯವರ್ಪಸ ಈಶಾನಾಸಃ ಶವಸಾಕ್ರಂತ ಸೂರಯಃ ।**
**ಯದೀವಮನು ಪ್ರದಿವೋ ಮಧ್ವ ಆಧವೇ ಗುಹಾಸಂತಂ ಮಾತರಿಶ್ವಾ ಮಥಾಯತಿ ॥೧೫೭॥**

**ಬುಧ್ನಾತ್** = ಜ್ಞಾನರೂಪವಾದ ಮತ್ತು ಪಂಡಿತರನ್ನು ಸನ್ಮಾರ್ಗದಲ್ಲಿ ಒಯ್ಯುವ **ವರ್ಪಸಃ** = ಸಜ್ಜನರನ್ನು ಆಂಗೀಕರಿಸತಕ್ಕ ಮತ್ತು ರಕ್ಷಿಸತಕ್ಕ **ಮಹಿಷಸ್ಯ** = ದೇವಶ್ರೇಷ್ಠರಾದ ವಾಯುದೇವರ **ಮತ್** = ಯಾವ ಮೂರನೇ ರೂಪದ ದಸೆಯಿಂದ **ಈಂ** = ಹಿಂದೆ ಹೇಳಿದ ರೀತಿಯಿಂದ ಜ್ಞಾನಪೂರ್ತಿಯು ಮಾಡಲ್ಪಡುತ್ತಿರಲು **ಈಶಾನಾಸಃ** = ರುದ್ರ ಮೊದಲಾದ **ದೇವತೆಗಳು ಶವಸಾ** = ಸುಖದಿಂದ **ಸೂರಯಃ** = ಜ್ಞಾನಿಗಳಾಗಿ **ನಿಃ** = ಚೆನ್ನಾಗಿ **ಕ್ರಂತ** = ಮಾಡಲ್ಪಟ್ಟರು **ಮಧ್ವಃ** = ಮಧ್ವನೆಂದು ಹೆಸರುಳ್ಳ **ಮಾತರಿಶ್ವಾ** = ವಾಯುದೇವರು **ಪ್ರದಿವಃ** = ಪ್ರಕೃಷ್ಟ ಬುದ್ಧಿಪ್ರಕಾಶವುಳ್ಳ ಹಿಂದೆ ಹೇಳಿದ ರುದ್ರಾದಿ ದೇವತೆಗಳನ್ನು **ಅನು** = ಪುರಸ್ಕರಿಸಿಕೊಂಡು **ಗುಹಾ** = ಹೃದಯ ಗುಹೆಯಲ್ಲಿ **ಸಂತಂ** = ಇರತಕ್ಕ ವಸನ್ನು **ಆಧವೇ** = ಚೆನ್ನಾಗಿ ಸ್ವಾಮಿತ್ವ ವಿಷಯದಲ್ಲಿ **ಯತ್** = ಯಾವ ಕಾರಣದ ದಸೆಯಿಂದ **ಮಥಾಯತಿ** = ವೇದ ಶಾಸ್ತ್ರಾದಿಗಳನ್ನು ಚೆನ್ನಾಗಿ ಮಥನ ಮಾಡುತ್ತಾರೋ ಅಪಾರ ವೇದ ಶಾಸ್ತ್ರಾದಿ ವಿಚಾರವನ್ನು ಮಾಡಿ ಹರಿಗೆ ಸರ್ವೋತ್ತಮತ್ವವನ್ನು ಸ್ಥಾಪಿಸುತ್ತಾರೋ **ತಸ್ಮಾತ್** = ಆ ಕಾರಣದಿಂದ ರುದ್ರಾದಿಗಳು ಜ್ಞಾನಿಗಳಾಗಿ ಮಾಡಲ್ಪಟ್ಟರು (ಈ ರೀತಿಯಲ್ಲಿ ಹಿಂದಿನಿಂದ ಅನ್ವಯವು) ॥ ೧೫೭ ॥

**ಪಯೆತ್ಪಿತುಃ ಪರಮಾನ್ನೀಯತೇ ಪರ್ಯೂಪೃಕ್ಷುಧೋವೀರುಧೋದಂಸುರೋಹತಿ ।**
**ಉಭಾಯದಸ್ಯ ಜನುಷಂಯದಿನ್ವತ ಆದಿದ್ಯವಿಷ್ಣೋ ಅಭವದ್ಘೃಣಾ ಶುಚಿಃ ॥ ೧೫೮ ॥**

**ಯತ್** = ಯಾವ ಕಾರಣದಿಂದ **ಪರಮಾತ್** = ಉತ್ತಮನಾದ **ಪಿತುಃ** = ತನಗೆ ತಂದೆಯಾದ ನಾರಾಯಣನ ದೆಸೆಯಿಂದ **ಆ** = ಚೆನ್ನಾಗಿ **ಪರಿ** = ಸುತ್ತಲೂ ಎಲ್ಲಾ ವಿಚಾರದಲ್ಲಿಯೂ ಪರ್ಯಾನೀಯತೇ = ಪ್ರೇರಿಸಲ್ಪಡುತ್ತಾನೋ (ಪಾಜಕ ಕ್ಷೇತ್ರದಲ್ಲಿ ಅವತರಿಸು ಬ್ರಹ್ಮ ಸೂತ್ರ ದಶೋಪನಿತ್ತುಗಳ ಭಾಷ್ಯ ಮಾಡು ಇತ್ಯಾದಿ ಕಾರ್ಯಗಳನ್ನು ಮಾಡು ಎಂಬುದಾಗಿ ಪ್ರೇರಿಸಲ್ಪಡುತ್ತಾನೋ) **ಪೃಕ್ಷುಧಃ** = ಪರರನ್ನು ಪೀಡಿಸುವ ಹಸಿವೆಯೆಂತಿರುವ ಪ್ರಶ್ನೆಗಳೆಂಬ **ವೀರುಧಃ** = ಪುನಃ ಪುನಃ ಹುಟ್ಟುವ ಬಳ್ಳಿಗಳನ್ನು **ದಂಸು** = ಹಲ್ಲುಗಳಲ್ಲಿ **ರೋಹತಿ** = ಏರಿಸುತ್ತಾರೆ. ಹೇಗೆ ಬತ್ತು ಬಳ್ಳಿಗಳನ್ನು ಹಲ್ಲುಗಳಲ್ಲಿ ಇಟ್ಟು ಕೊಂಡು ನಾಶಮಾಡುತ್ತ್ತದೋ ಅದರಂತೆ ಪರರ ಪ್ರಶ್ನೆಗಳನ್ನು ಖಂಡಿಸುತ್ತಾರೆಂದು ಅರ್ಥ **ಯತ್** = ಯಾವ ಕಾರಣದಿಂದ **ಉಭಾ** = ಇಬ್ಬರಾದ ಲಕ್ಷ್ಮಿನಾರಾಯಣರು **ಅಸ್ಯ** = ಈ ಮಧ್ವರ **ಜನುಷಂ** = ಉತ್ಪತ್ತಿಯನ್ನು **ಯತ್** = ಯಾವ ಜ್ಞಾನವನ್ನುದ್ದೇಶಿಸಿ **ಇನ್ವತಃ** = ಪ್ರತಿಯುಗದಲ್ಲಿಯೂ ಪ್ರೇರಿಸುತ್ತಾರೋ **ತತ್** = ಆ ಕಾರಣದಿಂದ **ಆತ್**= 'ಆ'ಕಾರ ಶಬ್ದ ವಾಚ್ಯನಾದ ನಾರಾಯಣನಿಂದ **ಯವಿಷ್ಠ** = ವಾಯುದೇವರ ಅವತಾರದಲ್ಲಿ ಕನಿಷ್ಠರಾದ ಮಧ್ವಾಚಾರ್ಯರು **ಇತ್** ಈಗಕಾಣತಕ್ಕ ರೀತಿಯಿಂದ **ಘೃಣಾ** = ಹನುಮ ಭೀಮರಂತೆ ದುರ್ಜನರನ್ನು ಕೊಲ್ಲಲು ಹರಿಯ ಆಜ್ಞೆ ಇಲ್ಲದಿರುವುದರಿಂದ ಏಕೆ ಕೊಲ್ಲುವದು ಎಂಬುದಾಗಿ ದಯಾವುಳ್ಳ **ಶುಚಿಃ** = ತನಗೆ ಪ್ರತಿವಾದಿಯಾಗಿ ಬ್ರಾಹ್ಮಣ ರೂಪದಿಂದ ಬಂದಿರುವ ಪಂಡಿತರನ್ನು ಮಾತಿನಿಂದ ಖಂಡಿಸಿದರೂ ಕೈಯಿಂದ ಹಿಂಸಿಸುವುದರಿಂದ ಬ್ರಹ್ಮಹತ್ಯಾ ನಿಮಿತ್ತ ಜನಾಪವಾದದಿಂದ ಸ್ಪರ್ಶವಿಲ್ಲದವರು **ಅಭವತ್** = ಆದರು. ॥ ೧೫೮ ॥

**ಆದಿತ್ಯಾತ್ಯರಾನಿಶದ್ಯಾಸ್ವಾಶುಚಿರಹಿಂಸ್ಯಮಾನ ಉರ್ವಿಯಾವಿವಾವೃಧೇ ।**
**ಅನುಯತಾಸ್ಪರ್ಹಾ ಅರುಹತ್ಸನಾಜುವೋನಿನವ್ಯಸೀಷ್ವವರಾಸುಧಾವತೇ ॥ ೧೫೯ ॥**

**ಆತ್** = ಆಕಾರ ಶಬ್ದ ವಾಚ್ಯನಾದ ವಿಷ್ಣುವಿನ ಆಜ್ಞೆಯಿಂದ **ಇತ್** = ಈ ಪ್ರಕಾರ ಮೂರು ಅವತಾರಗಳಲ್ಲಿಯೂ **ವಯಾಶ್ಯಃ** = ಅಂಜನಾ, ಕುಂತಿ, ವಿಪ್ರ ಪತ್ನಿಯರನ್ನು **ಆ** = ತ್ರೇತಾಯುಗ, ದ್ವಾಪರಯುಗ ಕಲಿಯುಗಗಳನ್ನು ಅವಧೀಕರಿಸಿ-ಕೊಂಡು **ಆವಿಶತ್** = (ವಾಯುದೇವರು) ಪ್ರವೇಶಿಸಿದರು. **ಯಾಸು** = ಯಾವ ತಾಯಂದಿರಲ್ಲಿ **ಉರ್ವಿಯಾ** = ಅತ್ಯುತ್ಕೃಷ್ಟವಾದ ತನ್ನ ಶಕ್ತಿಯಿಂದ **ಆ** = ಚೆನ್ನಾಗಿ **ಶುಚಿಃ** = ಪಾಪಕರ್ಮಾದಿಗಳ ಸಂಬಂಧವಿಲ್ಲದವರಾಗಿ **ಅಹಿಂಸ್ಯಮಾನಃಸನ್** = ದುಷ್ಕರ್ಮಾದಿಗಳಿಂದಾಗಲೀ ಹೊಟ್ಟೆಯಲ್ಲಿರುವ ಪ್ರಾಣಿಗಳಿಂದಾಗಲೀ ಪೀಡಿಸಿಕೊಳ್ಳಲ್ಪಡದವರಾಗಿ **ವಿವಾವೃಧೇ** = ಹುಟ್ಟುವ ತನಕ ಬೆಳೆದರು. **ಸನಾಜುವಃ**= ಸನಾತನನಾದ ಪರಮಾತ್ಮನನ್ನು ಪ್ರತಿಪಾದಿಸತಕ್ಕ **ಪೂರ್ವಾಃ**= ಏಳು ವಿದ್ಯೆಗಳಲ್ಲಿ ಮೊದಲನೆಯ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದಗಳು **ಯತ್** = ಯಾವ ಕಾರಣದಿಂದ **ನಿತ್ಯಾಃ**= ನಿತ್ಯಗಳೋ **ತಸ್ಮಾತ್** = ಆ ಕಾರಣದಿಂದ **ಅನು** = ಋಗಾದಿಗಳ ಅರ್ಥವನ್ನು ತಿಳಿಸಿಕೊಡುವ ಶಿಕ್ಷಾ, ಕಲ್ಪ, ವ್ಯಾಕರಣಾದಿಗಳನ್ನು ಅನುಸರಿಸಿ **ಅರುಹತ್** = ಮೆಲ್ಲನೆ ಮರವನ್ನೇರುವ ಪುರುಷನಂತೆ ಮೆಲ್ಲ ಮೆಲ್ಲನೇ ವಿಚಾರ ಮಾಡಿದರು. **ನಿ** = ಚೆನ್ನಾಗಿ **ನವ್ಯಸೀಷು** = ನವೀನಗಳಾದ ಅವರಾಸು = **ಪೌರುಷೇಯಗಳಾದ್ದರಿಂದ** ಅವರಗಳಾದ ಪಂಚರಾತ್ರ, ಭಾರತ, ಮೂಲ ರಾಮಾಯಣಗಳೆಂಬ ವಿದ್ಯೆಗಳಲ್ಲಿ **ಧಾವತೇ** = ಋಗಾದಿಗಳಂತೆ ಕ್ಲಿಷ್ಟವಲ್ಲದ್ದರಿಂದ ಅತಿ ಶ್ರೇಷ್ಠವಾಗಿ ವ್ಯಾಖ್ಯಾನ ಮಾಡುತ್ತಾರೆ. ॥ ೧೫೯ ॥

ವಿಷ್ಣುವು ಸರ್ವೋತ್ತಮನೆಂಬ ವಿಷಯದಲ್ಲಿಯೂ ವಾಯುದೇವರು ಇತರ ದೇವತೆಗಳ ದೆಶೆಯಿಂದ ಉತ್ತಮರೆನ್ನುವ ವಿಷಯದಲ್ಲಿಯೂ ದೇವತೆಗಳತಾರತಮ್ಯ ವಿಷಯದಲ್ಲಿಯೂ ಭಾರತಾದಿಗಳಲ್ಲಿರುವ ಪ್ರಮಾಣ ವಾಕ್ಯಗಳನ್ನು ಉದಾಹರಿಸುತ್ತಾರೆ.

**ಅಶ್ವಮೇಧಃ ಕ್ರತುಶ್ರೇಷ್ಠೋ ಜ್ಯೋತಿಃ ಶ್ರೇಷ್ಠೋದಿವಾಕರಃ ।**
**ಬ್ರಾಹ್ಮಣೋ ದ್ವಿಪದಾಶ್ರೇಂಷ್ಠೋ ದೇವಶ್ರೇಷ್ಠಸ್ತು ಮಾರುತಃ ॥ ೧೬೦ ॥**

**ಕ್ರತುಶ್ರೇಷ್ಠಃ** = ಯಾಗಗಳಲ್ಲಿ ಉತ್ತಮವಾದದ್ದು **ಅಶ್ವಮೇಧಃ** = ಅಶ್ವಮೇಧವು **ಜ್ಯೋತಿಃಶ್ರೇಷ್ಠಃ** = ತೇಜಸ್ಸುಗಳಲ್ಲಿ ಉತ್ತಮನು **ದಿವಾಕರಃ** = ಸೂರ್ಯನು **ದ್ವಿಪದಾಂಶ್ರೇಷ್ಠಃ** = ಎರಡು ಕಾಲುಗಳ್ಳ ಮನುಷ್ಯರಲ್ಲಿ ಶ್ರೇಷ್ಠನು

**ಬ್ರಾಹ್ಮಣಃ =** ದ್ವಿಜನು **ದೇವಶ್ರೇಷ್ಠಃ =** ದೇವತೆಗಳಲ್ಲಿ ಉತ್ತಮನು **ಮಾರುತಸ್ತು =** ವಾಯುದೇವರೇ ॥ ೧೬೦ ॥

**ಬಲಮಿಂದ್ರಸ್ಯ ಗಿರಿಶೋ ಗಿರಿಶಸ್ಯ ಬಲಂಮರುತ್ ।**
**ಬಲಂ ತಸ್ಯಹರಿಃ ಸಾಕ್ಷಾತ್ನಹರೇರ್ಬಲಮನ್ಯತಃ ॥ ೧೬೧ ॥**

**ಇಂದ್ರಸ್ಯ =** ದೇವೇಂದ್ರನಿಗೆ **ಗಿರಿಶಃ =** ರುದ್ರನು **ಬಲಂ =** ಬಲಪ್ರದನು **ಗಿರಿಶಸ್ಯ =** ರುದ್ರನಿಗೆ **ಮರುತ್ =** ವಾಯುದೇವರು **ಬಲಂ =** ಬಲಪ್ರದರು **ತಸ್ಯ =** ಆ ವಾಯುದೇವರಿಗೆ **ಸಾಕ್ಷಾತ್ ಬಲಂ =** ಮುಖ್ಯವಾದ ಬಲವು **ಹರಿಃ =** ನಾರಾಯಣನು **ಹರೇಃ =** ಶ್ರೀಹರಿಗೆ **ಅನ್ಯತಃ =** ಇತರರಿಂದ **ಬಲಂನ =** ಬಲವಲ್ಲ. ॥ ೧೬೧ ॥

**ವಾಯುರ್ಭೀಮೋಭೀಮನಾದೋಮಹೌಜಾಃ ಸರ್ವೇಷಾಂಚ ಪ್ರಾಣಿನಾಂ ಪ್ರಾಣಭೂತಃ ।**
**ಅನಾವೃತ್ತಿರ್ದೇಹಿನಾಂ ದೇಹಪಾತೇ ತಸ್ಮಾದ್ವಾಯುರ್ದೇವದೇವೋವಿಶಿಷ್ಟಃ ॥ ೧೬೨ ॥**

**ದೇಹಿನಾಂ =** ಶರೀರವುಳ್ಳ ಜೀವರಿಗೆ **ದೇಹಪಾತೇಸತಿ =** ದೇಹಪತನ ರೂಪಮರಣವಾಗುತ್ತಿರಲು **ಅನಾವೃತ್ತಿಃ =** ಅನಸ್ಯ = ಮುಖ್ಯಪ್ರಾಣನಿಗೆ **ಅವೃತಿಃ =** ದೇಹದಲ್ಲಿ ಇಲ್ಲದಿರುವಿಕೆಯು ದೃಶ್ಯತೇ = ಕಂಡಿದೆ ದೇಹದಲ್ಲಿ ಪ್ರಾಣವಿಲ್ಲದಿರುವಾಗ ಜೀವನಾಭಾವವೂ ದೇಹದಲ್ಲಿ ಪ್ರಾಣವಿರುವಾಗ ಮಾತ್ರ ಜೀವನವೂ ಕಂಡದ್ದರಿಂದ ತಸ್ಮಾತ್ = ಅನ್ವಯ ವ್ಯತಿರೇಕಗಳಿಂದ ವಾಯುವಿಗೇನೇ ಉತ್ತಮತ್ವವು ಸಿದ್ಧಿಸುವುದರಿಂದ **ದೇವದೇವಃ =** ದೇವತೆಗಳಿಗೂ ದೇವನಾದ **ಭೀಮಃ =** ಭಯಂಕರನಾದ **ಭೀಮನಾದಃ =** ಯಮಭಟರಿಗೂ ಭಯಂಕರವಾದ ಪ್ರಾಣಘೋಷವೆಂಬ ನಾದವುಳ್ಳ **ಮಹೌಜಾಃ =** ಶ್ರೇಷ್ಠಸಾಮರ್ಥ್ಯವುಳ್ಳ ಸರ್ವೇಷಾಂ = ಎಲ್ಲಾ **ಪ್ರಾಣಿನಾಂಚ =** ಪ್ರಾಣಿಗಳಿಗೂ ಕೂಡ ಪ್ರಾಣಭೂತಃ = **ಶ್ವಾಸಾಭಿಮಾನಿ**ಯಾದ **ವಾಯುಃ =** ವಾಯುದೇವರು ವಿಶಿಷ್ಟಃ = ದೇವಾದಿ ಸಕಲ ಜೀವರಿಂದಲೂ ಉತ್ತಮನು ಅಗ್ನ್ಯಾದಿ ದೇವತೆಗಳು ಶರೀರದಲ್ಲಿ ಪ್ರವೇಶಿಸಿದರೂ ದೇಹದಲ್ಲಿ ಪ್ರಾಣನಿಲ್ಲದಿದ್ದರೆ ಜೀವನವಿಲ್ಲದಿರುವುದರಿಂದಲೂ ಅಗ್ನ್ಯಾದಿ ದೇವತೆಗಳು ಶರೀರದಲ್ಲಿ ಇಲ್ಲದಿದ್ದರೂ ಪ್ರಾಣನಿರುವಾಗ ಜೀವವಿರುವುದರಿಂದ ಇತರ ದೇವತೆಗಳಲ್ಲಿ ಜೀವನದ ಅನ್ವಯವ್ಯತಿರೇಶವಿಲ್ಲ. ॥ ೧೬೨ ॥

---

**ತತ್ವಜ್ಞಾನೇ ವಿಷ್ಣುಭಕ್ತೌ ಧೈರ್ಯೇ ಸ್ಥೈರ್ಯೇ ಪರಾಕ್ರಮೇ ।**
**ವೇಗೇಚ ಲಾಘವೇ ಚೈವ ಪ್ರಲಾಪಸ್ಯ ಚ ವರ್ಜನೇ ॥ ೧೬೩ ॥**

**ಭೀಮಸೇನ ಸಮೋನಾಸ್ತಿ ಸೇನಯೋರುಭಯೋರಪಿ ।**
**ಪಾಂಡಿತ್ಯೇಚ ಪಟುತ್ವೇಚ ಶೂರತ್ವೇಚ ಬಲೇಽಪಿಚ ॥ ೧೬೪ ॥**

**ತಥಾಯುಧಿಷ್ಠಿರೇಣೈವ ಭೀಮಂಪ್ರತಿ ಸವಿಸ್ತರಮ್ ।**
**ಧರ್ಮಶ್ಚಾರ್ಥಶ್ಚ ಕಾಮಶ್ಚ ಮೋಕ್ಷಶ್ಚೈವ ಯಶೋಧ್ರುವಮ್ ॥ ೧೬೫ ॥**

**ತತ್ವಜ್ಞಾನೇ =** ತತ್ವ ಜ್ಞಾನ ವಿಷಯದಲ್ಲಿಯೂ ವಿಷ್ಣುಭಕ್ತೌ = ವಿಷ್ಣು ಭಕ್ತಿ ವಿಷಯದಲ್ಲಿಯೂ ಧೈರ್ಯೇ = ಮನಸ್ಸಿನ ಅಚಾಂಚಲ್ಯ ವಿಷಯದಲ್ಲಿಯೂ ಸ್ಥೈರ್ಯೇ = ದೇಹದ ಅಚಾಂಚಲ್ಯ ವಿಷಯದಲ್ಲಿಯೂ ಪರಾಕ್ರಮೇ = ಪರಾಕ್ರಮ ವಿಷಯದಲ್ಲಿಯೂ ವೇಗೇ = ವೇಗ ವಿಷಯದಲ್ಲಿಯೂ ಲಾಘವೇಚ = ಲಾಘವ ವಿಷಯದಲ್ಲಿಯೂ ಪ್ರಲಾಪಸ್ಯ = ವ್ಯರ್ಥವಾದ ಮಾತಿನ ವರ್ಜನೇ = ಪರಿತ್ಯಾಗ ವಿಷಯದಲ್ಲಿಯೂ ಪಾಂಡಿತ್ಯೇಚ = ಪಾಂಡಿತ್ಯ ವಿಷಯದಲ್ಲಿಯೂ ಪಟುತ್ವೇಚ = ಚತುರತೆಯಲ್ಲಿಯೂ ಶೂರತ್ವೇಚ = ಶೂರತ್ವ ವಿಷಯದಲ್ಲಿಯೂ ಬಲೇಪಿಚ = ಸಾಮರ್ಥ್ಯ ವಿಷಯದಲ್ಲಿಯೂ ಉಭಯೋಃಸೇನಯೋರಪಿ = ಕುರು ಪಾಂಡವರ ಎರಡು ಸೇನೆಗಳಲ್ಲಿಯೂ ಕೂಡ ಭೀಮಸೇನಸಮಃ = ಭೀಮಸೇನನಿಗೆ ಸದೃಶನು ನಾಸ್ತಿ = ಇಲ್ಲ. ತಥಾ = ಹಾಗೆಯೇ ಯುಧಿಷ್ಠಿರೇಣೈವ = ಧರ್ಮರಾಜನಿಂದಲೇ **ಭೀಮಂಪ್ರತಿ =** ಭೀಮನನ್ನು ಕುರಿತು ಸವಿಸ್ತರಂ = ಹೇಳಲ್ಪಟ್ಟಿದೆ. ಭೀಮನಿಗೆಉತ್ಕರ್ಷ ಪ್ರತಿಪಾದಕ ವಾಕ್ಯವನ್ನು ಹೇಳುತ್ತಾರೆ. ಧರ್ಮಶ್ಚ = ಧರ್ಮವೂ ಅರ್ಥಶ್ಚ = ಅರ್ಥವೂ ಕಾಮಶ್ಚ = ಕಾಮವೂ ಮೋಕ್ಷಶ್ಚ = ಮೋಕ್ಷವೂ ಯಶಶ್ಚ = ಕೀರ್ತಿಯೂ ಕೂಡ ಧ್ರುವಂ = ನಿಶ್ಚಯವಾಗಿಯೂ ಸಿಗುತ್ತದೆ ॥ ೧೬೩॥ ೧೬೪ ॥ ೧೬೫ ॥

**ತ್ವಯ್ಯಾಯತ್ತಮಿದಂ ಸರ್ವಂ ಸರ್ವಲೋಕಸ್ಯಭಾರತ ॥**

ಭಾರತ = ಎಲೋ ಭೀಮನೇ ಸರ್ವಲೋಕಸ್ಯ = ಎಲ್ಲಾ ಜೀವರ ಇದಂ ಸರ್ವಂ = ಈ ಹಿಂದೆ ಹೇಳಿದ ಧರ್ಮ ಮೊದಲಾದವುಗಳೆಲ್ಲವೂ ತ್ವಯಿ = ನಿನ್ನಲ್ಲಿ ಆಯತ್ತಂ = ಅಧೀನವಾಗಿ ಮಾಡಲ್ಪಟ್ಟಿದೆ.

ವಿರಾಟ ಪರ್ವದಲ್ಲಿರುವ ದುರ್ಯೋಧನನ ಮಾತನ್ನು ಉದಾಹರಿಸುತ್ತಾರೆ.

**ವಿರಾಟಪರ್ವಗಂ ಚಾಪಿ ವಚೋ ದುರ್ಯೋಧನಸ್ಯಹಿ ॥ ೧೬೬ ॥**

ವಿರಾಟ ಪರ್ವಗಂ = ವಿರಾಟಪರ್ವದಲ್ಲಿರುವ ದುರ್ಯೋಧನ ಸ್ಮವಚಃ = ದುರ್ಯೋಧನನ ಮಾತುಕೂಡ ಅಸ್ತಿ = ಇದೆ ಹಿ = ಪ್ರಸಿದ್ಧವು.

**ವೀರಾಣಾಂ ಶಾಸ್ತ್ರವಿದುಷಾಂ ಕೃತೀನಾಂ ತತ್ವನಿರ್ಣಯೇ ।**
**ಸತ್ವೇ ಬಾಹುಬಲೇ ಧೈರ್ಯೇ ಪ್ರಾಣೇ ಶಾರೀರಸಂಭವೇ ॥ ೧೬೭ ॥**
**ಸಾಂಪ್ರತಂ ಮಾನುಷೇ ಲೋಕೇ ಸದೈತ್ಯನರರಾಕ್ಷಸೇ ।**
**ಚತ್ವಾರಃ ಪ್ರಾಣಿನಾಂ ಶ್ರೇಷ್ಠಾ ಸಂಪೂರ್ಣಬಲಪೌರುಷಾಃ ॥ ೧೬೮ ॥**

ವೀರಾಣಾಂ = ಶೂರರಾದವರ ಶಾಸ್ತ್ರವಿದುಷಾಂ = ಶಾಸ್ತ್ರಗಳನ್ನು ತಿಳಿದವರ ಮಧ್ಯದಲ್ಲಿ ಅಥವಾ ವೇದ ಪಂಚರಾತ್ರಾದಿ ಶಾಸ್ತ್ರವನ್ನು ತಿಳಿದವರ ಕೃತೀನಾಂ = ಕರ್ತವ್ಯ ಕರ್ಮಗಳ ತತ್ವನಿರ್ಣಯೇ = ತತ್ವನಿರ್ಣಯದಲ್ಲಿಯೂ ಸತ್ವೇ ಬಾಹುಬಲೇ = ಭುಜಪರಾಕ್ರಮದ ವಿಷಯದಲ್ಲಿಯೂ ಧೈರ್ಯೇ = ಧೀರತ್ವವಿಷಯದಲ್ಲಿಯೂ ಪ್ರಾಣೇ = ಪ್ರಕೃಷ್ಟ ಚೇಷ್ಟಾವಿಷಯದಲ್ಲಿಯೂ ಶಾರೀರಸಂಭವೇ = ಶರೀರಸಂಬಂಧಿಯಾದ ಉದ್ಗಮನ, ಉತ್ಪತನ ಮೊದಲಾದವುಗಳ ಸಂಭಾವನೆಯಲ್ಲಿಯೂ ಸಾಂಪ್ರತಮ್ = ಈಗ ಸದೈತ್ಯನರರಾಕ್ಷಸೇ = ದೈತ್ಯರೂ, ಮನುಷ್ಯರೂ, ರಾಕ್ಷಸರೂ ಇವರಿಂದ ಕೂಡಿದ ಮಾನುಷೇಲೋಕೇ = ಮನುಷ್ಯ ಲೋಕದಲ್ಲಿ ಸಂಪೂರ್ಣಬಲ ಪೌರುಷಾಃ = ಪರಿಪೂರ್ಣವಾದ ಸಾಮರ್ಥ್ಯ ಪರಾಕ್ರಮವುಳ್ಳವರು ಚತ್ವಾರಃ = ನಾಲ್ವರೇ ಪ್ರಾಣಿನಾಂ ಶ್ರೇಷ್ಠಾಃ = ಪ್ರಾಣಿಗಳಲ್ಲಿ ಶ್ರೇಷ್ಠರಾದವರು. ॥ ೧೬೭ ॥ ೧೬೮ ॥

**ಭೀಮಶ್ಚ ಬಲಭದ್ರಶ್ಚ ಮದ್ರರಾಜಶ್ಚ ಮದ್ರರಾಜಶ್ಚ ವೀರ್ಯವಾನ್ ।**
**ಚತುರ್ಥಃ ಕೀಚಕಸ್ತೇಷಾಂ ಪಂಚಮಂ ನಾನುಶುಶ್ರುಮಃ ॥ ೧೬೯ ॥**

**ಅನ್ಯೋನ್ಯಾನಂತರಬಲಾಃ ಕ್ರಮಾದೇವ ಪ್ರಕೀರ್ತಿತಾಃ ।**
**ವಚನಂ ವಾಸುದೇವಸ್ಯ ತಥೋದ್ಯೋಗಗತಂ ಪರಮ್ ॥ ೧೭೦ ॥**

ವೀರ್ಯವಾನ್ ಭೀಮಶ್ಚ = ಪರಾಕ್ರಮವುಳ್ಳ ಭೀಮನು. ಬಲಭದ್ರಶ್ಚ = ಬಲರಾಮನು ಮದ್ರರಾಜಶ್ಚ = ಶಲ್ಯನು ತೇಷಾಂ = ಅವರ (ಮಧ್ಯದಲ್ಲಿ) ಚತುರ್ಥಃ = ನಾಲ್ಕನೆಯವನು ಕೀಚಕಃ = ಕೀಚಕನು ಪಂಚಮಂ = ಐದನೆಯವನನ್ನು ನಾನು ಶುಶ್ರುಮಃ = ಕೇಳುವುದಿಲ್ಲ. ಕ್ರಮಾದೇವ = ಭೀಮಾದಿ ಕ್ರಮದಿಂದಲೇ ಅನ್ಯೋನ್ಯಾನಂತರ ಬಲಾಃ = ಪರಸ್ಪರ ತಾರತಮ್ಯದಿಂದ ಕೂಡಿದ ಬಲವುಳ್ಳವರಾಗಿಯೇ ಪ್ರಕೀರ್ತಿತಾಃ = ಹೇಳಲ್ಪಡುತ್ತಾರೆ. ತಥಾ = ಹಾಗೆಯೇ ಭೀಮೋತ್ಕರ್ಷಪ್ರತಿಪಾದಕವಾದ ಉದ್ಯೋಗಗತಂ = ಉದ್ಯೋಗ ಪರ್ವದಲ್ಲಿರತಕ್ಕ ವಾಸುದೇವಸ್ಯ = ಶ್ರೀ ಕೃಷ್ಣನ ಪರಂ = ಉತ್ತಮವಾದ ವಚನಂ = ಮಾತು ಅಸ್ತಿ = ಇದೆ. ॥ ೧೬೯ ॥ ೧೭೦ ॥

**ಯತ್ಕಿಂಚಿದಾತ್ಮನಿ ಕಲ್ಯಾಣಂ ಸಂಭಾವಯಸಿ ಪಾಂಡವ ।**
**ಸಹಸ್ರ ಗುಣ ಮುಪ್ಯೇತತ್ತ್ವಯಿ ಸಂಭಾವಯೋಮ್ಯಹಮ್ ॥ ೧೭೧ ॥**

ಹೇಪಾಂಡವ = ಎಲೋ ಭೀಮನೇ ಆತ್ಮನಿ = ತನ್ನಲ್ಲಿ ಯತ್ಕಿಂಚಿತ್ = ಯಾವುದೊಂದು ಕಲ್ಯಾಣಂ = ಜ್ಞಾನ ಭಕ್ತಿ, ವಿರಕ್ತಿ ಮೊದಲಾದ ಶೋಭನ ಗುಣವನ್ನು ಸಂಭಾವಯಸಿ = ತಿಳಿದಿರುವೆಯೋ ಅಹಂ ನಾನು ತ್ವಯಿ = ನಿನ್ನಲ್ಲಿ

ಏತತ್ = ಈ ಕಲ್ಯಾಣವನ್ನು ಸಹಸ್ರಗುಣ ಮಿಪಿ = ನೀನು ತಿಳಿದಿರುವುದಕ್ಕಿಂತ ಸಾವಿರಪಟ್ಟು ಹೆಚ್ಚಾದ್ದನ್ನಾಗಿ ಸಂಭಾವ-ಯಾಮಿ = ತಿಳಿಯುತ್ತೇನೆ ॥ ೧೭೧ ॥

**ಯಾದೃಶೇಚ ಕುಲೇಜಾತಃ ಸರ್ವರಾಜಾಭಿಪೂಜಿತೇ ।**
**ಯಾದೃಶಾನಿಚ ಕರ್ಮಾಣಿ ಭೀಮ ತ್ವಮಸಿ ತಾದೃಶಃ ॥ ೧೭೨ ॥**

ಹೇಭೀಮ = ಏಲೋ ಭೀಮನೇ ತ್ವಂ = ನೀನು ಸರ್ವರಾಜಾಭಿಪೂಜಿತೇ = ಎಲ್ಲಾ ರಾಜರಿಂದ ಪೂಜಿಸಿಕೊಳ್ಳಲ್ಪಟ್ಟ ಯಾದೃಶೇಕುಲೇ = ಎಂತಹ ಉತ್ತಮಕುಲದಲ್ಲಿ ಜಾತಃ = ಹುಟ್ಟಿರುವಿ ಯೋತ್ವಂ = ನೀನು ತಾದೃಶಃ ಅಂತಹವನಾಗಿ ಅಂತಹ ಕುಲದಲ್ಲಿ ಹುಟ್ಟಲು ಯೋಗ್ಯನು ಅಸಿ = ಆಗಿದ್ದಿ ಯಾದೃಶಾನಿಚ ಕರ್ಮಾಣಿ = ಆ ಕುಲದಲ್ಲಿ ಹುಟ್ಟಿದವರಿಗೆ ಎಂತಹ ಕರ್ಮಗಳು ಯೊಗ್ಯಗಳೋ ತಾದೃಶಃ ತ್ವಮಸಿ = ನೀನು ಅಂತಹ ಕರ್ಮವುಳ್ಳವನಾಗಿರುತ್ತಿ॥ ೧೭೨ ॥

**ಅಸ್ಮಿನ್ ಯುದ್ಧೇ ಭೀಮಸೇನ ತ್ವಯಿ ಭಾರಃ ಸಮಾಹಿತಃ ।**
**ಧೂರಜರ್ಜುನೇನ ವೋಢವ್ಯಾ ವೋಢವ್ಯಾ ಇತರೇಜನಾಃ ॥ ೧೭೩ ॥**

ಹೇ ಭೀಮಸೇನ = ಏಲೋ ಭೀಮಸೇನನೇ ಅಸ್ಮಿನ್ಯುದ್ಧೇ = ಈ ಯುದ್ಧದಲ್ಲಿ ತ್ವಯಿ = ನಿನ್ನಲ್ಲಿ ಭಾರಃ = ಹೊರೆಯು ಸಮಾಹಿತಃ = ಇಡಲ್ಪಟ್ಟಿದೆ. ಧೂಃ = ಯಗಂಧರವು ಅರ್ಜುನೇನ = ಅರ್ಜುನನಿಂದ ವೋಢವ್ಯಾ = ಹೊರಲ್ಪಡಲು ಯೋಗ್ಯವು. ಇತರೇ ಜನಾಃ = ಬೇರೆ ಜನರು ತ್ವಯಾ = ನಿನ್ನಿಂದ ಹೊರಲ್ಪಡಬೇಕು. ಇದರಿಂದ ನೀನು ರಥಿಕನು. ಯುಗಂಧರವನ್ನು ಹೂರುವ ಅಶ್ವವು ಹೇಗೋ ಹಾಗೆ ಅರ್ಜುನನು ನಿನಗೆ ಅಂಗಭೂತನು ಎಂದು ಹೇಳಿದ ಹಾಗಾಯಿತು. ॥ ೧೭೩ ॥

ದ್ರೌಪದಿಯು ಭಾರತಿ ಎಂದೂ ಶೇಷಾದಿಗಳಿಂದ ಉತ್ತಮಳು ಎಂಬ ವಿಷಯದಲ್ಲಿಯೂ ಪ್ರಮಾಣವನ್ನು ಹೇಳುತ್ತಾರೆ.

**ಉಕ್ತಂ ಪುರಾಣೇ ಬ್ರಹ್ಮಾಂಡೇ ಬ್ರಹ್ಮಣಾ ನಾರದಾಯೆಚ ।**
**ಯಸ್ಯಾಃ ಪ್ರಸಾದಾತ್ಪರಮಂವಿದಂತಿ ಶೇಷಃ ಸುಪರ್ಣೋಗಿರಿಶಃ ಸುರೇಂದ್ರಃ ॥**
**ಯಾತಾಚಯೇಷಾಂ ಪೃಥಮೈವ ಭಾರತೀ ಸಾದ್ರೌಪದೀ ನಾಮು ಬಭೂವ ಭೂಮೌ॥೧೭೪॥**
**ಯಾ ಮಾರುತಾದ್ಗರ್ಭಮಧತ್ತ ಪೂರ್ವಂ ಶೇಷಂ ಸುಪರ್ಣಂ ಗಿರಿಶಂ ಸುರೇಂದ್ರಮ್ ।**
**ಚತುರ್ಮುಖಾಭಾಂಶ್ಚ ತುರಃ ಕುಮಾರಾನ್ ಸಾದ್ರೌಪದೀ ನಾಮು ಬಭೂವ ಭೂಮೌ ॥೧೭೫॥**

ಬ್ರಹ್ಮಣಾ = ಬ್ರಹ್ಮನಿಂದ ನಾರದಾಯ = ನಾರದನಿಗೋಸ್ಕರ ಬ್ರಹ್ಮಾಂಡೇ = ಬ್ರಹ್ಮಾಂಡವೆಂಬ ಪುರಾಣೇ = ಪುರಾಣದಲ್ಲಿ ಉಕ್ತಂ = ಹೇಳಲ್ಪಟ್ಟಿದೆ. ಶೇಷಃ = ಶೇಷನು ಸುಪರ್ಣಃ = ಗರುಡನು ಗಿರೀಶಃ = ರುದ್ರನು ಸುರೇಂದ್ರಃ = ದೇವೇಂದ್ರನು ಯಸ್ಯಾಃ = ಯಾವ ಭಾರತೀಯ ಪ್ರಸಾದಾತ್ = ಅನುಗ್ರಹದಿಂದ ಪರಮಂ = ಸರ್ವೋತ್ತಮನಾದ ಹರಿಯನ್ನು ವಿದಂತಿ = ತಿಳಿಯುತ್ತಾರೆ ಏಷಾಂ = ಈ ಶೇಷಾದಿಗಳಿಗೆ ಯಾ = ಯಾವಳು ಪ್ರಥಮ = ಮೊದಲನೆಯ ಮಾತೈವ = ಭಾರತಿಯೋ (ವಿನತೆಯಲ್ಲಿ ಗರುಡನು ನಂತರ ಹುಟ್ಟಿದವನು) ಸಾ = ಆ ಭಾರತೀಯು ದ್ರೌಪದೀ ನಾಮ = ದ್ರೌಪದಿಯೆಂದು ಪ್ರಸಿದ್ಧಳಾಗಿ ಭೂಮೌ = ಭೂಮಿಯಲ್ಲಿ ಬಭೂವ = ಹುಟ್ಟಿದಳು ಯಾ = ಯಾವ ಭಾರತೀಯ ಪೂರ್ವಂ = (ಹಿಂದೆ) ಮೊದಲು ಮಾರುತಾತ್ = ವಾಯುದೇವರ ದಸೆಯಿಂದ ಗರ್ಭಂ = ಗರ್ಭವನ್ನು ಅಧತ್ತ = ಧರಿಸಿದಳೋ ಶೇಷ್ಮಂ = ಶೇಷನನ್ನು ಸುಪರ್ಣಂ = ಗರುಡನನ್ನು ಗಿರಿಶಂ = ರುದ್ರನನ್ನು ಸುರೇಂದ್ರಂ = ದೇವೇಂದ್ರನನ್ನು ಚತುರ್ಮುಖಾಭಾನ್ = ವಾಯು ದೇವರು ಮುಂದಿನ ಕಲ್ಪದಲ್ಲಿ ಬ್ರಹ್ಮನಾಗುವುದರಿಂದ ಬ್ರಹ್ಮನಿಗೆ ಸದೃಶ್ಯರಾದ ಚತುರಃ = ನಾಲ್ಕು ಸಂಖ್ಯಾಕರಾದ ಕುಮಾರಾನ್= ಮಕ್ಕಳನ್ನು ಪಡೆದಳೋ ಸಾ = ಆ ಭಾರತೀಯು ದ್ರೌಪದೀನಾಮ = ದ್ರೌಪದಿಯೆಂದು ಪ್ರಸಿದ್ಧಳಾಗಿ ಭೂಮೌ = ಭೂಮಿಯಲ್ಲಿ ಬಭೂವ = ಹುಟ್ಟಿದಳು.

ಶೇಷನು ಇಂದ್ರನಿಂದ ಉತ್ತಮನೆಂಬ ವಿಷಯದಲ್ಲಿ ಭಾರತ ವಾಕ್ಯವನ್ನು ಉದಾಹರಿಸುತ್ತಾರೆ.

**ಯಸ್ಯಾಧಿಕೋಬಲೇ ನಾಸ್ತಿ ಭೀಮಮೇಕಮೃತೇ ಕ್ವಚಿತ್ ।**
**ನ ವಿಜ್ಞಾನೇ ನಚಜ್ಞಾನೇ ವಿಷರಾಮಃ ಸ ಲಾಂಗಲೀ ॥ ೧೭೬ ॥**

ಯಸ್ಯ = ಯಾವ ಶೇಷನಿಗೆ ಭೀಮಮೇಕಂ = ಭೀಮನೊಬ್ಬನನ್ನು ಋತೇ = ಹೊರತು ಕ್ವಚಿತ್ = ಎಲ್ಲಿಯೂ ಬಲೇ = ಸಾಮರ್ಥ್ಯದಲ್ಲಿಯೂ ಅಧಿಕಃ = ಶ್ರೇಷ್ಠನು ನಾಸ್ತಿ = ಇಲ್ಲವೋ ಜ್ಞಾನೇ = ಸಾಮಾನ್ಯ ಜ್ಞಾನದಲ್ಲಿಯೂ ನಚ = ಅಧಿಕನಿಲ್ಲವೋ ಸಃ = ಆ ಶೇಷನು ಏಷ = ಈರಾಮಃ = ಬಲರಾಮನು ಲಾಂಗಲೀ = ಹಲಾಯುದ್ಧವುಳ್ಳದನು. ॥ ೧೭೬ ॥

**ಯಸ್ಯ ನಪ್ರತಿಯೋದ್ಧಾಸ್ತಿ ಭೀಮಮೇಕಮೃತೇ ಕ್ವಚಿತ್ ।**
**ಅನ್ವಿಷ್ಯಾಪಿ ತ್ರಿಲೋಕೇಷು ಸಏಷ ಮುಸಲಾಯುಧಃ ॥ ೧೭೭ ॥**

ತ್ರಿಲೋಕೇಷು = ಮೂರು ಲೋಕಗಳಲ್ಲಿ ಅನ್ವಿಷ್ಯಾಪಿ = ಹುಡುಕಿದರೂ ಕೂಡ ಕ್ವಚಿತ್ = ಎಲ್ಲಿಯೂ ಭೀಮಮೇಕಂ = ಭೀಮನೊಬ್ಬನನ್ನು ಋತೇ = ಹೊರತು ಯಸ್ಯ = ಯಾವ ಶೇಷನಿಗೆ ಪ್ರತಿಯೋದ್ಧಾ = ಪ್ರತಿಯಾಗಿ ಯುದ್ಧಮಾಡುವವನು ನಾಸ್ತಿ = ಇಲ್ಲವೋ ಸಃ = ಆ ಶೇಷನು ಏಷಈಮುಸಲಾಯುಧಃ = ಈ ಒನಕೆಯು ಆಯುಧವಾಗಿ ಉಳ್ಳ ಬಲರಾಮನು. ೧೭೭

ಅರ್ಜುನನ ಸ್ವರೂಪವನ್ನು ಹೇಳುತ್ತಾರೆ.

**ತಥಾಯುಧಿಷ್ಠಿರೇಣೈವ ಭೀಮಾಯೇಸಮುದೀರಿತಮ್ ।**
**ಅನುಜ್ಞಾತೋ ರೌಹಿಣೇಯಾತ್ತ್ವಯಾ ಚೈವಾಪರಾಜಿತಃ ॥ ೧೭೮ ॥**
**ಸರ್ವವಿದ್ಯಾಸು ಭೀಭತ್ಸುಃ ಕೃಷ್ಣೇನ ಚ ಮಹಾತ್ಮನಾ**
**ಅನ್ವೇಷ ರೌಹಿಣೇಯಂಚ ತ್ವಾಂಚ ಭೀಮಾಪರಾಜಿತಃ ॥ ೧೭೯ ॥**

ತಥಾ = ಹಾಗೆಯೇ ಯುಧಿಷ್ಠಿರೇಣೈವ = ಧರ್ಮರಾಜನಿಂದಲೇ ಭೀಮಾಯ = ಭೀಮನಿಗೋಸ್ಕರ ಸಮುದೀರಿತಂ = ಹೇಳಲ್ಪಟ್ಟಿದೆ. ಯತಃ = ಯಾವ ಕಾರಣದಿಂದ ಬೀಭತ್ಸುಃ = ಅರ್ಜುನನು ರೌಹಿಣೇಯಾತ್ = ಬಲರಾಮನ ದಸೆಯಿಂದ ತ್ವಯಾ = ನಿನ್ನ ದಸೆಯಿಂದಲೂ ಮಹಾತ್ಮನಾ = ಮಹಾತ್ಮನಾದ ಕೃಷ್ಣೇನ ಚ = ಕೃಷ್ಣನಿಂದಲೂ ಕೂಡ ಸರ್ವವಿದ್ಯಾಸು = ಎಲ್ಲಾ ವಿದ್ಯೆಗಳಲ್ಲಿ ಅನುಜ್ಞಾತಃ = ಅನುಜ್ಞೆಯನ್ನು ಹೊಂದಿದವನೋ ಅತಃ = ಆ ಕಾರಣದಿಂದ ಅಪರಾಜಿತಃ = ಪರಾಜಯ ರಹಿತನು, ಇದರಿಂದ ಕೃಷ್ಣ, ವಾಯು, ಬಲರಾಮರಿಂದ ಅನಂತರದವನು ಅರ್ಜುನನೆಂದು ಹೇಳಿದ ಪ್ರಾಗಾನಯಿತು. ತ್ವಾಮನು = ನಿನ್ನ ಅನಂತರ ರೌಹಿಣೇಯಂ ಚ ಅನು = ಬಲರಾಮನ ಅನಂತರವೂ ಕೂಡ ಏಷಃ = ಈ ಅರ್ಜುನನು ಹೇ ಭೀಮ = ಎಲೋ ಭೀಮನೇ ಅಪರಾಜಿತಃ = ಪರಾಜಯ ರಹಿತನು. ॥ ೧೭೯ ॥

**ವೀರ್ಯೇ ಶೌರ್ಯೇ ಬಲೇ ನಾನ್ಯಃ ತೃತೀಯೋಃ ಫಲ್ಗುನಾದೃತೇ ।**
**ತಥೈವ ದ್ರೌಪದೀವಾಕ್ಯಂ ವಾಸುದೇವಂ ಪ್ರತೀರಿತಮ್ ॥ ೧೮೦ ॥**

ಹೇ ಭೀಮ = ಎಲೋ ಭೀಮನೇ ತ್ವಾಂ, ರೋಹಿಣೇಯಂ ಚ ಅನು = ನಿನ್ನ ಮತ್ತು ಬಲರಾಮನ ಅನಂತರ ವೀರ್ಯೇ = ವೀರ್ಯದಲ್ಲಿಯೂ ಶೌರ್ಯೇ = ಶೌರ್ಯದಲ್ಲಿಯೂ ಬಲೇ = ಶಕ್ತಿಯಲ್ಲಿಯೂ ಫಲ್ಗುನಾದೃತೇ = ಅರ್ಜುನನಿಂದ ಹೊರತು ಅನ್ಯಃ = ಬೇರೊಬ್ಬನು ತೃತೀಯಃ = ಮೂರನೆಯವನು ನ = ಇರುವುದಿಲ್ಲ. ತಥೈವ = ಹಾಗೆಯೇ ವಾಸುದೇವಂ ಪ್ರತಿ = ಶ್ರೀ ಕೃಷ್ಣನನ್ನು ಕುರಿತು ಈರಿತಂ = ಹೇಳಲ್ಪಟ್ಟ ದ್ರೌಪದೀವಾಕ್ಯಂ = ದ್ರೌಪದಿಯ ಮಾತು ಅಸ್ತಿ = ಇದೆ. ॥ ೧೮೦ ॥

**ಅಧಿಜ್ಯಮಪಿ ಯತ್ಕರ್ತುಂ ಶಕ್ಯತೇ ನೈವ ಗಾಂಡಿವಮ್ ।**
**ಅನ್ಯತ್ರ ಭೀಮಪಾರ್ಥಾಭ್ಯಾಂ ಭವತಶ್ಚ ಜನಾರ್ದನ ॥ ೧೮೧ ॥**

ಹೇ ಜನಾರ್ದನ = ಎಲೋ ಕೃಷ್ಣನೇ ಭವತಃ = ನಿನ್ನಿಂದಲೂ ಭೀಮಪಾರ್ಥಾಭ್ಯಾಂ = ಭೀಮಾರ್ಜುನರಿಂದ ಅನ್ಯತ್ರ = ಹೊರತು ಬೇರೆಯವರಲ್ಲಿ ಅಧಿಜ್ಯಮಪಿ = ಗಾಂಡೀವವನ್ನು ಜ್ಯಾ ಸಹಿತವಾದ್ದನ್ನಾಗಿ ಕರ್ತುಂ = ಮಾಡಲು ಯತ್ = ಯಾವ ಕಾರಣದಿಂದ ನ ಶಕ್ಯತೇ = ಸಾಧ್ಯವಾಗುವುದಿಲ್ಲವೋ ತತ್ = ಆ ಕಾರಣದಿಂದ ವೀರ್ಯೇ ಶೌರ್ಯೇ ಬಲಗಳಲ್ಲಿ

ಅರ್ಜುನಾದೃತೇ ಅನ್ಯಃ ತೃತೀಯಃ ನಾಸ್ತಿ ವೀರ್ಯಾದಿಗಳಲ್ಲಿ ಅರ್ಜುನನ್ನು ಬಿಟ್ಟರೆ ಮೂರನೆಯವನು ಬೇರೊಬ್ಬನೂ ಇಲ್ಲ. ॥ ॥ ೧೮೧ ॥

**ತಥೈವಾನ್ಯತ್ರ ವಚನಂ ಕೃಷ್ಣದ್ವೈಪಾಯನೇರಿತಮ್ ।**
**ದ್ವಾವೇವಪುರುಷೌ ಲೋಕೇ ವಾಸುದೇವಾದನಂತರೌ ॥**
**ಭೀಮಸ್ತು ಪ್ರಥಮಸ್ತತ್ರ ದ್ವಿತೀಯೋ ದ್ರೌಣಿರೇವಚ ॥ ೧೮೨ ॥**

ಹಿಂದೆ ಭೀಮನ ಅನಂತರ ಶೇಷಸ್ವರೂಪನಾದ ಬಲರಾಮನು ಎಂದು ಹೇಳಲ್ಪಟ್ಟಿದೆ. ಈಗ ರುದ್ರಸ್ವರೂಪನಾದ ಅಶ್ವತ್ಥಾಮನ ಹಾಗೆಯೇ ಎಂದು ಹೇಳುತ್ತಾರೆ.

ತಥೈವ = ಹಾಗೆಯೇ ಅನ್ಯತ್ರ = ಬೇರೆಕಡೆ ಕೃಷ್ಣದ್ವೈಪಾಯನೇರಿತಂ = ವೇದವ್ಯಾಸರಿಂದ ಹೇಳಲ್ಪಟ್ಟ ವಚನಂ = ಮಾತು ಅಸ್ತಿ = ಇದೆ. ವಾಸುದೇವಾದನಂತರೌ = ಶ್ರೀ ಕೃಷ್ಣನ ಅನಂತರ ಲೋಕೆ-ಜಗತ್ತಿನಲ್ಲಿ ದ್ವಾವೇವಪುರುಷೌ = ಇಬ್ಬರೇ ಪ್ರಧಾನರು ತತ್ರ = ಅವರಲ್ಲಿ ಭೀಮಸ್ತು = ಭೀಮನಾದರೂ ಪ್ರಥಮಃ = ಮೊದಲನೆಯವರು ದ್ವಿತೀಯಃ = ಎರಡನೆಯವನು ದ್ರೌಣಿರೇವ = ಅಶ್ವತ್ಥಾಮನೇ ಕೆಲವು ಕಡೆ ಯುದ್ಧದಲ್ಲಿ ಅಶ್ವತ್ಥಾಮನಿಗಿಂತ ಅರ್ಜುನನಿಗೆ ಹೆಚ್ಚು ಸಾಮರ್ಥ್ಯವು ಕಂಡು ಬರುತ್ತದೆ ಅದು ಹೇಗೆ ಎಂಬ ಶಂಕೆಯನ್ನು ಪರಿಹರಿಸುತ್ತಾರೆ.

**ಅಕ್ಷಯಾವಿಷುಧೀ ದಿವ್ಯೇಧ್ವಜೋವಾನರಲಕ್ಷಣಃ ।**
**ಗಾಂಡೀವಂ ಧನುಷಾಂ ಶ್ರೇಷ್ಠಂತೇನ ದ್ರೌಣೇರ್ವರೋರ್ಜುನಃ ॥ ೧೮೩ ॥**

ಅಕ್ಷಯೌ = ನಾಶವಿಲ್ಲದ ದಿವ್ಯೇ = ಅಲೌಕಿಕಗಳಾದ ಇಷುಧೀ = ಬತ್ತಳಿಕೆಗಳು ವಾನರಲಕ್ಷಣಃ = ಕಪಿಯು ಚಿಹ್ನೆಯಾಗಿ ಉಳ್ಳ ಧ್ವಜಃ = ಪತಾಕೆಯು ಧನುಷಾಂ = ಬಿಲ್ಲುಗಳ ಮಧ್ಯದಲ್ಲಿ ಶ್ರೇಷ್ಠಂ = ಉತ್ತಮವಾದ ಗಾಂಡೀವಂ = ಗಾಂಡೀವವೆಂಬ ಧನುಸ್ಸು ತೇನ = ಆ ಕಾರಣದಿಂದ ದ್ರೌಣೇಃ = ಅಶ್ವತ್ಥಾಮನಿಂದ ಅರ್ಜುನನು ವರಃ = ಶ್ರೇಷ್ಠನು. ಸ್ವಾಭಾವಿಕವಾದ ಶ್ರೇಷ್ಠತ್ವವು ಅಶ್ವತ್ಥಾಮನಲ್ಲಿ. ಔಪಾಧಿಕ ಶ್ರೇಷ್ಠತ್ವವು ಅರ್ಜುನನಲ್ಲಿ. ॥ ೧೮೩ ॥

**ಇತ್ಯಾದ್ಯನಂತ ವಾಕ್ಯಾನಿ ಸಂತ್ಯೇವಾರ್ಥೇವಿವಕ್ಷಿತೇ ।**
**ಕಾನಿಚಿದ್ದರ್ಶಿತಾನ್ಯತ್ರ ದಿಙ್ಮಾತ್ರಪ್ರತಿಪತ್ತಯೇ ॥ ೧೮೪ ॥**

ಈ ರೀತಿಯಾಗಿ ವಿಷ್ಣು ಸರ್ವೋತ್ತಮತ್ವಮತ್ತಮವನ್ನು ದೇವತಾ ತಾರತಮ್ಯವನ್ನೂ ಹೇಳಿ ಉಪ ಸಂಹಾರ ಮಾಡಲು ಕಾರಣವನ್ನು ಹೇಳುತ್ತಾರೆ.

ಇತ್ಯಾದ್ಯನಂತ ವಾಕ್ಯಾನಿ = ಇವೇ ಮೊದಲಾದ ಅಪರಿಮಿತ ವಾಕ್ಯಗಳು ವಿವಕ್ಷಿತೇ = ಹೇಳಲು ಇಷ್ಟವಾದ ಅರ್ಥೇ = ಅರ್ಥದಲ್ಲಿ ಸಂತಿ = ಇವೆ. ಅನಂತ ವಾಕ್ಯಗಳಿರುವುದರಿಂದ ಉಪ ಸಂಹಾರ ಮಾಡುತ್ತೇವೆ ಎಂಬ ಅಭಿಪ್ರಾಯ. ಹಾಗಾದರೆ ಕೆಲವು ವಾಕ್ಯಗಳನ್ನಾದರೂ ಏಕೆ ಉದಾಹರಿಸಿದ್ದು ಎಂಬ ಶಂಕೆಗೆ ಸಮಾಧಾನ ಹೇಳುತ್ತಾರೆ. ಅತ್ರ = ಈ ತಾತ್ಪರ್ಯ ನಿರ್ಣಯ ಗ್ರಂಥದಲ್ಲಿ ದಿಙ್ಮಾತ್ರ ಪ್ರತಿಪತ್ತಯೇ = ನಿಜ್ಞಾತ್ರದ ಜ್ಞಾನಕ್ಕೋಸ್ಕರ ಅಂದರೆ ಮಾರ್ಗವನ್ನು ತೋರಿಸುವುದಕ್ಕೋಸ್ಕರ ಕಾನಿಚಿತ್ = ಕೆಲವು ವಾಕ್ಯಗಳು ದರ್ಶಿತಾನಿ = ತೋರಿಸಲ್ಪಟ್ಟವು. ॥ ೧೮೪ ॥

**ತಸ್ಮಾದುಕ್ತಕ್ರಮೇಣೈವ ಪುರುಷೋತ್ತಮತಾ ಹರೇಃ ।**
**ಅನೌಪಚಾರಿಕೀ ಸಿದ್ಧಾ ಬ್ರಹ್ಮತಾ ಚ ವಿನಿರ್ಣಯಾತ್ ॥ ೧೮೫ ॥**

ತಸ್ಮಾತ್ = ಆದ್ದರಿಂದ ಉಕ್ತಕ್ರಮೇಣೈವ = ಹಿಂದೆ ಹೇಳಿದ ತಾರತಮ್ಯ ಕ್ರಮದಿಂದ ಹರೇಃ = ಶ್ರೀ ಹರಿಗೆ ಪುರುಷೋತ್ತಮತಾ = ಪುರುಷ ಶ್ರೇಷ್ಠತ್ವವೂ ವಿನಿರ್ಣಯಾತ್ = ನಿಶ್ಚಯದಿಂದ ಬ್ರಹ್ಮತಾಚ್ = ಗುಣ ಪೂರ್ಣತ್ವರೂಪವಾದ ಪರಬ್ರಹ್ಮತ್ವವೂ ಕೂಡ ಅನೌಪಚಾರಿಕೀ = ಮುಖ್ಯವಾದದ್ದು ಸಿದ್ಧಾ = ಸಿದ್ಧವಾಯಿತು. ॥ ೧೮೬ ॥

ಹಿಂದೆ ಹೇಳಿದ ಅರ್ಥವನ್ನು ಸಂಕ್ಷೇಪವಾಗಿ ಹೇಳುತ್ತಾರೆ.

**ಪೂರ್ಣಪ್ರಜ್ಞಕೃತೇಯಂ ಸಂಕ್ಷೇಪಾದುದ್ಧೃತಿಃ ಸುವಾಕ್ಯಾನಾಂ ।**
**ಶ್ರೀಮದ್ಭಾರತಗಾನಾಂ ವಿಷ್ಣೋಃ ಪೂರ್ಣತ್ವನಿರ್ಣಯಾಯೈವ ॥ ೧೮೬ ॥**

ವಿಷ್ಣೋಃ = ನಾರಾಯಣನಿಗೆ ಪೂರ್ಣತ್ವನಿರ್ಣಯಾಯೈವ = ಗುಣಪೂರ್ಣತ್ವವನ್ನು ನಿಶ್ಚಯ ಮಾಡುವುದಕ್ಕಾಗಿಯೇ ಶ್ರೀಮದ್ಭಾರತಗಾನಾಂ = ಶ್ರೀಮದ್ಭಾರತದಲ್ಲಿರ ತಕ್ಕ ಸುವಾಕ್ಯಾನಾಂ = ನಿರ್ದುಷ್ಟವಾಕ್ಯಗಳ ಇಯಂ = ಈದಾವ ಉದ್ಧೃತಿಃ = ಉದ್ಧಾರವು ಸಂಕ್ಷೇಪಾತ್ = ಸಂಕ್ಷೇಪದಿಂದ ಪೂರ್ಣಪ್ರಜ್ಞಕೃತಾ = ಪೂರ್ಣಪ್ರಜ್ಞಾಚಾರ್ಯರಿಂದ ಮಾಡಲ್ಪಟ್ಟಿದೆ. ॥ ೧೮೬ ॥

ಎರಡು ಅಧ್ಯಾಯಗಳಿಂದ ಶ್ರೀಹರಿಗೆ ಸರ್ವೋತ್ತಮತ್ವ ವಿಷಯದಲ್ಲಿಯೂ ತದಿತರದೇವತೆಗಳಿಗೆ ತಾರತಮ್ಯ ವಿಷಯದಲ್ಲಿಯೂ ಬಹಳ ಶ್ರುತಿ, ಇತಿಹಾಸ, ಪಂಚರಾತ್ರ, ಪುರಾಣ ವಾಕ್ಯಗಳನ್ನು ಉದಾಹರಿಸಿ ತಾನು ಮಾಡಿದ ಸಕಲಶಾಸ್ತ್ರಗಳ ತಾತ್ಪರ್ಯರೂಪವಾದ ಹರಿಸೇವೆಗೆ ಋಜುಕುಲದಲ್ಲಿ ಅವತರಿಸುವುದರಿಂದ ನಿರುಪಾಧಿಕ ಭಕ್ತನಾದ ನನಗೆ ವಿಷ್ಣುಪ್ರಸಾದದಿಂದ ಬೇರೆ ಫಲವು ಅಪೇಕ್ಷಿತವಲ್ಲವೆಂಬ ಅಭಿಪ್ರಾಯದಿಂದ ಹೇಳುತ್ತಾರೆ.

**ಪ್ರೀಯೇತಾಂ ಪರತಮಃ ಪರಮಾದನಂತಃ**
**ಸಂತಾರಕಃ ಸಕಲಸಂಸೃತಿದುಸ್ತರಾರ್ಣಾತ್ ।**
**ಯತ್ಪಾದ ಪದ್ಮಮಕರಂದ ಜುಷೋಹಿ ಪಾರ್ಥಾಃ**
**ಸ್ವಾರಾಜ್ಯಮಾಪುರುಭಯತ್ರ ಸದಾ ವಿನೋದಾತ್ ॥ ೧೮೭ ॥**

ಅನಂತಃ = ದೇಶ, ಕಾಲ, ಗುಣಗಳಿಂದ ಅವಧಿರಹಿತನಾದ ಪರಮಾತ್ = ಉತ್ತಮರೆಂದು ಪ್ರಸಿದ್ಧರಾದ ರಮಾಬ್ರಹ್ಮಾದಿ ಜಗತ್ತಿನ ದೆಸೆಯಿಂದಲೂ ಪರತಮಃ = ಅತಿಶಯತ ಉತ್ತಮನಾದ ಸತತಸಂಸೃತಿದುಸ್ತರಾರ್ಣಾತ್ = ಅನಾದಿಯಾದ ಸಂಸಾರವೆಂಬ ದಾಟಲು ಅಶಕ್ಯವಾದ ಸಮುದ್ರದದೆಸೆಯಿಂದ ಸಂತಾರಕಃ = ಚೆನ್ನಾಗಿದಾಟಿಸತಕ್ಕ ಪಾರ್ಥಾಃ = ಪಾಂಡವರು ಯತ್ಪಾದಪದ್ಮಮಕರಂದಜುಷಃ = ಯಾವ ಶ್ರೀಹರಿಯ ಪಾದಾಳೆಂಬ ಕಮಲಗಳ ಪುಷ್ಪರಸವನ್ನು ಸೇವಿಸತಕ್ಕವರಾಗಿ ವಿನೋದಾತ್ = ಲೀಲೆಯಿಂದಲೇ ಸದಾ = ಯಾವಾಗಲೂ ಉಭಯತ್ರ = ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಸ್ವಾರಾಜ್ಯಂ = ಭೂಮಿಯಲ್ಲಿ ಸ್ವರ್ಗದಲ್ಲಿ ಶತ್ರುಭೂತರಾದ ಕಲಿರೂಪರಾದ ದುರ್ಯೋಧನಾದಿಗಳನ್ನು ಸಂಹರಿಸಿ ತಾವೇ ರಾಜರಾದರು ಎಂಬುದು ಯಾವುದೋ ಇದು ಐಹಿಕ ಸಾಮ್ರಾಜ್ಯವು ಪರಲೋಕದಲ್ಲಿ ಮತ್ತು ಮುಕ್ತಿಯಲ್ಲಿ ಬ್ರಹ್ಮ, ಇಂದ್ರಾದಿರೂಪರಾದ್ದರಿಂದ ತಾವೇ ರಾಜರಾದರು ಎಂಬುದು ಆಮುಷ್ಮಿಕ ಸಾಮ್ರಾಜ್ಯವು ಇಂತಹ ಸ್ವಾರಾಜ್ಯವನ್ನು ಶ್ರೀಕೃಷ್ಣನ ಪಾದಕಮಲ ಸೇವೆಯಿಂದಲೇ ಪ್ರಾಪುಃ = ಹೊಂದಿರುವರೋ ಸಃ = ಯಾವ ಪರಮಾತ್ಮನಿಗೆ ಸರ್ವೋತ್ತಮತ್ವವು ಹೇಳಲ್ಪಟ್ಟಿತೋ ಆ ಪರಮಾತ್ಮನು ಪ್ರೀಯತಾಂ = ಪ್ರೀತನಾಗಲಿ.

**ಇತಿ ಶ್ರೀಮದಾನಂದ ತೀರ್ಥಭಗವತ್ಪಾದಾಚಾರ್ಯ ವಿರಚಿತೇ ಶ್ರೀಮನ್ಮಹಾಭಾರತ**
**ತಾತ್ಪರ್ಯ ನಿರ್ಣಯೇ ಸುವಾಕ್ಯೋದ್ಧಾರೋ ನಾಮ**
**ದ್ವಿತೀಯೋಧ್ಯಾಯಃ ॥ ೩ ॥**
**॥ ಶ್ರೀಕೃಷ್ಣಾರ್ಪಣಮಸ್ತು ॥**
**॥ ಶ್ರೀಮದ್ವೇಶಾರ್ಪಣಮಸ್ತು ॥**

॥ ಶ್ರೀಕೃಷ್ಣಾಯನಮಃ ॥

## ॥ ತೃತೀಯೋಧ್ಯಾಯೆ ॥

**ಜಯತ್ಯಜೋಽಖಂಡಗುಣೋರುಮಂಡಲಃ ಸದೋದಿತೋ ಜ್ಞಾನಮರೀಚಿ ಮಾಲೀ ।**
**ಸ್ವಭಕ್ತಹಾರ್ದೋಚ್ಚತಮೋ ನಿಹಂತಾ ವ್ಯಾಸಾವತಾರೋ ಹರಿರಾತ್ಮಭಾಸ್ಕರಃ ॥೧॥**

**ಅವತಾರಿಕೆ:** ಈಗ ಮೂರನೇ ಅಧ್ಯಾಯದಲ್ಲಿ ಹಿಂದೆ ಹೇಳಿದ ಭಗವಂತನು ಮಾಡಿದ ಸೃಷ್ಟಿವಿಶೇಷವನ್ನು ಭಗವಂತನ ಅವತಾರಾದಿ ಕಥೆಯನ್ನು ವಿಸ್ತಾರವಾಗಿ ಯೋಗ್ಯರೀತಿಯಿಂದ ನಿರ್ಣಯಿಸಲು ಇಚ್ಛೈಯುಳ್ಳ ಶ್ರೀಮದಾನಂದತೀರ್ಥ ಭಗವತ್ಪಾದರು ತನ್ನ ಗ್ರಂಥಕ್ಕೆ ಪರಮ ಮಂಗಲರೂಪತ್ವವನ್ನು ತೋರಿಸುತ್ತಾ ತನ್ನ ಗುರುಗಳಾದ ವೇದವ್ಯಾಸರಿಗೂ ತನ್ನ ಇಷ್ಟದೇವತೆಗಳಾದ ರಾಮಕೃಷ್ಣರಿಗೂ ಸ್ತುತಿರೂಪವಾದ ಮಂಗಲತ್ರಯವನ್ನು ಮಾಡುತ್ತಾರೆ.

**ಆತ್ಮಭಾಸ್ಕರಃ** = (ವೇದ ವಿಭಾಗಮಾಡಿ ವೇದಗಳ ಅರ್ಥವನ್ನು ನಿರ್ಣಯಿಸತಕ್ಕ ಬ್ರಹ್ಮಸೂತ್ರಗಳ ರಚನೆಯಿಂದ ಭಾಗತ ಪುರಾಣಾದಿಗಳ ನಿರ್ಮಾಣದಿಂದಲೂ) **ಆತ್ಮನಃ** = ಪರಮಾತ್ಮನ **ಭಾಸಂ** = ಪ್ರಕಾಶರೂಪವಾದ ಜ್ಞಾನವನ್ನು **ಕರೋತಿ** = ಬ್ರಹ್ಮರುದ್ರಾದಿ ಸಜ್ಜೀವರಲ್ಲಿ ಗೌತಮರ ಶಾಪವನ್ನು ಕಳಿದು ಸ್ಥಿರವಾಗಿ ಮಾಡುವುದರಿಂದ ಆತ್ಮಭಾಸ್ಕರನು. (ಇದರಿಂದ ಲೌಕಿಕ ಘಟಪಟಾದಿ ಪ್ರಪಂಚದ ಪ್ರಕಾಶವನ್ನು ಮಾಡುವ ಕಶ್ಯಪ ಪುತ್ರನಾದ ಸೂರ್ಯನ ದಸೆಯಿಂದ ವ್ಯಾಸಭಾಸ್ಕರನಿಗೆ ಅತಿಶಯಿತ ಮಹಿಮೆಯನ್ನು ಹೇಳಿದ್ದರಿಂದ ಅಸದೃಶನಾದ ಭಾಸ್ಕರನೆಂದು ಹೇಳಿದ ಹಾಗಾಯಿತು.)

**ವ್ಯಾಸಾವತಾರಃ** = ವ್ಯಾಸರೂಪದಿಂದ ಅವತಾರ ಮಾಡಿದವರು ಹುಟ್ಟಿದವರಲ್ಲ ಹರಿಃ = ದುಷ್ಟಜನರನ್ನು ಸಂಹರಿಸಲು ಸಮರ್ಥನಾದ್ದರಿಂದ ಹರಿಶಬ್ದವಾಚ್ಯನು ಅಜಃ = ಜನನರಹಿತನು ಕಶ್ಯಪಪುತ್ರನಾದ ಸೂರ್ಯನು ಜನನ ಉಳ್ಳವನು **ಅಖಿಂಡಗುಣೋರುಮಂಡಲಃ** = ಪರಿಪೂರ್ಣಗಳಾದ ಜ್ಞಾನಾನಂದಾದಿ ಗುಣಗಳೆಂಬ ಉತ್ಕೃಷ್ಟವಾದ ಶರೀರವುಳ್ಳವನು. (ಲೌಕಿಕ ಸೂರ್ಯನಾದರೂ ಪ್ರಾಕೃತ ಪರಿಮಿತ ತೇಜೋಮಂಡಲವುಳ್ಳವನು. ವ್ಯಾಸಸೂರ್ಯನಾದರೂ ಅಪ್ರಾಕೃತಕ ಪರಿಪೂರ್ಣ ಗುಣಮಯ ಜಗದ್ವ್ಯಾಪ್ತಮಂಡಲವುಳ್ಳವನು. ಇದರಿಂದ ಲೌಕಿಕ ಸೂರ್ಯಗೂ ವ್ಯಾಸರೆಂಬ ಸೂರ್ಯನಿಗೂ ಮೇರುಪರ್ವತ ಸಾಸಿವೆ ಕಾಳಿನಂತೆ ಅತ್ಯಂತ ವೈಲಕ್ಷಣ್ಯವನ್ನು ಹೇಳಿದ ಹಾಗಾಯಿತು. **ಸದೋದಿತಃ** = ಅನಂತ ಕಾಲಗಳಲ್ಲಿ ಪ್ರಾದುಭೂರ್ತರು (ಲೌಕಿಕ ಸೂರ್ಯನಾದರೂ ಹಗಲು ಉದಯಿಸುತ್ತಾನೆ. ರಾತ್ರಿ ಮುಳುಗುತ್ತಾನೆ. ಇದರಿಂದಲೂ ವೈಲಕ್ಷಣ್ಯವನ್ನು ತಿಳಿಯಬೇಕು) **ಜ್ಞಾನಮರೀಚಿಮಾಲೀ** = ಜ್ಞಾನಗಳೆಂಬ ಕಿರಣಗಣ ಸಮೂಹವುಳ್ಳವನು ಅಥವಾ ಜ್ಞಾನಗಳೆಂಬ ಕಿರಣಗಳಿಂದ ಶೋಭಿಸುವವನು (ಲೌಕಿಕ ಸೂರ್ಯನು ಪ್ರಾಕೃತ ಕಿರಣಗಳಿಂದ ಶೋಭಿಸುವವನು) **ಸ್ವಭಕ್ತಹಾರ್ದೋಚ್ಚತಮೋನಿಹಂತಾ** = ತನ್ನ ಭಕ್ತರ ಹೃದಯದಲ್ಲಿರುವ ಅನಾದಿಕಾಲ ಬಂಧಕವಾದ ಅಜ್ಞಾನವೆಂಬ ತಮಸ್ಸನ್ನು ಚೆನ್ನಾಗಿ ನಾಶಮಾಡತಕ್ಕವನು (ಲೌಕಿಕ ಸೂರ್ಯನು ಭಕ್ತರ ಮತ್ತು ಅಭಕ್ತರ ಕತ್ತಲೆಯನ್ನು ನಾಶಮಾಡುವವನು. ಅದರಲ್ಲಿಯೂ ಗಿರಿಗಳ ಗುಹೆಯಲ್ಲಿರುವ ದೇಹಗೇಹಗಳ ಒಳಗಿರುವ ಕತ್ತಲೆಯನ್ನು ನಾಶಮಾಡದಿರುವುದರಿಂದ ಎಲ್ಲಾ ತಮಸ್ಸನ್ನು ನಾಶ ಮಾಡುವುದಿಲ್ಲ. "ಯದಾದಿತ್ಯಗತಂ ತೇಜ" ಎಂಬ ಪ್ರಮಾಣಾನುಸಾರವಾಗಿ ಪರಮಾತ್ಮನು ತನ್ನಲ್ಲಿರುವ ನಿಮಿತ್ತದಿಂದ ಕತ್ತಲೆಯನ್ನು ನಾಶಮಾಡುವನು ಸೂರ್ಯನು. ಸ್ವಸ್ವಭಾವದಿಂದಲ್ಲ. ವ್ಯಾಸಾಖ್ಯ ಸೂರ್ಯನು ಸ್ವಸ್ವಭಾವದಿಂದಲೇ ತಮಸ್ಸನ್ನು ನಾಶಮಾಡತಕ್ಕವನು. ಈ ಕಾರಣದಿಂದಲೂ ವ್ಯಾಸರಿಗೂ ಲೌಕಿಕ ಸೂರ್ಯನಿಗೂ ಬಹಳ ಅಂತರವಿದೆ.) ಇಂತಹ ವಾಸ್ಯಸೂರ್ಯನು **ಜಯತಿ** = ಉತ್ಕೃಷ್ಟನಾಗಿದ್ದಾನೆ. ಲೌಕಿಕ ಸೂರ್ಯನನ್ನು ಜಯಿಸುತ್ತಾನೆ. ॥ ೧ ॥

**ಜಯತ್ಯಜೋಽಕ್ಷೀಣ ಸುಖಾತ್ಮಬಿಂಬಃ ಸ್ವೈಶ್ವರ್ಯಕಾಂತಿ ಪ್ರತತಃ ಸದೋದಿತಃ ।**
**ಸ್ವಭಕ್ತಸಂತಾಪ ದುರಿಷ್ಟಹಂತಾ ರಾಮಾವತಾರೋ ಹರಿರೀಶಚಂದ್ರಮಾಃ ॥ ೨ ॥**

**ಅಜಃ** = ಉತ್ಪತ್ತಿ ಶೂನ್ಯನಾದವನೂ **ಅಕ್ಷೀಣಸುಖಾತ್ಮಬಿಂಬಃ** = ಕ್ಷೀಣವಾಗದ ಆನಂದಾತ್ಮಕವಾದ ವ್ಯಾಪ್ತವಾದ ಸ್ವರೂಪ ಉಳ್ಳವನು **ರಾಮಾವತಾರಃ** = ರಾಮಸ್ವರೂಪದಿಂದ ಅವತಾರವುಳ್ಳವನು **ಹರಿಃ** = ದುಷ್ಟಜನಮರ್ದನ-

ನಾದವನು **ಈಶಚಂದ್ರವಮಾಃ** = ಸರ್ವಜಗತ್ತಿಗೆ ಒಡೆಯನೆಂಬ ರಾಮಚಂದ್ರನು (ಲೌಕಿಕ ಚಂದ್ರನಾದರೂ ಸರ್ವಜಗತ್ತಿಗೆ ಸ್ವಾಮಿಯಲ್ಲದವನು ಪ್ರತಿಪಕ್ಷದಲ್ಲಿಯೂ ಕ್ಷಯವನ್ನು ಹೊಂದುವ ಪ್ರಾಕೃತವಾದ ಪರಿಮಿತವಾದ ಮಂಡಲವುಳ್ಳವನು) **ಸ್ಪೃಶ್ಯರ್ಯಕಾಂತಿಪ್ರತತಃ** = ಸ್ವರೂಪಭೂತಗಳಾದ ಅಪ್ರಾಕೃತಗಳಾದ ಸಂಪತ್ತು ಮತ್ತು ಕಾಂತಿಯಿಂದ ಚೆನ್ನಾಗಿ ವ್ಯಾಪ್ತ-ನಾದವನು (ಲೌಕಿಕಚಂದ್ರನು ಪ್ರಾಪ್ತವಾದ ಐಶ್ವರ್ಯ ಮತ್ತು ಶಾಂತಿಯಿಂದ ಅಲ್ಪ ದೇಶದಲ್ಲಿ ವ್ಯಾಪ್ತನು.) **ಸದೋದಿತಃ** = ಯಾವಾಗಲೂ ಉದಯಿಸಿ ಕೊಂಡಿರುವವನು (ಲೌಕಿಕ ಚಂದ್ರನು ರಾತ್ರಿಯಲ್ಲಿ ಮಾತ್ರ ಉದಯಿಸುವವನೂ ಸರ್ವದಾ ಉದಯಿಸುವವನಲ್ಲ) **ಸ್ವಭಕ್ತಸಂತಾಪದುರಿಷ್ಟಹಂತಾ** = ತನ್ನ ಭಕ್ತರ ತಾಪತ್ರಯವೆಂಬ ದುಃಖಿರೂಪವಾದ ಸಂಸಾರವನ್ನು ಶತ್ರುಗಳನ್ನು ನಾಶಮಾಡತಕ್ಕ ಅತ್ಯಂತ ದುಃಖಿರೂವಾದ ಮೋಕ್ಷವನ್ನು ಕೊಡುವುದರಿಂದ ಪುನಃ ಸಂಸಾರದ ಸಂಬಂಧವು ಭಕ್ತನಿಗೆ ಹೇಗೆ ಆಗಲಾರದೋ ಹಾಗೆ ಚೆನ್ನಾಗಿ ಸಂಸಾರವನ್ನು ನಾಶಮಾಡತಕ್ಕವನು. (ಲೌಕಿಕ ಚಂದ್ರನಾದರೂ ಭಕ್ತಾಭಕ್ತರ ತಾಪವನ್ನು ನಾಶಮಾಡತಕ್ಕವನು. ಆದರಲ್ಲಿಯೂ ಚೆನ್ನಾಗಿ ನಾಶಮಾಡುವುದಿಲ್ಲ.) ಜಯತಿ = ಉತ್ಕೃಷ್ಟನಾಗಿದ್ದಾನೆ. ಲೌಕಿಕ ಚಂದ್ರನನ್ನು ಜಯಿಸುತ್ತಾನೆ. ಈ ರೀತಿಯಾಗಿ ಇಬ್ಬರಿಗೂ ಮಹಾವೈಲಕ್ಷಣ್ಯವಿದೆ. ॥ ೨ ॥

**ಜಯತ್ಯಸಂಖ್ಯೋ ಯರು ಬಲಾಂಬುಪೂರೋ ಗುಣೋಚ್ಚರತ್ನಾಕರ ಆತ್ಮವೈಭವಃ ।**
**ಸದಾಽದಾತ್ಮಜ್ಞನದೀಭಿರಾಪ್ಯಃ ಕೃಷ್ಣಾವತಾರೋ ಹರಿರೇಕಸಾಗರಃ ॥ ೩ ॥**

**ಕೃಷ್ಣಾವತಾರಃ** = ಕೃಷ್ಣರೂಪದಿಂದ ಅವತಾರವುಳ್ಳವನು. **ಹರಿಃ** = ಪುಷ್ಟಜನ ಸಂಹಾರಕನು **ಏಕಸಾಗರಃ**= ಮುಖ್ಯಸಾಗರನು. ಎಲ್ಲಾ ಕಾಲಗಳಲ್ಲಿ ಒಂದೇ ರೀತಿಯಾಗಿರ ತಕ್ಕವನು ಸರ್ವೋತ್ತಮನು. (ಲೌಕಿಕ ಸಾಗರವಾದರೂ ದೇಶ ಮರ್ಯಾದೆಯಿಂದ ಉಪ್ಪು, ಇಕ್ಷು ಮೊದಲಾದ ರೂಪದಿಂದ ಏಳು ಪ್ರಕಾರವುಳ್ಳದ್ದು.) **ಅಸಂಖ್ಯೋ ಯರು ಬಲಾಂಬು-ಪೂರಃ** = ಲೆಕ್ಕ ಮಾಡಲಾಗದ ಉತ್ಕೃಷ್ಟಗಳಾದ ಪೂರ್ಣಗಳಾವ ಸಾಮರ್ಥ್ಯಗಳೆಂಬ ಜಲಗಳ ಪೂರ್ತಿಉಳ್ಳವನು. (ಲೌಕಿಕ ಸಮುದ್ರವು ಅಲ್ಪ ಸಂಖ್ಯಾಕಗಳಾದ ಅಪೂರ್ಣಗಳಾದ ನೀರುಗಳ ಪೂರ್ತಿಉಳ್ಳದ್ದು. **ಗುಣೋಚ್ಚ ರತ್ನಾಕರಃ** = ಜ್ಞಾನಾನಂದಾದಿ ಗುಣಗಳೆಂಬ ಶ್ರೇಷ್ಠ ರತ್ನಗಳಿಗೆ ಆಶ್ರಯನು. (ಲೌಕಿಕ ಸಾಗರವು ಜಡಗಳಾದ ಶಿಲಾರೂಪ ಅಲ್ಪರತ್ನಗಳಿಗೆ ಆಶ್ರಯವು.) **ಆತ್ಮವೈಭವಃ** = ತನ್ನ ಮಹಿಮೆಯಿಂದಲೇ ವೈಭವ ಉಳ್ಳವನು. (ಲೌಕಿಕ ಸಮುದ್ರದ ಅಭಿಮಾನಿಯು ಪರಮಾತ್ಮನಿಂದ ಕೊಡಲ್ಪಟ್ಟ ಪಶ್ಚಿಮದಿಕ್ಪಾಲಕತ್ವ ರೂಪವೈಭವವುಳ್ಳವನು. ಹಾಗೆಯೇ ದ್ವಾರಾವತಿಯಲ್ಲಿ ಸಮುದ್ರದಲ್ಲಿ ರತ್ನಮಯವಾದ ಮಂಟಪ ನಿರ್ಮಾಣದಿಂದಲೂ ಕ್ಷೀರಸಮುದ್ರದಲ್ಲಿ ದಿವ್ಯ ರತ್ನಮಯ ಮಂಟಪದಲ್ಲಿರುವ ಹರಿಯಿಂದ ಕೊಡಲ್ಪಟ್ಟ ವೈಭವವುಳ್ಳವನು. **ಆತ್ಮಜ್ಞನದೀಭಿಃ** = ಸರ್ವೋತ್ತಮನಾದ ಹರಿಯನ್ನು ತಿಳಿದಿರುವ ಜ್ಞಾನಿಗಳೆಂಬ ನದಿಗಳಿಂದ **ಸದಾ** = ಯಾವಾಗಲೂ **ಆಪ್ಯಃ**= ಹೊಂದಲು ಯೋಗ್ಯವಾದವನು ಸಮುದ್ರವು ಜಡವಾದ ಜಲರೂಪನದಿಗಳಿಂದ ಮುಳಿಗಾಲದಲ್ಲಿ ಮಾತ್ರ ಹೊಂದಲು ಯೋಗ್ಯ. ಬೇಸಿಗೆಯಲ್ಲಿ ಪ್ರವಾಹ ವಿಚ್ಛೇದವಾಗುವುದರಿಂದ ಹೊಂದಲು ಯೋಗ್ಯವಲ್ಲ. ಇಂತಹ ಕೃಷ್ಣಾಖ್ಯಸಾಗರನು. **ಜಯತಿ** = ಉತ್ಕೃಷ್ಟನಾಗಿದ್ದಾನೆ. ಲೌಕಿಕ ಸಾಗರವನ್ನು ಜಯಿಸುತ್ತಾನೆ. ॥ ೩ ॥

**ಅವತಾರಿಕೆ**- ಗ್ರಂಥಾರಂಭದಲ್ಲಿ ಪರಮಾತ್ಮನನ್ನು ನಮಸ್ಕರಿಸುವಂತೆ ಗುರುಗಳನ್ನು ಅವಶ್ಯವಾಗಿ ನಮಸ್ಕರಿಸತಕ್ಕದ್ದು. ಅನಂತರ ಗ್ರಂಥವನ್ನು ಆರಂಭಿಸತಕ್ಕದ್ದು ಎಂಬ ಶಿಷ್ಟಾಚಾರವನ್ನು ಸೂಚಿಸುವುದಕ್ಕೋಸ್ಕರ ಆ ಅರ್ಥವನ್ನು ಪ್ರತಿಪಾದಿಸತಕ್ಕ ಭಾರತವಾಕ್ಯವನ್ನು ಹೇಳುತ್ತಾರೆ.

**ನಾರಾಯಣಂ ನಮಸ್ಕೃತ್ಯ ನರಂಚೈವ ನರೋತ್ತಮಮ್ ।**
**ದೇವೀಂ ಸರಸ್ವತೀಂ ವ್ಯಾಸಂ ತತೋಜಯಮುದೀರಯೇ ॥ ೪ ॥**

ನಾರಾಯಣಂ = ನಾರಾಯಣನನ್ನು ನರೋತ್ತಮಂ = ನರೋತ್ತಮರಾದ ವಾಯುದೇವರನ್ನು ನರಂಚೈವ = ನರನಾದ ಶೇಷನನ್ನು ದೇವೀಂ = ಲಕ್ಷ್ಮೀದೇವಿಯನ್ನು ಸರಸ್ವತೀಂ = ಸರಸ್ವತೀಯನ್ನು ವ್ಯಾಸಂ = ವೇದವ್ಯಾಸರನ್ನು ನಮಸ್ಕೃತ್ಯ = ನಮಸ್ಕರಿಸಿ **ತತಃ** = ಆನಂತರ ಜಯಂ = ಇತಿಹಾಸವನ್ನು ಉದೀರಯೇ = ಹೇಳುತ್ತೇನೆ. ॥ ೪ ॥

**ಅವತಾರಿಕೆ**- ನರಶಬ್ದಕ್ಕೆ ಕೇವಲ ಮನುಷ್ಯನೆಂಬ ಪ್ರತೀತಿಯನ್ನು ನರೋತ್ತಮ ಪದಕ್ಕೆ ರಾಜಾದಿಗಳೆಂಬ ಪ್ರತೀತಿ-ಯನ್ನು ಸರಸ್ವತೀಂ ದೇವೀಂ ಎಂಬಲ್ಲಿ ಸರಸ್ವತಿ ದೇವಿಯೆಂಬ ಸಾಮಾನಾಧಿಕರಣ್ಯ ಪ್ರತೀತಿಯನ್ನು ವ್ಯಾಸನಾರಾಯಣರನ್ನು ಬೇರೆ ಬೇರೆ ಹೇಳಿರುವುದರಿಂದ ಭೇದ ಪ್ರತೀತಿಯನ್ನು ಅಥವಾ ಪುನರುಕ್ತಿಯನ್ನಾಗಲೀ ಜಯಶಬ್ದಕ್ಕೆ ಶತ್ರುಜಯವೆಂಬ ಪ್ರತೀತಿ

ಯನ್ನಾಗಲೀ ನಿವಾರಣೆ ಮಾಡುವುದಕ್ಕೊಸ್ಕರ ನಾರಾಯಣಾದಿಗಳಿಗೇನೆ ನಮಸ್ಕಾರ ಮಾಡಲು ಕಾರಣವನ್ನು ಹೇಳಲು ವ್ಯಾಖ್ಯಾನ ಮಾಡುತ್ತಾರೆ.

**ಜಯೋ ನಾಮೇತಿಹಾಸೋಽಯಂ ಕೃಷ್ಣದ್ವೈಪಾಯನೇರಿತಃ ।**
**ವಾಯುರ್ನರೋತ್ತಮೋನಾಮ ದೇವೀತಿ ಶ್ರೀರುದೀರಿತಾ ॥ ೫ ॥**
**ನಾರಾಯಣೋ ವ್ಯಾಸಇತಿ ವಾಚ್ಯವಕ್ತ್ರಸ್ವರೂಪಕಃ ।**
**ಏಕಃ ಸಭಗವಾನುಕ್ತಃ ಸಾಧಕೇಶೋ ನರೋತ್ತಮಃ ॥ ೬ ॥**
**ಉಪಸಾಧಕೋ ನರಶ್ಚೋಕ್ತೋ ದೇವೀಭಾಗ್ಯಾತ್ಮಿಕಾ ನೃಣಾಮ್ ।**
**ಸರಸ್ವತೀ ವಾಕ್ಯರೂಪಾ ತಸ್ಮಾನ್ನಮ್ಯಾಹ್ಯಮೇತೇऽಖಿಲಾಃ ॥ ೭ ॥**

ವೇದಾದಿಗಳನ್ನು ಭಾರತವನ್ನು ತಕ್ಕಡಿಯಲ್ಲಿಟ್ಟಾಗ ಭಾರವಾದ ಇತರ ಗ್ರಂಥಗಳನ್ನು ಜಯಿಸಿದ ಕಾರಣದಿಂದ ಜಯವೆಂದು ಹೆಸರು. ಕೃಷ್ಣದ್ವೈಪಾಯನೇರಿತಃ = ವೇದವ್ಯಾಸರಿಂದ ಹೇಳಲ್ಪಟ್ಟ ಅಯಂ = ಈ ಇತಿಹಾಸಃ = ಇತಿಹಸವು ಇತಿಹಾಸಕ್ಕೆ ಜಯಃಜಯವೆಂಬುದಾಗಿ ಈರಿತಃ = ಹೇಳಿಸಿಕೊಳ್ಳಲ್ಪಟ್ಟಿದೆ. ನಾಮ ಪ್ರಸಿದ್ಧವು. ನರೋತ್ತಮಃ = ಶೇಷನು ನರನಾದ್ದರಿಂದ ಅವನಿಗೆ ಉತ್ತಮವಾದ ವಾಯುಃ = ವಾಯುದೇವರೆಂದು ಈರೀತಃ = ಹೇಳಿಸಿಕೊಳ್ಳಲ್ಪಟ್ಟಿದ್ದಾರೆ. ದೇವೀತಿ = ಕ್ರೀಡಾದಿ ಗುಣವಿಶಿಷ್ಟನಾದ್ದರಿಂದ ನಾರಾಯಣನು ಮುಖ್ಯವಾಗಿ ದೇವಶಬ್ದ ವಾಚ್ಯನು. ಇತರರು ದೇವತ್ವಜಾತಿಯುಳ್ಳವರಾದ್ದರಿಂದ ದೇವರು ದೇವ ಸಂಬಂಧಿಯಾದ್ದರಿಂದ ದೇವಿ ಎಂಬುದಾಗಿ ಶ್ರೀಃ = ಲಕ್ಷ್ಮೀ ದೇವಿಯು ಉದೀರಿತಾ = ಹೇಳಿಸಿಕೊಳ್ಳಲ್ಪಟ್ಟಿದ್ದಾಳೆ. ಇವರಿಗೆ ನಮಸ್ಕರಿಸುವ ಕಾರಣವನ್ನು ಹೇಳುತ್ತಾರೆ. ವಾಚ್ಯವಕ್ತೃಸ್ವರೂಪಕಃ = ಗ್ರಂಥದಿಂದ ಹೇಳಲ್ಪಡತಕ್ಕ ಸ್ವರೂಪವುಳ್ಳವನು ಗ್ರಂಥವನ್ನು ಹೇಳತಕ್ಕ ಸ್ವರೂಪವುಳ್ಳವನು. ನಾರಾಯಣಃ ವ್ಯಾಸ ಇತಿ ನಾರಾಯಣನು ವ್ಯಾಸನು ಎಂಬುದಾಗಿ ಏಕಃ ಸ ಭಗವಾನ್ = ಒಬ್ಬನೇ ಆದ ಹರಿಯು ಉಕ್ತಃ = ಹೇಳಿಸಿಕೊಳ್ಳಲ್ಪಟ್ಟಿರುವನು. ಗ್ರಂಥದಿಂದ ಹೇಳಿಸಿಕೊಳ್ಳಲ್ಪಡತಕ್ಕವನು ನಾರಾಯಣನು. ಭಾರತವನ್ನು ಹೇಳತಕ್ಕವರು ವ್ಯಾಸರು. ವಾಚ್ಯತ್ವವಕ್ತೃತ್ವ ಈ ಎರಡು ನಿಮಿತ್ತಗಳಿರುವುದರಿಂದ ವ್ಯಾಸ ನಾರಾಯಣ ರೂಪಗಳಿಗೆ ಪ್ರತ್ಯೇಕವಾಗಿ ನಮಸ್ಕಾರವು ಸಾಧಕೇಶಃ = ವ್ಯಾಸರ ಮುಖದಿಂದ ಭಾರತವನ್ನು ಕೇಳಿ ಭಾರತಾರ್ಥವನ್ನು ಸಾಧಿಸಿಕೊಡುವ ಶುಕಾದಿಗಳಿಗೆ ಸ್ವಾಮಿಯಾದವರು ನರೋತ್ತಮಃ = ಶೇಷನಿಂದಲೂ ಉತ್ತಮರಾದ ವಾಯುದೇವರು. ಭಾರತಾರ್ಥವನ್ನು ತಿಳಿದವರಲ್ಲಿ ಉತ್ತಮರಾದ್ದರಿಂದ ಅವರ ದಯೆ ಇಲ್ಲದಿದ್ದರೆ ಇತರರಿಗೆ ಅರ್ಥ ಜ್ಞಾನವು ಆಗದಿರುವುದರಿಂದ ವಾಯುದೇವರಿಗೆ ನಮಸ್ಕಾರವು. ನರಃ = ಶೇಷನು ಉಪಸಾಧಕಃ = ಮುಖ್ಯ ಸಾಧಕರಾದ ವಾಯುದೇವರಿಂದ ತಿಳಿದು ಇತರರಿಗೆ ಭಾರತಾರ್ಥವನ್ನು ತಿಳಿಸತಕ್ಕವರು ಸಾಕ್ಷಾತ್ ವಾಯುದೇವರ ಮುಖದಿಂದ ಕೇಳಲು ಅಶಕ್ತರಾದರಿಗೆ ಈ ಉಪಸಾಧಕನು ಅಪೇಕ್ಷಿತನಾದ್ದರಿಂದ ಅವನಿಗೆ ನಮಸ್ಕಾರವು. ನೃಣಾಂ = ಮನುಷ್ಯರಿಗೆ ಭಾಗ್ಯಾತ್ಮಿಕಾ = ಭಾರತವನ್ನು ಹೇಳುವ ಮತ್ತು ಕೇಳುವವರಿಗೆ ಅನ್ನಪಾನಾದಿಗಳಿಲ್ಲವಾದರೆ ಹೇಳಲು ಕೇಳಲು ಆಗದಿರುವುದರಿಂದ ಹೇಳಲು ಕೇಳಲು ಯೋಗ್ಯವಾದ ಸಂಪತ್ತು ಬರುವುದಕ್ಕೊಸ್ಕರ ಸಂಪತ್ತಿಗೆ ಅಭಿಮಾನಿನಿಯಾದವಳು ದೇವೀ ಲಕ್ಷ್ಮೀದೇವಿಯು. ಅದ್ದರಿಂದ ಅವಳಿಗೆ ನಮನ. ಸರಸ್ವತೀ = ಸರಸ್ವತಿಯು ವಾಕ್ಯರೂಪಾ = ಭಾರತ ವಾಕ್ಯಗಳಿಗೆ ಅಭಿಮಾನಿಯು. ಆದ್ದರಿಂದ ಅವಳಿಗೂ ನಮನವು ಯೋಗ್ಯವು. ತಸ್ಮಾತ್ = ಆದ್ದರಿಂದ ಅಖಿಲಾಃ ತೇ = ಅವರೆಲ್ಲರೂ ನಮ್ಯಾಃ = ನಮಸ್ಕರಿಸಲು ಯೋಗ್ಯರು. ಹಿ = ನಿಶ್ಚಯವು.

**ಕೃಷ್ಣಾ ಸತ್ಯಾ ಭೀಮಪಾರ್ಥಾ ಕೃಷ್ಣೇತ್ಯುಕ್ತಾ ಹಿ ಭಾರತೇ ॥ ೮ ॥**

ಕೃಷ್ಣಾ = ವಾಸಿಷ್ಠ್ಯವಾದವಕೃಷ್ಣರು ಸತ್ಯಾ = ಸತ್ಯಭಾಮೆ ಮತ್ತು ರುಕ್ಮಿಣಿಯು ಭೀಮಪಾರ್ಥಾ = ಭೀಮ ಮತ್ತು ಅರ್ಜುನನು. ಪಾರ್ಥ ಶಬ್ದದಿಂದ ಅರ್ಜುನನಲ್ಲಿ ಆವಿಷ್ಟನಾದ ನರನನ್ನೂ ನರಾವತಾರನಾದ ಬಲರಾಮನನ್ನು ಇಟ್ಟುಕೊಳ್ಳಬೇಕು. ಕೃಷ್ಣಾ = ದ್ರೌಪದಿಯು ಇತಿ = ಎಂಬುದಾಗಿ ಏತೇ = ಇವರೆಲ್ಲರೂ ಭಾರತೇ = ಭಾರತದಲ್ಲಿ ಉಕ್ತಾ = ಹೇಳಲ್ಪಟ್ಟಿರುವರು. ಅವರವರ ಕಥೆಯನ್ನು ಹೇಳುವ ಸಂದರ್ಭದಲ್ಲಿ ಅಲ್ಲಲ್ಲಿ ಪ್ರಾಧಾನ್ಯರಿಂದ ಹೇಳಲ್ಪಟ್ಟಿರುವರು. ॥ ೮ ॥

**ಅವತಾರಿಕೆ:—** ಎರಡು ಅಧ್ಯಾಯಗಳಲ್ಲಿ ಹೇಳಿದ್ದನ್ನು ಅನುವಾದ ಮಾಡುತ್ತಾ ಮುಂದೆ ಹೇಳುವ ಎಲ್ಲಾ ಗ್ರಂಥಗಳಲ್ಲಿ ಪ್ರತಿಪಾದ್ಯವಾದದ್ದನ್ನು ಹೇಳುತ್ತಾರೆ.

**ಸರ್ವಸ್ಯ ನಿರ್ಣಯೆ ಸುವಾಕ್ಯಸಮುದ್ಧೃತೀತು ಸ್ವಧ್ಯಾಯೆಯೋರ್ಹರಿಪದಸ್ಮರಣೇನಕೃತ್ವಾ।**
**ಆನಂದತೀರ್ಥವರನಾಮವತೀ ತೃತೀಯೊ ಭೌಮೀತನುರ್ಮರುತ ಆಹ ಕಥಾಃ ಪರಸ್ಯ ॥೯॥**

ಸ್ವಧ್ಯಾಯಯೋಃ = ಶೋಭನಗಳಾದ ಪ್ರಥಮ ಮತ್ತು ದ್ವಿತೀಯಾಧ್ಯಾಯಗಳಲ್ಲಿ ಸರ್ವಸ್ಯ = ಎಲ್ಲಾ ನಿರ್ಣಯ-ಸುವಾಕ್ಯಸಮುದ್ಧೃತೀ = ಶಾಸ್ತ್ರಾರ್ಥಗಳ ನಿರ್ಣಯವು, ಶೋಭನ ವಾಕ್ಯಗಳ ಜಿನ್ನಾಗಿ ಉದ್ಧಾರವೂ ಇವುಗಳನ್ನು ಹರಿಪದ-ಸ್ಮರಣೇನ = ಪರಮಾತ್ಮನ ಪಾದಗಳ ಸ್ಮರಣೆಯಿಂದ ಕೃತ್ವಾ = ಮಾಡಿ ಆನಂದತೀರ್ಥವರನಾಮವತೀ = ಮಧ್ವರೆಂಬ ಉತ್ತಮ ನಾಮವುಳ್ಳ ಭೌಮೀ = ಭೂಮಿ ಸಂಬಂಧಿಯಾದ ಅಂದರೆ ಭೂಮಿಯಲ್ಲಿ ಅವತಾರ ಮಾಡಿದ ಮರುತಃ = ವಾಯು ದೇವರ ತೃತೀಯಾ = ಮೂರನೆಯ ತನುಃ = ಅವತಾರವು ಪರಸ್ಯ = ಪರಮಾತ್ಮನ ಕಥಾಃ = ಕಥೆಗಳನ್ನು ಆಹ = ಹೇಳುತ್ತದೆ. ॥ ೯ ॥

**ಅವತಾರಿಕೆ:—** ಪ್ರಥಮಾಧ್ಯಾಯದಲ್ಲಿ ಸೂಕ್ಷ್ಮ ರೂಪದಿಂದ ಸೃಷ್ಟವಾದವುಗಳಿಗೆ ಸ್ಥೂಲರೂಪದಿಂದ ಸೃಷ್ಟಿಯನ್ನು ಹೇಳಲು ಹಿಂದೆ ಹೇಳಿದ ಸೃಷ್ಟಿಯನ್ನು ಅನುವಾದ ಮಾಡಿ ಹೇಳದಿರುವ ಸೃಷ್ಟಿಯನ್ನು ಹೇಳುತ್ತಾರೆ.

**ವ್ಯೂಢಶ್ಚತುರ್ಧಾಭಗವಾನ್ಯ ಏಕೋಮಾಯಾಂಶ್ರಿಯಂ ಸೃಷ್ಟಿವಿಧಿತ್ಸಯಾರ।**
**ರೂಪೇಣ ಪೂರ್ವೇಣ ಸ ವಾಸುದೇವನಾಮ್ನಾ ವಿರಿಂಚಂ ಸುಷುವೇಚ ಸಾತಃ ॥ ೧೦ ॥**

ಭಗವಾನ್ = ಐಶ್ವರ್ಯಾದಿ ಗುಣಪೂರ್ಣನಾದ ಏಕಃ = ಅವತಾರಾದಿಗಳಲ್ಲಿ ಭೇದ ರಹಿತನಾದ ಸಃ = ಆ ನಾರಾಯಣನು ಚತುರ್ಧಾ = ನಾಲ್ಕು ಪ್ರಕಾರವಾಗಿ ವ್ಯೂಢಃ = ವ್ಯೂಹವನ್ನು ಹೊಂದಿದವನಾಗಿ ಅವತರಿಸಿದವನಾಗಿ ಸಃ = ಆ ಭಗವಂತನು ವಾಸುದೇವನಾಮ್ನಾ = ವಾಸುದೇವ ಎಂದು ಹೆಸರುಳ್ಳ ಪೂರ್ವೇಣ = ಮೊದಲನೆಯ ರೂಪೇಣ = ರೂಪದಿಂದ ಸೃಷ್ಟಿವಿಧಿತ್ಸಯಾ = ಸೃಷ್ಟಿಯನ್ನು ಮಾಡುವ ಇಚ್ಛೆಯಿಂದ ಮಾಯಾಂ = ಮಾಯೆಯೆಂದು ಹೆಸರುಳ್ಳ ಶ್ರಿಯಂ = ಲಕ್ಷ್ಮೀ ದೇವಿಯನ್ನು ಆರ = ಹೊಂದಿದನು. ಸಾ = ಆ ಮಾಯೆಯು ಅತಃ = ಈ ವಾಸುದೇವನಿಂದ ವಿರಿಂಚಂ = ಚತುರ್ಮುಖ ಬ್ರಹ್ಮನನ್ನು ಸುಷುವೇ = ಹಡೆದಳು. ॥ ೧೦ ॥

---

**ಸಂಕರ್ಷಣಾಚ್ಚಾಪಿ ಜಯೊತನೂಜೋ ಬಭೂವ ಸಾಕ್ಷಾದ್ಬಲಸಂವಿದಾತ್ಮಾ।**
**ವಾಯುರ್ಯೆವಾಥ ವಿರಿಂಚ ನಾಮಾ ಭವಿಷ್ಯ ಆದ್ಯೋನಪರಸ್ತತೋಹಿ ॥ ೧೧ ॥**

ಬಲಸಂವಿದಾತ್ಮಾ = ಸಾಮರ್ಥ್ಯ ಜ್ಞಾನಗಳು ಸ್ವರೂಪವಾಗಿ ಉಳ್ಳ ಸಾಕ್ಷಾತ್ ವಾಯುಃ = ಮುಖ್ಯರಾದ ವಾಯು ದೇವರು ಸಂಕರ್ಷಣಾತ್ = ಸಂಕರ್ಷಣನ ದಸೆಯಿಂದ ಜಯೊತನೂಜಃ = ಜಂಘಾದೇವಿಯ ಮಗನಾಗಿ ಬಭೂವ = ಹುಟ್ಟಿದರು. ವಾಯುಗಳು ಅನೇಕರಿರುವುದರಿಂದ ಯಾವ ವಾಯುವು ಇಲ್ಲಿ ವಿವಕ್ಷಿತನೆಂಬುದನ್ನು ಹೇಳುತ್ತಾರೆ. ಅಥ = ಮುಂದಿನ ಕಲ್ಪದಲ್ಲಿ ಯಃ ವಾಯುಃ = ಯಾವ ವಾಯುವು ಆದ್ಯಃ = ಮೊದಲನೆಯವನಾದ ಭವಿಷ್ಯಃ ವಿರಿಂಚನಾಮಾ = ಭಾವಿ ಬ್ರಹ್ಮನೆಂದು ಹೆಸರುಳ್ಳವನೋ ಸ ಏವ = ಆ ವಾಯುವೇ ತತಃ = ಅವನಿಂದ ಪರಃ ನ = ಮತ್ತೊಬ್ಬನಲ್ಲ. ಹಿ = ಪ್ರಸಿದ್ಧವು. ॥ ॥ ೧೧ ॥

**ಸೂತ್ರಂ ಸವಾಯುಃ ಪುರುಷೋವಿರಿಂಚಃ ಪ್ರದ್ಯುಮ್ನತಶ್ಚಾಥ ಕೃತೌ ಸ್ತ್ರಿಯೌ ದ್ವೇ।**
**ಪ್ರಜಜ್ಞತುರ್ಯೆವಮೇಳೇತತ್ರಪೂರ್ವಾ ಪ್ರಧಾನಸಂಜ್ಞಾ ಪ್ರಕೃತಿರ್ಜನಿತ್ರೀ ॥ ೧೨ ॥**

**ಅವತಾರಿಕೆ:—** ಗ್ರಂಥಾಂತರದಲ್ಲಿ ವಾಸುದೇವನಿಂದ ಪುರುಷನು ಹುಟ್ಟಿದನು. ಸಂಕರ್ಷಣನಿಂದ ಸೂತ್ರ ನಾಮಕ ಮಗನು ಹುಟ್ಟಿದನೆಂದಿದೆ. ಅದರ ವಿರೋಧವನ್ನು ಪರಿಹರಿಸುತ್ತಾರೆ. ಸವಾಯುಃ = ಆ ವಾಯುದೇವರು ಸೂತ್ರಂ = ಸೂತ್ರನಾಮಕರು ಪುರುಷಃ = ಪುರುಷನೆಂಬವನು ವಿರಿಂಚಃ = ಚತುರ್ಮುಖ ಬ್ರಹ್ಮನು ಅಥ = ಬ್ರಹ್ಮ ವಾಯುಗಳು ಹುಟ್ಟಿದ ನಂತರ ಪ್ರದ್ಯುಮ್ನತಃ = ಪ್ರದ್ಯುಮ್ನನಿಂದ ಕೃತೌ = ಕೃತಿ ದೇವಿಯಲ್ಲಿ ಯಮಳೀ = ಯಮಳರಾದ ದ್ವೇ = ಇಬ್ಬರು ಸ್ತ್ರಿಯೌ = ಸ್ತ್ರೀಯರು ಪ್ರಜಜ್ಞತುಃ = ಹುಟ್ಟಿದರು. ತತ್ರ = ಆ ಇಬ್ಬರಲ್ಲಿ ಪೂರ್ವಾ = ಮೊದಲನೆಯವಳು ಪ್ರಧಾನ ಸಂಜ್ಞಾ = ಪ್ರಧಾನಾಳೆಂಬ ಹೆಸರುಳ್ಳವಳು. ಜನಿತ್ರೀ = ಶಿವಾದಿಗಳನ್ನು ಹುಟ್ಟಿಸಿರುವ ಪ್ರಕೃತಿಃ = ಪ್ರಕೃತಿಯು. ॥ ೧೨ ॥

**ಶ್ರದ್ಧಾ ದ್ವಿತೀಯಾಥತಯೋಸ್ತುಯೋಗೋ ಬಭೂವ ಪುಂಸೈವಚ ಸೂತ್ರನಾಮ್ನಾ ।**
**ಹರೇರ್ನಿಯೋಗಾದಥ ಸಂಪ್ರಸೂತೌ ಶೇಷಃ ಸುಪರ್ಣಶ್ಚ ತಯೋಃಸಹೈವ ॥ ೧೩ ॥**

ದ್ವಿತೀಯಾ = ಎರಡನೆಯವಳು ಶ್ರದ್ಧಾ = ಶ್ರದ್ಧಾದೇವಿಯು ಅಥ = ಅಪರಿಬ್ಬರು ಹುಟ್ಟಿದ ನಂತರ ಹರೇಃ = ಪರಮಾತ್ಮನ ನಿಯೋಗಾತ್ = ಅಪ್ಪಣೆಯಿಂದ ತಯೋಃ ಆ ಶ್ರದ್ಧಾ ಪ್ರಧಾನರಿಗೆ ಸೂತ್ರನಾಮ್ನಾ = ಸೂತ್ರನಾಮಕ ವಾಯು ವಿನಿಂದಲೂ ಪುಂಸೈವಚ = ಪುರುಷನಾಮಕ ಬ್ರಹ್ಮನಿಂದಲೂ ಯೋಗಃ = ಸಂಬಂಧವು ಬಭೂವ = ಆಯಿತು. ತಯೋಃ = ಆ ಮರುತು ಸೂತ್ರರಿಗೆ ಸಹೈವ = ಏಕಕಾಲದಲ್ಲಿಯೇ ಶೇಷಃ = ಶೇಷನು ಸುಪರ್ಣಶ್ಚ = ಗರುಡನು ಕೂಡ ಹುಟ್ಟಿದರು ॥ ೧೩ ॥

**ಅವತಾರಿಕೆ**— ಪುರುಷ ಮತ್ತು ಸೂತ್ರರ ದಸೆಯಿಂದ ಜೀವಕಾಲರು ಹುಟ್ಟಿದರೆಂದಿದೆ. ಅದರ ವಿರೋಧವನ್ನು ಪರಿಹರಿಸುತ್ತಾರೆ.

**ಶೇಷಸ್ತಯೋರೇವಹಿ ಜೀವನಾಮಾ ಕಾಲಾತ್ಮಕಃ ಸೋಽಥಸುಪರ್ಣಆಸೀತ್ ।**
**ತೌವಾಹನಂ ಶಯನಂ ಚೈವ ವಿಷ್ಣೋಃ ಕಾಲಾಜಯಾದ್ಯಾಶ್ಚ ತತಃ ಪ್ರಸೂತಾಃ ॥೧೪॥**

ತಯೋಃ = ಆ ಮಕ್ಕಳ ಮಧ್ಯದಲ್ಲಿ ಶೇಷ ಏವ = ಶೇಷನೇ ಜೀವನಾಮಾ = ಜೀವನೆಂದು ಹೆಸರುಳ್ಳವನು. ಅಥ = ಅನಂತರ ಸಃ ಸುಪರ್ಣಃ = ಆ ಗರುಡನು ಕಾಲಾತ್ಮಕಃ = ಕಾಲನೆಂಬ ಸ್ವರೂಪವುಳ್ಳವನು ಆಸೀತ್ = ಆದನೌ ತೌ = ಆ ಗರುಡ ಶೇಷರು ವಿಷ್ಣೋಃ = ಶ್ರೀಹರಿಗೆ ವಾಹನಂ = ವಾಹನನು ಶಯನಂಚ = ಹಾಸಿಗೆಯೂ ಕೂಡ ಆದರು ತತಃ = ಆ ಗರುಡ ಶೇಷರ ದಸೆಯಿಂದ ಕಾಲಾಃ = ಕಾಲಾನಾಮಕರಾದವರೂ ಜಯಾದ್ಯಾಶ್ಚ = ಜಯವಿಜಯಾದಿಗಳೂ ಕೂಡ ಪ್ರಸೂತಾಃ = ಹುಟ್ಟಿದರು. ॥ ೧೪ ॥

**ಅವತಾರಿಕೆ**— ಕಾಲಜಯಾದಿಗಳ ಸ್ವರೂಪವನ್ನು ಹೇಳುತ್ತಾ ರುದ್ರಾದಿಗಳಿಂದ ಮೊದಲು ಹುಟ್ಟಿದ ಕಾರಣ ರುದ್ರಾದಿಗಳಿಂದ ಉತ್ತಮರೆಂಬ ಶಂಕೆಯನ್ನು ಪರಿಹರಿಸುತ್ತಾರೆ.

---

**ಕಾಲಾಜಯಾದ್ಯಾಅಪಿ ವಿಷ್ಣುಪಾರ್ಷದಾಯಸ್ಮಾದಂಡಾತ್ಪರತಃ ಸಂಪ್ರಸೂತಾಃ ।**
**ನೀಚಾಃ ಸುರೇಭ್ಯಸ್ತತ ಏವ ತೇಽಖಿಲಾ ವಿಷ್ವಕ್ಸೇನೋ ವಾಯುಜಃಖೇನತುಲ್ಯಃ ॥೧೫॥**

ಕಾಲಾಜಯಾದ್ಯಾಅಪಿ = ಕಾಲನಾಮಕರು, ಜಯಾದಿಗಳೂ ಕೂಡ ವಿಷ್ಣುಪಾರ್ಷದಾಃ = ಶ್ರೀ ಹರಿಯ ಪಾರ್ಷದರು ಯಸ್ಮಾತ್ = ಯಾವ ಕಾರಣದಿಂದ ಅಂಡಾತ್ = ಅಂಡಸೃಷ್ಟಿಯಿಂದ ಪರತಃ = ಮೊದಲು ಸಂಪ್ರಸೂತಾಃ = ಹುಟ್ಟಿದ ವರೋ ತತಏವ = ಅಂಡದ ಒಳಗೆ ಮಾಡಿರುವ ಸೃಷ್ಟಿಯು ತಾರತಮ್ಯಕ್ಕೆ ಜ್ಞಾಪಕವಾದದ್ದು. ಅಂಡದ ಹೊರಗಿನ ಸೃಷ್ಟಿಯು ಜ್ಞಾಪಕವಲ್ಲ ಇವರು ಅಂಡದ ಹೊರಗೆ ಹುಟ್ಟಿರುವುದರಿಂದಲೇ ಮೊದಲು ಹುಟ್ಟಿದರೂ ಕೂಡ ಸುರೇಭ್ಯಃ = ಇಂದ್ರಾದಿ ದೇವತೆಗಳ ದಸೆಯಿಂದ ತೇಽಖಿಲಾಃ = ಅವರೆಲ್ಲರೂ ನೀಚಾಃ = ಅಧಮರು ಇದಕ್ಕೆ ಅಪವಾದವನ್ನು ಹೇಳುತ್ತಾರೆ. ವಿಶ್ವಕ್ಸೇನಃ = ವಿಷ್ವಕ್ಸೇನನು ವಾಯುಜಃ = ವಾಯುವಿನಿಂದ ಹುಟ್ಟಿದವನು ಖೇನ = ಆಕಾಶಾಭಿಮಾನಿಯಾದ ಗಣಪತಿಯಿಂದ ತುಲ್ಯಃ = ಸಮಾನನು. ॥ ೧೫ ॥

**ವ್ಯೂಹಾತ್ತೃತೀಯಾತ್ಪುನರೇವ ವಿಷ್ಣೋರ್ದೇವಾಂಶ್ಚತುರ್ವರ್ಣಗತಾನ್ಸಮಸ್ತಾನ್ ।**
**ಸಂಗೃಹ್ಯ ಬೀಜಾತ್ಮತಯಾನಿರುದ್ಧೋನ್ಯಧತ್ತಶಾಂತ್ಯಾಂ ತ್ರಿಗುಣಾತ್ಮಿಕಾಯಾಮ್ ॥೧೬॥**

ಅನಿರುದ್ಧಃ = ಅನಿರುದ್ಧನು ವಿಷ್ಣೋಃ = ಪರಮಾತ್ಮನ ತೃತೀಯಾತ್ = ಮೂರನೇಯದಾದ ವ್ಯೂಹಾತ್ = ಏವ = ಅವತಾರನಾದ ಪ್ರದ್ಯುಮ್ನನ ದಸೆಯಿಂದಲೇ ಸಮಸ್ತಾನ್ = ಎಲ್ಲಾ ಚತುರ್ವರ್ಣಗತಾನ್ = ಬ್ರಾಹ್ಮಣ, ಕ್ಷತ್ರಿಯಾದಿ ನಾಲ್ಕು ವರ್ಣಗಳಲ್ಲಿರತಕ್ಕ ದೇವಾನ್ = ದೇವತೆಗಳನ್ನು ಪುನಃ ಮತ್ತೊಮ್ಮೆ ಸಂಗೃಹ್ಯ = ಸಂಗ್ರಹಿಸಿ ತ್ರಿಗುಣಾತ್ಮಿಕಾಯಾಂ = ಸತ್ವರಜಸ್ತಮೋಗುಣಗಳಿಗೆ ಅಭಿಮಾನಿನಿಯಾದ ಶಾಂತ್ಯಾಂ = ಶಾಂತಿದೇವಿಯಲ್ಲಿ ಬೀಜಾತ್ಮತಯಾ = ಬೀಜರೂಪದಿಂದ ರೇತೋರೂಪದಿಂದ ನ್ಯಧತ್ತ = ಇಟ್ಟನು.

**ವಿಶೇಷಾಂಕ**— "ಪ್ರದ್ಯುಮ್ನ ಸಂಜ್ಞಕ ಇಮಾನ್ ಚರಮಾತ್ಮನೇಽದಾತ್" ಎಂದು ಪ್ರಥಮಾಧ್ಯಾಯದಲ್ಲಿ ಪ್ರಮ್ಯುಮ್ನನು ತನ್ನ

ಹೊಟ್ಟೆಯಲ್ಲಿರುವ ಜೀವರನ್ನು ಅನಿರುದ್ಧನ ಉದರದಲ್ಲಿ ಪ್ರವೇಶ ಮಾಡಿಸಿದನು ಎಂದು ಹೇಳಿರುವರು. ಈಗ ಇಲ್ಲಿ ಪ್ರದ್ಯುಮ್ನನಿಂದ ಸಂಗ್ರಹಿಸಿ ಎಂದು ಹೇಗೆ ಹೇಳಿದರು ಎಂಬ ಶಂಕೆಗೆ ಸಮಾಧಾನವು, ಏನೆಂದರೆ ಪ್ರದ್ಯುಮ್ನನು ಒಮ್ಮೆ ಅನಿರುದ್ಧನ ಕೈಯಲ್ಲಿ ಕೊಟ್ಟುಹೋಜೀವರಿಗೆ ಅತ್ಯಂತ ಸೂಕ್ಷ್ಮಗಳಾದ ದೇಹಗಳನ್ನು ಸೃಷ್ಟಿಮಾಡಿಸಿ ಪುನ: ಆ ಎಲ್ಲಾ ಜೀವರನ್ನು ತನ್ನ ಹೊಟ್ಟೆಯಲ್ಲಿ ಪ್ರದ್ಯುಮ್ನನು ಇಟ್ಟು ಕೊಂಡನು ಎಂಬ ಕಥೆಯನ್ನು ಸಂಗ್ರಹಿಸುವುದಕ್ಕಾಗಿ ಆಚಾರ್ಯರು ಪುನ: ಸಂಗ್ರಹ ಎಂದು ಹೇಳಿರುವರು. ॥೧೬॥

**ತತೋ ಮಹತ್ತತ್ವತನುರ್ವಿರಿಂಚಃ ಸ್ಥೂಲಾತ್ಮನೈವಾಜನಿ ವಾಕ್ಚದೇವೀ ।**
**ತಸ್ಯಾಮಹಂಕಾರತನುಂ ಸರುದ್ರಂ ಸಸರ್ಜ ಬುದ್ಧಿಂಚ ತದರ್ಧದೇಹಾಮ್ ॥ ೧೭ ॥**

ತತಃ = ಆಶಾಂತಿ ದೇವಿಯ ದಸೆಯಿಂದ ಮಹತ್ತತ್ವತನುಃ = ಮಹತ್ತತ್ವಕ್ಕೆ ಅಭಿಮಾನಿಯಾದ ವಿರಿಂಚಃ = ಬ್ರಹ್ಮನು ಸ್ಥೂಲಾತ್ಮನೈವ = ಸ್ಥೂಲರೂಪದಿಂದಲೇ ಅಜನಿ = ಹುಟ್ಟಿದನು. ವಾಕ್ = ವಾಗಭಿಮಾನಿನಿಯಾದ ದೇವೀಚ = ಸರಸ್ವತಿಯೂ ಕೂಡ ಅಜನಿ = ಹುಟ್ಟಿದಳು. ತಸ್ಯಾಂ = ಆ ವಾಗ್ದೇವಿಯಲ್ಲಿ ಸಃ = ಆ ಬ್ರಹ್ಮನು ಅಹಂಕಾರ ತನುಂ = ಅಹಂಕಾರ ತತ್ವಕ್ಕೆ ಅಭಿಮಾನಿಯಾದ ರುದ್ರಂ = ರುದ್ರನನ್ನು ತದರ್ಧದೇಹಾಂ = ರುದ್ರನ ದೇಹವೇ ಅರ್ಧ ದೇಹವಾಗಿ ಉಳ್ಳ ಅಂದರೆ ಅರ್ಧಾಂಗಿಯಾದ ಬುದ್ಧಿಂಚ = ಬುದ್ಧಿಗೆ ಅಭಿಮಾನಿಯಾದ ಪಾರ್ವತಿಯನ್ನೂ ಸಸರ್ಜ = ಸೃಷ್ಟಿಮಾಡಿದನು. ॥ ೧೭ ॥

**ಬುದ್ಧ್ಯಾಖ್ಯಮುಮಾಯಾಂ ಸಶಿವಸ್ತ್ರಿರೂಪೋ ಮನಶ್ಚವೈಕಾರಿಕದೇವಸಂಘಾನ್ ।**
**ದಶೇಂದ್ರಿಯಾಣ್ಯೇವಚ ತೈಜಸಾನಿ ಕ್ರಮೇಣ ಖಾದೀನ್ವಿಷಯೈಶ್ಚ ಸಾರ್ಧಮ್ ॥ ೧೮ ॥**

ತ್ರಿರೂಪಃ = ವೈಕಾರಿಕ, ತೈಜಸ, ತಾಮಸಗಳೆಂದು ಮೂರುವಿಧ ಅಹಂಕಾರದ ಪ್ರೇರಣೆಗೋಸ್ಕರ ಮೂರು ರೂಪಗಳುಳ್ಳ ಸಃ ಶಿವ ಆ ರುದ್ರನು ಬುದ್ಧ್ಯಾಖ್ಯಂ = ಬುದ್ಧಿಗೆ ಅಭಿಮಾನಿನಿಯಾದ ಉಮಾಖ್ಯಾಂ = ಪಾರ್ವತಿಯಲ್ಲಿ ವೈಕಾರಿಕ ದೇವ ಸಂಘಾನ್ = ಮನಸ್ಸು ಮೊದಲಾದ ಏಕಾದಶ ಇಂದ್ರಿಯಾಭಿಮಾನಿ ದೇವತೆಗಳ ಸಮೂಹಗಳನ್ನು ಮನಃ = ಮನಸ್ಸನ್ನೂ ತೈಜಸಾನಿ = ತೈಜಸಗಳಾದ ದಶೇಂದ್ರಿಯಾಣಿ = ಹತ್ತು ಇಂದ್ರಿಯಗಳನ್ನು ಖಾದೀನ್ = ಆಕಾಶಾದಿ ಪಂಚ ಮಹಾಭೂತಗಳನ್ನು ವಿಷಯೈಃ = ಶಬ್ದಾದಿ ವಿಷಯಗಳಿಂದ ಸಾರ್ಧಂ = ಕೂಡಿಕೊಂಡು ಕ್ರಮೇಣ = ಕ್ರಮದಿಂದ ಸಸರ್ಜ = ತಾಮಸಾಹಂಕಾರದಿಂದ ಸೃಷ್ಟಿಮಾಡಿದನು. ॥ ೧೮ ॥

**ಪುಂಸಃ ಪ್ರಕೃತ್ಯಾಂಚ ಪುನರ್ವಿರಿಂಚಾಚ್ಛಿವೋಽಥ ತಸ್ಮಾದಖಿಲಾಃ ಸುರೇಶಾಃ ।**
**ಜಾತಾಃ ಸಶಕ್ರಾಃ ಪುನರೇವ ಸೂತ್ರಾತ್ ಶ್ರದ್ಧಾ ಸುತಾನಾಪ ಸುರಪ್ರವೀರಾನ್ ॥ ೧೯ ॥**
**ಶೇಷಂ ಶಿವಂಚೇಂದ್ರ ಮಥೇಂದ್ರತಶ್ಚ ಸರ್ವೇ ಎರಾ ಯಜ್ಞಗಣಾಶ್ಚ ಜಾತಾಃ ॥ ೨೦ ॥**

ಅಥ = ಅನಂತರ ಪುಂಸಃ = ಪುರುಷನಾಮಕನಾದ ವಿರಿಂಚಾತ್ = ಬ್ರಹ್ಮನ ದಸೆಯಿಂದ ಪ್ರಕೃತ್ಯಾಂ = ಪ್ರಕೃತಿ ನಾಮಕ ಅವ್ಯಕ್ತಕ್ಕೆ ಅವಾಂತರಾಭಿಮಾನಿನಿಯಾದ ಸರಸ್ವತಿಯಲ್ಲಿ ಶಿವಃ = ಶಿವನು ಪುನಃ = ಮತ್ತೊಮ್ಮೆ ಜಾತಃ = ಹುಟ್ಟಿದನು. ತಸ್ಮಾತ್ = ಆ ರುದ್ರನ ದಸೆಯಿಂದ ಸಶಕ್ರಾಃ = ಇಂದ್ರನಿಂದ ಕೂಡಿದ ಅಖಿಲಾಃ = ಎಲ್ಲಾ ಸುರೇಶಾಃ = ದೇವಶ್ರೇಷ್ಠರು ಜಾತಾಃ = ಹುಟ್ಟಿದರು. ಪುನಃ = ಮತ್ತು ಸೂತ್ರಾತ್ = ಸೂತ್ರನಾಮಕ ವಾಯುದೇವರಿಂದ ಶ್ರದ್ಧಾ = ಭಾರತೀಯು ಸುರಪ್ರವೀರಾನ್ = ದೇವಶ್ರೇಷ್ಠರಾದ ಸುತಾನ್ = ಮಕ್ಕಳಾದ ಶೇಷಂ = ಶೇಷನನ್ನು ಶಿವಂ = ರುದ್ರನನ್ನು ಇಂದ್ರಂಚ = ದೇವೇಂದ್ರನನ್ನೂ ಕೂಡ ಆಪ = ಹೊಂದಿದಳು ಅಥ = ಅನಂತರ ಇಂದ್ರತಶ್ಚ = ಇಂದ್ರನ ದಸೆಯಿಂದಲೂ ಕೂಡ ಯಜ್ಞಗಣಾಃ = ಅಶ್ವಮೇಧ, ಜ್ಯೋತಿಷ್ಟೋಮ, ಅಗ್ನಿಷ್ಟೋಮಾದಿಗಳ ಸಮೂಹಕ್ಕೆ ಅಭಿಮಾನಿಗಳಾದ ಸರ್ವೇ = ಎಲ್ಲಾ ಸುರಾಃ = ದೇವತೆಗಳು ಜಾತಾಃ = ಹುಟ್ಟಿದರು. ॥ ೧೯ ॥ ೨೦ ॥

**ಪುನಶ್ಚ ಮಾಯಾತ್ರಿವಿಧಾ ಬಭೂವ ಸತ್ವಾದಿರೂಪೈರಥ ವಾಸುದೇವಾತ್ ।**
**ಸತ್ವಾತ್ಮಿಕಾಯಾಂ ಸ ಸಭೂವ ತಸ್ಮಾತ್ಸ ವಿಷ್ಣುನಾವೈವ ನಿರಂತರೋಽಪಿ ॥ ೨೧ ॥**

ಪುನಃ = ಮತ್ತು ಮಾಯಾ = ವಾಸುದೇವ ಪತ್ನಿಯು ಸತ್ವಾದಿರೂಪೈಃ = ಸತ್ವಾದಿ ಗುಣಗಳ ಅಭಿಮಾನಿರೂಪದಿಂದ ತ್ರಿವಿಧಾ = ಮೂರುರೂಪವುಳ್ಳವಳು ಬಭೂವ = ಆದಳು ಅಥ = ಅನಂತರ ವಾಸುದೇವಾತ್ = ವಾಸುದೇವನ ದಸೆಯಿಂದ

ಸತ್ವಾದಿರೂಪೈಃ = ಸತ್ವಾದಿಗುಣಗಳ ಅಭಿಮಾನಿರೂಪದಿಂದ ತ್ರಿವಿಧಾಃ = ಮೂರು ರೂಪವುಳ್ಳವಳು. ಬಭೂವ = ಆದಳು ಅಥ = ಅನಂತರ ವಾಸುದೇವಾತ್ = ವಾಸುದೇವನ ದೆಸೆಯಿಂದ ಸತ್ವಾತ್ಮಿಕಾಯಾಂ = ಸತ್ವಾಭಿಮಾನಿಯಾದ ಶ್ರೀ ದೇವಿಯಲ್ಲಿ ಸ ಏವ = ಆ ವಾಸುದೇವನೇ ತಸ್ಮಾತ್ = ಆ ವಾಸುದೇವನ ದಸೆಯಿಂದ ನಿರಂತರೋಽಪಿ = ಭೇದವಿಲ್ಲದನಾದರೂ ಕೂಡ ವಿಷ್ಣುನಾಮ್ನೈದ = ವಿಷ್ಣುವೆಂಬ ಹೆಸರುಳ್ಳವನಾಗಿಯೇ ರೂಪಾಂತರದಿಂದ ಬಭೂವ = ಅವತರಿಸಿದನು. ॥ ೨೧ ॥

**ರಜಸ್ತನೌ ಚೈವವಿರಿಂಚ ಆಸೀತ್ತಮುಸ್ತನೌ ಶರ್ವಇತಿತ್ರಯೋಽಸ್ಮಾತ್ ।**
**ಏತೇಹಿ ದೇವಾಃ ಪುನರಂಡಸೃಷ್ಟಾವಶಕ್ನುವಂತೋಹರಿಮೇತ್ಯತುಷ್ಟುವುಃ ॥ ೨೨ ॥**

ವಾಸುದೇವನಿಂದ ರಜಸ್ತನೌ = ರಜೋಗುಣಕ್ಕೆ ಅಭಿಮಾನಿನಿಯಾದ ಭೂದೇವಿಯಲ್ಲಿ ವಿರಿಂಚಃ = ಚತುರ್ಮುಖಿ ಬ್ರಹ್ಮನ ಅಂತರ್ಯಾಮಿಯಾದ ವಿರಿಂಚನೆಂಬ ರೂಪವು ಆಸೀತ್ = ಉಂಟಾಯಿತು. ತಮಸ್ತನೌ = ತಮೋಗುಣಕ್ಕೆ ಅಭಿಮಾನಿನಿಯಾದ ದುರ್ಗಾದೇವಿಯಲ್ಲಿ ಶರ್ವಃ = ರುದ್ರಾಂತರ್ಗತವಾದ ರುದ್ರನೆಂಬ ರೂಪವು ಅವತರಿಸಿತು. ಇತಿ = ಈರೀತಿಯಾಗಿ ಆಸ್ಮಾತ್ = ಈ ವಾಸುದೇವನ ದಸೆಯಿಂದ ತ್ರಯಃ = ವಿಷ್ಣುವಿರಿಂಚ ಶರ್ವರೂಪಗಳುಆದವು. ಏತೇದೇವಾಃ = ಈ ತತ್ತ್ವಾಭಿಮಾನಿದೇವತೆಗಳು ಅಂಡಸೃಷ್ಟೌ = ಬ್ರಹ್ಮಾಂಡದ ಸೃಷ್ಟಿಯಲ್ಲಿ ಅಶಕ್ನುವಂತಃ ಪುನಃ = ಅಸಮರ್ಥರಾಗಿಯೇ ಹರಿಂ = ಪರಮಾತ್ಮನನ್ನು ಏತ್ಯ = ಹೊಂದಿ ತುಷ್ಟುವುಃ = ಸ್ತೋತ್ರ ಮಾಡಿದರು. ॥ ೨೨ ॥

**ತ್ವನ್ನೋಜಗಚ್ಚಿತ್ರವಿಚಿತ್ರಸರ್ಗನಿಃಸೀಮಶಕ್ತಿಃ ಕುರುಸನ್ನಿಕೇತಮ್ ।**
**ಇತಿಸ್ತುತಸ್ತೈಃ ಪುರುಷೋತ್ತಮೋಽಸೌ ಸ ವಿಷ್ಣುನಾಮಾಶ್ರಿಯಮಾಪಸೃಷ್ಟಯೇ ॥೨೩॥**

ಜಗಚ್ಚಿತ್ರವಿಚಿತ್ರಸರ್ಗನಿಸ್ಸೀಮಶಕ್ತಿಃ = ಲೋಕಗಳ ಆಶ್ಚರ್ಯಕರಗಳಾದ ನಾನಾಪ್ರಕಾರಗಳಾದ ಸೃಷ್ಟಿಗಳಲ್ಲಿ ಅಪರಿಮಿತವಾದ ಸಾಮರ್ಥ್ಯವುಳ್ಳ ತ್ವಂ = ನೀನು ನಃ = ನಮಗೆ ಸನ್ನಿಕೇತಂ = ಸಮೀಚೀನವಾದ ಮಂದಿರವನ್ನು ಕುರು = ಮಾಡು ಇತಿ = ಈ ರೀತಿಯಾಗಿ ತೈಃ = ಆ ದೇವತೆಗಳಿಂದ ಸ್ತುತಃ = ಸ್ತೋತ್ರ ಮಾಡಿಸಿಕೊಳ್ಳಲ್ಪಟ್ಟ ಅಸೌ. ಪುರುಷೋತ್ತಮಃ = ಈ ಪುರುಷ ಶ್ರೇಷ್ಠನಾದ ನಾರಾಯಣನು ಸ ವಿಷ್ಣುನಾಮಾ = ವಿಷ್ಣುವೆಂಬ ಹೆಸರುಳ್ಳವನಾಗಿ ಸೃಷ್ಟಯೇ = ಸೃಷ್ಟಿಗೋಸ್ಕರ ಶ್ರಿಯಂ = ಲಕ್ಷ್ಮಿಯನ್ನು ಆಪ = ಹೊಂದಿದನು. ॥ ೨೩ ॥

**ಸುಷಾವ ಸೈವಾಂಡಮಧೋಕ್ಷಜಸ್ಯ ಶುಷ್ಮಂಹಿರಣ್ಮಾತ್ಮಕಮಂಬುಮಧ್ಯೇ ।**
**ತಸ್ಮಿನ್ಪ್ರವಿಷ್ಟಾ ಹರಿಣೈವ ಸಾರ್ಧಂ ಸರ್ವೇಽಸುರಾಸ್ತಸ್ಯ ಬಭೂವ ನಾಭೇಃ ॥**
**ಲೋಕಾತ್ಮಕಂ ಪದ್ಮಮಮುಷ್ಯ ಮಧ್ಯೇ ಪುನರ್ವಿರಿಂಚೋಽಜನಿ ಸದ್ಗುಣಾತ್ಮಾ ॥೨೪॥**

ಸೈವ = ಆ ಶ್ರೀದೇವಿಯೇ ಅಧೋಕ್ಷಜಸ್ಯ = ನಾರಾಯಣನ ಶುಷ್ಮಂ = ರೋತೋರೂಪನಾದ ಹಿರಣ್ಮಾತ್ಮಕಂ = ಭೆಂಗಾರಮಯವಾದ ಅಂಡಂ = ಬ್ರಹ್ಮಾಂಡವನ್ನು ಅಂಬುಮಧ್ಯೇ = ನೀರಿನ ಮಧ್ಯದಲ್ಲಿ ಸುಷಾವ = ಹಡೆದಳು. ತಸ್ಮಿನ್ = ಆ ಬ್ರಹ್ಮಾಂಡದಲ್ಲಿ ಹರಿಣೈವ = ಪರಮಾತ್ಮನಿಂದಲೇ ಸಾರ್ಧಂ = ಕೂಡಿಕೊಂಡು ಸರ್ವೇಸುರಾಃ = ಎಲ್ಲಾದೇವತೆಗಳು ಪ್ರವಿಷ್ಟಾಃ = ಪ್ರವೇಶಿಸಿದರು. ಅಸ್ಯ = ಈ ಹರಿಯ ನಾಭೇಃ = ಹೊಕ್ಕಳ ದಸೆಯಿಂದ ಲೋಕಾತ್ಮಕಂ = ಲೋಕಗಳಿಗೆ ಆಧಾರಭೂತನಾದ ಪದ್ಮಂ = ಕಮಲವು ಬಭೂವ = ಉಂಟಾಯಿತು. ಅಮುಷ್ಯ = ಈ ಪದ್ಮದ ಮಧ್ಯೇ = ಮಧ್ಯದಲ್ಲಿ ಪುನಃ ಮತ್ತು ಸದ್ಗುಣಾತ್ಮಾ = ಸದ್ಗುಣಗಳಿಗೆ ಸ್ವಾಮಿಯಾದ ವಿರಿಂಚಃ = ಚತುರ್ಮುಖನು ಅಜನಿ = ಹುಟ್ಟಿದನು ॥೨೪॥

**ತಸ್ಮಾತ್ ಪುನಃ ಸರ್ವಸುರಾ ಪ್ರಸೂತಾಃತೇ ಜಾನಮಾನಾಅಪಿನಿರ್ಣಯಾಯ ।**
**ನಿಃಸೃತ್ಯಕಾಯಾದುತ ಪದ್ಮಯೋನೇಃ ಸಂಪ್ರಾವಿಶನ್ ಕ್ರಮಶೋವಾರುತಾಂತಾಃ ॥೨೫॥**

ತಸ್ಮಾತ್ = ಆ ಬ್ರಹ್ಮನ ದಸೆಯಿಂದ ಪುನಃ = ಮತ್ತು ಬ್ರಹ್ಮಾಂಡದೊಳಗೆ ಸರ್ವಸುರಾಃ = ಎಲ್ಲಾ ದೇವತೆಗಳು ಪ್ರಸೂತಾಃ = ಹುಟ್ಟಿದರು. ತೇ = ಆ ದೇವತೆಗಳು ಜಾನಮಾನಾಅಪಿ = ವಾಯುದೆವರಿಗೆ ಉತ್ತಮತ್ವವನ್ನು ತಿಳಿದವರಾದರೂ ಕೂಡ ವಾರುತಾಂತಾಃ = ವಾಯುದೇವರು ಕೊನೆಯಲ್ಲಿ ಉಳ್ಳದೇವತೆಗಳು ನಿರ್ಣಯಾಯ = ಲೋಕದ ಜನರ ನಿರ್ಣಯ-ಕ್ಕೊಸ್ಕರ ಪದ್ಮಯೋನೇಃ = ಪದ್ಮದಲ್ಲಿ ಹುಟ್ಟಿರುವ ಬ್ರಹ್ಮನ ಕಾಯಾತ್ = ಶರೀರದಿಂದ ಕ್ರಮಶಃ = ವಾಗಭಿಮಾನಿ

ಅಗ್ನಿಯಕ್ರಮದಿಂದ ನಿಃಸೃತ್ಯ = ಹೊರಗೆ ಬಂದು ಉತ = ಆನಂತರ ಸಂಪ್ರಾವಿಶನ್ = ವಾಗಾದಿ ಕ್ರಮದಿಂದ ಪ್ರವೇಶಿಸಿದರು

**ಪಪಾತ ವಾಯೋರ್ಗಮನಾಚ್ಛರೀರಂ ತಸ್ಯೈವಚಾವೇಶತ ಉತ್ಥಿತಂ ಪುನಃ ।**
**ತಸ್ಮಾತ್ಸಏಕೋ ವಿಬುಧಪ್ರಧಾನ ಇತ್ಯಾಶ್ರಿತಾ ದೇವಗಣಾಸ್ತಮೇವ ॥ ೨೬ ॥**

ತಸ್ಯವಾಯೋಃ = ಆ ವಾಯುದೇವರ ಗಮನಾನೇವ = ಶರೀರದಿಂದ ಹೊರಗೆ ಹೋಗುವುದರಿಂದಲೇ ಶರೀರಂ = ಬ್ರಹ್ಮದೇವರ ಶರೀರವು ಪ್ರಪಾತ = ಬಿದ್ದಿತು. ತಸ್ಯ = ಆ ವಾಯುದೇವರ ಆವೇಶತ ಏವ = ಪ್ರವೇಶದಿಂದಲೇ ಪುನಃ = ತಿರುಗಿ ಉತ್ಥಿತಂ = ಬದ್ದಿತು ತಸ್ಮಾತ್ = ಶರೀರವು ಬೀಳಲೂ ಏಳಲೂ ಕಾರಣವಾಗಿರುವುದರಿಂದ ಸ ಏಕಃ = ಆ ವಾಯುದೇವರೊಬ್ಬರೇ ವಿಬುಧಪ್ರಧಾನಃ = ದೇವತೆಗಳಲ್ಲಿ ಶ್ರೇಷ್ಠರು ಇತಿ = ಈ ರೀತಿಯಾಗಿ ದೇವಗಣಾಃ = ದೇವತೆಗಳ ಸಮೂಹವು ತಮೇವ = ಆ ವಾಯುದೇವರನ್ನೇ ಆಶ್ರಿತಾಃ = ಆಶ್ರಯಿಸಿತು. ॥ ೨೬ ॥

**ಅವತಾರಿಕೆ—** ಹರಿ ವಿರಿಂಚರು ಶರೀರದಲ್ಲಿರುವಾಗ ವಾಯುದೇವರ ಗಮನದಿಂದ ಶರೀರದ ಪ್ರಾಣವು ಉತ್ಥಾನವಾದರೆ ಹರಿವಿರಿಂಚರಿಂದಲೂ ವಾಯುದೇವರು ಉತ್ತಮರೋ ಎಂಬ ಶಂಕೆಗೆ ಸಮಾಧಾನವನ್ನು ಹೇಳುತ್ತಾರೆ.

**ಹರೇರ್ವಿರಿಂಚಸ್ಯಚ ಮಧ್ಯಸಂಸ್ಥಿತೇಃ ತದನ್ಯದೇವಾಧಿಪತಿಃ ಸಮಾಗತಃ ।**
**ತತೋ ವಿರಿಂಚೋ ಭುವನಾನಿಸಪ್ತಸಪ್ತಕಾನ್ಯಾಶುಚಕಾರಸೋ ಽಬ್ಜಾತ್ ॥ ೨೭ ॥**

ಹರೇಃ = ಹರಿಗೂ ವಿರಿಂಚಸ್ಯಚ = ಬ್ರಹ್ಮದೇವರಿಗೂ ಕೂಡ ಮಧ್ಯಸಂಸ್ಥಿತೇಃ = ಪರೀಕ್ಷೆಗೋಸ್ಕರ ಉದಾಸೀನರಾಗುವಿಕೆಯಿಂದ ಸಮಾಗತಃ = ಆ ವಾಯುದೇವರೂ ತದನ್ಯದೇವಾಧಿಪತಿಃ = ಆ ಹರಿ ವಿರಿಂಚರಿಂದ ಇತರ ದೇವತೆಗಳಿಗೆ ಸ್ವಾಮಿಯು ತತಃ = ಆ ಪರೀಕ್ಷಾನಂತರ ವಿರಿಂಚಃ = ಬ್ರಹ್ಮನು ಸಸಪ್ತಕಾನಿಸಪ್ತ = ಏಳರಿಂದ ಸಹಿತವಾದ ಏಳು ಅಂದರೆ ಹದಿನಾಲ್ಕು ಭುವನಾನಿ ಲೋಕಗಳನ್ನು ಆಶು = ಕೂಡಲೇ ಅಬ್ಜಾತ್ = ಪದ್ಮದ್ದೆಸೆಯಿಂದ ಚಕಾರ = ಸೃಷ್ಟಿಸಿದನು. ॥೨೭॥

**ತಸ್ಮಾಚ್ಚದೇವಾ ಋಷಯಃ ಪ್ರಜಜ್ಞಿರೈಕಾರಿಕಾದ್ಯಾ ಸಶಿವಾಬಭೂವುಃ ॥ ೨೮ ॥**

ಆ ಬ್ರಹ್ಮನ ದಸೆಯಿಂದ ವೈಕಾರಿಕಾದ್ಯಾ = ವೈಕಾರಿಕಾಹಂಕಾರದಿಂದ ಹುಟ್ಟಿರುವ ಇಂದ್ರಿಯಾಭಿಮಾನಿ ದೇವತೆಗಳೂ ತೈಜಸಾಹಂಕಾರದಿಂದ ಹುಟ್ಟಿರುವ ಪ್ರಾಣಾದಿಗಳೂ ತಾಮಸಾಹಂಕಾರದಿಂದ ಹುಟ್ಟಿರುವ ಗಣೇಶಾದಿಗಳೂ ಸಶಿವಾ = ರುದ್ರನಿಂದ ಕೂಡಿದ ಋಷಯಶ್ಚ ಋಷಿಗಳೂ ಕೂಡ ಪ್ರಜಜ್ಞಿರೆ = ಹುಟ್ಟಿದರು. ॥ ೨೮ ॥

**ಅಗ್ರೇ ಶಿವೋ ಽಹಂಭವಏವ ಬುದ್ಧೇರುವೂವಮನೋಜೌ ಸಹಶಕ್ರಕಾಮೌ ।**
**ಗುರುರ್ಮನುರ್ದಕ್ಷ ಉತಾನಿರುದ್ಧಃ ಸಹೈವ ಶಚ್ಯಾಮನಸಃ ಪ್ರಸೂತಾಃ ॥ ೨೯ ॥**

ಅಗ್ರೇ = ಆದಿಯಲ್ಲಿ ಶಿವಃ = ರುದ್ರನು ಅಹಂಭವಃ = ಅಹಂಕಾರ, ಬುದ್ಧಿ, ಮನಸ್ಸು ಚಿತ್ತ, ಚೇತನವೆಂಬುದಾಗಿ ಐದು ಪ್ರಭೇದವುಳ್ಳ ಆಂತಕರಣದ ದಾಸೋಹಂ ಎಂಬ ಬ್ರಹ್ಮದೇವರ ಅಹಂಕಾರದ ದೆಸೆಯಿಂದ ಹುಟ್ಟಿದನು. ಬುದ್ಧೇಃ = ಬುದ್ಧಿಯಿಂದ ಪಾರ್ವತಿಯು ಹುಟ್ಟಿದಳು. ಅಗ್ರೇ = ಮನಸ್ಸಿನಿಂದ ಹುಟ್ಟಿದ ಗುರ್ವಾದಿಗಳಿಂದ ಮೊದಲು ಶಕ್ರಕಾಮೌ = ಇಂದ್ರ ಮನ್ಮಥರು ಸಹ = ಒಟ್ಟಿಗೇನೆ ಮನೋಜೌ = ಬ್ರಹ್ಮದೇವರ ಮನಸ್ಸಿನಿಂದ ಹುಟ್ಟಿದರು. ಉತ = ಆನಂತರ ಮನಸಃ = ಮನಸ್ಸಿನದೆಸೆಯಿಂದ ಗುರುಃ = ಬೃಹಸ್ಪತ್ಯಾಚಾರ್ಯರು, ಮನುಃ ಮನುವು, ದಕ್ಷಃ ದಕ್ಷಪ್ರಜಾಪತಿಯು, ಅನಿರುದ್ಧಃ ಅನಿರುದ್ಧನು ಶಚ್ಯಾ = ಇಂದ್ರಾಣಿಯಿಂದ ಸಹೈವ = ಕೂಡಿಕೊಂಡೆ ಪ್ರಸೂತಾಃ = ಹುಟ್ಟಿದರು. ಶಿವಪದದಿಂದ ಗರುಡ ಶೇಷರನ್ನು ಇಟ್ಟುಕೊಳ್ಳಬೇಕು. ॥ ೨೯ ॥

**ಚಕ್ಷುಃ ಶ್ರುತಿಭ್ಯಾಂ ಸ್ಪರ್ಶಾತ್ಸಹೈವ ರವಿಃ ಶಶೀಧರ್ಮ ಇಮೇ ಪ್ರಸೂತಾಃ ।**
**ಜಿಹ್ವಾಭವೋ ವಾರಿಪತಿರ್ನಸೋಶ್ಚ ನಾಸತ್ಯದಸ್ರಾ ಕ್ರಮುಶಃ ಪ್ರಸೂತಾಃ ॥**
**ತತಃಸನಾದ್ಯಾಶ್ಚಮರೀಚಿಮುಖ್ಯಾ ದೇವಾಶ್ಚ ಸರ್ವೇಕ್ರಮುಶಃ ಪ್ರಸೂತಾಃ ॥ ೩೦ ॥**

ಚಕ್ಷುಃ ಶ್ರುತಿಭ್ಯಾಂ = ಕಣ್ಣುಗಳಿಂದಲೂ ಕಿವಿಗಳಿಂದಲೂ ಸ್ಪರ್ಶಾತ್ = ತ್ವಗಿಂದ್ರಿಯದಿಂದಲೂ ಕ್ರಮಶಃ = ಕ್ರಮದಿಂದ ರವಿಃ = ಸೂರ್ಯನು ಶಶೀ = ಚಂದ್ರನು ಧರ್ಮಃ = ಯಮನು ಇಮೇ = ಇವರು ಸಹೈವ = ಏಕಕಾಲದಲ್ಲಿಯೇ ಪ್ರಸೂತಾಃ = ಹುಟ್ಟಿದರು. ವಾರಿಪತಿಃ = ವರುಣನು ಜಿಹ್ವಾಭವಃ = ನಾಲಿಗೆಯಿಂದ ಹುಟ್ಟಿದವನು. ನಸೋಶ್ಚ = ಘ್ರಾಣೇಂದ್ರಿಯದ ದೆಸೆಯಿಂದ ನಾಸತ್ಯದಸ್ರೌ = ನಾಸತ್ಯದಸ್ರರೆಂಬ ಅಶ್ವಿನೀದೇವತೆಗಳು ಕ್ರಮಶಃ ಕ್ರಮದಿಂದ ಹುಟ್ಟಿದರು. ತತಃ = ಆನಂತರ ಸನಾದ್ಯಾಃ = ಸನಕ, ಸನಂದನ, ಸನತ್ಸುಜಾತರು ಮರೀಚಿಮುಖ್ಯಾಃ ಮರೀಚಿಯೇ ಮೊದಲಾಗಿ ಉಳ್ಳ (ವಸುಪುತ್ರರಾದ ಸೂರ್ಯರಶ್ಮಿಗಳಲ್ಲಿರುವವರು ಮರೀಚ್ಯಾದಿಗಳೆಂದು ಜನಾರ್ದನ ಭಟ್ಟೀಯ ವ್ಯಾಖ್ಯಾನದಲ್ಲಿದೆ) ಸರ್ವೇ = ಎಲ್ಲಾ ದೇವಾಃ = ದೇವತೆಗಳು ಕ್ರಮಶಃ = ಕ್ರಮದಿಂದ ಪ್ರಸೂತಾಃ = ಹುಟ್ಟಿದು. ॥ ೩೦ ॥

**ತತೋಽಸುರಾದ್ಯಾ ಋಷಯೋ ಮನುಷ್ಯಾಜಗದ್ವಿಚಿತ್ರಂಚ ವಿರಿಂಚತೋಭೂತ್ ॥೩೧॥**

ತತಃ = ಅನಂತರ ಅಸುರಾದ್ಯಾಃ = ಅಸುರ, ರಾಕ್ಷಸ ಮೊದಲಾದವರು ಋಷಯಃ = ಋಷಿಗಳು ಮನುಷ್ಯಾಃ = ಮಾನವರು ವಿಚಿತ್ರಂ = ಗೋಗಜಾಶ್ವ ಪಕ್ಷಿವೃಕ್ಷಾದಿ ನಾನಾಪ್ರಭೇದದಿಂದ ಕೂಡಿದ ಜಗತ್ ಚ = ಜಗತ್ತೂ ಕೂಡ ವಿರಿಂಚತಃ = ಬ್ರಹ್ಮನಿಂದ ಅಭೂತ್ = ಹುಟ್ಟಿತು. ॥ ೩೧ ॥

**ಉಕ್ತಕ್ರಮಾತ್‌ಪೂರ್ವಭವಸ್ತು ಯೋಽಯಃ ಶ್ರೇಷ್ಠಃ ಸಸಹ್ಯಾಸುರಕಾನೃತೇಚ ।**
**ಪೂರ್ವಸ್ತು ಪಶ್ಚಾತ್ಪುನರೇವ ಜಾತೋ ನಾಶ್ರೇಷ್ಠತಾಮೇತಿ ಕಥಂಚಿದಸ್ಯ ॥**
**ಗುಣಾಸ್ತು ಕಾಲಾತ್ಪಿತೃಮಾತೃದೋಷಾತ್ ಸ್ವಕರ್ಮತೋವಾಭಿಭವಂಪ್ರಯಾಂತಿ ॥ ೩೨॥**

ಉಕ್ತಕ್ರಮಾತ್ = ಹಿಂದೆ ಹೇಳಿದ ಕ್ರಮದಿಂದ ಯಃಯಃ ಪೂರ್ವಭವಃ = ಪದ್ಮಸೃಷ್ಟಿಯಲ್ಲಿ ಯಾವನು ಯಾವನು ಮೊದಲು ಹುಟ್ಟಿದವನೋ ಸಃಸಃ = ಅವನು ಅವನು ಅಸುರಕಾನ್ = ಅಸುರರನ್ನು ಋತೇ = ಹೊರತು ಶ್ರೇಷ್ಠಃ = ಉತ್ತಮನು ಪೂರ್ವಸ್ತು = ಪಾದ್ಮಸೃಷ್ಟಿಯಲ್ಲಿ ಮೊದಲು ಹುಟ್ಟಿದವನಾದರೂ ಪುನಃ = ಮತ್ತೆ ಅವಾಂತರ ಸೃಷ್ಟಿಯಲ್ಲಿ ಪಶ್ಚಾತ್‌ಜಾತಃ- ಯದಿ = ಹಿಂದೆ ಕೇಳಿದ ಕ್ರಮಕ್ಕೆ ವ್ಯತ್ಯಾಸವಾಗಿ ಮತ್ತೆ ಹುಟ್ಟಿದವನು ಆದರೆ ಕಥಂಚಿತ್ = ಯಾವ ರೀತಿಯಿಂದಲೂ ಅಶ್ರೇಷ್ಠತಾಂ = ಉತ್ತಮತ್ವಾಭಾವವನ್ನು ನೈತಿ = ಹೊಂದುವುದಿಲ್ಲ. ಅಸ್ಯ = ಅವಾಂತರ ಸೃಷ್ಟಿಯಲ್ಲಿ ಮತ್ತೆ ಹುಟ್ಟಿದವನ ಗುಣಾಸ್ತು = ಜ್ಞಾನಾನಂದಾದಿ ಗುಣಗಳಾದರೂ ಕಾಲಾತ್ = ದ್ವಾಪರ, ಕಲಿಯುಗಾದಿ ಕಾಲಬಲದಿಂದಲೂ ಪಿತೃಮಾತೃದೋ- ಷಾತ್ = ಪುರುಷಾನ್ನದಿಂದ ಪರಿಣತರೇತಸ್ಸ್ಯಯೋನಿಸಂಬಂಧಾದಿ ದೋಷದಿಂದ ಸ್ವಕರ್ಮತೋವಾ = ತನ್ನಿಂದ ಮಾಡಲ್ಪಟ್ಟ ಪ್ರಾರಬ್ಧಕರ್ಮದಿಂದಾಗಲೀ ಅಭಿಭವಂ = ಅನಭಿವ್ಯಕ್ತಿಯನ್ನು ಪ್ರಯಾಂತಿ = ಹೊಂದುತ್ತವೆ. ॥ ೩೨ ॥

**ಲಯೋಭವೇದ್ವ್ಯತ್ಯಯತೋಹಿ ತೇಷಾಂ ತತೋಹರಿಃ ಪ್ರಲಯೇ ಶ್ರೀಸಹಾಯಃ ।**
**ಶೇತೇನಿಜಾನಂದಮಮಂದ ಸಾಂದ್ರಸಂದೋಹಮೇಕೋಽನುಭವನ್ನನಂತಃ ॥ ೩೩ ॥**

ಹಿ = ಯಾವ ಕಾರಣದಿಂದ ಲಯಃ = ದೇವತೆಗಳ ಸಂಹಾರವು ವ್ಯತ್ಯಯತಃ = ಸೃಷ್ಟಿಕ್ರಮ ವೈಪರೀತ್ಯದಿಂದ ಅಂದರೆ ಮೊದಲು ಹುಟ್ಟಿದವನ ಸಂಹಾರವು ಕೊನೆಗೂ ಕೊನೆಗೆ ಹುಟ್ಟಿದವನ ಸಂಹಾರವು ಮೊದಲು ಭವೇತ್ = ಆಗುವುದೋ ತತಃ = ಆ ಕಾರಣದಿಂದ ಉತ್ಪತ್ತಿ ಕ್ರಮವೇ ತಾರತಮ್ಯಕ್ಕೆ ನಿಯಾಮಕವು ಲಯಕ್ರಮವು ತಾರತಮ್ಯಕ್ಕೆ ಕಾರಣವಾಗುವುದಿಲ್ಲ. ಲಯಕಥನಪ್ರಸಂಗದಿಂದ ಪ್ರಲಯದಲ್ಲಿ ಪರಮಾತ್ಮನಿರುವ ಪ್ರಕಾರವನ್ನು ಹೇಳುತ್ತಾರೆ. ಪ್ರಲಯೇ ಪ್ರಲಯ ಕಾಲದಲ್ಲಿ ಶ್ರೀಸಹಾಯಃ = ಲಕ್ಷ್ಮೀಯಿಂದ ಕೂಡಿಕೊಂಡ ಅನಂತಃ = ಸರ್ವಥಾ ನಾಶರಹಿತನಾದ ಮತ್ತು ನಿಃ ನೇಮನಾದ ಹರಿಃ = ಪರಮಾ- ತ್ಮನು ಅಮಂದಸಾಂದ್ರಸಂದೋಹಂ = ಪೂರ್ಣವಾದ ನಿಬಿಡವಾದ ಸಮುದಾಯ ರೂಪವಾದ ನಿಜಾನಂದಂ = ಸ್ವರೂಪಭೂತ- ವಾದ ಸಂತೋಷವನ್ನು ಏಕಃ = ಒಬ್ಬನೇ ಅನುಭವನ್ = ಅನುಭವಿಸುತ್ತಾ ಶೇತೆ = ಮಲಗುತ್ತಾನೆ. ॥ ೩೩ ॥

**ಅನಂತ ಶೀರ್ಷಾಸ್ಯಕರೋರುಪಾದಃ ಸೋಽನಂತಮೂರ್ತಿಃ ಸ್ವಗುಣಾನನಂತಾನ್ ।**
**ಅನಂತಶಕ್ತಿಃ ಪರಿಪೂರ್ಣಭೋಗೋ ಭುಂಜನ್ನಜಸ್ರಂ ನಿಜರೂಪಆಸ್ತೇ ॥ ೩೪ ॥**

ಅನಂತ ಶೀರ್ಷಾಸ್ಯ ಕರೋರು ಪಾದಃ = ಅಪರಿಮಿತಗಳಾದ ಶಿರಸ್ಸುಗಳೂ ಮುಖಗಳೂ ಕೈಗಳೂ ಉತ್ಕೃಷ್ಟಗಳಾದ

ಪಾದಗಳೂ ಇರುವಂತಹ ಅನಂತಮೂರ್ತಿಃ = ಬಹು ಅವತಾರಗಳುಳ್ಳ ಅನಂತಶಕ್ತಿಃ = ಅಪರಿಮಿತ ಸಾಮರ್ಥ್ಯವುಳ್ಳ ಪರಿಪೂರ್ಣ ಭೋಗಃ = ಪರಿಪೂರ್ಣಗಳಾದ ಭೋಗಗಳುಳ್ಳ ಸಃ ಆನಾರಾಯಣನು ಅನಂತಾನ್ = ಅಪರಿಮಿತಗಳಾದ ಸ್ವಗುಣಾನ್ = ತನ್ನ ಜ್ಞಾನಾನಂದಾದಿಗಳನ್ನು ಭುಂಜನ್ = ಅನುಭವಿಸುತ್ತಾ ಅಜಸ್ರಂ = ಯಾವಾಗಲೂ ನಿಜರೂಪಃ ಆಸ್ತೇ = ತನ್ನಸ್ವರೂಪದಿಂದಲೇ ಇರುತ್ತಾನೆ. ॥ ೩೪ ॥

**ಅವತಾರಿಕೆ—** ಪ್ರಲಯ ಕಾಲದಲ್ಲಿ ಎಲ್ಲರೂ ನಾಶ ಹೊಂದುತ್ತಿರಲು ಪುನಃ ಸೃಷ್ಟಿಯು ಇದೆಯೋ ಇಲ್ಲವೋ ಎಂಬ ಶಂಕೆಯನ್ನು ಪರಿಹರಿಸುತ್ತಾರೆ.

**ಏವಂ ಪುನಃ ಸೃಜತೇಸರ್ವಮೇತದನಾದ್ಯನಂತೋಹಿ ಜಗತ್ಪ್ರವಾಹಃ ।**
**ನಿತ್ಯಾಹಿ ಜೀವಾಃ ಪ್ರಕೃತಿಶ್ಚನಿತ್ಯಾಕಾಲಶ್ಚನಿತ್ಯಃ ಕಿಮುದೇವದೇವಃ ॥ ೩೫ ॥**

ಏವಂ = ಹಿಂದಿನಂತೆಯೇ ಹರಿಯು ಪುನಃ = ಮತ್ತು ಏತತ್ ಸರ್ವಂ = ಈ ಎಲ್ಲಾ ಜಗತ್ತನ್ನೂ ಸೃಜತೇ = ಸೃಷ್ಟಿ ಮಾಡುತ್ತಾನೆ. ಹಿ = ಯಾವ ಕಾರಣದಿಂದ ಜಗತ್ಪ್ರವಾಹಃ = ಜಗತ್ತಿನ ಪ್ರವಾಹವು ಅನಾದ್ಯನಂತಃ = ಆದ್ಯಂತ ಮತ್ತು ಕೊನೆ ಇಲ್ಲದ್ದೋ ಆದ್ದರಿಂದ ಮತ್ತೂ ಮತ್ತೂ ಸೃಷ್ಟಿಸುತ್ತಾನೆ. ಜೀವಾಃ = ಜೀವರು ನಿತ್ಯಾಃ = ನಾಶವಿಲ್ಲದವರು. ಪ್ರಕೃತಿಶ್ಚ = ಪ್ರಧಾನವು ಕೂಡ ನಿತ್ಯಾ = ನಾಶವಿಲ್ಲದ್ದು ಕಾಲಶ್ಚ = ಕಾಲವು ಕೂಡ ನಿತ್ಯಃ = ನಿತ್ಯವು ದೇವದೇವ = ದೇವತೆಗಳಿಗೂ ದೇವನಾದ ಶ್ರೀಹರಿಯು ನಿತ್ಯಃ = ಇತಿ ಕಿಮು = ನಿತ್ಯನೆಂದು ಏನು ಹೇಳ ತಕ್ಕದ್ದು ? ॥ ೩೫ ॥

**ಯಥಾಸಮುದ್ರಾತ್ಸರಿತಃ ಪ್ರಜಾತಾಃ ಪುನಸ್ತಮೇವ ಪ್ರವಿಶಂತಿ ಶಶ್ವತ್ ।**
**ಏವಂ ಹರೇರ್ನಿತ್ಯ ಜಗತ್ಪ್ರವಾಹಸ್ತಮೇವ ಚಾಸಾ ಪ್ರವಿಶತ್ಯಜಸ್ರಮ್ ॥ ೩೬ ॥**

ಯಥಾ = ಹೇಗೆ ಸಮುದ್ರಾತ್ = ಸಾಗರದ ದೆಸೆಯಿಂದ ಸರಿತಃ = ನದಿಗಳು ಪ್ರಜಾತಾಃ = ಹುಟ್ಟುತ ಪುನಃ = ಮತ್ತು ತಮೇವ = ಆ ಸಮುದ್ರದನ್ನೇ ಶಶ್ವತ್ = ಯಾವಾಗಲೂ ಪ್ರವಿಶಂತಿ = ಪ್ರವೇಶಿಸುತ್ತವೋ ಏವಂ = ಇದೇ ರೀತಿಯಾಗಿ ಹರೇಃ = ಪರಮಾತ್ಮನ ದೆಸೆಯಿಂದ ನಿತ್ಯಜಗತ್ಪ್ರವಾಹಃ = ನಿತ್ಯವಾದ ಜಗತ್ತಿನ ಪ್ರವಾಹವು ಹುಟ್ಟುತ್ತದೆ. ತಮೇವ = ಆ ಪರಮಾತ್ಮನನ್ನೇ ಅಸೌ = ಈ ಜಗತ್ಪ್ರವಾಹವು ಅಜಸ್ರಂ = ಯಾವಾಗಲೂ ಪ್ರವಿಶತಿ = ಪ್ರವೇಶಿಸುತ್ತದೆ. ॥ ೩೬ ॥

**ಅವತಾರಿಕೆ—** ಸೃಷ್ಟಿಪ್ರಲಯಗಳು ಅವಶ್ಯವಾಗಿ ತಿಳಿಯಲು ಯೋಗ್ಯವಾದ್ದರಿಂದ ಸೃಷ್ಟಿಪ್ರಲಯಗಳ ಜ್ಞಾನದ ಫಲವನ್ನು ಹೇಳುತ್ತಾರೆ.

**ಏವಂ ವಿದುರ್ಯೇ ಪರಮಾಮನಂತಾಮಜಸ್ರ ಸಶಕ್ತಿಂ ಪುರುಷೋತ್ತಮಸ್ಯ ।**
**ತಸ್ಯಪ್ರಸಾದಾದಥ ದಗ್ಧದೋಷಾ ಸ್ತಮಾಪ್ನುವಂತ್ಯಾಶು ಪರಂ ಸುರೇಶಮ್ ॥ ೩೭ ॥**

ಏವಂ = ಈ ರೀತಿಯಾಗಿ ಅಜಸ್ಯ = ಹುಟ್ಟುವಿಕೆ ಇಲ್ಲದ ಪುರುಷೋತ್ತಮಸ್ಯ = ಪುರುಷ ಶ್ರೇಷ್ಠನಾದ ಪರಮಾತ್ಮನ ಅನಂತಾಂ = ಅಪರಿಮಿತವಾದ ಪರಮಾಂ = ಉತ್ತಮವಾದ ಶಕ್ತಿಂ = ಸಾಮರ್ಥ್ಯವನ್ನು ಯೇ = ಯಾರು ವಿದುಃ ತಿಳಿಯುತ್ತಾರೋ ತೇ = ಅವರು ವೈರಾಗ್ಯ-ಭಕ್ತಿ-ಅಪರೋಕ್ಷ-ಜ್ಞಾನಾನಂತರ ತಸ್ಯ = ಆ ಪರಮಾತ್ಮನ ಪ್ರಸಾದಾತ್ = ಅನುಗ್ರಹದಿಂದ ದಗ್ಧದೋಷಾಃ = ಸುಡಲ್ಪಟ್ಟ ದೋಷವುಳ್ಳವರಾಗಿ ಪರಂ = ಸರ್ವೋತ್ಕೃಷ್ಟನಾದ ಸುರೇಶಂ = ದೇವತೆಗಳಿಗೆ ಸ್ವಾಮಿಯಾದ ತಂ = ಆ ಪರಮಾತ್ಮನನ್ನು ಆಶು = ಬೇಗನೇ ಆಪ್ನುವಂತಿ = ಹೊಂದುತ್ತಾರೆ. ॥ ೩೭ ॥

**ದೇವಾನಿಮಾನ್ಮುಕ್ತಸಮಸ್ತದೋಷಾನ್ ಸ್ವಸನ್ನಿಧಾನೇ ವಿನಿವೇಶ್ಯದೇವಃ ।**
**ಪುನಸ್ತದನ್ಯಾನಧಿಕಾರ ಯೋಗ್ಯಾಂಸ್ತತ್ತದ್ಗಣಾನೇವ ಪದೇನಿಯುಂಕ್ತೇ ॥ ೩೮॥**

ದೇವಃ = ಕ್ರೀಡಾದಿಗುಣ ವಿಶಿಷ್ಟನಾದ ಹರಿಯು ಮುಕ್ತಸಮಸ್ತ ದೋಷಾನ್ = ಹೋಗಲ್ಪಟ್ಟ ಎಲ್ಲಾ ದೋಷಗಳುಳ್ಳ ಇಮಾನ್ = ಈ ದೇವಾನ್ = ಮುಕ್ತ ದೇವತೆಗಳನ್ನು ಸ್ವಸನ್ನಿಧಾನೇ = ತನ್ನ ಸಮೀಪದಲ್ಲಿ ವಿನಿವೇಶ್ಯ = ಇಟ್ಟು

ಕೊಂಡು ಪುನಃ = ಮತ್ತು ತದನ್ಯಾನ್ = ಮುಕ್ತರಿಂದ ಬೇರೆಯಾದ ಅಧಿಕಾರ ಯೋಗ್ಯಾನ್ = ಆಯಾ ಅಧಿಕಾರಕ್ಕೆ ಯೋಗ್ಯರಾದ ತತ್ತದ್ಗುಣಾನ್ = ಏವ ಋಜು ಮೊದಲಾದವರ ಸಮೂಹಗಳನ್ನೇ ಪದೇ = ಬ್ರಹ್ಮ, ಶೇಷಾದಿ ಸ್ಥಾನದಲ್ಲಿ ನಿಯುಂಕ್ತೇ = ನಿಯೋಜಿಸುತ್ತಾನೆ. ॥ ೩೭ ॥

**ಅವತಾರಿಕೆ**— ಇಷ್ಟರ ತನಕ ಸರ್ಗವನ್ನು ಹೇಳಿ ಇನ್ನು ಕಶ್ಯಪ ಋಷಿಯಿಂದ ಆಗತಕ್ಕ ಅನುಸರ್ಗವನ್ನು ಹೇಳುತ್ತಾರೆ.

**ಪುನಶ್ಚ ಮಾರೀಚತ ಏವ ದೇವಾಃಜಾತಾ ಅದಿತ್ಯಾಮಸುರಾಶ್ಚ ದಿತ್ಯಾಮ್ ।**
**ಗಾವೋಮೃಗಾಃ ಪಕ್ಷ್ಯುರಗಾದಿ ಸತ್ವಾ ದಾಕ್ಷಾಯಣೇಷ್ವೇವ ಸಮಸ್ತಶೋಽಪಿ ॥ ೩೮ ॥**

ಪುನಶ್ಚ = ಮತ್ತೂ ಮಾರೀಚತ ಏವ = ಮರೀಚಿ ಋಷಿಗಳ ಮಗನಾದ ಕಶ್ಯಪರಿಂದಲೇ ಅದಿತ್ಯಾಂ = ಅದಿತಿ ದೇವಿಯಲ್ಲಿ ದೇವಾಃ = ದೇವತೆಗಳು ಜಾತಾಃ = ಹುಟ್ಟಿದರು. ಅದಿತ್ಯಾಂ = ಅದಿತಿಯಲ್ಲಿ ಅಸುರಾಶ್ಚ = ಅಸುರರೂ ಕೂಡ ಜಾತಾಃ ಹುಟ್ಟಿದರು. ದಾಕ್ಷಾಯಣೇ ಷ್ವೇವ = ದಕ್ಷಪ್ರಜಾಪತಿಯ ಮಕ್ಕಳಾದ ವಿನತಾದಿಗಳಲ್ಲಿಯೇ ಸಮಸ್ತಶಃ = ಎಲ್ಲಾ ಗಾವಃ = ದನಗಳು ಮೃಗಾಃ = ಮೃಗಗಳು, ಪಕ್ಷ್ಯುರಗಾದಿಸತ್ವಾಃ = ಪಕ್ಷಿಗಳು, ಸರ್ಪಗಳೇ ಮೊದಲಾಗಿ ಉಳ್ಳ ಪ್ರಾಣಿಗಳು ಜಾತಾಃ = ಹುಟ್ಟಿದವು. ॥ ೩೮ ॥

**ಅವತಾರಿಕೆ**— ಈಗ ವರಾಹಾವತಾರ ಕಥೆಯನ್ನು ಹೇಳುತ್ತಾರೆ.

**ತತಃ ಸಮಗ್ನಾಮಲಯೋ ಲಯೋದಧೌ ಮಹೀಂವಿಲೋಕ್ಯಾಶು ಹರಿರ್ವರಾಹಃ ।**
**ಭೂತ್ವಾವಿರಿಂಚಾರ್ಥಮಿಮಾಂ ಸಶೈಲಾಮುದ್ಧೃತ್ಯವಾರಾಮುಪರಿನ್ಯಧಾತ್ ಸ್ಥಿರಮ್॥೩೯॥**

ತತಃ = ಅನಂತರ ಅಲಯಃ = ಪ್ರಲಯವಿಲ್ಲದ ಹರಿಃ = ದಶಾವತಾರಗಳಿಗಿಂತ ಮೊದಲು ಸೃಷ್ಟನಾದ ಬ್ರಹ್ಮನ ಉಪಕಾರಕ್ಕೋಸ್ಕರ ಅವತರಿಸಿದ ಶ್ವೇತಾವರಾಹನು ಭೂತ್ವಾ = ಅವತರಿಸಿ ಲಯೋದಧೌ = ಪ್ರಲಯ ಸಮುದ್ರದಲ್ಲಿ ಅಂದರೆ ~~ಲಕ್ಷಯೋಜನದ ಘನೀಭೂತ ಭೂಮಿಯ ಕೆಳಗೆ ಉತ್ತರ ಖರ್ಪರವನ್ನು ಆಕಂಡಿಸಿ ದಕ್ಷಿಣ ಖರ್ಪರ ಪರ್ಯಂತರವೂ ಪೂರ್ವ~~ ಖರ್ಪರವನ್ನಾರಂಭಿಸಿ ಪಶ್ಚಿಮ ಖರ್ಪರ ಪರ್ಯಂತ ಐವತ್ತು ಕೋಟಿ ವಿಸ್ತೀರ್ಣವಾದ ಒಂದುಲಕ್ಷ ಕಡಿಮೆಯಾದ ಇಪ್ಪತ್ತೈದು ಕೋಟಿಗಳಿಂದ ಕೆಳಗಿನ ಖರ್ಪರ ಪರ್ಯಂತ ಆಳವುಳ್ಳ ಘನೋದಕವೆಂಬ ಮಹಾಸಮುದ್ರದಲ್ಲಿ ಮಗ್ನಾಂ = ಭಾರದಿಂದ ತಾನಾಗಿಯೇ ಮುಳುಗಿದ ಮಹೀಂ = ಭೂಮಿಯನ್ನು ವಿಲೋಕ್ಯ = ನೋಡಿ ಆಶು = ಬೇಗನೇ ವಿರಿಂಚಾರ್ಥಂ = ಬ್ರಹ್ಮನಿಗೋಸ್ಕರ ಸಶೈಲಾಂ = ಪರ್ವತಗಳಿಂದ ಕೂಡಿದ ಇಮಾಂ = ಈ ಭೂಮಿಯನ್ನು ಉದ್ಧೃತ್ಯ ಮೇಲಕ್ಕೆತ್ತಿ ವಾರಾಂಉಪರಿ = ಘನೋದಕ ಸಮುದ್ರದ ಮೇಲೆ ಸ್ಥಿರಂ = ಸ್ಥಿರವಾಗಿರುವಂತೆ ನ್ಯಧಾತ್ = ಇಟ್ಟನು. ॥ ೩೯ ॥

**ಅವತಾರಿಕೆ**— ವರಾಹಾವತಾರ ಕಥಾ ಪ್ರಸಂಗದಿಂದ ದಶಾವತಾರ ಕಥೆಯ ಕ್ರಮವನ್ನುಲಂಘಿಸಿ ದಶಾವತಾರಗಳಲ್ಲಿ ಮೂರನೆಯ ಅವತಾರವಾದ ನೀಲವರಾಹನ ಕಥೆಯನ್ನು ಹೇಳುತ್ತಾರೆ.

**ಅಥಾಬ್ಜನಾಭಪ್ರತಿಹಾರಪಾತಾ ಶಾಪಾತ್ತ್ರಿಶೋ ಭೂಮಿತಲೇ ಪ್ರಜಾತೌ ।**
**ದಿತ್ಯಾಂಹಿರಣ್ಯಾವಥ ರಾಕ್ಷಸೌಚ ಪೈತೃಷ್ವಸೇಯೌಚ ಹರೇಃ ಪರಸ್ತಾತ್ ॥ ೪೦ ॥**

ಅಥ = ಅನಂತರ ಅಬ್ಜನಾಭ ಪ್ರತಿಹಾರಪಾತಾ = ಪದ್ಮನಾಭನ ದ್ವಾರಪಾಲಕರಾದ ಜಯವಿಜಯರು ಶಾಪಾತ್ = ಲಕ್ಷ್ಮೀಸನಕಾದಿಗಳ ಶಾಪದಿಂದ ತ್ರಿಶಃ = ಮೂರುಸಲ ಭೂಮಿತಲೇ = ಭೂತಲದಲ್ಲಿ ಪ್ರಜಾತೌ = ಹುಟ್ಟಿದರು. ದಿತ್ಯಾಂ = ದಿತಿದೇವಿಯಲ್ಲಿ ಹಿರಣ್ಯಾ = ಹಿರಣ್ಯಾಕ್ಷ ಹಿರಣ್ಯಕಶಿಪು ಎಂಬವರಾಗಿ ಅಥ = ಅನಂತರ (ಪುಲಸ್ತ್ಯ ಋಷಿಗಳ ಪತ್ನಿಯಲ್ಲಿ) ರಾಕ್ಷಸೌ = ರಾಕ್ಷಸರಾದ ರಾವಣ ಕುಂಭಕರ್ಣರು ಪರಸ್ತಾತ್ = ಅನಂತರ ಹರೇಃ = ಶ್ರೀಕೃಷ್ಣನಿಗೆ (ಯಾದವ ವಂಶದಲ್ಲಿ) ಪೈತೃಷ್ವಸೇಯೌ = ತಂದೆಯ ತಂಗಿಯ ಮಕ್ಕಳಾದ ಶಿಶುಪಾಲ ದಂತವಕ್ರರಾಗಿ ಪ್ರಜಾತ್ = ಹುಟ್ಟಿದರು ॥ ೪೦ ॥

**ತತೋಹಿರಣ್ಯಾಕ್ಷ ಉದಾರವಿಕ್ರಮೋದಿತೇಃ ಸುತೋಯೋಽವರಜಃ ಸುರಾರ್ಥೇ ।**
**ಧಾತ್ರಾರ್ಥಿತೇನೈವ ವರಾಹರೂಪಿಣಾ ಧರೋದ್ಧೃತೌ ಪೂರ್ವಹತೋಽಬ್ಜಜೋದ್ಭವಃ ॥೪೧॥**

ತತಃ = ಅನಂತರ ಉದಾರವಿಕ್ರಮಃ = ಉತ್ಕೃಷ್ಟ ಪರಾಕ್ರಮವುಳ್ಳ ದಿತೇಃ ಸುತಃ = ಕಶ್ಯಪರಿಂದ ದಿತಿಯಲ್ಲಿ ಹುಟ್ಟಿದ ಅವರಜಃ = ತಮ್ಮನಾದ ಯಃ = ಯಾವ ಹಿರಣ್ಯಾಕ್ಷಃ ಹಿರಣ್ಯಾಕ್ಷನೋ ಸಃ = ಅವನು ಸುರಾರ್ಥೇ = ದೇವತೆಗಳಿಗೋಸ್ಕರ ಧಾತ್ರಾರ್ಥಿನಾ = ಬ್ರಹ್ಮ ದೇವರಿಂದ ಪ್ರಾರ್ಥಿಸಲ್ಪಟ್ಟ ವರಾಹ ರೂಪಿಣೈವ = ದಶಾವತಾರ ಪ್ರವಿಷ್ಟನಾದ ವರಾಹನಿಂದಲೇ ಧರೋದ್ಧೃತೌ = ಬಲಾತ್ಕಾರದಿಂದ ನೀರಿನಲ್ಲಿ ಮುಳುಗಿಸಿದ ಭೂಮಿಯನ್ನು ಎತ್ತುವ ಸಮಯದಲ್ಲಿ ಹತಃ = ಕೊಲ್ಲಲ್ಪಟ್ಟನು. ಶ್ವೇತ ವರಾಹನು ಕೊಂದ ಆದಿ ಹಿರಿಣ್ಯಾಕ್ಷನು ಯಾರೆಂಬುದನ್ನು ಹೇಳುತ್ತಾರೆ. ಧರೋದ್ಧೃತೌ = ಭಾರದಿಂದ ತಾನಾಗಿಯೇ ಮುಳುಗಿದ ಭೂಮಿಯನ್ನು ಎತ್ತುವಾಗ ಮಾರ್ಗದಲ್ಲಿ ತಡೆಯಲಿಕ್ಕೆ ಬರುವಾಗ ಪೂರ್ವಹತಃ = ಮೊದಲು ಶ್ವೇತ ವರಾಹನಿಂವ ಕೊಲ್ಲಲ್ಪಟ್ಟವನು. ಅಬ್ಜಸಂಭವಃ = ಚತುರ್ಮುಖನ ಪುತ್ರನು. ಇಬ್ಬರೂ ಹಿರಣ್ಯಾಕ್ಷ ಎಂಬ ಹೆಸರುಳ್ಳವರು. ಕೊಲ್ಲತಕ್ಕವರು ವರಾಹ ನಾಮವುಳ್ಳವರು. ಆದ್ದರಿಂದಲೇ ಕಥೆಯನ್ನು ಒಟ್ಟಿಗೆ ಹೇಳಿರುವರು. ॥ ೪೧ ॥

ಮತ್ಸ್ಯಾವತಾರ ಕಥೆಯನ್ನು ಹೇಳುತ್ತಾರೆ.

**ಅಥೋವಿಧಾತುರ್ಮುಖತೋವಿನಿಸ್ಸೃತಾನ್ ವೇದಾನ್ ಹಯಾಸ್ಯೋಜಗೃಹೇಽಸುರೇಂದ್ರಃ।**
**ನಿಹತ್ಯ ತಂ ಮತ್ಸ್ಯವಪುರ್ಜುಗೋಪ ಮನುಂಮುನೀಂಸ್ತಾಂಶ್ಚ ದದೌ ವಿಧಾತುಃ ॥ ೪೨ ॥**

ಅಥೋ = ಅನಂತರ ಹಯಾಸ್ಯಃ = ಕುದುರೆಯಂತೆ ಮುಖವುಳ್ಳ ಹಯಗ್ರೀವನಾಮಕನಾದ ಅಸುರೇಂದ್ರಃ = ದೈತ್ಯ ಶ್ರೇಷ್ಠನು. ವಿಧಾತುಃ = ಬ್ರಹ್ಮನ ಮುಖತಃ = ಬಾಯಿಯಿಂದ ವಿನಿಸ್ಸೃತಾನ್ = ಹೊರಡುವ ವೇದಾನ್ = ದೇಹಧಾರಿಗಳಾವ ವೇದಾಭಿಮಾನಿ ದೇವತೆಗಳನ್ನು ಜಗೃಹೇ = ಸ್ವೀಕರಿಸಿದನು. ಮತ್ಸ್ಯವಪುಃ = ಮತ್ಸ್ಯಾವತಾರನಾದ ಹರಿಯು ತಂ = ಆ ಹಯಗ್ರೀವಾಸುರನನ್ನು ನಿಹತ್ಯ = ಕೊಂದು ಮನುಂ = ವೈವಸ್ವತಮನುವನ್ನು ಮುನೀನ್ ಚ = ಸಪ್ತಋಷಿಗಳನ್ನು ಕೂಡ ಜುಗೋಪ = ರಕ್ಷಿಸಿದನು. ತಾನ್ = ಆವೇದಗಳನ್ನು ವಿಧಾತುಃ = ಬ್ರಹ್ಮನಿಗೆ ದದೌ = ಕೊಟ್ಟನು. ॥ ೪೨ ॥

**ಮನ್ವಂತರಪ್ರಲಯೇ ಮತ್ಸ್ಯರೂಪೋ ವಿದ್ಯಾಮದಾನ್ಮನವೇ ದೇವದೇವಃ ।**
**ವೈವಸ್ವತಾಯೋತ್ತಮ ಸಂವಿದಾತ್ಮಾ ವಿಷ್ಣೋಃ ಸ್ವರೂಪಪ್ರತಿಪತ್ತಿರೂಪಾಮ್ ॥ ೪೩ ॥**

ಮನ್ವಂತರ ಪ್ರಲಯೇ = ಮನ್ವಂತರ ಪ್ರಲಯದಲ್ಲಿ ದೇವದೇವಃ = ದೇವತೆಗಳಿಗೂ ದೇವನಾದ ಉತ್ತಮ ಸಂವಿದಾತ್ಮಾ = ಶ್ರೇಷ್ಠವಾದ ಜ್ಞಾನವೇ ಸ್ವರೂಪವಾಗಿ ಉಳ್ಳ ಮತ್ಸ್ಯವಪುಃ = ಮತ್ಸ್ಯಾವತಾರಿಯಾದ ಹರಿಯು ವೈವಸ್ವತಾಯ = ವಿವಸ್ವಾನ್ನಾಮಕ ಸೂರ್ಯನ ಮಗನಾದ ಮನವೇ = ಮನುವಿಗೋಸ್ಕರ ವಿಷ್ಣೋಃ = ಪರಮಾತ್ಮನ ಸ್ವರೂಪ ಪ್ರತಿಪತ್ತಿರೂಪಾಂ = ಸ್ವರೂಪದ ಯಥಾರ್ಥ ಜ್ಞಾನವನ್ನು ಹುಟ್ಟಿಸತಕ್ಕ ವಿದ್ಯಾಂ = ವಿದ್ಯೆಯನ್ನು ಅದಾತ್ = ಕೊಟ್ಟನು. ॥ ೪೩ ॥

**ಅಥೋದಿತೇಜ್ಯೇಷ್ಠಸುತೇನ ಶಶ್ವತ್ ಪ್ರಪೀಡಿತಾ ಬ್ರಹ್ಮವರಾತ್ಸುರೇಶಾಃ ।**
**ಹರಿಂವಿರಿಂಚೇನ ಸಹೋಪಜಗ್ಮುರ್ದೌರಾತ್ಮ್ಯಮಸ್ಯಾಪಿ ಶಶಂಸುರಸ್ಯೈ ॥ ೪೪ ॥**

ಅಥೋ = ಅನಂತರ ದಿತೇಃ = ದಿತಿದೇವಿಯ ಜ್ಯೇಷ್ಠಸುತೇನ = ಜ್ಯೇಷ್ಠಪುತ್ರನಾದ ಹಿರಣ್ಯಕಶಿಪುವಿನಿಂದ ಬ್ರಹ್ಮವರಾತ್ = ಬ್ರಹ್ಮನ ವರದಿಂದ ಪ್ರಪೀಡಿತಾಃ = ಚೆನ್ನಾಗಿ ಪೀಡಿಸಿಕೊಳ್ಳಲ್ಪಟ್ಟ ಸುರೇಶಾಃ = ದೇವಶ್ರೇಷ್ಠರು ವಿರಿಂಚೇನ = ಬ್ರಹ್ಮನಿಂದ ಸಹ = ಕೂಡಿಕೊಂಡು ಹರಿಂ = ಪರಮಾತ್ಮನನ್ನು ಉಪಜಗ್ಮುಃ = ಹೊಂದಿದರು. ಅಸ್ಯ = ಈ ಹಿರಣ್ಯಕಶಿಪುವಿನ ದೌರಾತ್ಮ್ಯಮಪಿ = ದುಷ್ಟತ್ವವನ್ನು ಕೂಡ ಅಸ್ಯೈ = ಈ ಹರಿಗೋಸ್ಕರ ಶಶಂಸುಃ = ಹೇಳಿದರು. ॥ ೪೪ ॥

**ಅಭಿಷ್ಟುತಸ್ತೈರ್ಹರಿರುಗ್ರವೀರ್ಯೋ ನೃಸಿಂಹರೂಪೇಣ ಸ ಆವಿರಾಸೀತ್ ।**
**ಹತ್ವಾಹಿರಣ್ಯಂಚ ಸುತಾಯ ತಸ್ಯ ದತ್ವಾಭಯಂದೇವಗಣಾನತೋಷಯತ್ ॥ ೪೫ ॥**

ತೈಃ = ಆದೇವತೆಗಳಿಂದ ಅಭಿಷ್ಟುತಃ = ಸ್ತೋತ್ರಮಾಡಿಸಿಕೊಳ್ಳಲ್ಪಟ್ಟ ಉಗ್ರವೀರ್ಯಃ = ಭಾರೀ ಪರಾಕ್ರಮ ಉಳ್ಳ ಸಃ ಹರಿಃ = ಆ ಹರಿಯು ನೃಸಿಂಹರೂಪೇಣ = ನರಸಿಂಹ ರೂಪದಿಂದ ಆವಿರಾಸೀತ್ = ಪ್ರಾದುರ್ಭವಿಸಿದನು.

ಹಿರಣ್ಯಂಚಿ = ಹಿರಣ್ಯ ಕಶಿಪುವನ್ನೂ ಕೂಡ ಹತ್ವಾ = ಕೊಂದು ತಸ್ಯ = ಅವನ ಸುತಾಯ = ಮಗನಾದ ಪ್ರಹ್ಲಾದನೀ ಗೋಸ್ಕರ ಅಭಯಂ = ಅಭಯವನ್ನು ದತ್ವಾ = ಕೊಟ್ಟು ದೇವಗಣಾನ್ = ದೇವತೆಗಳ ಸಮೂಹಗಳನ್ನು ಅತೋಷಯತ್ = ಸಂತೋಷ ಪಡಿಸಿದನು. ॥ ೪೫ ॥

**ಸುರಾಸುರಾಣಾಮುದಧಿಂ ವಿಮಥ್ನತಾಂ ದಧಾರ ಪೃಷ್ಠೇನಗಿರಿಂ ಸ ಮಂದರಮ್ ।**
**ವರಪ್ರದಾನಾದಪರೈರಧಾರ್ಯಂ ಹರಸ್ಯ ಕೂರ್ಮೋ ಬೃಹದಂಡವೋಢಾ ॥ ೪೬ ॥**

ಬೃಹದಂಡವೋಢಾ = ಬ್ರಹ್ಮಾಂಡವನ್ನು ಧರಿಸಿರುವ ಕೂರ್ಮಃ = ಕೂರ್ಮರೂಪಿಯಾದ ಸಃ = ಆ ಹರಿಯು ಸುರಾಸುರಾಣಾಂ = ದೇವದೈತ್ಯರು ಉದಧಿಂ = ಸಮುದ್ರವನ್ನು ವಿಮಥ್ನತಾಂ ಸತಾಂ = ಕರೆಯುತ್ತಿರಲು ಹರಸ್ಯ = ರುದ್ರನ ವರಪ್ರದಾನಾತ್ = (ಭಂಗಾರ ರೂಪನಾದ ನಿನ್ನನ್ನು ಭಂಗಾರದ ಆಶೆಯಿಂದ ಯಾರು ತೆಗೆಯದಿರಲಿ ಎಂದು) ವರದಿಂದ ಅಧಾರ್ಯಂ = ಧರಿಸಲಿಕ್ಕೆ ಅಶಕ್ಯವಾದ ಮಂದರಂ ಗಿರಿಂ = ಮಂದರ ಪರ್ವತವನ್ನು ಪೃಷ್ಠೇನ = ಬೆನ್ನಿನಿಂದ ದಧಾರ= ಧರಿಸಿದನು. ॥ ೪೬ ॥

**ವರಾದಜೇಯತ್ವಮವಾಪದೈತ್ಯರಾಟ್ ಚತುರ್ಮುಖಸ್ಯೈವ ಬಲಿರ್ಯದಾತದಾ ।**
**ಅಜಾಯತೇಂದ್ರಾವರಜೋಽದಿತೇಃ ಸುತೋಮಹಾನಜೋಽಪ್ಯಬ್ಜ ಭವಾದಿಸಂಸ್ತುತಃ॥೪೭॥**

ದೈತ್ಯರಾಟ್ = ದೈತ್ಯಶ್ರೇಷ್ಠನಾದ ಬಲಿಃ = ಬಲಿಚಕ್ರವರ್ತಿಯು ಚತುರ್ಮುಖಸ್ಯ = ಬ್ರಹ್ಮನ ವರಾತ್ = ವರದಿಂದ ಯದಾ = ಯಾವಾಗ ಅಜೇಯತ್ವಂ = ಪರಾಜಯವಿಲ್ಲದಿರುಕೆಯನ್ನು ಅವಾಪ = ಹೊಂದಿದನೋ ತದಾ = ಆಗ ಅಬ್ಜ ಭವಾದಿಸಂಸ್ತುತಃ = ಬ್ರಹ್ಮರುದ್ರ ಮೊದಲಾದವರಿಂದ ಸ್ತೋತ್ರಮಾಡಿಸಿ ಕೊಳ್ಳಲ್ಪಟ್ಟ ಅದಿತೇಃ = ಅದಿತಿಯ ಸುತಃ = ಮಗನಾದ ಅಜಃ = ಉತ್ಪತ್ತಿಯಿಲ್ಲದ ಹರಿಯು ಮಹಾನಪಿ = ಶ್ರೇಷ್ಠನಾದರೂ ಕೂಡ ಇಂದ್ರಾವರಜಃ ಸನ್ = ಇಂದ್ರನ ತಮ್ಮನಾಗಿ ಅಜಾಯತ = ಅವತರಿಸಿದನು. ॥ ೪೭ ॥

---

**ಸವಾಮನಾತ್ಮಾಽಸುರ ಭೂಭೃತೋಽಧ್ವರಂ ಜಗಾಮಗಾಂಸನ್ನಮಯನ್ನದೇಪದೇ ।**
**ಜಹಾರ ಚಾಸ್ಮಾಚ್ಛಲತ ಸ್ತ್ರಿವಿಷ್ಟಪಂ ತ್ರಿಭಿಃ ಕ್ರಮೈಸ್ತಚ್ಚ ದದೌನಿಜಾಗ್ರಜೇ ॥ ೪೮ ॥**

ವಾಮನಾತ್ಮಾ = ವಾಮನ ಸ್ವರೂಪವುಳ್ಳ ಸಃ = ಆ ಹರಿಯು ಪದೇಪದೇ = ಪ್ರತೀ ಹೆಜ್ಜೆಯಲ್ಲಿಯೂ ಗಾಂ = ಭೂಮಿಯನ್ನು ಸನ್ನಮಯನ್ ಸನ್ = ಬಗ್ಗಿಸತಕ್ಕವನಾಗಿ ಅಸುರ ಭೂಭೃತಃ = ದೈತ್ಯಶ್ರೇಷ್ಠನಾದ ಬಲಿಯ ಅಧ್ವರಂ = ಯಜ್ಞವನ್ನು (ಕುರಿತು) ಜಗಾಮ= ಹೋದನು ಅಸ್ಮಾತ್= ಈ ಬಲಿಚಕ್ರವರ್ತಿಯ ದಸೆಯಿಂದ ತ್ರಿಭಿಃಕ್ರಮೈಃ= ಮೂರು ಪಾದ ವಿಕ್ಷೇಪಗಳಿಂದ ತ್ರಿವಿಷ್ಟಪಂ = ಸ್ವರ್ಗವನ್ನು ಛಲತಃ = ಕಪಟದಿಂದ ಜಹಾರ = ಅಪಹರಿಸಿದನು. ತಚ್ಚ = ಆ ಸ್ವರ್ಗವನೂ ಕೂಡ ನಿಜಾಗ್ರಜೇ = ತನ್ನ ಅಣ್ಣನಾದ ಇಂದ್ರನಿಗೋಸ್ಕರ ದಧೌ = ಕೊಟ್ಟನು. ॥ ೪೮ ॥

**ಅವತಾರಿಕೆ—** ಬಲತ್ಕಾರದಿಂದ ಏಕೆ ಅಪಹರಿಸಲಿಲ್ಲವೆಂಬುದಕ್ಕೆ ಕಾರಣವನ್ನು ಹೇಳುತ್ತಾರೆ.

**ಪಿತಾಮಹೇನಾಸ್ಯ ಪುರಾಭಿಯಾಚಿತೋ ಬಲೇಃ ಕೃತೇಕೇಶವ ಆಹಯದ್ವಚಃ ।**
**ನಾಯಾಞ್ಚಿಯಾಹಂ ಪ್ರತಿಹನ್ಮಿತಂ ಬಲಿಂ ಶುಭಾನನೇತ್ಯೇವತತೋಽಭ್ಯಯಾಚತ॥೪೯॥**

ಅಸ್ಯ = ಈ ಬಲಿಚಕ್ರವರ್ತಿಯು ಪಿತಾಮಹೇನ = ಅಜ್ಜನಾದ ಪ್ರಹ್ಲಾದನಿಂದ ಪುರಾ = ನರಸಿಂಹಾವತಾರ ಕಾಲದಲ್ಲಿ ಬಲೇಃ ಕೃತೇ = ಬಲಿಯ ರಕ್ಷಣೆಗಾಗಿ ಅಭಿಯಾಚಿತಃ ಪ್ರಾರ್ಥಿಸಿಕೊಳ್ಳಲ್ಪಟ್ಟ ಕೇಶವಃ = ಪರಮಾತ್ಮನು ಹೇ ಶುಭಾನನ = ಶೋಭನ ಮುಖವುಳ್ಳ ಪ್ರಹ್ಲಾದನೇ ಅಹಂ = ನಾನು ತಂ ಬಲಿಂ = ಆ ಬಲಿಚಕ್ರವರ್ತಿಯನ್ನು ಅಯಾಚ್ಞಯಾ = ಯಾಚನೆಯನ್ನು ಮಾಡದೇ ನ ಪ್ರತಿ ಹನ್ಮಿ = ನಿಗ್ರಹಿಸುವುದಿಲ್ಲ. ಇತ್ಯೇವ = ಈ ರೀತಿಯಾಗಿಯೇ ಯತ್ = ಯಾವ ಕಾರಣದಿಂದ ವಚಃ = ಮಾತನ್ನು ಆಹ = ಹೇಳಿದನೋ ತತಃ = ಆ ಕಾರಣದಿಂದ ಅಭ್ಯಯಾಚತ = ಬೇಡಿದನು. ॥ ೪೯ ॥

ಪರಶುರಾಮಾವತಾರ ಕಥೆಯನ್ನು ಹೇಳುತ್ತಾರೆ.

**ಬಭೂವಿರೇ ಚಂದ್ರಲಲಾಮತೋ ವರಾತ್ ಪುರಾಹ್ಯಜೇಯಾ ಅಸುರಾಧರಾತಲೇ ।**
**ತೈರರ್ದಿತಾ ವಾಸವ ನಾಯಕಾಃ ಸುರಾಃ ಪುರೋನಿಧಾಯೋಬ್ಜಜಮಸ್ತುವನ್ಹರಿಮ್ ॥೪೯॥**

ಚಂದ್ರಲಲಾಮತಃ = ಚಂದ್ರನು ಆಲಂಕಾರವಾಗಿ ಉಳ್ಳ ರುದ್ರನ ವರಾತ್ = ವರದಿಂದ ಅಜೇಯಾಃ = ಜಯಿಸಲಶಕ್ಯರಾದ ಅಸುರಾಃ = ಅಸುರರು ಪುರಾ = ಹಿಂದೆ ಧರಾತಲೇ = ಭೂತಲದಲ್ಲಿ ಬಭೂವಿರೇ = ಕ್ಷತ್ರಿಯ ರೂಪದಿಂದ ಹುಟ್ಟಿದರು. ತೈಃ = ಆ ಅಸುರರಿಂದ ಅರ್ದಿತಾಃ = ಪೀಡಿಸಲ್ಪಟ್ಟ ವಾಸವನಾಯಕಾಃ = ಇಂದ್ರನೇ ಅಧಿಪತಿಯಾಗಿ ಉಳ್ಳ ಸುರಾಃ = ದೇವತೆಗಳು ಅಬ್ಜಜಂ = ಬ್ರಹ್ಮನನ್ನು ಪುರೋನಿಧಾಯ = ಮುಂದೆ ಮಾಡಿಕೊಂಡು ಹರಿಂ = ಹರಿಯನ್ನು ಅಸ್ತುವನ್ = ಸ್ತೋತ್ರ ಮಾಡಿದರು. ॥ ೫೦ ॥

**ವಿರಿಂಚಸೃಷ್ಟೈರ್ನಿತರಾಮವಧ್ಯೌವರಾದ್ವಿಧಾತುರ್ದಿತಿಜೌ ಹಿರಣ್ಯಕೌ ।**
**ತಥಾ ಹಯಗ್ರೀವ ಉದಾರ ವಿಕ್ರಮಃ ತ್ವಯಾ ಹತಾ ಬ್ರಹ್ಮಪುರಾತನೇನ ॥ ೫೧ ॥**

ದಿತಿಜೌ = ದಿತಿಯ ಮಕ್ಕಳಾದ ಹಿರಣ್ಯಕೌ = ಹಿರಣ್ಯಾಕ್ಷ ಹಿರಣ್ಯ ಕಶಿಪುಗಳು ವಿಧಾತುಃ = ಬ್ರಹ್ಮನ ವರಾತ್ = ವರದಿಂದ ವಿರಿಂಚಸೃಷ್ಟೈಃ = ಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ದೇವತೆಗಳು, ಮನುಷ್ಯರು, ಅಸುರರು ಇವರಿಂದ ನಿತರಾಂ = ಚೆನ್ನಾಗಿ ಅವಧ್ಯೌ = ಮರಣ ರಹಿತರು ಬಭೂವತುಃ = ಆದರು. ತೌ = ಅವರಿಬ್ಬರೂ ತಥಾ = ಹಾಗೆಯೇ ಉದಾರ ವಿಕ್ರಮಃ = ಉತ್ಕೃಷ್ಟ ಪರಾಕ್ರಮವುಳ್ಳ ಹಯಗ್ರೀವಃ = ಹಯಗ್ರೀವಾಸುರನು ಬ್ರಹ್ಮ ಪುರಾತನೇನ = ಚತುರ್ಮುಖ ಬ್ರಹ್ಮನಿಗೂ ಆದಿ ಕಾಲೀನನಾದ ತ್ವಯಾ = ನಿನ್ನಿಂದ ಹತಾಃ = ಕೊಲ್ಲಲ್ಪಟ್ಟರು. ॥ ೫೧ ॥

**ಸಚಾಸುರಾನ್ ರುದ್ರವರಾದವಧ್ಯಾನಿಮಾನ್ಸಮಸ್ತೈರಪಿ ದೇವದೇವಃ ।**
**ನಿಸ್ಸೀಮ ಶಕ್ತ್ಯೈವ ನಿಹತ್ಯಸರ್ವಾನ್ ಹೃದಂಬುಜೇನೋ ನಿವಸಾಥ ಶಶ್ವತ್ ॥ ೫೨ ॥**

ದೇವದೇವಃ = ದೇವತೆಗಳಿಗೂ ದೇವನಾದ ಸಚಂ = ಆ ನೀನು ರುದ್ರವರಾತ್ = ರುದ್ರನ ವರ ಬಲದಿಂದ ಸಮಸ್ತೈರಪಿ = ಎಲ್ಲರಿಂದಲೂ ಕೂಡ ಅವಧ್ಯಾನ್ = ಕೊಲ್ಲಲು ಅಯೋಗ್ಯರಾದ ಇಮಾನ್ ಅಸುರಾನ್ = ಈ ಅಸುರನನ್ನು ನಿಸ್ಸೀಮಶಕ್ತ್ಯೈವ = ಅಪರಿಮಿತ ಸಾಮರ್ಥ್ಯದಿಂದಲೇ ನಿಹತ್ಯ = ಕೊಂದು ಅಥ = ಅನಂತರ ನಃ = ನಮ್ಮ ಹೃದಂಬುಜೇ = ಹೃತ್ಕಮಲದಲ್ಲಿ ಶಶ್ವತ್ = ಯಾವಾಗಲೂ ನಿವಸ = ಚೆನ್ನಾಗಿ ವಾಸ ಮಾಡು. ॥ ೫೨ ॥

**ಇತ್ಯಾದರೋಕ್ತಸ್ತ್ರಿದಶೈರಜೇಯಃ ಸಶಾರ್ಙ್ಗಧನ್ವಾಥ ಭೃಗೂದ್ವಹೋಽಭೂತ್ ।**
**ರಾಮೋ ನಿಹತ್ಯಾಸುರಪೂಗಮುಗ್ರಂ ಹ್ರದಾನನಾದಿರ್ವಿದಧೇಽಸೃಜೈವ ॥ ೫೩ ॥**

ಇತಿ = ಈ ಹಿಂದೆ ಹೇಳಿದ ರೀತಿಯಿಂದ ತ್ರಿದಶೈಃ = ದೇವತೆಗಳಿಂದ ಆದರೋಕ್ತಃ = ಭಕ್ತಿ ಪೂರ್ವಕವಾಗಿ ಹೇಳಿಕೊಳ್ಳಲ್ಪಟ್ಟ ಶಾರ್ಙ್ಗಧನ್ವಾ = ಶಾರ್ಙ್ಗವೆಂಬ ಧನುಸ್ಸುಳ್ಳ ಸಃ = ಆ ನಾರಾಯಣನು ಭೃಗೂದ್ವಹಃ = ಭೃಗುಗಳಿಗೆ ರಕ್ಷಕನು ಅಭೂತ್ = ಆದನು. ಅನಾದಿಃ = ಪುರಾತನನಾದ ರಾಮಃ = ಪರಶುರಾಮನು ಉಗ್ರಂ ಕ್ರೂರನಾದ ಅಸುರಪೂಗಂ = ದೈತ್ಯರ ಸಮೂಹವನ್ನು ನಿಹತ್ಯ = ಕೊಂದು ಅಸೃಜೈವ = ಆ ಅಸುರರ ರಕ್ತದಿಂದಲೆ ಹ್ರದಾನ್ = ಕುರುಕ್ಷೇತ್ರದಲ್ಲಿ ಐದು ಸರೋವರಗಳನ್ನು ವಿದಧೇ = ಮಾಡಿದನು. ॥ ೫೩ ॥

**ತತಃ ಪುಲಸ್ತ್ಯಸ್ಯ ಕುಲೇಪ್ರಸೂತೌ ತಾವಾದಿದೈತ್ಯೌ ಜಗದೇಕಶತ್ರೂ ।**
**ಪರೈರವಧ್ಯೌ ವರತಃ ಪುರಾ ಹರೇಃ ಸುರೈರಜೇಯೌ ಚವರಾದ್ವಿಧಾತುಃ ॥ ೫೪ ॥**

ತತಃ = ಅನಂತರ ಆದಿದೈತ್ಯೌ = ಆದಿಯಲ್ಲಿ ದಿತಿ = ಪುತ್ರರಾದ ಜಗದೇಕಶತ್ರೂ = ಜಗತ್ತಿಗೆ ಮುಖ್ಯ ಶತ್ರುಗಳಾದ (ತೌ = ಆ ಹಿರಣ್ಯಾಕ್ಷ ಹಿರಣ್ಯ ಕಶಿಪುಗಳು) ಪುರಾ = ಹಿಂದೆ ಶಾಪಕಾಲದಲ್ಲಿ ಹರೇಃ = ಪರಮಾತ್ಮನ ವರತಃ = ನಾನೇ ನಿಮ್ಮನ್ನು ಮೂರು ಜನ್ಮಗಳಲ್ಲಿಯೂ ಕೊಲ್ಲುವೆನು ಎಂಬ ವರದಿಂದ ಪರೈಃ = ಪರಮಾತ್ಮನನ್ನು ಹೊರತು ಇತರರಿಂದ ಅವಧ್ಯೌ = ನಾಶ ರಹಿತರಾದ ವಿಧಾತುಃ = ಬ್ರಹ್ಮನ ವರಾತ್ = ವರದಿಂದ ಸುರೈಃ = ದೇವತೆಗಳಿಂದ ಅಜೇಯೌ = ಪರಾ-

ಜಯರಹಿತರಾದ ತೌ = ಆ ಹಿರಣ್ಯಾಕ್ಷ ಹಿರಣ್ಯ ಕಶಿಪುಗಳು ಪುಲಸ್ತ್ಯ ಸ್ಯ = ಪುಲಸ್ತ್ಯಋಷಿಯ ಕುಲೇ = ವಂಶದಲ್ಲಿ ಪ್ರಸೂತೌ = ಹುಟ್ಟಿದರು. ॥ ೫೪ ॥

**ಸರ್ವೈರಜೇಯಃ ಸಚಕುಂಭಕರ್ಣಃ ಪುರಾತನೇ ಜನ್ಮನಿ ಧಾತುರೇವ ।**
**ವರಾನ್ನರಾದೀನ್ಮೃತ ಏವ ರಾವಣಃ ತದಾತನಾತ್ತೌ ತ್ರಿದಶಾನಬಾಧತಾಂ ॥ ೫೫ ॥**

ಪುರಾತನೇ ಜನ್ಮನಿ ಹಿಂದಿನ = ಹಿರಣ್ಯಾಕ್ಷ ಜನ್ಮದಲ್ಲಿ ಧಾತುರೇವ = ಬ್ರಹ್ಮನ ವರಾತ್ = ಕುಂಭಕರ್ಣ ಜನ್ಮದಲ್ಲಿ ಅಜೇಯನು ಆಗು ಎಂಬ ವರದಿಂದ ಸಚಕುಂಭಕರ್ಣಃ = ಆ ಕುಂಭಕರ್ಣನು ಸರ್ವೈಃ = ಎಲ್ಲರಿಂದಲೂ ನರಾದೀನೃತೇ = ಮನುಷ್ಯ ಕಪಿಗಳನ್ನು ಬಿಟ್ಟು ಅಜೇಯಃ = ಪರಾಜಯ ರಹಿತನು ರಾವಣಸ್ತು = ರಾವಣನಾದರೂ ತದಾತನಾತ್ = ರಾವಣ ಜನ್ಮದಲ್ಲಿಯೇ ವರಾತ್ = ಬ್ರಹ್ಮದೇವರವರದಿಂದ ನರಾದೀನೃತೇ = ಮನುಷ್ಯಾದಿಗಳನ್ನು ಬಿಟ್ಟು ಸರ್ವೈರಜೇಯಃ = ಎಲ್ಲರಿಂದಲೂ ಅಜೇಯನು ತೌ = ಆ ರಾವಣ ಕುಂಭಕರ್ಣರು ತ್ರಿದಶಾನ್ = ದೇವತೆಗಳನ್ನು ಅಬಾಧತಾಂ = ಪೀಡಿಸಿದರು. ॥ ೫೫ ॥

**ತದಾಬ್ಜಜಂಶೂಲಿನಮೇವ ಚಾಗ್ರತೋ ನಿಧಾಯದೇವಾಃ ಪುರುಹೂತಪೂರ್ವಕಾಃ ।**
**ಪಯೋಂಬುಧೌ ಭೋಗಿಪಭೋಗಶಾಯಿನಂ ಸಮೇತ್ಯಯೋಗ್ಯಾಮ್ ಸ್ತುತಿಮಭ್ಯಯೋಜಯನ್ ॥ ೫೬ ॥**

ತದಾ = ಆ ದೈತ್ಯರು ಪೀಡಿಸುತ್ತಿರುವಾಗ ಪುರುಹೂತ ಪೂರ್ವಕಾಃ = ದೇವೇಂದ್ರನೇ ಮೊದಲಾಗಿ ಉಳ್ಳ ದೇವಾಃ = ದೇವತೆಗಳು ಅಬ್ಜಜಂ = ಬ್ರಹ್ಮನನ್ನೂ ಶೂಲಿನಂ = ರುದ್ರನನ್ನೂ ಅಗ್ರತಃ = ಮುಂದೆ ನಿಧಾಯ = ಮಾಡಿಕೊಂಡು ಪಯೋಂಬುಧೌ = ಕ್ಷೀರ ಸಮುದ್ರದಲ್ಲಿ ಭೋಗಿಪ ಭೋಗಶಾಯಿನಂ = ಶೇಷನ ಶರೀರದಲ್ಲಿ ಮಲಗಿರುವ ಹರಿಯನ್ನು ಸಮೇತ್ಯ = ಹೊಂದಿ ಯೋಗ್ಯಾಂ = ಪರಮಾತ್ಮನನ್ನು ಸ್ತುತಿಸಲು ಯೋಗ್ಯವಾದ ಸ್ತುತಿಂ = ಸ್ತೋತ್ರವನ್ನು ಅಭ್ಯಯೋಜಯನ್ = ಮಾಡಿದರು. ॥ ೫೬ ॥

---

**ತ್ವಮೇಕ ಈಶಃ ಪರಮಃ ಸ್ವತಃತಂತ್ರಸ್ತ್ವಮಾದಿರಂತೋ ಜಗತಾಂನಿಯೋಕ್ತಾ ।**
**ತ್ವದಾಜ್ಞಯೈವಾಖಿಲಮಂಬುಜೋದ್ಭವಾವಿತೇನಿರೇಽಗ್ರ್ಯಾಶ್ಚ ರಮಾಶ್ಚಯೇಽನ್ಯೇ ॥೫೭॥**

ತ್ವಂ = ನೀನು ಏಕಃ ಈಶಃ = ಮುಖ್ಯಸ್ವಾಮಿಯು ಪರಮಃ = ಸರ್ವೋತ್ತಮನು ಸ್ವತಂತ್ರಃ = ಸ್ವತಂತ್ರನು ತ್ವಂ = ನೀನು ಆದಿಃ = ಆದಿಯಲ್ಲಿರುವವನು ಅಂತಃ = ಕೊನೆಯಲ್ಲಿರುವವನು ಜಗತಾಂ = ಲೋಕಗಳಿಗೆ ನಿಯೋಕ್ತಾ = ನಿಯಾಮಕನು. ತ್ವದಾಜ್ಞಯೈವ = ನಿನ್ನ ಆಜ್ಞೆಯಿಂದಲೇ ರಮಾಃ = ಲಕ್ಷ್ಮೀದೇವಿಯರು ಅಗ್ರ್ಯಾಃ = ಅತೀತ ಕಾಲದಲ್ಲಿರುವ ಅಂಬುಜೋದ್ಭವಾಃ = ಬ್ರಹ್ಮರು ಅಖಿಲಂ = ಸಮಸ್ತ ಜಗತ್ತನ್ನು ವಿತೇನಿರೇ = ಸೃಷ್ಟಿಸಿದರು. ಅನ್ಯೇಚರಮಾಶ್ಚ = ಇತರರಾದ ಮುಂದಿನ ಯೇ = ಯಾವ ಅಂಬುಜೋದ್ಭವಾಃ = ಬ್ರಹ್ಮರೋ ತೇಽಪಿ = ಅವರೂ ಕೂಡ ಅಖಿಲಂ = ಎಲ್ಲವನ್ನೂ ವಿತನಿಷ್ಯಂತಿ = ಸೃಷ್ಟಿಮಾಡುವರು. ಇದಾನೀಂತನಿಃ = ಈಗಿನ ಅಂಬುಜೋದ್ಭವೋಽಪಿ = ಬ್ರಹ್ಮನೂ ಕೂಡ ವಿತನುತೇ = ಸೃಷ್ಟಿಮಾಡುತ್ತಾನೆ. ॥ ೫೭ ॥

**ಮನುಷ್ಯಮಾನಾತ್ತ್ರಿಶತಂ ಸಷಷ್ಟಿಕಂ ದಿವೌಕಸಾಮೇಕ ಮುಶಂತಿ ವತ್ಸರಂ ।**
**ದ್ವಿಷಟ್ಸಹಸ್ರೈರಪಿ ತೈಶ್ಚತುರ್ಯುಗಂ ತ್ರೇತಾದಿಭಿಃ ಪಾದಶಏವಹೀನೈಃ ॥ ೫೮ ॥**

ಮನುಷ್ಯಮಾನಾತ್ = ಮನುಷ್ಯರ ಮಾನದಿಂದ ಸಷಷ್ಟಿಕಂ = ಅರವತ್ತರಿಂದ ಕೂಡಿದ ತ್ರಿಶತಂ = ಮುನ್ನೂರು ವರ್ಷಗಳು ದಿವೌಕಸಾಂ = ದೇವತೆಗಳಿಗೆ ಏಕ ವತ್ಸರಂ = ಒಂದು ವರ್ಷವನ್ನಾಗಿ ಉಶಂತಿ = ಜ್ಞಾನಿಗಳು ಇಚ್ಛಿಸುತ್ತಾರೆ. ಮನುಷ್ಯರ ಮುನ್ನೂರ ಅರವತ್ತು ವರ್ಷಗಳು ದೇವತೆಗಳಿಗೆ ಒಂದು ವರ್ಷವಾಗುತ್ತದೆ. ಪಾದಶಏವ = ಒಂದೊಂದು ಪಾದದಿಂದಲೇ ಹೀನೈಃ = ರಹಿತಗಳಾದ ತ್ರೇತಾದಿಭಿಃ ಸಹ = ತ್ರೇತಾದಿ ಯುಗಗಳಿಂದ ಕೂಡಿಕೊಂಡು ದ್ವಿಷಟ್ ಸಹಸ್ರೈಃ = ಹನ್ನೆರಡು ಸಾವಿರ ಸಂಖ್ಯಾಕಗಳಾದ ತೈಃ = ಆ ದೇವತೆಗಳ ವರ್ಷಗಳಿಂದ ಚತುರ್ಯುಗಂ = ನಾಲ್ಕು ಯುಗವನ್ನು ಉಶಂತಿ = ಇಚ್ಛಿಸುತ್ತಾರೆ.

**ವಿಶೇಷಾಂಕ—** ಕೃತಯುಗಕ್ಕೆ ನಾಲ್ಕು ಸಹಸ್ರ ವರ್ಷಗಳು ಕೃತಿ = ಕಲಿಯುಗಗಳ ಸಂಧಿಕಾಲವು 800ವರ್ಷಗಳು ತ್ರೇತೇ ಯುಗಕ್ಕೆ ಒಂದು ಸಹಸ್ರಪಾದ ಕಡಿಮೆಯಾದ ಮೂರು ಸಹಸ್ರ ವರ್ಷಗಳು ಕೃತ = ತ್ರೇತಾಯುಗಳು ಸಂಧಿಕಾಲವು 600 ವರ್ಷಗಳು ತ್ರೇತಾಯುಗವು ತ್ರಿಪಾದಿಯು. ತ್ರೇತಾಯುಗದಿಂದಲೂ ಒಂದು ಪಾದ ಕಡಿಮೆಯಾಗಿ ಎರಡುಸಾವಿರ ಸಹಸ್ರ ವರ್ಷಗಳು ದ್ವಾಪರಯುಗಕ್ಕೆ ತ್ರೇತಾ ದ್ವಾಪರಗಳ ಸಂಧಿಕಾಲವು ನಾಲ್ಕುನೂರು ವರ್ಷಗಳು ಅದು ದ್ವಿಪಾದವು. ದ್ವಾಪರದಿಂದಲೂ ಒಂದು ಪಾದ ಕಡಿಮೆಯಾಗಿ ಒಂದು ಸಹಸ್ರ ವರ್ಷವು ಕಲಿಯುಗಕ್ಕೆ ದ್ವಾಪರ ಕಲಿಯುಗ ಸಂಧಿಕಾಲವು ಇನ್ನೂರು ವರ್ಷಗಳು ಈ ರೀತಿಯಾಗಿ ನಾಲ್ಕು ಯುಗವು ॥ ೫೮ ॥

**ಸಹಸ್ರವೃತ್ತಂ ತದಹಃ ಸ್ವಯಂ ಭುವೋನಿಶಾಚ ತನ್ಮಾನಮಿತಂ ಶರಚ್ಛತಂ ।**
**ತ್ವದಾಜ್ಞಯಾ ಸ್ಮಾನನುಭೂಯ ಭೋಗಾನುಪೈತಿ ಸೋಪಿತ್ವರಿತಸ್ತ್ವದಂತಿಕಂ ॥ ೫೯ ॥**

ಸಹಸ್ರವೃತ್ತಂ ತತ್ = ನಾಲ್ಕು ಯುಗಗಳು ಸಾವಿರ ಸಲ ಆವೃತ್ತಿಯನ್ನು ಹೊಂದಿದಾಗ ಅಂದರೆ ಚತುರ್ಯುಗಗಳ ಸಾವಿರಗಳನ್ನು ಸ್ವಯಂಭುವಃ = ಬ್ರಹ್ಮನ ಅಹಃ = ಹಗಲನ್ನಾಗಿ ಉಶಂತಿ = ಇಚ್ಛಿಸುತ್ತಾರೆ. ನಿಶಾಚ = ರಾತ್ರಿಯೂ ಕೂಡ ತನ್ಮಾನಮಿತಂ = ಬ್ರಹ್ಮನ ಹಗಲಿನ ಪ್ರಮಾಣದಿಂದ ಪರಿಮಿತವಾದದ್ದು ಅಂದರೆ ಚತುರ್ಯುಗ ಸಾವಿರಗಳ ಪರಿಮಿತಿ ಉಳ್ಳದ್ದು. ಸೋಽಪಿ = ಆ ಬ್ರಹ್ಮನಾದರೂ ಶರಚ್ಛತಂ = ದೇವಮಾನದಿಂದ ನೂರು ವರ್ಷಗಳಲ್ಲಿ ತ್ವದಾಜ್ಞಯಾ = ನಿನ್ನ ಆಜ್ಞೆಯಿಂದ ಸ್ಮಾನ್ = ತನ್ನದ್ದಾದ ಭೋಗಾನ್ = ವಿಷಯ ಭೋಗಗಳನ್ನು ಅನುಭೂಯ = ಅನುಭವಿಸಿ ತ್ವರಿತಃಸನ್ = ವೇಗವುಳ್ಳವನಾಗಿ ತ್ವದಂತಿಕಂ = ನಿನ್ನ ಸಮೀಪವನ್ನು ಉಪೈತಿ = ಹೊಂದುತ್ತಾನೆ. ॥ ೫೯ ॥

**ತ್ವಯೋಪುರಾ ಕರ್ಣಪುಟಾದ್ವಿನಿರ್ಮಿತೇ ಮಹಾಸುರೌ ತೌಮಧುಕೈಟಭಾಖ್ಯೌ ।**
**ಪ್ರಭಂಜನಾವೇಶವ ಶಾತ್ತವಾಜ್ಞಯಾ ಬಲೋದ್ಧತಾವಾಶು ಜಲೇಽಭ್ಯವರ್ಧತಾವ್ ॥೬೦॥**

~~ದೇವತೆಗಳನ್ನು ಸೃಷ್ಟಿಮಾಡುವ ಮೊದಲು ತ್ವಯಾ = ನಿನ್ನಿಂದ ಕರ್ಣಪ್ರಪಾತ್ = ಕಿವಿಯ ದಸೆಯಿಂದ ಯೌ =~~
ಯಾವ ಮಹಾಸುರೌ = ಶ್ರೇಷ್ಠ ಅಸುರರು ವಿನಿರ್ಮಿತೌ = ಸೃಷ್ಟಿಸಲ್ಪಟ್ಟಿರುವರೋ ತೌ = ಆದಾವ ಮಧುಕೈಟಭಾಖ್ಯೌ = ಮಧುಕೈಟಭರೆಂಬ ಅಸುರರು ತವ = ನಿನ್ನ ಆಜ್ಞಯಾ = ವಾಯುವು ಅವರಲ್ಲಿ ಪ್ರವೇಶಿಸಬೇಕೆಂಬ ಅಪ್ಪಣೆಯಿಂದ ಪ್ರಭಂಜನಾವೇಶವಶಾತ್ = ವಾಯು ದೇವರ ಪ್ರವೇಶದ ಬಲದಿಂದ ಬಲೋದ್ಧತೌ = ಬಲದಿಂದ ದೃಪ್ತರಾಗಿ ಆಶು = ಬೇಗನೇ ಜಲೇ = ಪ್ರಲಯದ ನೀರಿನಲ್ಲಿ ಅಭ್ಯವರ್ಧತಾಂ = ಬೆಳೆದರು. ॥ ೬೦ ॥

**ತ್ವದಾಜ್ಞಯಾ ಬ್ರಹ್ಮವರಾದವಧ್ಯೌ ಚಿಕ್ರೀಡಿಷಾಸಂಭವಯಾವಮುಖೋದ್ಗತಾನ್ ।**
**ಸ್ವಯಂಭುವೋ ವೇದಗಣಾನಹಾರ್ಷತಾಂತದಾಭವಸ್ತ್ವಂ ಹಯಶೀರ್ಷಈಶ್ವರಃ ॥ ೬೧ ॥**

ಚಿಕ್ರೀಡಿಷಾ ಸಂಭವಯಾ = ಕ್ರೀಡಿಸುವುದಕ್ಕೋಸ್ಕರ ಇಚ್ಛೆಯಿಂದ ಉತ್ಪತ್ತಿ ಉಳ್ಳ ತ್ವದಾಜ್ಞಯಾ = ನಿನ್ನ ಆಪ್ಪಣೆಯಿಂದ ಬ್ರಹ್ಮವರಾತ್ = ಬ್ರಹ್ಮನ ವರದಿಂದ ಅವಧ್ಯೌ = ನಾಶ ರಹಿತರಾದ ಮಧುಕೈಟಭರು ಸ್ವಯಂಭುವಃ = ಬ್ರಹ್ಮನ ಮುಖೋದ್ಗತಾನ್ = ಮುಖದಿಂದ ಹೊರಗೆ ಬಂದಿರುವ ವೇದಗಣಾನ್ = ದೇಹಧಾರಿಗಳಾದ ವೇದಗಳ ಆವಾಂತರಾಭಿಮಾನಿ ದೇವತೆಗಳ ಸಮೂಹವನ್ನು ಅಹಾರ್ಷತಾಂ = ಅಪಹರಿಸಿದರು. ತದಾ = ಆಗ ತ್ವಂ = ನೀನು ಈಶ್ವರೋಪಿ = ಸಮರ್ಥನಾದರೂ ಕೂಡ ಹಯಶೀರ್ಷಃ = ಹಯಗ್ರೀವ ರೂಪವುಳ್ಳವನು. ಅಭವಃ = ಆಗಿರುತ್ತಿ. ॥ ೬೧ ॥

**ಆಹೃತ್ಯ ವೇದಾನಖಿಲಾಸ್ಪ್ರದಾಯ ಸ್ವಯಂಭುವೇ ತೌಚ ಜಘಂಥದಸ್ಯೂ ।**
**ನಿಷ್ಪೀಡ್ಯ ತಾವೂರುತಲೇ ಕರಾಭ್ಯಾಂ ತನ್ಮೇದಸೈನಾಶು ಚಕರ್ಥಮೇದಿನೀವ್ ॥ ೬೨ ॥**

ತ್ವಂ = ನೀನು ಆಖಿಲಾನ್ = ಎಲ್ಲಾ ವೇದಾನ್ = ವೇದಗಳನ್ನು ಆಹೃತ್ಯ = ದೈತ್ಯರಿಂದ ಅಪಹರಿಸಿ ಸ್ವಯಂಭುವೇ = ಬ್ರಹ್ಮನಿಗೋಸ್ಕರ ಪ್ರದಾಯ = ಕೊಟ್ಟು ದಸ್ಯೂ = ಕಳ್ಳರಾದ ತೌ = ಆ ದೈತ್ಯರನ್ನು ಜಘಂಥ = ಸಂಹರಿಸಿದ ಕೊಂದ ರೀತಿಯನ್ನು ಹೇಳುತ್ತಾರೆ. ಊರುತಲೇ = ತೊಡೆಯ ಪ್ರದೇಶದಲ್ಲಿ ಕರಾಭ್ಯಾಂ = ಕೈಗಳಿಂದ ತೌ = ಆ ಮಧುಕೈಟಭ

ರನ್ನು ನಿಷ್ಪೀಡ್ಯ = ಪುಡಿಮಾಡಿ ತನ್ಮೇಧಸ್ಯೈವ = ಅವರ ಮೇದಸ್ಸೆಂಬುಧಾತುವಿಶೇಷದಿಂದಲೇ ಮೇದಿನೀಂ = ಭೂಮಿಯನ್ನು ಚಕರ್ಥ = ಮಾಡಿದಿ. ॥ ೬೨ ॥

ಏವಂ ಸುರಾಣಾಂಚ ನಿಸರ್ಗಜಂ ಬಲಂ ತಥಾಸುರಾಣಾಂ ವರದಾನ ಸಂಭವಮ್ ।
ವಶೇ ತವೈತದ್ದ್ವಯಮಪ್ಯತೋವಯಂ ನಿವೇದಯಾಮಃ ಪಿತುರೇವತೇಽಖಿಲಮ್ ॥ ೬೩॥

ಏವಂ = ಈ ರೀತಿಯಾಗಿ ಸುರಾಣಾಂ = ದೇವತೆಗಳ ಬಲಂ = ಸಾಮರ್ಥ್ಯವು ನಿಸರ್ಗಜಂ = ಸ್ವಾಭಾವಿಕವಾದದ್ದು ತಥಾ = ಹಾಗೆಯೇ ಅಸುರಾಣಾಂ = ದೈತ್ಯರ ಬಲಂ = ಬಲವು ವರದಾನ ಸಂಭವಮ್ = ವರವನ್ನು ಕೊಡುವುದರಿಂದ ಉಂಟಾದದ್ದು ಏತದ್ದ್ವಯ ಮಪಿ = ಈ ಎರಡು ಬಲವೂ ಕೂಡ ಯತಃ = ಯಾವ ಕಾರಣದಿಂದ ತವ = ನಿನ್ನ ವಶೇ = ಅಧೀನದಲ್ಲಿದೆಯೋ ಅತಃ = ಅದ್ದರಿಂದ ವಯಂ = ನಾವು ಪಿತುಃ = ತಂದೆಯಾದ ತೇ = ನಿನಗೆ ಅಖಿಲಂ = ಎಲ್ಲವನ್ನು ನಿವೇದಯಾಮಃ = ತಿಳಿಸುತ್ತೇವೆ. ॥ ೬೩ ॥

ಇಮೌಚರಕ್ಷೋಧಿಪತೀ ವರೋದ್ಧತೌ ಜಹಿಸ್ವವೀರ್ಯೇಣ ನೃಷುಪ್ರಜಾತಃ ।
ಇತೀರಿತೇ ತೈರಖಿಲೈಃ ಸುರೇಶ್ವರೈರ್ಬಭೂವರಾಮೋ ಜಗತೀಪತಿಃ ಪ್ರಭುಃ ॥ ೬೪ ॥

ತ್ವಂ = ನೀನು ನೃಷು = ಮನುಷ್ಯರಲ್ಲಿ ಪ್ರಜಾತಃಸನ್ = ಅವತರಿಸಿದವನಾಗಿ ಸ್ವವೀರ್ಯೇಣ = ನಿನ್ನ ಸ್ವಾಭಾವಿಕ ಸಾಮರ್ಥ್ಯದಿಂದ ವರೋದ್ಧತೌ = ವರಬಲದಿಂದ ದೃಪ್ತರಾದ ರಕ್ಷೋಧಿಪತೀ = ರಾಕ್ಷಸರಿಗೆ ಒಡೆಯರಾದ ಇಮೌಚ = ಈ ರಾವಣ ಕುಂಭಕರ್ಣರನ್ನೂ ಕೂಡ ಜಹಿ = ಕೊಲ್ಲು ಇತಿ = ಈರೀತಿಯಾಗಿ ತೈಃ = ಆದಾವ ಅಖಿಲೈಃ = ಎಲ್ಲಾ ಸುರೇಶ್ವರೈಃ = ದೇವಶ್ರೇಷ್ಠರಿಂದ ಈ ರೀತ್ಯೇ ಸತಿ = ಹೇಳಿಸಿಕೊಳ್ಳಲ್ಪಡುತ್ತಿರಲು ಜಗತೀಪತಿಃ = ಲೋಕಗಳಿಗೆ ಸ್ವಾಮಿಯಾದ ಪ್ರಭುಃ = ಸಮರ್ಥನಾದ ಹರಿಯು ರಾಮಃ ಸನ್ = ರಾಮನಾಗಿ ಬಭೂವ = ಅವತರಿಸಿದನು. ॥ ೬೪ ॥

---

ಸಕಶ್ಯಪಸ್ಯಾದಿತಿಗರ್ಭಜನ್ಮನೋವಿವಸ್ವತಸ್ತಂತು ಭವಸ್ಯ ಭೂಭೃತಃ ।
ಗೃಹೇದಶಸ್ಯಂದನ ನಾಮಿನೋಽಭೂತ್ ಕೌಸಲ್ಯಕಾನಾಮ್ನಿ ತದರ್ಥಿತೇ(ನ)ಷ್ಟಃ ॥ ೬೫ ॥

ತದರ್ಥಿತೇಷ್ಟಃ = ರಾಮನೆಂಬ ಪುತ್ರನ ಅಪೇಕ್ಷೆಯಿಂದ ಯಾಗದಿಂದ ಪೂಜಿಸಲ್ಪಟ್ಟ ಸಃ = ಆರಾಮನು ಕಶ್ಯಪಸ್ಯ ಸ್ಯಕಾಶಾತ್ = ಕಶ್ಯಪನ ಪಸೆಯಿಂದ ಅದಿತಿಗರ್ಭಜನ್ಮನಃ = ಅದಿತಿಯ ಗರ್ಭದಿಂದ ಉಕ್ಪತ್ತಿವುಳ್ಳ ವಿವಸ್ವತಃ = ಸೂರ್ಯನ ತಂತುಭವಸ್ಯ = ವಂಶದಲ್ಲಿ ಹುಟ್ಟಿರುವ ದಶಸ್ಯಂದನನಾಮ್ನಿನಃ = ದಶರಥನೆಂದು ಹೆಸರುಳ್ಳ ಭೂಭೃತಃ = ರಾಜನ ಕೌಸಲ್ಯಕಾನಾಮ್ನಿ = ಕೌಲೆಸ್ಯಯೆಂದು ಹೆಸರುಳ್ಳ ಗೃಹೇ = ಹೆಂಡತಿಯಲ್ಲಿ ಅಭೂತ್ = ಅವತರಿಸಿದರು. ॥ ೬೫ ॥

ತದಾಜ್ಞಯಾ ದೇವಗಣಾ ಬಭೂವಿರೇ ಪುರೈವ ಪಶ್ಚಾದಪಿ ತಸ್ಯಭೂಮ್ನಃ ।
ನಿಷೇವಣಾಯೋರು ಗುಣಸ್ಯವಾನರೇಷ್ವಥೋ ನರೇಷ್ವೇವ ಚಪಶ್ಚಿಮೋದ್ಭವಾ: ॥ ೬೬ ॥

ಉರುಗುಣಸ್ಯ = ಉತ್ಕೃಷ್ಟ ಗುಣಗಳುಳ್ಳ ಭೂಮ್ನಃ = ಭೂಮಶಬ್ದ ವಾಚ್ಯನಾದ ತಸ್ಯ = ಆ ರಾಮನ ನಿಷೇವಣಾಯ = ಸೇವೆಗೊಸ್ಕರ ತದಾಜ್ಞಯಾ = ಪರಮಾತ್ಮನ ಅಪ್ಪಣೆಯಿಂದ ದೇವಗಣಾ: = ದೇವತೆಗಳ ಸಮೂಹಗಳು ಪುರೈವ = ರಾಮನ ಅವತಾರಕ್ಕಿಂತ ಮೊದಲೇ ಬಭೂವಿರೇ = ಕಪಿಗಳಲ್ಲಿ ಅವತರಿಸಿದರು. ಅಥೋ = ಅನಂತರ ನರೇಷು ಜಾತಾಃ = ಮನುಷ್ಯರಲ್ಲಿ ಹುಟ್ಟಿದ ಲಕ್ಷ್ಮಣಾದಿಗಳು ಪಶ್ಚಿಮೋದ್ಭವಾಃ = ಹರಿಯ ಅವತಾರಾನಂತರ ಹುಟ್ಟಿದರು. ॥ ೬೬ ॥

**ಅವತಾರಿಕೆ—** ಯಾವ ದೇವತೆಯು ಎಲ್ಲಿ ಹುಟ್ಟಿದನೆಂಬುದನ್ನು ಹೇಳುತ್ತಾರೆ.

ಸದೇವತಾನಾಂ ಪ್ರಥನೋ ಗುಣಾದಿಕೋ ಬಭೂವನಾಮ್ನಾ ಹನುಮಾನ್ಪ್ರಭಂಜನಃ ।
ಸ್ವಸಂಭವಃ ಕೇಸರಿಣೋ ಗೃಹೇಪ್ರಭುರ್ಬಭೂವ ವಾಲೀಸತ ಏವವಾಸವಃ ॥ ೬೭ ॥

ದೇವತಾನಾಂ = ದೇವತೆಗಳ ಮಧ್ಯದಲ್ಲಿ ಪ್ರಥಮಃ = ಮೊದಲನೆಯವನಾದ ಗುಣಾಧಿಕಃ = ಗುಣಗಳಿಂದ ಶ್ರೇಷ್ಠನಾಡ ಪ್ರಭುಃ = ಸಮರ್ಥನಾದ ಸಃ ಪ್ರಭಂಜನಃ = ಆ ವಾಯು ದೇವನು ಕೇಸರಿಣಃ = ಮರುತ್ತುಗಳಲ್ಲಿ ಶ್ರೇಷ್ಠರಾದ ವಾಯುದೇವರ ಅವತಾರನಾದ ಕೇಸರಿ ನಾಮಕ ಕಪಿಯ ಗೃಹೇ = ಭಾರ್ಯೆಯಾದ ಅಂಜನಾ ದೇವಿಯಲ್ಲಿ ಸ್ವಸಂಭವಃ = ತನ್ನ ಇಚ್ಛೆಯಿಂದಲೇ ಉತ್ಪತ್ತಿಯುಳ್ಳ ಅಥವಾ ಸ್ವತಂತ್ರನಾದ ಪರಮಾತ್ಮನ ಅಪ್ಪಣೆಯಿಂದ ಉತ್ಪತ್ತಿಯುಳ್ಳ ಹನುಮಾನ್ = ಹನುಮಂತನೆಂಬ ನಾಮ್ನಾ = ಹೆಸರಿನಿಂದ ಬಭೂವ = ಅವತರಿಸಿದನು. ವಾಸವಃ = ದೇವೇಂದ್ರನು ಸ್ವತಏವ = ಸ್ವೇಚ್ಛೆಯಿಂದಲೇ ಅಂದರೆ ಸ್ವತಂತ್ರನಾದ ಹರ್ಯಾಜ್ಞೆಯಿಂದಲೇ ವಾಲೀ = ವಾಲಿಯಾಗಿ ಬಭೂವ = ಅವತರಿಸಿದನು. ॥ ೬೭ ॥

**ಸುಗ್ರೀವ ಆಸೀತ್ಪರಮೇಷ್ಠಿತೇಜಸಾಯುತೋರವಿಃ ಸ್ವಾತ್ಮತವಿವ ಜಾಂಬವಾನ್ ।**
**ಯೆವಿವ ಪೂರ್ವಂ ಪರಮೇಷ್ಠಿವಕ್ಷಸಸ್ತ್ವಗುದ್ಭವೋ ಧರ್ಮಇಹಾಸ್ಯತೋಽಭವತ್ ॥೬೮॥**

ರವಿಃ = ಸೂರ್ಯನು ಪರಮೇಷ್ಠಿತೇಜಸಾ = ಬ್ರಹ್ಮನ ಆವೇಶದಿಂದ ಯುತಃ ಸನ್ = ಕೂಡಿದವನಾಗಿ ಸ್ವಾತ್ಮತವಿವ = ತನ್ನ ಮನಸ್ಸಿನಿಂದಲೇ (ಸ್ವಶಬ್ದವಾಚ್ಯ ಪರಮಾತ್ಮನ ಆಜ್ಞೆಯಿಂದ) ಸುಗ್ರೀವಃಸನ್ = ಸುಗ್ರೀವನಾಗಿ ಬಭೂವ = ಹುಟ್ಟಿದನು. ಯಃ = ಯಾವನು ಪೂರ್ವಂ = ಮೊಹಲು ಪರಮೇಷ್ಠಿವಕ್ಷಸಃ = ಬ್ರಹ್ಮದೇವರ ವಕ್ಷಸ್ಥಳದ ತ್ವಗುದ್ಭವಃ = ತ್ವಗಿಂದ್ರಿಯದಿಂದ ಉತ್ಪತ್ತಿಯುಳ್ಳ ಧರ್ಮಃ = ಯಮಧರ್ಮನೋ ಸಃ = ಆತನು ಇಹ = ರಾಮಾವತಾರ ಕಾಲದಲ್ಲಿ ಬ್ರಹ್ಮನ ಆವೇಶದಿಂದ ಕೂಡಿದವನಾಗಿ ಅಸ್ಯತಃ = ಬ್ರಹ್ಮದೇವರ ಮುಖದಿಂದ ಅಭವತ್ = ಜಾಂಬವಂತನಾಗಿ ಹುಟ್ಟಿದನು. ॥ ೬೮ ॥

**ಯೆವಿವಸೂರ್ಯಾತ್ಪುನರೇವ ಸಂಜ್ಞಯೋನಾವಮ್ನಾಯೆವೋ ಧಕ್ಷಿಣದಿಕ್ಪಆಸೀತ್ ।**
**ಸಜಾಂಬವಾನ್ ದೈವತಕಾರ್ಯದರ್ಶಿನಾಪುರೈವಸೃಷ್ಟೋ ಮುಖತಃ ಸ್ವಯಂಭುವಾ ॥೬೯॥**

ಯಃ = ಯಾವನು ಸೂರ್ಯಾತ್ = ಸೂರ್ಯನ ದಸೆಯಿಂದ ಪುನಃ = ಮತ್ತೊಮ್ಮೆ ಸಂಜ್ಞಯಾ = ಸಂಜ್ಞಾದೇವಿಯಿಂದ ನಾಮ್ನಾ = ಹೆಸರಿನಿಂದ ಯಮಃ = ಯಮನಾಗಿ ದಕ್ಷಿಣ ದಿಕ್ಪಃ = ದಕ್ಷಿಣ ದಿಕ್ಕಿಗೆ ಪಾಲಕನು ಆಸೀತ್ = ಆದನೋ ಸ ಜಾಂಬವಾನ್ = ಆ ಜಾಂಬವಂತನು ದೈವತಕಾರ್ಯದರ್ಶಿನಾ = ದೇವತೆಗಳ ಕಾರ್ಯವನ್ನು ಪರಿಶೀಲಿಸುವ ಸ್ವಯಂಭುವಾ = ಬ್ರಹ್ಮನಿಂದ ಪುರೈವ = ಮೊದಲೇ ಮುಖತಃ = ಮುಖದಿಂದ ಸೃಷ್ಟಃ = ಸೃಷ್ಟಿಸಲ್ಪಟ್ಟನು. ॥ ೬೯ ॥

**ಬ್ರಹ್ಮೋದ್ಭವಃ ಸೋಮಉತಾಸ್ಯಸೂನೋರತ್ರೇರಭೂತ್ಯೋಂಗದ ಏವಜಾತಃ ।**
**ಬ್ರಹಸ್ಪತಿಸ್ತಾರ ಉತೋಶಚೀಚ ಶಕ್ರಸ್ಯಭಾರ್ಯ್ಯೆವ ಬಭೂವತಾರಾ ॥ ೭೦ ॥**

ಯಃ ಪೂರ್ವಂ = ಯಾವನು ಮೊದಲು ಬ್ರಹ್ಮೋದ್ಭವಃ = ಬ್ರಹ್ಮನ ಕವಿಯಿಂದ ಉತ್ಪತ್ತಿಯುಳ್ಳ ಸೋಮನೋ-ಉತ = ಮತ್ತು ಅಸ್ಯ = ಈ ಬ್ರಹ್ಮನ ಸೂನೋಃ = ಮಗನಾದ ಅತ್ರೇಃ = ಅತ್ರಿಮಹರ್ಷಿಗಳ ದೆಸೆಯಿಂದ ಅಭೂತ್ = ಹುಟ್ಟಿದನೋ ಸ ಏವ = ಅವನೇ ಅಂಗದಃ = ಅಂಗದನಾಗಿ ಜಾತಃ = ಹುಟ್ಟಿದನು. ಬ್ರಹಸ್ಪತಿಃ = ಬ್ರಹಸ್ಪತಿಯು ತಾರ: = ತಾರನಾಮಕ ಕಪಿಯಾಗಿ ಅಭೂತ್ = ಹುಟ್ಟಿದನು. ಉತೋ = ಮತ್ತೂ ಶಕ್ರಸ್ಯ = ಇಂದ್ರನ ಭಾರ್ಯೋಶಚೀವಿವ = ಹೆಂಡತಿಯಾದ ಶಚಿಯೇ ತಾರಾಬಭೂವ = ತಾರಾನಾಮಕಳಾದಳು. ॥ ೭೦ ॥

**ಬ್ರಹಸ್ಪತಿರ್ಬ್ರಹ್ಮಸುತೋಽಪಿಪೂರ್ವಂ ಸಹೈವಶಚ್ಯಾಮನಸೋಽಭಿಜಾತಃ ।**
**ಬ್ರಹ್ಮೋದ್ಭವ ಸ್ಯಾಂಗಿರಸಃಸುತೋಭೂನ್ಮಾರೀಚಜಸ್ಯೈವ ಶಚೀಪುಲೋಮ್ನಃ ॥ ೭೧ ॥**

ಬ್ರಹಸ್ಪತಿ: = ಬ್ರಹಸ್ಪತಿಯು ಪೂರ್ವಂ = ಮೊದಲು ಶಚ್ಯಾ = ಶುಚಿಯಿಂದ ಸಹೈವ = ಕೂಡಿಕೊಂಡೇ ಮನಸ: = ಬ್ರಹ್ಮದೇವರ ಮನಸ್ಸಿನಿಂದ ಜಾತಃ = ಹುಟ್ಟಿದನು. ಇತಿ ಹೇತೋಃ = ಈ ಕಾರಣದಿಂದ ಬ್ರಹ್ಮಸುತೋಪಿ = ಬ್ರಹ್ಮನ ಮಗನಾದರೂ ಕೂಡ ಬ್ರಹ್ಮೋದ್ಭವಸ್ಯ = ಬ್ರಹ್ಮನಿಂದ ಹುಟ್ಟಿರುವ ಆಂಗೀರಸಃ = ಆಂಗೀರಸ ಋಷಿಗೆ ಸುತ: = ಮಗನು ಅಭೂತ್ = ಆದನು. ಮಾರೀಚಜನ್ಯ ॥ ಕಶ್ಯಪನಿಂದ ಹುಟ್ಟಿದ ಪುಲೋಮ್ನ: = ಪುಲೋಮ ಎಂಬ ಋಷಿಗೆ

ಶಚ್ಯೈವ = ಶಚೀ ದೇವಿಯೇ ಪೌಲೋಮ್ಯೇತಿಜಾತಾ = ಪೌಲೋಮಿಯಾಗಿ ಹುಟ್ಟಿದಳು. ॥ ೭೧॥

**ಅವತಾರಿಕೆ—** ಬೃಹಸ್ಪತಿಗೆ ಮೊದಲು ಸ್ವೇಚ್ಛೆಯಿಂದ ಉತ್ಪತ್ತಿಯನ್ನು ಹೇಳದಿರುವುದರಿಂದ ಅದನ್ನು ಹೇಳುವರು.

**ಸಏವಶಚ್ಯಾಸಹಪಾನರೋಽಭೂತ್ಸ್ವೇಯಂಭುವೋ ದೇವಗುರುರ್ಬೃಹಸ್ಪತಿಃ ।**
**ಆಭೂತ್ಸುಷೇಣೋ ವರುಣೋಽಶ್ವಿನೌಚ ಬಭೂವತುಸ್ತೌವಿವಿದಶ್ಚಮೈಂದಃ ॥ ೭೨ ॥**

ದೇವಗುರುಃ = ದೇವತೆಗಳಿಗೆ ಗುರುವಾದ ಸಃ ಬೃಹಸ್ಪತಿರೇವ = ಆ ಬೃಹಸ್ಪತ್ಯಾಚಾರ್ಯರೇ ಸ್ವಯಂಭುವ: = ಬ್ರಹ್ಮನಿಂದ ಸ್ವಯಂಭುವ:ಸನ್ = ತನ್ನ ಇಚ್ಛೆಯಿಂದಲೇ ಉತ್ಪತ್ತಿವುಳ್ಳವನಾಗಿ ಶಚ್ಯಾಸಹ = ಶಚಿಯಿಂದ ಕೂಡಿಕೊಂಡು ಪಾನರಃ = ಕಪಿಯು ಅಭೂತ್ = ಆದನು. ತೌಅಶ್ವಿನೌ = ಆ ಅಶ್ವಿನಿ ದೇವತೆಗಳು ವಿವಿದಶ್ಚ ಮೈಂದಃ = ವಿವಿದ ಮತ್ತು ಮೈಂದ ಎಂಬ ಕಪಿಗಳಾಗಿ ಬಭೂವತು: = ಹುಟ್ಟಿದರು. ॥ ೭೨ ॥

**ಬ್ರಹ್ಮೋದ್ಭವೌತೌ ಪುನರೇವ ಸೂರ್ಯೋದ್ಬಭೂವತುಸ್ತತ್ರ ಕನೀಯಸಸ್ತು ।**
**ಆವೇಶಐಂದ್ರೋವರದಾನತೋಽಭೂತ್ತತೋಬಲೀಯಾನ್ವಿವಿದೋ ಹಿಮೈಂದಾತ್ ॥೭೩॥**

ಬ್ರಹ್ಮೋದ್ಭವೌ = ಬ್ರಹ್ಮನ ನಾಸಾಪುಟದಿಂದ ಪುಟ್ಟಿರುವ ತೌ = ಆ ಅಶ್ವಿನಿ ದೇವತೆಗಳು ಪುನರೇವ = ಮತ್ತೊಮ್ಮೆ ಸೂರ್ಯಾತ್ = ಸೂರ್ಯನ ದಸೆಯಿಂದ ಹೆಣ್ಣುಕುದುರೆಯ ರೂಪವಲ್ಲಿರುವ ಸೂರ್ಯ ಪತ್ನಿಯಲ್ಲಿ ಬಭೂವತು: = ಹುಟ್ಟಿದರು. ತತ್ರ = ಅವರ ಮಧ್ಯದಲ್ಲಿ ಕನೀಯಸಃ = ಕನಿಷ್ಠನಾದ ವಿವಿದನಿಗೆ ಐಂದ್ರಃ = ಇಂದ್ರ ಸಂಬಂಧಿಯಾದ ಆವೇಶಃ = ಆ ಪೇಶವು ವರದಾನತಃ = ವರವನ್ನು ಕೊಡುವುದರಿಂದ ಅಭೂತ್ = ಆಯಿತು. ತತಃ = ಆ ಕಾರಣದಿಂದ ವಿವಿದಃ = ವಿವಿದನು ಮೈಂದಾತ್ = ಮೈಂದನ ದಸೆಯಿಂದ ಬಲೀಯಾನ್ = ಬಲಿಷ್ಠನು. ಹಿ = ಕೃಷ್ಣಾವತಾರದಲ್ಲಿ ನರಕಾಸುರನ ಸಹಾಯದಿಂದ ಬಹಳ ಪರಾಕ್ರಮ ತೋರಿಸಿದ್ದರಿಂದ ಪ್ರಸಿದ್ಧವು. ॥ ೭೩ ॥

---

**ನೀಲೋಽಗ್ನಿರಾಸೀತ್ಕಮಲೋದ್ಭವೋತ್ಥಃ ಕಾಮಃ ಪುನಃ ಶ್ರೀರಮಣಾದ್ರಮಾಯಾಂ ।**
**ಪ್ರದ್ಯುಮ್ನನಾಮಾऽಭವದೇವಮೀಶಾತ್ಸಸ್ಕಂದತಾಮಾಪ ಸ ಚಕ್ರತಾಂಚ ॥ ೭೪ ॥**

ಕಮಲೋದ್ಭವೋತ್ಥಃ = ಬ್ರಹ್ಮನ ಮುಖದಿಂದ ಹುಟ್ಟಿದ ಅಗ್ನಿಃ = ಅಗ್ನಿಯು ನೀಲಃ = ನೀಲ ನಾಮಕ ಕಪಿಯು ಆಸೀತ್ = ಆದನು. ಕಮಲೋದ್ಭವೋತ್ಥಃ = ಬ್ರಹ್ಮದೇವರ ಮನಸ್ಸಿನಿಂದ ಹುಟ್ಟಿದ ಕಾಮಃ = ಕಾಮನು ಪುನಃ = ಮತ್ತೊಮ್ಮೆ ಶ್ರೀರಮಣಾತ್ = ಶ್ರೀ ಕೃಷ್ಣನಿಂದ ರಮಾಯಾಂ = ರುಗ್ಮಿಣಿಯಲ್ಲಿ ಪ್ರದ್ಯುಮ್ನನಾಮಾ = ಪ್ರದ್ಯುಮ್ನನೆಂಬ ಹೆಸರುಳ್ಳವನು ಅಭವತ್ = ಆದನು. ಏವಂ = ಹೀಗೆಯೇ ಸಃ = ಆ ಕಾಮನು ಈಶಾತ್ = ರುದ್ರನಿಂದಲೂ ಸ್ಕಂದತಾಂ = ಸ್ಕಂದತ್ವವನ್ನು ಆಪ ಹೊಂದಿದನು. ಸಏವ = ಅದೇ ಕಾಮನೇ ಚಕ್ರತಾಂಚ = ಹರಿಯ ಚಕ್ರಾಭಿಮಾನಿತ್ವವನ್ನು ಕೂಡ ಹೊಂದಿದನು. ॥ ೭೪ ॥

**ಅವತಾರಿಕೆ:—** ಕಾಮನಿಗೆ ಚಕ್ರಾಭಿಮಾನಿತ್ವವಿದ್ದರೆ ಬ್ರಹ್ಮಪ್ರಲಯದಲ್ಲಿ ಚಕ್ರವಿಲ್ಲವೋ ಎಂಬ ಶಂಕೆಯನ್ನು ಪರಿಹರಿಸುವರು.

**ಪೂರ್ವಂ ಹರೇಶ್ಚಕ್ರಮಭೂದ್ದುರ್ಗಾತಮಃ ಸ್ಥಿತಾ ಶ್ರೀರಿತಿಯಾಂವದಂತಿ ।**
**ಸತ್ವಾತ್ಮಿಕಾಶಂಖಮಥೋರಜಸ್ಥಾ ಭೂರ್ನಾಮಿಕಾ ಪದ್ಮಮಭೂದ್ಧರೇರ್ಹಿ ॥ ೭೫ ॥**

ಪೂರ್ವಂ = ಮೊದಲು ತಮಃಸ್ಥಿತಾ = ತಮಸ್ಸಿಗೆ ಅಭಿಮಾನಿಯಾದ ದುರ್ಗಾ = ದುರ್ಗಾ ದೇವಿಯು ಹರೇಃ = ಶ್ರೀಹರಿಗೆ ಚಕ್ರಂ = ಚಕ್ರಾಭಿಮಾನಿನಿಯು ಅಭೂತ್ = ಆದಳು. ಯಾಂ = ಯಾವಳನ್ನು ಶ್ರೀರಿತಿ = ಶ್ರೀಃ ಎಂಬುದಾಗಿ ವದಂತಿ = ಹೇಳುತ್ತಾರೋ ಸಾ = ಅವಳು ಸತ್ವಾತ್ಮಿಕಾಸತೀ = ಸತ್ವ ಗುಣಕ್ಕೆ ಅಭಿಮಾನಿನಿಯಾಗಿ ಶಂಖಂ = ಶಂಖಾಭಿಮಾನಿನಿಯು ಅಭೂತ್ = ಆದಳು ಅಥೋ = ಅನಂತರ ರಜಸ್ಥಾ = ರಜೋಗುಣಕ್ಕೆ ಅಭಿಮಾನಿನಿಯಾದ ಭೂರ್ನಾಮಿಕಾ = ಭೂಃ ಎಂದು ಹೆಸರುಳ್ಳ ದೇವಿಯು ಹರೇಃ = ಶ್ರೀ ಹರಿಯ ಪದ್ಮಕ್ಕೆ ಅಭಿಮಾನಿನಿಯು ಅಭೂತ್ = ಆದಳು ॥ ೭೫ ॥

**ಗದಾತುವಾಯುರ್ಬಲಸಂವಿದಾತ್ಮಾ ಶಾರ್ಙ್ಗಸ್ಯ ವಿದ್ಯೇತಿರಮ್ಯೈವಖಡ್ಗಃ ।**
**ದುರ್ಗಾತ್ಮಿಕಾ ಸೈವಚ ಚರ್ಮನಾಮ್ನೋಪಂಚಾತ್ಮಕೋವಾರುತ ಏವ ಬಾಣಃ ॥ ೨೨ ॥**

ಬಲಸಂವಿದಾತ್ಮಾ — ಬಲಜ್ಞಾನ ಸ್ವರೂಪರಾದ ವಾಯುಃ = ವಾಯು ದೇವರು ಗದಾ = ಗದೆಗೆ ಅಭಿಮಾನಿಯು. "ಯಾ ದೇವೀ ಸರ್ವಭೂತೇಷು ವಿದ್ಯಾರೂಪೇಣ ಸಂಸ್ಥಿತಾ" ಎಂಬ ಪ್ರಮಾಣದಿಂದ ವಿದ್ಯೇತಿ = ವಿದ್ಯೆಗೆ ಅಭಿಮಾನಿನಿಯಾದ ಯಾರಮಾ = ಯಾವ ಲಕ್ಷ್ಮೀದೇವಿಯೋ ಸೈವ = ಅವಳೇ ಶಾರ್ಙ್ಗಸ್ಯ = ಧನುಸ್ಸಿಗೆ ಅಭಿಮಾನಿನಿಯು ದುರ್ಗಾತ್ಮಿಕಾ = ದುರ್ಗಾಸ್ವರೂಪಳಾದವಳು ಖಡ್ಗಃ = ಖಡ್ಗಕ್ಕೆ ಅಭಿಮಾನಿನಿಯು ಸೈವ = ಅವಳೇ ಚರ್ಮನಾಮ್ನೋ = ಚರ್ಮನಾಮಕಳು ಮತ್ತು ಅಭಿಮಾನಿನಿಯು. ಪಂಚಾತ್ಮಕಃ = ಪ್ರಾಣಾಪಾನಾದಿ ಪಂಚ ಸ್ವರೂಪರಾದ ಮಾರುತ ಏವ = ವಾಯು ದೇವರೇ ಬಾಣಃ = ಬಾಣಗಳಿಗೆ ಅಭಿಮಾನಿಯು ಅಭೂತ್ = ಆದರು. ॥ ೨೨ ॥

**ಏವಂ ಸ್ಥಿತೇಷ್ವೇವ ಪುರಾತನೇಷು ವರಾದ್ರಥಾಂಗತ್ವಮವಾಪ ಕಾಮಃ ।**
**ತತ್ಸೂನುತಾಮಾಪಚ ಸೋಽನಿರುದ್ಧೋಬಹ್ಮೋದ್ಭವಃ ಶಂಖತನುಃ ಪುಮಾತ್ಮಾ ॥ ೨೪ ॥**

ಏವಂ = ಈ ಹಿಂದೆ ಹೇಳಿದ ರೀತಿಯಿಂದ ಪುರಾತನೇಷು = ಹಿಂದೆ ಹೇಳಿದವರು ಸ್ಥಿತೇಷ್ವೇವ = ಅಭಿಮಾನಿಗಳಾಗಿರುತ್ತಿರಲು ಕಾಮಃ ಕಾಮನು ವರಾತ್ = ವರದಿಂದ ರಥಾಂಗತ್ವಂ = ಚಕ್ರಾಭಿಮಾನಿತ್ವವನ್ನು ಅವಾಪ = ಹೊಂದಿದನು. ಬ್ರಹ್ಮೋದ್ಭವಃ = ಬ್ರಹ್ಮನಿಂದ ಹುಟ್ಟಿದ ಯಃ = ಯಾವ ಅನಿರುದ್ಧಃ = ಅನಿರುದ್ಧ ನಾಮಕ ದೇವನೋ ಸಃ = ಅವನು ತತ್ಸೂನುತಾಂ = ಕೃಷ್ಣಾವತಾರದಲ್ಲಿ ಪ್ರದ್ಯುಮ್ನನ ಪುತ್ರತ್ವವನ್ನು ಆಪ = ಹೊಂದಿದನು. ಪುಮಾತ್ಮಾ = ಪುರುಷಾಕಾರನಾದ ಸ ಅನಿರುದ್ಧಃ = ಆ ಅನಿರುದ್ಧನು ಶಂಖತನುಃ = ಶಂಖಾಭಿಮಾನಿಯು ಅಭೂತ್ = ಆದನು.

**ತಾವೇವಜಾತೌಭರತಶ್ಚನಾಮ್ನಾಶತ್ರುಘ್ನ ಇತ್ಯೇವಚ ರಾಮತೋಽನು ।**
**ಪೂರ್ವಂ ಸುಮಿತ್ರಾತನಯಶ್ಚ ಶೇಷಃ ಸಲಕ್ಷ್ಮಣೋ ನಾಮ ರಘೂತ್ತಮಾದನು ॥ ೨೫ ॥**

ತಾವೇವ = ಆ ಪ್ರದ್ಯುಮ್ನಾನಿರುದ್ಧರೇ ಭರತಶ್ಚ = ಭರತನೆಂಬ ಶತ್ರುಘ್ನ ಇತಿ = ಶತ್ರುಘ್ನನೆಂಬ ನಾಮ್ನಾ = ಹೆಸರಿನಿಂದ ರಾಮತಃ = ಶ್ರೀ ರಾಮನ ಅನು = ಅನಂತರ ಜಾತಾ = ಹುಟ್ಟಿದರು. ಪೂರ್ವಂ = ಪೂರ್ವದಲ್ಲಿ ಯಃ = ಯಾವ ಶೇಷಃ — ಶೇಷನೋ ಸಃ = ಅವನು ಲಕ್ಷ್ಮಣೋನಾಮ = ಲಕ್ಷ್ಮಣನೆಂದು ಪ್ರಸಿದ್ಧನಾಗಿ ರಘೂತ್ತಮಾತ್ಅನು = ರಾಮಚಂದ್ರನ ಅನಂತರ ಸುಮಿತ್ರಾತನಯಃಸನ್ = ಸುಮಿತ್ರೆಯ ಮಗನಾಗಿ ಜಾತಃ = ಹುಟ್ಟಿದನು. ॥ ೨೫ ॥

**ಕೌಶಲ್ಯಕಾ ಪುತ್ರ ಉರುಕ್ರಮೋಽಸಾವೇಕಸ್ತಥೈಕೋ ಭರತಸ್ಯ ಮಾತುಃ ।**
**ಉಭೌಸುಮಿತ್ರಾತನಯೌ ನೃಪಸ್ಯ ಚತ್ವಾರಏತೇಹ್ಯಮರೋತ್ತಮಾಃ ಸುತಾಃ ॥ ೨೯ ॥**

ಉರುಕ್ರಮಃ = ಉತ್ಕೃಷ್ಟ ಪರಾಕ್ರಮವುಳ್ಳ ಅಸೌ = ಈ ರಾಮನು ಏಕಃ = ಒಬ್ಬನು ಕೌಸಲ್ಯಕಾಪುತ್ರಃ = ಕೌಸಲ್ಯೆಯ ಮಗನು. ತಥಾ = ಹಾಗೆಯೇ ಭರತಸ್ಯ = ಭರತನ ಮಾತುಃ = ತಾಯಿಯಾದ ಕೈಕೇಯಿಗೆ ಏಕಃ = ಭರತನೊಬ್ಬನು ಮಗನು ಉಭೌ = ಇಬ್ಬರಾದ ಭರತ ಶತ್ರುಘ್ನರು ಸುಮಿತ್ರಾತನಯೌ = ಸುಮಿತ್ರಾ ದೇವಿಯ ಮಕ್ಕಳು. ನೃಪಸ್ಯ = ರಾಜನಾದ ದಶರಥನಿಗೆ ಏತೇ = ಈ ಅಮರೋತ್ತಮರಾದ ಚತ್ವಾರಃ = ನಾಲ್ವರು ಸುತಾಃ = ಮಕ್ಕಳು. ॥ ೨೯ ॥

**ಸಂಕರ್ಷಣಾದ್ಯೈಸ್ತ್ರೀಭಿರೇವರೂಪೈರಾವಿಷ್ಟ ಆಸೀತ್ತ್ರೀಷು ತೇಷು ವಿಷ್ಣುಃ ।**
**ಇಂದ್ರೋಽಂಗದೇ ಚೈವ ತತೋಽಂಗದೋ ಹಿ ಬಲೀನಿತಾಂತಂ ಸಬಭೂವ ಶಶ್ವತ್ ॥ ೮೦ ॥**

ವಿಷ್ಣುಃ = ನಾರಾಯಣನು ತೇಷುತ್ರಿಷು = ಆ ಲಕ್ಷ್ಮಣಾದಿ ಮೂವರಲ್ಲಿ ಸಂಕರ್ಷಣಾದ್ಯೈಃ = ಸಂಕರ್ಷಣನೇ ಮೊದಲಾಗಿ ಉಳ್ಳ ತ್ರಿಭಿಃರೂಪೈರೇವ = ಮೂರು ರೂಪಗಳಿಂದಲೇ ಆವಿಷ್ಟಃ = ಪ್ರವೇಶಿಸಿದವನು ಆಸೀತ್ = ಆದನು. ಇಂದ್ರಃ = ಇಂದ್ರನು ಅಂಗದೇ ಅಂಗದನಲ್ಲಿ ಆವಿಷ್ಟಃ ಆಸೀತ್ = ಪ್ರವಿಷ್ಟನಾದನು. ತತಃ = ಆ ಕಾರಣದಿಂದ ಸಃ = ಆ ಅಂಗದನು ಶಶ್ವತ್ ಯಾವಾಗಲೂ ನಿತಾಂತಂ = ಚೆನ್ನಾಗಿ ಬಲೀ = ಬಲಿಷ್ಠನು. ॥ ೮೦ ॥

**ಅವತಾರಿಕೆ—** ಆವೇಶ ಕಥನ ಪ್ರಸದಗದಿಂದ ಹಲವು ವಿಶೇಷಾವೇಶವುಳ್ಳವರನ್ನು ಒಂದೇ ಮಾತಿನಿಂದ ಹೇಳುತ್ತಾರೆ.

**ಯೇಽನ್ಯೇಚ ಭೂಪಾಃ ಕೃತವೀರ್ಯಜಾದ್ಯಾ ಬಲಾಧಿಕಾಃ ಸಂತಿಸಹಸ್ರಶೋಽಪಿ ।**
**ಸರ್ವೇಹರೇಃ ಸನ್ನಿಧಿಭಾವಯುಕ್ತಾ ಧರ್ಮಪ್ರಧಾನಾಶ್ಚ ಗುಣಪ್ರಧಾನಾಃ ॥ ೮೧ ॥**

ಯೇ — ಯಾವ ಅನ್ಯೇ = ಇತರರಾದ ಬಲಾಧಿಕಾಃ = ಬಲದಿಂದ ಅಧಿಕರಾದ ಧರ್ಮಪ್ರಧಾನಾ: = ಧರ್ಮ ಪ್ರಧಾನವಾಗಿ ಉಳ್ಳ ಗುಣಪ್ರಧಾನಾ: = ಭಕ್ತ್ಯಾದಿ ಗುಣಗಳು ಪ್ರಧಾನರಾಗಿ ಉಳ್ಳ ಕೃತವೀರ್ಯಜಾದ್ಯಾ: = ಕೃತವೀರ್ಯನ ಮಗನಾದ ಕಾರ್ತವೀರ್ಯಾರ್ಜುನನೇ ಮೊದಲಾಗಿ ಉಳ್ಳ ಸಹಸ್ರತಃ = ಸಾವಿರಾರು ಮಂದಿ ಭೂಪಾ = ರಾಜರುಗಳೋ ತೇ ಸರ್ವೇ = ಅವರೆಲ್ಲರೂ ಹರೇ: = ಶ್ರೀಹರಿಯ ಸನ್ನಿಧಿಭಾವಯುಕ್ತಾ = ಸನ್ನಿಧಾನದಿಂದಲೂ ಭಕ್ತಿಯಿಂದಲೂ ಕೂಡಿದವರು ॥ ೮೧ ॥

**ಅವತಾರಿಕೆ—** ರಾಮನ ಅವತಾರವನ್ನು ಹೇಳಿ ರಾಮನಿಂದ ಅವಿನಾಭೂತಳಾದ ಲಕ್ಷ್ಮಿಯ ಅವತಾರವನ್ನು ಹೇಳುತ್ತಾರೆ.

**ಸ್ವಯಂವರಮಾಸೀರತ ಏವಜಾತಾಸೀತೇತಿರಾಮಾರ್ಥಮನೂಪ ಮಾಯಾ ।**
**ವಿದೇಹ ರಾಜಸ್ಯಹಿಯಜ್ಞಭೂಮೌ ಸುತೇತಿ ತಸ್ಯೈವ ತತಸ್ತು ಸಾ ಭೂತ್ ॥ ೮೨ ॥**

ಅನೂಪಮಾ = ಅಸದೃಶಳಾದ ಸ್ವಯಂವರಮಾ = ಸ್ವತಂತ್ರನಾದ ಪರಮಾತ್ಮನಿಂದ ತಾನೇ ಯಾವಾಗಲೂ ಕ್ರೀಡಿಸಿಕೊಂಡಿರುವ ಯಾ = ಯಾವ ಲಕ್ಷ್ಮಿಯೋ ಸಾ = ಆವಳು ವಿದೇಹರಾಜಸ್ಯ = ಜನಕರಾಜನ ಯಜ್ಞಭೂಮೌ = ಯಜ್ಞಭೂಮಿಯಲ್ಲಿ ಸೀರತಪಿವ ರಾಮಾರ್ಥಂ = ರಾಮನಿಗೋಸ್ಕರ ನೇತೇತಿ = ಸೀತೆ ಎಂಬುದಾಗಿ ಜಾತಾ = ಅವತರಿಸಿವಳು. ತಃ = ಆ ಮೇಲೆ ಸಾ = ಆ ಸೀತಾದೇವಿಯು ತಸ್ಯೈವ = ಆ ಜನಕರಾಜನಿಗೇನೇ ಸುತೇತಿ = ಮಗಳೆಂಬುವುದಾಗಿ ಅಭೂತ್ = ಸಿದ್ಧಳಾದಳು. ॥ ೮೨ ॥

**ಅವತಾರಿಕೆ—** ಉಪಸಂಹಾರ ವ್ಯಾಜದಿಂದ ಈ ಸೃಷ್ಟಿಯು ತಾರತಮ್ಯಕ್ಕೆ ಜ್ಞಾಪಕವೆಂದು ಹೇಳುತ್ತಾರೆ.

---

**ಇತ್ಯಾದಿಕಲ್ಪೋತ್ಥಿತಪಿಷಸರ್ಗೋಮಯಾಸಮಸ್ತಾಗಮನಿರ್ಣಯೇನ (ನಿರ್ಣಯಾತ್ಮಕಃ) ।**
**ಸಹಾನುಸರ್ಗಃ ಕಥಿತೋಽತ್ರಪೂರ್ವೋಯೋಯೋಗುಣೈರ್ನಿತ್ಯಮುಸೌವರೋಹಿ ॥ ೮೪ ॥**

ಇತಿ = ಈ ರೀತಿಯಾಗಿ ಆದಿಕಲ್ಪೋತ್ಥಿತಃ = ಬ್ರಹ್ಮ ದೇವರ ಮೊದಲನೆಯ ದಿನದಲ್ಲಿ ಉಂಟಾದ ಸಮಸ್ತಾಗವ ನಿರ್ಣಯಾತ್ಮಕಃ = ಎಲ್ಲಾ ಆಗಮಗಳೆ ನಿರ್ಣಯವನ್ನು ಉಂಟು ಮಾಡತಕ್ಕ ಸಹಾನುಸರ್ಗಃ = ಬ್ರಹ್ಮಾಂಡದ ಒಳಗೆ ಬ್ರಹ್ಮನಿಂದ ಮಾಡಲ್ಪಟ್ಟ ಸೃಷ್ಟಿಯಿಂದ ಕೂಡಿದ ಏಷಃ ಸರ್ಗಃ = ಬ್ರಹ್ಮಾಂಡದ ಹೊರಗೆ ಪರಮಾತ್ಮನಿಂದ ಮಾಡಲ್ಪಟ್ಟ ಆದಿ ಸೃಷ್ಟಿಯು ಮಯಾ = ನನ್ನಿಂದ ಕಥಿತಃ = ಹೇಳಲ್ಪಟ್ಟಿದೆ. ಅತ್ರ = ಈ ಬ್ರಹ್ಮಾಂಡದ ಒಳಗಿನ ಪಾದ್ಮ ಸೃಷ್ಟಿಯಲ್ಲಿ ಯಃ ಯಃ = ಯಾವನು ಯಾವನು ಪೂರ್ವಃ = ಮೊದಲು ಹುಟ್ಟಿದವನೋ ಅಸೌ = ಇವನು ಗುಣೈಃ = ಜ್ಞಾನ ಭಕ್ತ್ಯಾದಿ ಗುಣಗಳಿಂದ ನಿತ್ಯಂ = ಯಾವಾಗಲೂ ವರಃ = ಉತ್ತಮನು ಹಿ = ಪ್ರಸಿದ್ಧ. ॥ ೮೪ ॥

**ಪಾಶ್ಚಾತ್ಯಕಲ್ಪೇಷ್ವಪಿ ಸರ್ಗಭೇದಾಃ ಶ್ರುತೌ ಪುರಾಣೇಷ್ವಪಿ ಚಾನ್ಯಥೋಕ್ತಾಃ ।**
**ನೋತ್ಕರ್ಷ ಹೇತುಃ ಪ್ರಥಮತ್ವಮೇಷು ವಿಶೇಷವಾಕ್ಯೈರವಗಮ್ಯತೇತತ್ ॥ ೮೫ ॥**

ಪಾಶಾತ್ಯಕಲ್ಪೇಷ್ವಪಿ = ಪಾದ್ಮ ಕಲ್ಪದಿಂದ ಮೊದಲು ಮತ್ತು ನಂತರ ಇರತಕ್ಕ ಎಲ್ಲಾ ಕಲ್ಪಗಳಲ್ಲಿಯೂ ಕೂಡ ಶ್ರುತೌ = ವೇದದಲ್ಲಿ ಪುರಾಣೇಷ್ವಪಿ = ಪುರಾಣಗಳಲ್ಲಿಯೂ ಕೂಡ ಸರ್ಗಭೇದಾಃ = ಸೃಷ್ಟಿಯ ಪ್ರಭೇದಗಳು ಅನ್ಯಥಾ = ತಾರತಮ್ಯಕ್ಕೆ ವ್ಯತ್ಯಾಸವಾಗಿ ಉಕ್ತಾಃ = ಹೇಳಲ್ಪಟ್ಟಿವೆ. ಏಷು = ಈ ಪಾಶ್ಚಾತ್ಯ ಕಲ್ಪಗಳಲ್ಲಿ ಅಂದರೆ ಪಾದ್ಮ ಕಲ್ಪದ ಹಿಂದೆ ಮುಂದೆ ಇರತಕ್ಕ ಕಲ್ಪಗಳಲ್ಲಿ ಪ್ರಥಮತ್ವಂ = ಮೊದಲು ಉತ್ಪತ್ತಿಯು ಉತ್ಕರ್ಷಹೇತುಃ = ಉತ್ತಮತ್ವಕ್ಕೆ ಕಾರಣವಾದದ್ದು ನ = ಆಗುವುದಿಲ್ಲ. ಹಾಗಾದರೆ ನಿರ್ಣಯವು ಹೇಗೆಂದರೆತತ್ = ಆ ತಾರತಮ್ಯಾದಿಗಳು ವಿಶೇಷವಾಕ್ಯೈಃ = ವಿಶೇಷ

ಪ್ರಮಾಣಗಳಿಂದ ಅವಗಮ್ಯತೇ = ತಿಳಿಯಲ್ಪಡುತ್ತದೆ. ತತ್ = ಪಾಶ್ಚಾತ್ಯ ಕಲ್ಪಗಳಲ್ಲಿ ಮೊದಲು ಉತ್ಪತ್ತಿಯು ಉತ್ತಮತ್ವಕ್ಕೆ ಕಾರಣವಲ್ಲವೆಂಬುದು ವಿಶೇಷವಾಕ್ಯೈಃ = ವಿಶೇಷ ಪ್ರಮಾಣಗಳಿಂದ ಅವಗಮ್ಯತೇ = ತಿಳಿಯಲ್ಪಡುತ್ತದೆ

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಸರ್ಗಾನುಸರ್ಗಲಯೋತ್ಪಾದುರ್ಭಾವನಿರ್ಣಯೋ ನಾಮ ತೃತೀಯೋಽಧ್ಯಾಯಃ ॥

ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥಭಗವತ್ಪಾದಾಚ್ಚಾರ್ಯ ವಿರಚಿತ ಶ್ರೀಮನ್ಮಹಾಭಾರತತಾತ್ಪರ್ಯ ನಿರ್ಣಯಕ್ಕೆ ಶ್ರೀಮತ್ಪರಮಪೂಜ್ಯ, ವಿದ್ಯಾನಿಧಿ, ತಪೋನಿಧಿ, ಶ್ರೀ ಶ್ರೀ ಫಲಿಮಾರು ಶ್ರೀ ಭಂಡಾರಕೇರಿ ಮಠಾಧೀಶ ಶ್ರೀ ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀ ಪಾದ ಸೇವಕ ಗುರುರಾಜ (ಬಲ್ಲಾಳ) ವಿರಚಿತ ಪ್ರತಿಪದಾರ್ಥ ಪ್ರಕಾಶನದಲ್ಲಿ 3ನೇ ಅಧ್ಯಾಯವು ಶ್ರೀಮದ್ಧ್ವೇಶಾರ್ಪಿತವು.

॥ ಶ್ರೀ ಕೃಷ್ಣಾರ್ಪಣಮಸ್ತು ॥

ಈ ವರೆಗೆ ಪ್ರತಿಪದಾರ್ಥಾದಿ ಸಹಿತವಾಗಿ ಪ್ರಕಟಿತ ಗ್ರಂಥಗಳು

1. ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯಕೃತಿ

   1. ಕಂದುಕಸ್ತುತಿಃ 2. ಶ್ರೀಬಿಲ್ವಮಂಗಲಃ ಸಾಧುಃ 3. ಶ್ರೀದ್ವಾದಶ ಸ್ತೋತ್ರವು

   4. ಶ್ರೀ ಜಯಂತೀ ನಿರ್ಣಯಃ (ಕಲ್ಪ) 5. ಶ್ರೀ ಸದಾಚಾರ ಸ್ಮೃತಿಃ 6. ಶ್ರೀನಖಸ್ತುತಿಃ

   7. ಶ್ರೀಕೃಷ್ಣಾಮೃತ ಮಹಾರ್ಣವಃ 8. ಶ್ರೀಯತಿ ಪ್ರಣವ ಕಲ್ಪಃ 9. ಶ್ರೀನ್ಯಾಸಪದ್ಧತಿಃ

2. ಶ್ರೀಮತ್ಪರಮಪ್ರಾಜ್ಯ ಶ್ರೀಸೋದಾ ಗುರುರಾಜ ವಿರಚಿತ ಶ್ರೀಹಿತೋಪದೇಶಃ

3. ಋಗ್ವೇದೀಯ ಸಂಧ್ಯಾವಂದನಾರ್ಥಃ

4. ಶ್ರೀಮತ್ಪೂಜ್ಯಜಗನ್ನಾಥದಾಸವಿರಚಿತ ಶ್ರೀಕಥಾಮೃತಸಾರ (ಮೊದಲನೇ ಸಂಧಿ)

5. ಶ್ರೀಮತ್ಪೂಜ್ಯ ಶ್ರೀ 108 ಶ್ರೀ ಸತ್ಯವೀರತೀರ್ಥ ಚರಿತ್ರೆ ಸ್ತೋತ್ರ ಕವನಗಳು

6. ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯವು ಈಗ 3 ಅಧ್ಯಾಯಗಳು ಮುಗಿದಿದ್ದು ಮುಂದಿನವು ಸಿದ್ಧವಾಗುತ್ತಿವೆ.